# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್ - 2015

ಯುಗಾದಿ ವಿಶೇಷಾಂಕ





# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 32

ಸಂಚಿಕೆ – 7

ಏಪ್ರಿಲ್ – 2015



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎ.ಆರ್. ರಾಜಗೋಪಾಲ್

**ಟ್ರಸ್ಟಿಗಳು**

ಶ್ರೀ ಎಂ. ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ವಿ.ಆರ್. ನಾಥ್

ಶ್ರೀ ಕೆ. ರವೀಂದ್ರ ರಾವ್

**ಗೌರವ ಸಲಹೆಗಾರರು**

ಶ್ರೀ ಅ.ರಾ.ಸೇ.

ಶ್ರೀ ಆರ್. ಶೇಷಗಿರಿರಾವ್


**ಚಂದಾ ವಿವರ:**

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 3 |
| ಘೋಷಾಲ್ ಅಂಕಲ್.. | **ವತ್ಸಲ** | 5 |
| ನಿವೃತ್ತಿಯಲ್ಲಿ ಶಾಂತಿ | **ಸಿ.ಆರ್. ಸತ್ಯ** | 10 |
| ತಪ್ಪಿಸಿಕೊಂಡ ಮಗ | **ಬೇಲೂರು ರಾಮಮೂರ್ತಿ** | 13 |
| ದೇಖೋ ಹಸನ್... | **ಎಚ್. ಗೋಪಾಲಕೃಷ್ಣ** | 16 |
| ನಾಯಿ ಮತ್ತು..... | **ಕೃಷ್ಣ ಸುಬ್ಬರಾವ್** | 20 |
| ಪಟ್ಟಾಭಿರಾಮಾಚಾರ್ಯರಿಗೆ.. | **ವೈ.ಎನ್. ಗುಂಡೂರಾವ್** | 22 |
| ಬಾಣಸಿಗೋಪಾಖ್ಯಾನ | **ಎಚ್.ಆರ್. ಹನುಮಂತ ರಾವ್** | 28 |
| ಸಮಕಸವೇ ಜೀವನ | **ಗಣೇಶ ಹೆಗ್ಗಡೆ** | 34 |
| ಮುಖ ಪುಟ ಮುಚ್ಚಿದ್ದಾಗ | **ಸಹನಾ ಪ್ರಸಾದ್** | 39 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 41 |
| ಗಣಪತಿವಾಹನ.... | **ಅನಿತಾ ನರೇಶ್ ಮಂಚಿ** | 42 |
| ಬಾಂಬೇ ಬಾಂಬು! | **ಚಿತ್ರಾ ರಾಮಚಂದ್ರನ್** | 47 |
| ಹನಿಗವನಗಳು | **ಎಚ್. ಡುಂಡಿರಾಜ್** | 54 |



*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: beluruamamurthy@gmail.com


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಅಶುಭ ಶುಕ್ರವಾರ | **ಡಾ. ಡಿ.ವಿ. ಗುರುಪ್ರಸಾದ್** | 56 |
| ಅಜ್ಜಿಯ ಆನ್-ಲೈನ್ ಟೂರ್ | **ಇ.ಆರ್. ರಾಮಚಂದ್ರನ್** | 59 |
| ಜನ್ಮ ದಿನ | **ಕು.ಗೋ.** | 63 |
| ಮೃಷ್ಟಾನ್ನ ಭೋಜನೋಪಾಖ್ಯಾನ! | **ಶರತ್ ಕಲ್ಕೋಡ್** | 67 |
| ನಾನು ಮತ್ತು ಎನ್ವಿ | **ಆನಂದ** | 74 |
| ಮದ್ವೇಗೆ ಕರೀತೀರಾ? | **ಕುಮುದಾ ಪುರುಷೋತ್ತಮ್** | 76 |
| ಕಪ್ಪು ಶುಕ್ರವಾರ - ಒಂದು ಜ್ಞಾನ | **ವಾಣೀ ಸುರೇಶ್** | 81 |
| ತುಂತುರು | **ದಂನಾ** | 87 |
| ಓಡು... ಓಟ ಓಡು.... | **ರೇಖಾ ಹೆಗಡೆ ಬಾಳೇಸರ** | 88 |
| ಶೋಕಿಲಾಲ ರಾಜು | **ಆರತಿ ಘಟಿಕಾರ** | 93 |
| ಹೊಟ್ಟೆಯೊಳಗಿನ ಗುಟ್ಟು | **ವಸುಮತಿ ಉಡುಪ** | 98 |
| ನಾನೂ ಮತ್ತು ನನ್ನ ಇಷ್ಟಾನಿಷ್ಟಗಳು | **ಶ್ರೀನಾಥ್ ಭಲ್ಲೆ** | 105 |
| ಹೋಳಿರೆ ಹೋಳಿ.... | **ಭೂಮಿತಾಯಿ** | 110 |
| ಚೌಕಿನ ಪ್ರತಿಮೆಗಳೊಂದಿಗೆ... | **ಗುಂಡುರಾವ್ ದೇಸಾಯಿ** | 113 |
| ಹಾಸ್ಯ ಬ್ರಹ್ಮನಿಗೆ ನಮನ | **ನಯನ ಶ್ರೀ** | 119 |
| ಫಟಾಫಟ್ ಅಂತ ಹೇಳಿ | **ಗೌತಮ** | 121 |
| ನನ್ನ ಗಡ್ಡದ ಪುರಾಣ | **ಎಚ್.ಜಿ. ಸೋಮಶೇಖರ ರಾವ್** | 130 |
| ಕೊಬ್ಬಿದ್ರೆ ಕೈಲಾಸ | **ಎಂ.ಎಸ್. ನರಸಿಂಹಮೂರ್ತಿ** | 135 |
| ಅಂಟಿದ ಹವ್ಯಾಸಗಳ ನಂಟು | **ಅರುಂಧತಿ ಜೋಶಿ** | 139 |
| ಬೊಜ್ಜ Vs ಸೈಕಲಿಂಗ್ Vs ಬೊಜ್ಜ | **ಪ್ರಶಾಂತ ಅಡೂರ** | 143 |


ಮುಖಪುಟ ಚಿತ್ರ - ರವೀಂದ್ರ

# ಅಪರಂಜಿ ಕಿಡಿ

● ಪ್ರಕಾಶ್



ಅಕ್ರಮ – ಸಕ್ರಮ ಆರಂಭ – ಶೀರ್ಷಿಕೆ

***● ಹಗರಣಗಳಿಗೆ ನಾಂದಿ ?!***

★★★

ಸಂಸತ್ ಕ್ಯಾಂಟೀನ್‌ನಲ್ಲಿ ಪ್ರಧಾನಿ ಊಟ – ಸುದ್ದಿ

***● ಢೋಕ್ಲ ಇರದೆ ಇದ್ದದ್ದು ಸುದ್ದಿಯಾಗಲಿಲ್ಲ !!***

★★★

''ಬೆಂಗಳೂರು ಬೆಳೆಯದಂತೆ ತಡೆಗಟ್ಟಿ'' – ಹೇಳಿಕೆ

***● ಕೆಂಪೇಗೌಡರು ಬೆಚ್ಚಿದರಂತೆ !!***

★★★

ದಾಲ್ಮಿಯಾಗೆ ಬಿ.ಸಿ.ಸಿ.ಐ. ಚುಕ್ಕಾಣಿ – ಕ್ರೀಡಾ ಸುದ್ದಿ

***● ಪುನರಾಯಾನ್....... !!***

★★★

ಎಲ್ಲೆಡೆ ಕನ್ನಡದಲ್ಲೇ ವ್ಯವಹರಿಸಲು ಸಲಹೆ – ಸಮ್ಮೇಳನ

***● ಗುಡ್ ಐಡಿಯಾ !!***

★★★

ಆಸ್ತಿ ತೆರಿಗೆ ಸಂಗ್ರಹದಲ್ಲಿ ಅವ್ಯವಹಾರ – ಸುದ್ದಿ

***● ಯಾರೋ ಆಸ್ತಿ ಮಾಡಿಕೊಂಡಂತಿದೆ !!***

★★★

ಆಮ್ ಆದ್ಮಿ ಪಾರ್ಟಿಯಲ್ಲಿ ಒಡಕು – ಪತ್ರಿಕೆ

***● 'ಕಾಮನ್ ಮ್ಯಾನ್' ನಕ್ಕನಂತೆ !!***

★★★

ಭೂ ಸ್ವಾಧೀನ; ಸುಗ್ರೀವಾಜ್ಞೆ ಮಾರ್ಪಾಡು? – ಪತ್ರಿಕೆ

***● ಸರ್ಕಾರ 'ವಾಲಿ' ದಂತಿದೆ !!***

★★★

ಹಂದಿ ಜ್ವರ; ಉತ್ತರ ಕರ್ನಾಟಕಕ್ಕೆ ಪ್ರಯೋಗಾಲಯ ಬೇಡ – ಹೇಳಿಕೆ

***● ಇದನ್ನ ವೈರಾಣುಗಳು ಸಂತಸದಿಂದ ಕೇಳಿಸಿಕೊಂಡವಂತೆ !!***

★★★

# ನಮ್ಮ ನಿಮ್ಮಲ್ಲಿ

ನಿಮ್ಮೆಲ್ಲರ ಪ್ರೀತಿ, ಅಭಿಮಾನ, ಸಹಕಾರ, ಪ್ರೋತ್ಸಾಹ ಇವುಗಳಿಂದಾಗಿ ಅಪರಂಜಿ ಈಗ 31 ತುಂಬಿ 32ಕ್ಕೆ ಅಡಿಯಿಡುತ್ತಿದ್ದಾಳೆ. ಇದಕ್ಕೆ ನೀವು (ಚಂದಾದಾರರು), ನೀವು (ಲೇಖಕ ಬಂಧುಗಳು) ಮತ್ತು ನೀವು (ಜಾಹೀರಾತುದಾರರು) ಕಾರಣ ಈ ಸಂಭ್ರಮವನ್ನಾಚರಿಸಲು 5-4-2015ರಂದು ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಅಪರಂಜಿ ಮಾರ್ಚ್ ಸಂಚಿಕೆಯಲ್ಲಿ ವಿವರಗಳಿದ್ದವು. ಅಪರಂಜಿ ಅಭಿಮಾನಿಗಳಿಗೆಲ್ಲ ಆದರದ ಸ್ವಾಗತ.

ಅಪರಂಜಿಯ ನಿರ್ವಹಣೆ ಮತ್ತು ಕೊರವಂಜಿ ಮತ್ತು ಅಪರಂಜಿ ಟ್ರಸ್ಟ್‌ನ ಆಡಳಿತಾತ್ಮಕ ದೃಷ್ಟಿಯಿಂದ ಕೆಲವೊಂದು ಬದಲಾವಣೆಗಳನ್ನು ಮಾಡಿದ್ದೇವೆ. ಇದೀಗ ಶ್ರೀ ಎ.ಆರ್. ರಾಜಗೋಪಾಲ್ ಅವರು ಮ್ಯಾನೇಜಿಂಗ್ ಟ್ರಸ್ಟಿಯಾಗಿ ಆಯ್ಕೆಯಾಗಿದ್ದಾರೆ. ಎಂ. ಶಿವಕುಮಾರ್‌ರವರು ಅಪರಂಜಿಯ ಸಂಪಾದಕರಾಗಿ ಮುಂದುವರಿಯುತ್ತಾರೆ. ಜಿ. ನಾಗೇಶ್ ಅವರು ಅನಾರೋಗ್ಯದ ನಿಮಿತ್ತ ಟ್ರಸ್ಟಿನಿಂದ ನಿವೃತ್ತಿ ಬಯಸಿದ್ದಾರೆ. ಅವರ ಸ್ಥಾನಕ್ಕೆ ಎಚ್.ಎನ್. ಆನಂದ ಅವರು ಬಂದಿದ್ದಾರೆ. ಜಿ. ನಾಗೇಶ್ ಅವರು ಅಪರಂಜಿ ಬಳಗಕ್ಕೆ ಬಂದಾಗಿನಿಂದ ಇದುವರೆವಿಗೂ ಅವರು ನೀಡಿದ ಸಲಹೆ, ಸಹಕಾರ ಬೆಂಬಲ ಇವುಗಳಿಗೆ ಕೊರವಂಜಿ ಅಪರಂಜಿ ಟ್ರಸ್ಟ್ ಅಭಾರಿಯಾಗಿದೆ.

ಎಂದಿನಂತೆ ಅಪರಂಜಿ ವಾರ್ಷಿಕ ವಿಶೇಷಾಂಕ ನಿಮ್ಮ ಕೈಯಲ್ಲಿದೆ. ಹಿಂದಿನ ವರ್ಷಗಳಂತೆ ನಮ್ಮ ಎಲ್ಲಾ ಬರಹಗಾರರು ಮತ್ತು ವ್ಯಂಗ್ಯ ಚಿತ್ರಕಾರರು ತಮ್ಮ ಅಮೂಲ್ಯ ಲೇಖನಗಳಿಂದ/ವ್ಯಂಗ್ಯಚಿತ್ರಗಳಿಂದ ಅಪರಂಜಿಯನ್ನು ಸಿಂಗರಿಸಲು ಸಹಕರಿಸಿದ್ದಾರೆ. ಅವರೆಲ್ಲರಿಗೂ ಅಪರಂಜಿ ಅಭಾರಿಯಾಗಿದ್ದಾಳೆ.

ಅಪರಂಜಿಯ ಓದುಗ ಬಳಗದಂತೆಯೇ ಲೇಖಕ ಬಂಧುಗಳೂ ವಿಸ್ತಾರವಾಗಬೇಕು. ಚಿಕ್ಕದಾಗಿ, ಚೊಕ್ಕವಾಗಿ, ಸ್ವಾರಸ್ಯವಾಗಿ ಬರೆಯುವ ಎಲ್ಲ ಬರಹಗಾರರಿಗೆ ಅಪರಂಜಿಯ ಸ್ವಾಗತವಿದೆ.

ಅಪರಂಜಿ ವಿಶೇಷಾಂಕಕ್ಕಾಗಿ ಜಾಹೀರಾತು ಒದಗಿಸಿರುವ ಎಲ್ಲ ಬಂಧುಗಳಿಗೂ ನಮ್ಮ ಒಲವಿನ ನಮನಗಳು. ವಿಶೇಷಾಂಕ ತಯಾರಾಗುವಲ್ಲಿ ಪ್ರೀತಿಯ ಶ್ರಮವಹಿಸಿದ ಒಮೇಗಾದ ರವಿ, ಆಚಾರ್, ಶ್ವೇತ ಅವರುಗಳಿಗೂ ಹಾಗೂ ಮುದ್ರಣ ಮತ್ತು ವಿತರಣೆಯನ್ನು ವಿಶೇಷ ಆಸಕ್ತಿಯಿಂದ ನಿರ್ವಹಿಸಿರುವ ರವಿ ಗ್ರಾಫಿಕ್ಸ್‌ನ ವಿ.ಆರ್. ನಾಥ್, ಸಂತೋಷ್, ನಾಗರಾಜ್ ಮತ್ತಿತರರಿಗೂ ವಂದನೆಗಳು.

ಮನ್ಮಥನಾಮ ಸಂವತ್ಸರ ಎಲ್ಲರಿಗೂ ಶುಭವನ್ನು ತರಲಿ ಎಂದು ಅಪರಂಜಿ ಮಮಕಾರದಿಂದ ಹಾರೈಸುತ್ತಾಳೆ.

**ಬೇಲೂರು ರಾಮಮೂರ್ತಿ**
ಉಪಸಂಪಾದಕರು



# ಫೋಷಾಲ್ ಅಂಕಲ್ ಪ್ರಕರಣ

**- ವತ್ಸನ**

ಅಂದು ಸಂಜೆ ಟಿ.ವಿ.ನಲ್ಲಿ ಇಂಡಿಯಾ ಮತ್ತು ವೆಸ್ಟ್ ಇಂಡೀಸ್ ನಡುವಣ ವರ್ಲ್ಡ್ ಕಪ್ ಮ್ಯಾಚ್ ಬರುತ್ತಿತ್ತು. ಆಗತಾನೇ ವೆಸ್ಟ್ ಇಂಡೀಸರು ಟಾಸ್ ಗೆದ್ದು ಬ್ಯಾಟಿಂಗ್ ಪ್ರಾರಂಭಿಸಿದ್ದರು. ಶರಲೇಖನೂ ಬಂದು ನನ್ನ ಜೊತೆ ಮ್ಯಾಚ್ ನೋಡಲು ಕುಳಿತ. ಕ್ರಿಸ್ ಗೇಲ್ ಬ್ಯಾಟಿಂಗ್ ಮಾಡುತ್ತಿದ್ದ. ಇದ್ದಕ್ಕಿದ್ದಂತೆ ಶರಲೇಖ ''ನೋಡು ಮುಂದಿನ ಬಾಲ್‌ನ ಕ್ಯಾಚ್ ಕೊಟ್ಟು ಕ್ರಿಸ್ ಗೇಲ್ ಔಟ್ ಆಗ್ತಾನೆ'' ಅಂದ. ಆಗ ಮೊಹಮದ್ ಶಮಿ ಬೋಲ್ ಮಾಡ್ತಾ ಇದ್ದ. ಅವನು ಹಾಕಿದ ಬಾಲ್‌ನ ಗೇಲ್ ಕವರ್ ಸೈಡ್‌ಗೆ ಬಾರಿಸಿದ. ಬಾಲು ಆಕಾಶಕ್ಕೇರಿತು. ಪ್ರೇಕ್ಷಕರ ಕೂಗಾಟದ ಮಧ್ಯೆ ಮೋಹಿತ್ ಶರ್ಮ ಬಾಲನ್ನು ಬಹು ಸುಲಭವಾಗಿ ಕ್ಯಾಚ್ ಹಿಡಿದ. ಗೇಲ್ ಪೆವಿಲಿಯನ್ನಿನ ಕಡೆ ನಡೆಯಲು ಪ್ರಾರಂಭಿಸಿದ. ನನಗಂತೂ ಹೇಳಲಾರದ ಆಶ್ಚರ್ಯ. ಶರಲೇಖನ ಪತ್ತೇದಾರಿ ಚಮತ್ಕಾರವನ್ನು ಎಷ್ಟೇ ನೋಡಿದ್ದರೂ ಅವನು ಈ ತರಹ ಏನಾದರೂ ಒಂದು ಆಶ್ಚರ್ಯ ಉಂಟುಮಾಡುವ ಭವಿಷ್ಯ ಹೇಳಿ ನಮ್ಮನ್ನು ಮರುಳು ಮಾಡಿಬಿಡುತ್ತಾನೆ. ಆಮೇಲೆ ಅವನು ಅದನ್ನ ವಿವರಿಸಿದಾಗ, ನಮಗೆ ''ಅಯ್ಯೋ ಇಷ್ಟೇನೆ'' ಅನ್ನಿಸೋದು ಸಹಜ. ''ಅದು ಹೇಗೆ ಇದನ್ನ ಊಹಿಸಿದೆಯೋ ಮಹರಾಯ?'' ಅಂತ ನಾನು ಕೇಳಿದೆ. ಅವ ಕೂಲಾಗಿ, ''ನೀನು ನೋಡ್ತಾ ಇರೋದು ರೀಪ್ಲೇ ಅನ್ನೋದನ್ನೆ ಮರೆತು ಬಿಟ್ಟಿದೀಯಲ್ಲೋ, ನಾನು ಬೆಳಗ್ಗೇನೇ ಲೈವ್ ಮ್ಯಾಚು ನೋಡಿದ್ದೆ '' ಅಂತ ನಗುತ್ತಾ ಹೇಳಿದ. ಅಷ್ಟು ಹೊತ್ತಿಗೆ ನನ್ನ ಮೊಬೈಲು ಟ್ರಿನ್‌ಗುಟ್ಟಿತು. ಆ ಕಡೆಯಿಂದ ನಮ್ಮ ಅಕ್ಕನ ಮಗ ಪ್ರಶಾಂತ್ ಮಾತನಾಡುತ್ತಿದ್ದ. ''ಮಾವ, ನಾಳೆ ನಮ್ಮ ಕಂಪನಿಯ ವಾರ್ಷಿಕೋತ್ಸವ. ಬೆಳಗ್ಗೆ ಹತ್ತು ಗಂಟೆಗೆ ಪೂಜೆ ಇಟ್ಟುಕೊಂಡಿದ್ದೇವೆ. ಅಂಕಲ್‌ನೂ ಕರಕೊಂಡು ಸ್ವಲ್ಪ ಬಂದು ಆಶೀರ್ವಾದ ಮಾಡಕ್ಕಾಗುತ್ತದೆಯೇ?'' ಅಂತ ಪ್ರಶಾಂತ್ ನಮ್ಮನ್ನ ಆಹ್ವಾನಿಸಿದ. ಸ್ಪೀಕರ್ ಫೋನ್ ಆನ್ ಆಗಿದ್ದರಿಂದ ಶರಲೇಖನಿಗೂ ಅವನ ಮಾತು ಕೇಳಿಸಿತು. ಶರಲೇಖನೇ ನೇರವಾಗಿ ''ಆಗಲಿ ಬರುತ್ತೇವೆ ಪ್ರಶಾಂತ್'' ಅಂತ ಇದ್ದಲ್ಲಿಂದಲೇ ಕೂಗಿದ. ಪ್ರಶಾಂತನ ಆನಂದಕ್ಕೆ ಪಾರವೇ ಇರಲಿಲ್ಲ. ''ತುಂಬಾ ಥ್ಯಾಂಕ್ಸ್ ಇಬ್ಬರಿಗೂ'' ಅಂತ ಹೇಳಿ ಫೋನ್ ಇಟ್ಟ.

ಪ್ರಶಾಂತನದ್ದು ಒಂದು ಸ್ಟಾರ್ಟ್ ಅಪ್ ಕಂಪನಿ. ತುಮಕೂರು ರಸ್ತೆಯಲ್ಲಿರೋ ಚಿಕ್ಕಬಿದಿರುಕಲ್ಲು ಎಂಬ ಹೈವೇ ಬದಿಯ ಗ್ರಾಮದಲ್ಲಿರೋ ಭವ್ಯ ಬಂಗಲೆಯಲ್ಲಿ ತನ್ನ ಆಪರೇಶನ್‌ನ ಪ್ರಾರಂಭಿಸಿದ್ದಾನೆ. ಐಐಟಿಯಲ್ಲಿ ರ್‍ಯಾಂಕ್ ಗಳಿಸಿ, ಅಮೆರಿಕೆಯ ಸಿಲಿಕಾನ್ ವ್ಯಾಲಿಯಲ್ಲಿ ಪರಿಶ್ರಮ ಪಡೆದು ಕಳೆದ ವರ್ಷ ಬೆಂಗಳೂರಿಗೆ ಬಂದು ತನ್ನದೇ ಆದ ಆ್ಯಪ್

ಗಳನ್ನ ನಿರ್ಮಿಸಿ ಮಾರಾಟ ಮಾಡುವ ವಹಿವಾಟನ್ನು ಶುರು ಮಾಡಿರುವ ಪ್ರಶಾಂತನ ಸಾಹಸ ಕಂಡು ನಿಜಕ್ಕೂ ನಮಗೆಲ್ಲಾ ಹೆಮ್ಮೆ. ಹಾಗಾಗಿ ಬೆಳಿಗ್ಗೇನೇ ಓಲಾ ಬುಕ್ ಮಾಡಿ ಹತ್ತಕ್ಕೆ ಸರಿಯಾಗಿ ಚಿಕ್ಕಬಿದಿರುಕಲ್ಲು ಸೇರಿದೆವು.

ಒಂದು ಎಕರೆ ತೋಟದ ಮಧ್ಯೆ ಒಂದು ಭವ್ಯವಾದ ಭವನ ಕಂಡುಬಂತು. ತೋಟದ ಗೇಟಿನ ಮುಂದೆಯೇ ಸಮವಸ್ತ್ರ ಧರಿಸಿ, ಗನ್ ಹಿಡಿದಿದ್ದ ಒಬ್ಬ ಆಜಾನುಬಾಹು ದ್ವಾರಪಾಲಕ. ನಮ್ಮ ಪರಿಚಯ ಹೇಳಿದ ನಂತರ ಅವನು ನಮ್ಮನ್ನು ಒಳಕ್ಕೆ ಬಿಟ್ಟ. ತೋಟದ ಬೇಲಿಯ ಅಂಚಿನಲ್ಲಿ ಸಾಲಾಗಿ ಬೆಳೆದು ನಿಂತ ತೆಂಗಿನ ಮರಗಳು. ಭವನದ ಮುಂದೆ ಇದ್ದ ಮಾವು ಸೀಬೆ ಗಿಡಗಳನ್ನು ದಾಟಿ ಭವನದ ಮುಂಬಾಗಿಲನ್ನು ಸೇರಿದೆವು. ಪ್ರಶಾಂತ ಬಾಗಿಲಲ್ಲೇ ನಿಂತಿದ್ದ. ನಮ್ಮನ್ನು ನೋಡಿದ ತಕ್ಷಣ ನಮ್ಮಿಬ್ಬರ ಕಾಲು ಮುಟ್ಟಿ ನಮಸ್ಕಾರ ಮಾಡಿ ನಮ್ಮನ್ನ ಒಳಕ್ಕೆ ಕರೆದೊಯ್ದ. ವರಾಂಡಾದಲ್ಲಿ ಯುವತಿಯೊಬ್ಬಳು ರಿಸೆಪ್ಷನ್ ಮೇಜಿನ ಮುಂದೆ ಕುಳಿತಿದ್ದಳು. ಅಲ್ಲಿಂದ ಮುಂದೆ ನಡೆದು ವಿಶಾಲವಾದ ಹಜಾರವನ್ನು ಸೇರಿದೆವು. ಹತ್ತು ಹನ್ನೆರಡು ವರ್ಕ್ ಸ್ಟೇಷನ್ನುಗಳಲ್ಲಿ ತರುಣ, ತರುಣಿಯರು ಕೆಲಸದಲ್ಲಿ ಮಗ್ನರಾಗಿದ್ದರು. ಹಜಾರದ ಪೂರ್ವ ದಿಕ್ಕಿನಲ್ಲಿ ದೇವರ ಫೋಟೋ ಇಟ್ಟು ಪೂಜೆಗೆ ಅಣಿಮಾಡಿದ್ದರು. ಹಜಾರದ ಹಿಂದಿನ ಮೂಲೆಯಲ್ಲಿ ಮೇಲಿನ ಮಹಡಿಗೆ ಹೋಗಲು ಮೆಟ್ಟಿಲುಗಳು ಕಾಣಿಸಿದವು.

''ಘೋಷಾಲ್ ಅಂಕಲ್ ಇನ್ನೇನು ಕೆಳಕ್ಕಿಳಿದು ಬಂದು ಬಿಡ್ತಾರೆ. ಅವರು ಬಂದ ತಕ್ಷಣ ಪೂಜೆ ಶುರು'' ಅಂದ ಪ್ರಶಾಂತ.

ನನಗೇ ಗೊತ್ತಿಲ್ಲದೇ ಇರೋ ಇದ್ಯಾವ ಅಂಕಲ್ ಅಂತ ಅನ್ನಿಸಿ ಶರಲೇಖನತ್ತ ತಿರುಗಿದೆ. ನನ್ನ ಪ್ರಶ್ನೆ ಅವನ ಮುಖದಲ್ಲೂ ಪ್ರತಿಬಿಂಬಿತವಾಗಿತ್ತು. ಅಷ್ಟರಲ್ಲಿ ಜುಬ್ಬಾ, ಪಾಯಿಜಾಮಾ ಧರಿಸಿದ್ದ ಹಿರಿಯರೊಬ್ಬರು ಮಹಡಿಯ ಮೆಟ್ಟಿಲುಗಳನ್ನು ಇಳಿದು ನಮ್ಮತ್ತ ಬಂದರು. ಪ್ರಶಾಂತ ಅವರನ್ನು ನಮ್ಮಿಬ್ಬರಿಗೂ ಪರಿಚಯಿಸಿದ. ''ಇವರು ಘೋಷಾಲ್ ಅಂಕಲ್. ಇವರು ನಮ್ಮ ಮಾವ ವತ್ಸನ ಮತ್ತು ಅವರ ಗೆಳೆಯ ಶರಲೇಖ ಅಂಕಲ್''. ಪರಸ್ಪರ ಕೈಕುಲುಕಿದ ನಂತರ, ಘೋಷಾಲ್‌ರವರೇ ಮೊದಲು ಮಾತನಾಡಲು ಶುರುಮಾಡಿದರು. ''ನಿಮ್ಮಿಬ್ಬರನ್ನೂ ಭೇಟಿ ಮಾಡುವ ಸುಯೋಗ ದೊರೆತಿದ್ದಕ್ಕೆ ಬಹಳ ಸಂತೋಷ. ನಿಮಗೇ ತಿಳಿಯದ ಇದ್ಯಾವ ಹೊಸ ಅಂಕಲ್ ಪ್ರಶಾಂತನಿಗೆ ಅಂತ ನಿಮಗೆ ಖಂಡಿತ ಅನ್ನಿಸಿರಬಹುದು. ಹಾಗಾಗಿ ನನ್ನ ಹಿನ್ನೆಲೆ ಸಂಕ್ಷಿಪ್ತವಾಗಿ ನಿಮಗೆ ತಿಳಿಸಿಬಿಡ್ತೇನೆ. ಅಂದಹಾಗೆ ನನ್ನ ಹೆಸರು ಬ್ರಜ್ ಘೋಷಾಲ್. ನೀವು ನನ್ನನ್ನ ಬ್ರಜ್ ಅಂತ ಕರೆದರೆ ನನಗೆ ಸಂತೋಷ. ನಾನು ಮೂಲತಃ ಬಂಗಾಳದವನು. ರೇಶ್ಮೆ ವ್ಯಾಪಾರಕ್ಕಾಗಿ ಬಹು ಹಿಂದೆಯೇ ಬೆಂಗಳೂರಿಗೆ ಬಂದದ್ದರಿಂದ ಕನ್ನಡ ಭಾಷೆ ನನಗೆ ಮನೆಮಾತಾಯಿತು. ಈ ತೋಟ, ಈ ಮನೆ ನಾನು ಕಟ್ಟಿಸಿದ್ದು. ಹತ್ತು ವರ್ಷಗಳ ಹಿಂದೆ ನಾನು ಪತ್ನಿಯನ್ನು ಕಳೆದುಕೊಂಡು ವಿಧುರನಾದೆ. ಅಂದಿನಿಂದ ನನ್ನದು ಒಂಟಿ ಜೀವನ. ತಾರುಣ್ಯದಲ್ಲೇ ಊರು ಬಿಟ್ಟಿದ್ದರಿಂದ ನನಗೆ ಬಂಧುಗಳು ಯಾರೂ ಇಲ್ಲ. ಶ್ಯಾಮಲ್ ಹೋದಮೇಲೆ ನನಗೆ ವ್ಯಾಪಾರ ಮಾಡುವ ಉತ್ಸಾಹವೂ ಕುಂದತೊಡಗಿತು. ಇಷ್ಟು ದೊಡ್ಡ ಮನೆ, ತೋಟ ಇವುಗಳ ನಡುವೆ ಒಬ್ಬನೇ ಇರೋದಾದರೂ ಹೇಗೆ ಅಂತ ಚಿಂತೆ

ಶುರುವಾಯಿತು. ಹೋದ ವರ್ಷ ನನ್ನ ಗೆಳೆಯನೊಬ್ಬ ಪ್ರಶಾಂತನನ್ನು ನನಗೆ ಪರಿಚಯಿಸಿದ. ನಮ್ಮ ಮನೆಯ ಹಜಾರದಲ್ಲಿ ಅವನ ಕಂಪನಿಗೆ ಜಾಗ ಕೊಟ್ಟರೆ ಮನೆ ತುಂಬಿದ ಹಾಗೆ ಇರುತ್ತೆ ಅಂತ ಅನ್ನಿಸಿ ಅವನಿಗೆ ನನ್ನ ಪ್ರಪೋಸಲ್ ಹೇಳಿದೆ. ಅವನು ಬಹು ಸಂತೋಷದಿಂದ ಒಪ್ಪಿದ. ಮಾರುಕಟ್ಟೆ ಬಾಡಿಗೆಗಿಂತ ಅರ್ಧ ಬಾಡಿಗೆ ಕೊಟ್ಟರೆ ಸಾಕು ಅಂತ ಹೇಳಿದೆ. ಅವ ಒಪ್ಪಲಿಲ್ಲ. ಎಲ್ಲವೂ ವ್ಯಾವಹಾರಿಕವಾಗಿದ್ದರೆ ಮಾತ್ರ ಸಂಬಂಧ ಆರೋಗ್ಯಕರವಾಗಿರುತ್ತೆ ಅಂತ ಹೇಳಿದ. ಎಷ್ಟು ಪ್ರೌಢ ಚಿಂತನೆ ಅವನದ್ದು ಅಂತೀರಿ. ಅನಂತರ ಅವನು ಕೆಳಗಿನ ಹಜಾರದಲ್ಲಿ ತನ್ನ ಕಂಪನಿ ಪ್ರಾರಂಭಿಸಿದ. ನಾನು ಮಹಡಿಯ ಮೇಲೆ ವಾಸಿಸಲು ಶುರುಮಾಡಿದೆ. ನಮ್ಮ ಅಡಿಗೆಯವನೇ ಕಂಪನಿಗೂ ಒಂದು ಪುಟ್ಟ ಕ್ಯಾಂಟೀನ್ ನಡೆಸುತ್ತಾನೆ. ಅದರ ಆದಾಯವೆಲ್ಲಾ ಅವನಿಗೇ. ಒಟ್ಟಿನಲ್ಲಿ ನಮ್ಮ ವ್ಯವಸ್ಥೆ ಸುಲಲಿತವಾಗಿ ನಡೀತಾ ಇದೆ. ಪ್ರಶಾಂತ ಒಳ್ಳೆಯ ಅಂತಃಕರಣದ ಹುಡುಗ. ವಿಶ್ವಾಸದಿಂದ ನನ್ನನ್ನು ಅಂಕಲ್ ಅಂತ ಕರೆಯೋದೊಂದೇ ಅಲ್ಲ, ಅದೇ ತರಹ ನೋಡಿಕೊಂಡಿದ್ದಾನೆ'' ಅಂತ ಬ್ರಜ್ ಹೇಳಿದರು.

ಪೂಜೆ ಎಲ್ಲಾ ಮುಗಿದು, ಮಂಗಳಾರತಿ ತೆಗೆದುಕೊಂಡ ನಂತರ, ಒಬ್ಬ ಸಾಫ್ಟ್‌ವೇರ್ ತರುಣಿ ಸುಶ್ರಾವ್ಯವಾಗಿ ದೇವರ ನಾಮವೊಂದನ್ನು ಹಾಡಿದಳು. ಅದು ಒರಿಯಾ ಭಾಷೆಯಲ್ಲಿದ್ದುದರಿಂದ ನಮಗೆ ಅದರ ತಲೆಬುಡ ತಿಳಿಯಲಿಲ್ಲ.

ಮನೆಗೆ ಹಿಂತಿರುಗುತ್ತಿದ್ದಾಗ ನಾನು ಶರಲೇಖನನ್ನು ಕುರಿತು, ''ಪರವಾಗಿಲ್ಲ ಕಣಯ್ಯ ಈ ಬ್ರಜ್ ಆಸಾಮಿ. ಅರ್ಧ ಮನೆ ಬಾಡಿಗೆಗೆ ಕೊಟ್ಟು ಭದ್ರತೆ ಸಿಗೋಹಾಗೆ ಮಾಡ್ಕೊಂಡು ಬಿಟ್ಟಿದಾನೆ'' ಅಂತ ಹೇಳಿದೆ. ಶರಲೇಖ ಚಿಂತಾಮಗ್ನನಾಗಿದ್ದಂತೆ ಕಂಡಿತು. ''ಅವನು ಹೇಳಿದ್ದೆಲ್ಲಾ ನಿಜಾನೇ ಅನ್ನಿಸಿದ್ರೂ, ಒಂಟಿ ಜೀವನ ತಪ್ಪಿಸಿಕೊಳ್ಳೋಕ್ಕೆ ಇಷ್ಟೆಲ್ಲಾ ಕಂಪನಿ ಜವಾಬ್ದಾರೀನ ಎದೆ ಮೇಲೆ ಎಳಕೊಂಡಿರೋದು ನೋಡಿದ್ರೆ ಆಶ್ಚರ್ಯ ಆಗತ್ತೆ. ಬೆಂಗಳೂರಿನ ಸುತ್ತ ಅದೆಷ್ಟೋ ಓಲ್ಡ್ ಏಜ್ ಹೋಮ್‌ಗಳಿವೆ. ಸುಖವಾಗಿ ಅಲ್ಲೇ ಹೋಗಿ ಇದ್ದು ಬಿಡಬೋದಾಗಿತ್ತು ಅವನು. ಪ್ರಶಾಂತ ಏನೋ ಒಳ್ಳೇ ಹುಡುಗ. ಇನ್ನಾರನ್ನಾದ್ರು ಈ ರೀತಿ ಮನೆ ಒಳಗೆ ಸೇರಿಸಿದ್ರೆ ಅವರು ಮನೇನೇ ನುಂಗಲ್ಲ ಅಂತ ಏನು ಗ್ಯಾರಂಟೀ?'' ಅಂದ ಶರಲೇಖ. ಅದೂ ಸರಿಯೇ ಅನ್ನಿಸಿತು ನನಗೆ.

ಇದೆಲ್ಲಾ ಆಗಿ ಆರು ತಿಂಗಳುಗಳಾಗಿರಬಹುದು. ಒಂದು ಸಂಜೆ ಪ್ರಶಾಂತ ನಮ್ಮಿಬ್ಬರನ್ನ ನೋಡಲು ಅವಸರದಿಂದ ಬಂದ. ''ಏನು ಪ್ರಶಾಂತ್, ಏನು ಸಮಾಚಾರ? ಕಂಪನಿ ಕೆಲಸ ಎಲ್ಲ ಸರಿಯಾಗಿ ನಡೀತಿದೆ ತಾನೆ ?'' ಅಂತ ವಿಚಾರಿಸಿದೆ.

''ಕಂಪನಿ ಚೆನ್ನಾಗಿಯೇ ನಡೀತಿದೆ ಮಾವ. ಅದರದ್ದೇನೂ ಪ್ರಾಬ್ಲಂ ಇಲ್ಲ. ಈಚೀಚೆಗೆ ಘೋಷಾಲ್ ಅಂಕಲ್ ಸ್ವಲ್ಪ ವಿಚಿತ್ರವಾಗಿ ಆಡ್ತಿದಾರೆ. ಆ ಬಗ್ಗೆ ಸ್ವಲ್ಪ ಮಾತಾಡೋಣ ಅಂತ ಬಂದೆ. ನಾನು ಅವರ ಮನೆ ಗ್ರೌಂಡ್ ಫ್ಲೋರ್ ಬಾಡಿಗೆಗೆ ತಗೊಂಡಾಗಲೇ ಅವರು ಕಂಪನಿ ಸೆಕ್ಯೂರಿಟಿ ಚೆನ್ನಾಗಿರಬೇಕು ಅಂತ ಕಂಡೀಶನ್ ಹಾಕಿದ್ದರು. ಅದಕ್ಕೇ ಪ್ರಾರಂಭದಿಂದಲೇ ಒಂದು ಸೆಕ್ಯೂರಿಟಿ ಏಜೆನ್ಸಿಗೆ ಹೇಳಿ ಒಳ್ಳೇ ಸೆಕ್ಯೂರಿಟಿ ಹಾಕಿದ್ದೆ. ಎಲ್ಲ ಸರಿಯಾಗೇ ನಡೀತಾ ಇತ್ತು. ಕಳೆದ ತಿಂಗಳು ನನಗೆ ಕಲ್ಕತ್ತಾ ಕಂಪನಿ ಒಂದರಿಂದ ಎನ್‌ಕ್ವೈರಿ ಬಂತು. ಆ ಕಂಪನಿ ಅಧಿಕಾರಿ ಒಬ್ಬ ನನ್ನನ್ನ ನೋಡಲು ಬಂದ. ಆತ ಬೆಂಗಾಲಿ. ಘೋಷಾಲ್ ಅಂಕಲ್‌ಗೆ

ಸಂತೋಷ ಆಗಬಹುದು ಅಂತ ಅವರನ್ನ ಕೆಳಗೆ ಕರೆದು ಅವನನ್ನ ಪರಿಚಯಿಸಿದೆ. ಅವನ ಹತ್ರ ಏನೋ ಲೋಕಾಭಿರಾಮವಾಗೇ ಮಾತನಾಡಿದರು. ಅವನು ಹೋದ ಮೇಲೆ ಅವರು ಬಹಳ ಗಾಬರಿಯಾಗಿದ್ದ ಹಾಗೆ ಕಾಣಿಸಿತು. ''ಕಲ್ಕತ್ತ ಜನ ಎಲ್ಲ ಮೋಸ ಮಾಡೋರು. ಅವರೊಂದಿಗೆ ಯಾವ ವ್ಯವಹಾರಾನೂ ಇಟ್ಕೋಬೇಡ. ನಿನ್ನ ಒಳ್ಳೇದಕ್ಕೇ ಹೇಳ್ತಾ ಇದ್ದೀನಿ.'' ಅಂತ ಶುರು ಮಾಡಿದರು. ಕಂಪನಿಗೆ ಇಟ್ಟಿರೋ ಸೆಕ್ಯೂರಿಟಿ ಏನೇನೂ ಸಾಲದು. ಇನ್ನೂ ಇಬ್ಬರನ್ನ ನೇಮಿಸು ಅಂತ ದುಂಬಾಲು ಬಿದ್ದರು. ಇದನ್ನೆಲ್ಲಾ ನೋಡಿದರೆ ಅವರಿಗೆ ಪ್ಯಾರನೋಯಾ ತರಹಾ ಯಾವುದೋ ಮಾನಸಿಕ ಖಾಯಿಲೆ ಇರಬಹುದೇನೋ ಅಂತ ಗುಮಾನಿ. ಏನು ಮಾಡೋದು ಅಂತ ತೋಚ್ತಾ ಇಲ್ಲ'' ಅಂದ ಪ್ರಶಾಂತ್. ಹುಡುಗ ಗಾಬರಿಯಾಗಿದ್ದ.

''ಏನೂ ಯೋಚನೆ ಮಾಡಬೇಡ ಪ್ರಶಾಂತ್. ನಾನು ಬಂದು ಅವರನ್ನ ನೋಡ್ತೇನೆ. ಸೆಕ್ಯೂರಿಟಿ ಬಗ್ಗೆ ಅವರಿಗೆ ಸಮಾಧಾನ ಹೇಳುಕ್ಕೆ ಶರಲೇಖನನ್ನೂ ಕರೆದು ತರ್ತೇನೆ'' ಅಂತ ಹೇಳಿ ಅವನನ್ನ ಕಳಿಸಿದೆ.

ಮಾರನೆಯ ದಿನ ಶರಲೇಖ ಮತ್ತು ನಾನು ಚಿಕ್ಕಬಿದಿರುಕಲ್ಲಿಗೆ ಹೋದೆವು. ಗೇಟಿನಲ್ಲಿ ಇಬ್ಬರು ದ್ವಾರಪಾಲಕರು. ನಮ್ಮ ಹೆಸರನ್ನು ಕೇಳಿ, ಮೊಬೈಲಿನಲ್ಲಿ ಪ್ರಶಾಂತನಿಗೆ ಫೋನು ಮಾಡಿ ಅನಂತರವೇ ನಮ್ಮನ್ನು ಒಳಕ್ಕೆ ಬಿಟ್ಟರು. ನಾವು ನೇರವಾಗಿ ಘೋಷಾಲರನ್ನು ನೋಡಲು ಹೋದೆವು. ಅವರ ಕೊಠಡಿಯ ಬಾಗಿಲು ಮುಚಿತ್ತು. ನಾನು ಮೆಲ್ಲಗೆ ನಾಕ್ ಮಾಡಿದೆ. ''ಯಾರು?'' ಅಂತ ಗಾಬರಿಯ ದನಿಯಲ್ಲಿ ಘೋಷಾಲ್ ಕೇಳಿದರು. ನಮ್ಮ ಪರಿಚಯವನ್ನು ವಿವರವಾಗಿ ಹೇಳಿದ ನಂತರವೇ ಬಾಗಿಲು ತೆರೆದದ್ದು. ನಮ್ಮನ್ನ ನೋಡಿದ ತಕ್ಷಣ, ''ಸದ್ಯ ಬಂದಿರಲ್ಲ, ನೀವಾದರೂ ಪ್ರಶಾಂತನಿಗೆ ಬುದ್ಧಿ ಹೇಳಿ. ವ್ಯಾಪಾರ ಸಿಗುತ್ತೆ ಅಂತ ಕೆಲಸಕ್ಕೆ ಬಾರದ ಕಲ್ಕತ್ತ ಜನರ ಹತ್ತಿರ ಎಲ್ಲ ವ್ಯಾಪಾರಕ್ಕೆ ಹೊರಟಿದ್ದಾನೆ. ಇವನ ಕಂಪನಿ ಮಾಡ್ತಾ ಇರೋದು ಬಹಳ ಸೂಕ್ಷ್ಮದ ಉಪಕರಣ. ಕದ್ದು ದುಡ್ಡು ಮಾಡಿಕೊಳ್ಳೋಕ್ಕೆ ಜನ ಕಾದಿರ್ತಾರೆ. ಸೆಕ್ಯೂರಿಟಿ ಭದ್ರವಾಗಿರ್ಬೇಕು ಅಂತ ಅವನಿಗೆ ಹೇಳಿ. ನನ್ನ ಮಾತು ಅಂದ್ರೆ ಅರುಳು ಮರಳು ಅಂತ ತಿಳೀತಾನೆ'' ಅಂತ ಬ್ರಜ್ ಹೇಳಿದರು. ಶರಲೇಖ ಸೂಕ್ಷ್ಮವಾಗಿ ಅವರ ಕೊಠಡಿಯನ್ನೆಲ್ಲಾ ಗಮನಿಸುತ್ತಿದ್ದ. ಕೊನೆಗೆ ಅವರಿಗೆ ಸಮಾಧಾನ ಹೇಳಿ ಹಿಂತಿರುಗಿದೆವು.

ಮನೆಗೆ ಬಂದಮೇಲೆ, ಶರಲೇಖ, ''ಇದು ಖಂಡಿತ ಪ್ಯಾರನೋಯ ಅಲ್ಲ ಅನ್ನಿಸುತ್ತೆ. ಬ್ರಜ್ ಹೇಳ್ತಾ ಇರೋದು ನಿಜ ಅಂದುಕೊಂಡೇ ಕಂಪನಿ ಸೆಕ್ಯೂರಿಟಿ ಬಲಪಡಿಸೋದಕ್ಕೆ ಹೇಳು. ಒಂದೆರಡು ದಿನಗಳಲ್ಲಿ ಭಯ ಪಡುಕ್ಕೆ ಏನಾದರೂ ಕಾರಣ ಇದೆಯೇ ಅಂತ ಪತ್ತೆ ಹಚ್ತೀನಿ.'' ಅಂತ ಹೇಳಿ, ಹೊರಕ್ಕೆ ಹೋದ. ಮೂರು ದಿನಗಳ ಕಾಲ ಅವನು ಮನೆಗೆ ಹಿಂತಿರುಗಲೇ ಇಲ್ಲ. ನನಗೆ ಇದೆಲ್ಲಾ ಮಾಮೂಲು ಆಗಿದ್ದರಿಂದ ನಿರ್ಯೋಚನೆಯಿಂದ ನನ್ನ ಪಾಡಿಗೆ ನಾನಿದ್ದೆ.

ನಾಲ್ಕನೆಯ ದಿನ ಶರಲೇಖ ಬೆಳಗಿನ ತಿಂಡಿಗೆ ಹಾಜರಾಗಿದ್ದ. ''ಏನಾದರೂ ಪ್ರಗತಿ ಆಗಿದೆಯೇ ?'' ಅಂತ ಅವನನ್ನ ಕೇಳಿದೆ. ''ನೀನೇ ನೋಡುವಂತೆ. ಇನ್‌ಸ್ಪೆಕ್ಟರ್ ಪ್ರವೀಣ್ ಇನ್ನು ಸ್ವಲ್ಪ ಹೊತ್ತಿನಲ್ಲೇ ಇಲ್ಲಿಗೆ ಬರ್ತಾನೆ. ಎಲ್ಲಾ ಒಟ್ಟಿಗೆ ಬ್ರಜ್ ನ ಭೇಟಿ ಮಾಡಲು ಹೋಗೋಣ'' ಅಂದ ಶರಲೇಖ.

ಅಷ್ಟು ಹೊತ್ತಿಗೆ ಪೋಲೀಸ್ ಜೀಪ್ ಬಂತು. ಅದರಲ್ಲಿ ಪ್ರವೀಣ್ ಜೊತೆಗೆ ಇನ್ನಿಬ್ಬರು ಪೋಲೀಸ್ ಅಧಿಕಾರಿಗಳು ಕುಳಿತಿದ್ದರು. ನಾವೂ ಜೀಪ್ ಹತ್ತಿದೆವು.

ತುಮಕೂರು ರಸ್ತೆ ಹಾದು ಕಂಪನಿ ಆವರಣ ಸೇರಿದೆವು. ಪೋಲೀಸರನ್ನು ನೋಡಿ ದ್ವಾರಪಾಲಕರು ಏನೂ ತಕರಾರಿಲ್ಲದೇ ನಮ್ಮನ್ನು ಒಳಕ್ಕೆ ಬಿಟ್ಟರು. ಪ್ರಶಾಂತನ ಕಂಪನಿಯ ಕೆಲಸವೆಲ್ಲಾ ಎಂದಿನಂತೆ ನಡೆಯುತ್ತಿತ್ತು. ಪೋಲೀಸರನ್ನು ನೋಡಿ ಪ್ರಶಾಂತನಿಗೆ ದಿಕ್ಕು ತೋಚದಂತೆ ಆಯಿತು. ಶರಲೇಖನೇ ಅವನಿಗೆ ನಾವುಗಳು ಘೋಷಾಲರನ್ನು ಭೇಟಿ ಮಾಡಲು ಬಂದಿದ್ದೇವೆ ಅಂತ ಸಮಾಧಾನ ಹೇಳಿ ಮಹಡಿ ಮೆಟ್ಟಲನ್ನು ಹತ್ತಿದ. ಪೋಲೀಸರೊಂದಿಗೆ ನಾನೂ ಅವನನ್ನು ಹಿಂಬಾಲಿಸಿದೆ.

ಘೋಷಾಲರ ಕೊಠಡಿಯ ಬಾಗಿಲು ತೆರೆದಿತ್ತು. ನಾವು ಒಳಕ್ಕೆ ಹೋದೆವು. ಘೋಷಾಲರ ಸಾಮಾನುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಹರಡಿದ್ದವು. ಅವರು ಮಾತ್ರ ಇರಲಿಲ್ಲ. ಪೋಲೀಸರು ಆ ಕೊಠಡಿಯನ್ನ ಕೂಲಂಕುಶವಾಗಿ ಪರಿಶೀಲಿಸಲು ಪ್ರಾರಂಭಿಸಿದರು. ಶರಲೇಖ ನನ್ನೊಡನೆ ಕೆಳಕ್ಕೆ ಇಳಿದು ಬಂದ. ಪ್ರಶಾಂತನ ಆಫೀಸಿನಲ್ಲಿ ಕುಳಿತ ನಂತರ ಶರಲೇಖ ನಡೆದ ಘಟನೆಗಳನ್ನು ವಿವರಿಸಲು ಪ್ರಾರಂಭಿಸಿದ.

''ಮೊದಲ ಬಾರಿ ನೋಡಿದಾಗಲೇ ಬ್ರಜ್‌ನ ವ್ಯಕ್ತಿತ್ವದಲ್ಲಿ ಏನೋ ವ್ಯತ್ಯಾಸ ಕಾಣಿಸಿತು. ಅಂದು ಸಂಜೆಯೇ ಬೆಂಗಳೂರಿನ ರೇಷ್ಮೆ ವ್ಯಾಪಾರಿಗಳ ಸಂಘವನ್ನು ಸಂಪರ್ಕಿಸಿ ಬ್ರಜ್ ಘೋಷಾಲರ ಬಗ್ಗೆ ವಿಚಾರಿಸಿದೆ. ಆ ಹೆಸರಿನ ಯಾರೂ ಹಿಂದಿನ ವರ್ಷಗಳಲ್ಲಿ ವ್ಯಾಪಾರಿಯಾಗಿ ನೋಂದಣಿ ಮಾಡಿಸಿರಲಿಲ್ಲ ಎಂಬ ಅಂಶ ಹೊರಬಿತ್ತು. ಅವನನ್ನ ಎರಡನೆ ಬಾರಿ ಭೇಟಿ ಮಾಡಿದಾಗ ನನ್ನ ಮೊಬೈಲಿನಲ್ಲಿ ಅವರಿಗೆ ತಿಳಿಯದಂತೆ ಅವರ ಫೋಟೋ ತೆಗೆದುಕೊಂಡು ಅದನ್ನ ಆ ಸಂಜೆ ಪ್ರವೀಣನಿಗೆ ಕೊಟ್ಟೆ. ಅವನು ಬೆಂಗಾಲಿನ ಪೋಲೀಸರನ್ನು ಸಂಪರ್ಕಿಸಿ ಅವರ ಬಗ್ಗೆ ಮಾಹಿತಿ ಕೇಳಿದ. ಅಲ್ಲಿನ ಭೂಗತ ರೌಡಿಗಳಲ್ಲಿ ಇವನು ಒಬ್ಬ ನಾಯಕನಾಗಿದ್ದನಂತೆ. ಇವನ ಗುಂಪಿನವರೆಲ್ಲಾ ಇದಿರು ಗುಂಪಿನವರಿಂದ ಕೊಲೆಯಾದಾಗ ಇವನು ತಪ್ಪಿಸಿಕೊಂಡು ಬೆಂಗಳೂರಿನಲ್ಲಿ ನೆಲೆಸಿದನಂತೆ. ಇದಿರು ಗುಂಪಿನವರ ಧಾಳಿಯಿಂದ ರಕ್ಷಿಸಿಕೊಳ್ಳಲು ಈ ತೋಟವನ್ನು ಕೊಂಡು ಪ್ರವೀಣನು ಕಂಪನಿ ಸ್ಥಾಪಿಸುವಂತೆ ಪುಸಲಾಯಿಸಿ ಇಲ್ಲಿ ಸುಖವಾಗಿದ್ದ. ಇವನ ಮೇಲೆ ಅನೇಕ ಕೊಲೆ ಅಪಾದನೆಗಳಿದ್ದು, ಬೆಂಗಾಲಿ ಪೋಲೀಸರು ಇವನ ಹುಡುಕಾಟದಲ್ಲಿದ್ದರಂತೆ. ಪ್ರವೀಣ್ ಫೋಟೋ ಕಳಿಸಿದಾಗ ಅವನನ್ನು ಸೆರೆ ಹಿಡಿಯಲು ಇಲ್ಲಿಗೆ ದೌಡಾಯಿಸಿಕೊಂಡು ಬಂದರು. ಅಷ್ಟರಲ್ಲಿ ಇವನಿಗೆ ಹೇಗೋ ಸುಳಿವು ತಿಳಿದು ಇಲ್ಲಿಂದ ಪರಾರಿಯಾಗಿದ್ದಾನೆ ಅಥವಾ ಇದಿರು ಗುಂಪಿನವರು ಬಂದು ಅಪಹರಿಸಿಕೊಂಡು ಹೋಗಿರಬಹುದು. ಪೋಲೀಸರಿಗೆ ಇನ್ನೊಂದು ಕೇಸ್ ಸಿಕ್ಕಹಾಗಾಯಿತು'' ಅಂದ ಶರಲೇಖ.

''ಆದರೂ ನನ್ನ ಕಂಡರೆ ಅವರಿಗೆ ಅದೆಷ್ಟು ವಿಶ್ವಾಸ! ಭೂಗತ ರೌಡಿ ಅಂತ ನಂಬುವುದೇ ಸಾಧ್ಯವಿಲ್ಲ'' ಎಂದ ಪ್ರಶಾಂತ.

''ಮನುಷ್ಯ ಅಂದರೆ ಅನೇಕ ಗುಣಗಳ ಮಿಶ್ರಣ. ಅದು ತಿಳಿಯುಕ್ಕೆ ನೀನಿನ್ನೂ ಬೆಳೆಯಬೇಕು'' ಅಂದ ಶರಲೇಖ.

# ನಿವೃತ್ತಿಯಲ್ಲಿ ಶಾಂತಿ

**- ಸಿ.ಆರ್. ಸತ್ಯ**

ಎಲ್ಲೋ ಒಂದು ಕಡೆ ''ಫೆಮಿಲಿಯಾರಿಟಿ ಬ್ರೀಡ್ಸ್ ಕಂಟೆಂಪ್ಟ್'' ಅನ್ನೋ ಇಂಗ್ಲೀಷ್ ನಾಣ್ನುಡಿ ಓದಿದೆ. ಇಂಗ್ಲಿಷ್ ಅಂದರೆ ನನಗೆ ಅಷ್ಟಕ್ಕಷ್ಟೇ! ''ಏನಮ್ಮಾ ಇದರ ಅರ್ಥ?'' ಅಂತ ನನ್ನ ಹೆಂಡತಿಯನ್ನ ಕೇಳಿದೆ. ''ತೀರ ಹತ್ತಿರದಲ್ಲಿದ್ದರೆ ಒಬ್ಬರಿಗೊಬ್ಬರಿಗೆ ವೈಮನಸ್ಸು ಹುಟ್ಟುತ್ತಂತೆ'' ಅಂತ ಅವಳು ತರ್ಜುಮೆ ಮಾಡಿದಳು. ''ನನಗೊಂದು ಉದಾಹರಣೆ ಕೊಡ್ತೀಯಾ?'' ಅಂತ ಕೇಳಿದೆ. ನನಗೆ ಯಾವುದೂ ನೇರವಾಗಿ ಅರ್ಥವಾಗೊಲ್ಲ. ಅದಕ್ಕೆ ಅವಳು ''ಓಹೋ! ನೋಡಿ, ನಿಮ್ಮದೇ ಒಂದು ಉದಾಹರಣೆ. ರಿಟೈರ್ ಆದ ಮೇಲೆ ಬೇರೆ ಏನೂ ಕೆಲಸವಿಲ್ಲದೆ ನನ್ನ ಸುತ್ತಮುತ್ತಲೇ ಬೆಳಗಿನಿಂದ ಸಂಜೆ ತನಕ ಓಡಾಡಿಕೊಂಡು ಇದೀರಿ. ನಾನೇನೋ ಇದೊಂದು ತಾತ್ಕಾಲಿಕ ಪ್ರಾಬ್ಲಮ್ಮು ಅಂತ ಅಂದುಕೊಂಡಿದ್ದೆ. ನೋಡಿದ್ರೆ, ಇದು ಪರ್ಮನೆಂಟ್ ಆಗೋ ಹಾಗೆ ಕಾಣುತ್ತೆ. ಅದಕ್ಕೆ ನಿಮ್ಮ ಮೇಲೆ ಯಾಕೋ ಈಚೀಚೆಗೆ ನನಗೆ ಕಂಟೆಂಪ್ಟ್ ಬರ್ತಾ ಇದೆ'' ಅಂತ ಅಂದಳು. ''ಇದಕ್ಕೆ ಏನಾದ್ರೂ ಪರಿಹಾರ ಇದ್ಯೆ?'' ಅಂತ ಕೇಳಿದೆ. ''ನೀವೇ ಯೋಚಿಸಿ'' ಅಂತ ಅಂದಳು. ಯೋಚಿಸಿದೆ.

**ಇತ್ತೀಚೆಗೆ ನಿಮ್ಮ ಮೇಲೆ ನನಗೇಕೊ ಕಂಟೆಂಪ್ಟ್ ಬರ್‍ತಾ ಇದೆ ಎಂದು ಹೆಂಡತಿ ಹೇಳಿದಾಗ ಗಂಡ ಮಾಡಿದ್ದು?**

''ಆರು ತಿಂಗಳುಗಳ ಕಾಲ ಹಿಮಾಲಯದಲ್ಲಿ ವಾಸ ಮಾಡಿ ಬರಲೆ? ಆವಾಗ ಖಂಡಿತ ನನ್ನನ್ನ ಮಿಸ್ ಮಾಡ್ಕೋತಾಳೆ. ಹಾಗಾಗಿ ಹಳೇ ಮೂಡ್ ಗೇ ಬರ್ತಾಳೆ'' ಅಂತ ಮೊದಲನೆ ಯೋಚನೆ ಬಂತು. ಆದರೆ, ನನ್ನ ಒಳ ಮನಸ್ಸು ಕೇಳಬೇಕೆ? ''ಹಿಮಾಲಯದಲ್ಲಿ ಯಾವಾಗಲೂ ಚಳಿ, ಇಳ್ಕೊಳ್ಳೊಕ್ಕೆ ಸರಿಯಾಗಿ ಜಾಗ ಸಿಗೊಲ್ಲ, ಸಾಧು ಸಂತರ ಕೈಗೆ ಸಿಕ್ಕಿಕೊಂಡ್ರೆ, ನನ್ನ ಗೃಹಸ್ತಾಶ್ರಮಕ್ಕೇ ಕೊಕ್ಕೆ ಹಾಕ್ತಾರೆ, ಅಲ್ಲಲ್ಲೇ ಚೀನಿಯರ ಕಾಟ ಬೇರೆ, ನಮ್ಮೂರಿನಿಂದ ಹೋಗಿ ಬರೋದು ಕಷ್ಟ, ಖರ್ಚೂ ಜಾಸ್ತಿ...'' ಅಂತ ಏನೇನೋ ಹೇಳಿತು. ''ಅಷ್ಟು ದೂರ ಹೋಗೋ ಬದಲು, ಇಲ್ಲೇ ನಂದಿ ಬೆಟ್ಟದಲ್ಲೇ ಯಾಕೆ ಕ್ಯಾಂಪ್ ಮಾಡಬಾರದು?'' ಅಂತ ಮನಸ್ಸು ಪರ್ಯಾಯ ಮಾರ್ಗ ಹೇಳಿತು. ಅದಕ್ಕೆ ಒಳ ಮನಸ್ಸು ಒಪ್ಪಲಿಲ್ಲ.'' ಅಲ್ಲಿಗೆ ಹೋಗೋಕ್ಕೆ ಏರ್‌ಪೋರ್ಟ್ ರೋಡಿನಲ್ಲಿ ಟೋಲ್ ಕಟ್ಟಬೇಕು, ಅಲ್ಲಿನ ವಸತಿ ಗೃಹ ಮಹಾತ್ಮಗಾಂಧಿ ಅಂತಹವರಿಗೆ ಮಾತ್ರ, ಅಲ್ಲಿ ಹೋಗೋವರೆಲ್ಲಾ ಕಡ್ಡಾಯವಾಗಿ ಬೈಕ್‌ನಲ್ಲೇ ಹೋಗಿ ಬೀರ್ ಕುಡೀಬೇಕು ಅಂತ ಸರಕಾರದ ಆಜ್ಞೆ ಇದೆ. ಅಕಸ್ಮಾತ್ ಹೋದರೂ ಅಲ್ಲಿ ವಾಕಿಂಗ್ ಅಂತ ಅಡ್ಡಾಡುತ್ತಿರುವ ಟಿಪ್ಪೂ ಡ್ರಾಪ್‌ನಿಂದ ಬಿದ್ದರೆ ಏನು ಗತಿ?'' ಅಂತೆಲ್ಲಾ ವಾದ ಮಾಡ್ತು.

ಮನಸ್ಸಿಗೆ ಇನ್ನೊಂದು ಪ್ಲಾನ್ ಹೊಳೀತು. ''ಹಾಗಾದರೆ, ಚಾಮುಂಡಿ ಬೆಟ್ಟವನ್ನ ಯಾಕೆ ಟ್ರೈ ಮಾಡಬಾರದು?'' ಅಂತ ಕೇಳಿತು. ಅದಕ್ಕೆ ಒಳ ಮನಸ್ಸು ''ನೋಡಪ್ಪಾ, ಮನೆ ಬಿಟ್ಟು ಹೋದರೆ, ಎರಡು ಸಾವಿರ ಕಿ.ಮೀ.ಗಿಂತ ದೂರದ ಜಾಗಕ್ಕೆ ಹೋಗು. ಮೈಸೂರಂತೆ, ಮೈಸೂರು! ಇನ್ನೇನು ಹೆಂಡತಿ ಹಾಯಾಗಿ ನಿಟ್ಟುಸುರು ಬಿಡ್ತಿದಾಳೆ ಅಂತ ಅಂದುಕೊಳ್ಳೋ ಹೊತ್ತಿಗೆ, ನೀನು ಟಿಪ್ಪೂ ಎಕ್ಸ್ ಪ್ರೆಸ್ ಹಿಡ್ಕೊಂಡು ದಿಢೀರ್ ಅಂತ ವಾಪಸ್ ಬಂದರೆ ಅವಳ ಶಾಂತಿ ಭಂಗ ಆಗಲ್ವೇ?'' ಅಂತ ಬೆದರಿಸ್ತು. ''ಹಾಗಾದರೆ ಪರ್ವತ, ಬೆಟ್ಟ ಅಂತೆಲ್ಲಾ ಮರೆತು ಬಿಡು. ಯಾವುದಾದರೂ ನದಿ ಪಕ್ಕ ಜೀವನ ಸಾಗಿಸು. ನಿನಗಿರೋ ಬೆಸ್ಟ್ ಆಪ್ಷನ್ ಅಂದರೆ, ಗಂಗಾ ತೀರದಲ್ಲಿ–ಕಾಶಿಯಲ್ಲಿ–ಕ್ಯಾಂಪ್ ಮಾಡಿಕೋ'' ಅಂತು ಮನಸ್ಸು. ನನ್ನ ಒಳ ಮನಸ್ಸು ಇದ್ಯಲ್ವಾ? – ಅದು ಒಂದು ಕೆಟ್ಟ ಕ್ರಿಮಿನಲ್ ಲಾಯರ್ ತರಹ ಎಲ್ಲಾದಕ್ಕೂ ಕೌಂಟರ್ ಪಾಯಿಂಟ್ ಹಾಕುತ್ತೆ.'' ನರೇಂದ್ರ ಮೋದಿ, ಸ್ವಚ್ಛ ಭಾರತ ಯೋಜನೆಯ ಕೆಳಗೆ ಗಂಗಾ ನದಿಯನ್ನು ಕ್ಲೀನ್ ಮಾಡ್ತಾರಂತೆ. ನಿನ್ನ ಮೂತಿ ನೋಡಿ ನಿನ್ನನ್ನು ಅಲ್ಲಿಂದ ಹೊರಕ್ಕೆ ದಬ್ಬಿದರೆ ಏನು ಮಾಡ್ತಿ? ನಿನಗೋ ನಾಲ್ಕು ಪದ ಹಿಂದೀನೂ ಮಾತನಾಡೋಕ್ಕೆ ಗೊತ್ತಿಲ್ಲ!'' ಅಂತು.

ಹಾಗಾದರೆ, ಹುಟ್ಟು ಕನ್ನಡವನಾದ ನನ್ನಂತಹವನಿಗೆ ತಮಿಳು ಬರದೇ ಇರುತ್ಯೆ? ''ರಾಮೇಶ್ವರಕ್ಕೆ ಹೋದರಾಯಿತು'' ಅಂತು ಮನಸ್ಸು. ಅದಕ್ಕೆ ನನ್ನ ಒಳ ಮನಸ್ಸು ''ತಮಿಳಿನಲ್ಲಿ ಮ್ಯಾನೇಜ್ ಮಾಡೋದು ಮುಖ್ಯ ಅಲ್ಲ. ಈಗೆಲ್ಲಾ ತಮಿಳು ನಾಡಿನಲ್ಲಿ ರಾತ್ರಿ ಹೊತ್ತು ಅನ್ನದ ಊಟ ಎಲ್ಲೂ ಸಿಗೋಲ್ಲ. ಬರೀ ಚಪಾತಿ, ದೋಸೆ, ಕಾಫೀನಲ್ಲಿ ಬದಕೋದಕ್ಕೆ ನಿನಗೆ ಸಾಧ್ಯವೇ?'' ಅಂತ ಸೀರಿಯಸ್ ಪಾಯಿಂಟ್‌ನೇ ತೆಗೀತು.

ಈ ಮಧ್ಯೆ ನನ್ನ ಮನಸ್ಸಿನಲ್ಲಿ ಗೊಂದಲಾಟ ಶುರುವಾಯ್ತು. ಪರ್ವತ ನದಿಗಳನ್ನ ಬಿಟ್ಟರೆ ಇನ್ನು ಉಳಿದಿರೋದು ಯಾರಾದರೂ ದೂರದ ಸಂಬಂಧಿಗಳ ಮನೆಗಳಲ್ಲೋ, ಮಠಗಳಲ್ಲೋ ಆಶ್ರಯ ಪಡೆಯೋದು; ಆದರೆ ನನಗೆ ತಿಳಿದಿರೋ ಹಾಗೆ, ನನ್ನ ಸಂಬಂಧಿ ಕರೂ ಮಠಗಳೂ ಇರೋದೆಲ್ಲಾ 2,000 ಕಿ.ಮೀ. ಒಳಗೇ! ಅದೂ ಅಲ್ಲದೆ, ಹೆಂಡತಿ ಮನಸ್ಸಿಗೆ ಶಾಂತಿ ಸಿಗಬೇಕು ಅಂತ ದೂರದ ಸಂಬಂಧಿಗಳ ಮನಸ್ಸನ್ನ ಕೆಡಿಸೋದು ಅನ್ಯಾಯವಲ್ಲವೇ? ನಿನ್ನನ್ನ ಅವರೂ ನಾಲ್ಕು ದಿನಕ್ಕೇ ಹೊರಕ್ಕೆ ದಬ್ಬಿದರೆ ಏನು ಮಾಡ್ತಿ? ಅಂತ ಒಳ ಮನಸ್ಸು – ಆಲಿಯಾಸ್ ಕ್ರಿಮಿನಲ್ ಲಾಯರ್ – ಪ್ರಶ್ನಿಸ್ತು. ಈ ಹಂತಕ್ಕೆ ಬಂದಾಗ ನನಗೆ ನಿಜವಾಗಲೂ ತಲೆಗೆ ಚಿಟ್ಟು ಹಿಡಿತು. ನನ್ನ ಹೆಂಡತಿ ನನ್ನ ಸ್ಥಿತಿಯನ್ನ ನೋಡಿ ''ಏನ್ರೀ ನಿಮ್ಮ ಪ್ರಾಬ್ಲಮ್ಮು?'' ಅಂತ ಕೇಳಿದಳು. ವಿಷಯವನ್ನೆಲ್ಲಾ ನಾನು ವಿವರವಾಗಿ ಹೇಳಿದೆ. ಎಷ್ಟಾದ್ರು, ನನ್ನ ಹೆಂಡತಿ ಅಲ್ಲವೆ? ನನ್ನ ಮೇಲೆ ಒಂದು ಚೂರು ಪ್ರೀತಿ ಇದೆ ಅಂತ ಸಾಬಿತು ಮಾಡೋಕ್ಕೆ ''ಹೋಗಲಿ ಬಿಡಿ, ಪರ್ವತ, ನದಿ, ಗಿದಿ, ನಿಮಗೆ ಏನೂ ಬೇಡ. ಆಮೇಲೆ ನಿಮ್ಮ ಆರೋಗ್ಯ ಕೆಟ್ಟು ಕೂತರೆ ನಾನೇನು ಮಾಡಲಿ?'' ಅಂತ ಕನಿಕರ ತೋರಿಸಿ, ''ನಾನೂ ಯೋಚಿಸಿ ಹೇಳ್ತೀನಿ'' ಅಂತ ಅಡುಗೆ ಮನೆಗೆ ಹೋದಳು. ಸ್ವಲ್ಪ ಸಮಯ ಕಳೀತು.

ಬಿಸಿ ಕಾಫಿ ಜೊತೆಗೆ ಕೋಡುಬಳೆಗಳನ್ನ ನನ್ನ ಕೈಗಳಿಗೆ ಇಟ್ಟು, ''ಪಾಪ, ಅಲ್ಲೆಲ್ಲಾ ಹೋದರೆ ನಿಮಗೆ ಬಿಸಿ ಕಾಫಿ, ತಿಂಡಿ, ಊಟ ಇವೆಲ್ಲಾ ಎಲ್ಲಿ ಸಿಗುತ್ತೆ? ನೀವು ಆಸ್ತಿ ಮಾಡಿಕೊಂಡಿರೋ ನೂರು ಕೆ.ಜಿ. ತೂಕ ಮೂರು ತಿಂಗಳಲ್ಲಿ ಐವತ್ತು ಕೆ.ಜಿ.ಗಳಿಗೆ ಇಳಿದುಬಿಡುತ್ತೆ ಅಷ್ಟೆ! ನನಗೊಂದು ಬೇರೆ ಉಪಾಯ ಹೊಳೀತು'' ಅಂತ ಅಂದಳು. ''ಅದ್ಯೇನು ಹೇಳು. ಒಟ್ಟಿನಲ್ಲಿ

ನಿನಗೆ ನನ್ನ ಮೇಲೆ ಫೆಮಿಲಿಯಾರಿಟಿ ಕಂಟೆಂಪ್ಟ್ ಬರದಿದ್ದರೆ ಸರಿ!'' ಅಂತ ಅಂದೆ. ನೀವು ಏನೇ ಹೇಳಿ, ನಾನು 'ಬೇಸಿಕಲೀ'' ಒಳ್ಳೆಯವಳೇ! ನೋಡಿ, ನಿಮ್ಮ ಆರೋಗ್ಯ ದೃಷ್ಟಿಯಿಂದ ಈ ಪ್ಲಾನ್ ಹೇಳ್ತಿದೀನಿ. ಇನ್ನು ಮೇಲಿಂದ, ನಮ್ಮ ಗೆಸ್ಟ್ ರೂಮಿನಲ್ಲಿ ನಿಮ್ಮನ್ನ ನನ್ನ ಕಣ್ಣಿಗೆ ಬೀಳದ ಹಾಗೆ ಕೂಡಿ ಹಾಕ್ತೀನಿ. ಬೆಳಿಗ್ಗೆ, ಸಂಜೆ ಒಂದೊಂದು ಗಂಟೆಯ ಕಾಲ ಬೀಗ ತೆಗೆದು ಹೊರಕ್ಕೆ ಬಿಡ್ತೀನಿ. ಓಡಾಡಿಕೊಂಡು ಬನ್ನಿ, ಕಾಫಿ, ತಿಂಡಿ, ಊಟ, ಎಲ್ಲಾ ಬಾಗಿಲ ಸಂದಿನಿಂದ ಒಳಕ್ಕೆ ತಳ್ತೀನಿ ತಿನ್ಕೊಂಡು ಹಾಯಾಗಿ ಇರಿ. ಏನಾದರೂ ತುರ್ತು ಪರಿಸ್ಥಿತಿ ಬಂದರೆ, ಬಾಗಿಲು ತಟ್ಟಿ-ತೆಗೀತೀನಿ. ಆದರೆ, ನನ್ನ ಫ್ರೆಂಡ್ಸ್ ಮನೇಗೆ ಬಂದು ಕೂತಿದ್ದಾಗ ಹೊರಗೆ ಬರೋದಕ್ಕೆ ಪ್ರಯತ್ನ ಮಾಡಬೇಡಿ. ಹಬ್ಬ ಮದುವೆ, ಮುಂಜಿ ದಿನಗಳು ಬಂದರೆ, ಪೂರ್ತಿ ದಿನ ಹೊರಗೆ ಬರೋವರಂತೆ. ನನಗೂ ಒಂದು ಚೈಂಜ್ ಆಗುತ್ತೆ. ಮನಸ್ಸಿಗೆ ಸಂತೋಷವಾಗುತ್ತೆ'' ಅಂತ ಸೂಚಿಸಿದಳು. ನಾನು, ''ಜನರಲೀ ಸ್ಪೀಕಿಂಗ್, ನಿನ್ನ ಪ್ಲಾನ್ ಚೆನ್ನಾಗಿದೆ. ಏನು ಇಲ್ಲದಿದ್ದರೂ, ನನ್ನನ್ನ ಭಾನುವಾರಗಳಲ್ಲಾದರೂ ಹೊರಗೆ ಬಿಡ ಬಹುದಲ್ಲ!'' ಅಂತ ಕೇಳಿದೆ. ಅವಳು ''ಬೇಡ ಅಂದ್ರೆ. ನಮ್ಮ ಮಂಗಳಾಯನ ಮಂಗಳನ ಸುತ್ತ ಸುತ್ತೋ ಹಾಗೆ ಅವತ್ತೆಲ್ಲಾ ನನ್ನ ಸುತ್ತಲು ಸುತ್ತುತ್ತಾನೇ ಇರ್ತೀರ. ಆದರಿಂದ ನನಗೆ ಕಂಟೆಂಪ್ಟ್ ಬಂದರೆ ಕಷ್ಟ'' ಅಂತ ಹೇಳಿದಳು. ನಾನು ಅದಕ್ಕೆ ಒಪ್ಪಿಕೊಂಡೆ. ಅವಳು ಸಂಜೇನೇ, ಗೆಸ್ಟ್ ರೂಮ್‌ಗೆ ಹೊರಗಿನಿಂದ ಬೀಗ ಹಾಕೋದಕ್ಕೆ ಒಂದು ಗೋಡ್ರೇಜ್ ಸೆವೆನ್ ಲೀವರ್ ಲಾಕ್ ತಂದಳು. ''ಯಾಕೆ, ಚಿಲಕದಲ್ಲಿ ಒಂದು ಸ್ಪೂನ್ ಸೆಕ್ಕಿಸಿದ್ರೆ ಆಗಿರೋದು. ನಾನೇನು ಬಾಗಿಲನ್ನ ಮುರಿದುಕೊಂಡು ಹೊರಗೆ ಬರ್ತೀನ್ಯೇ?'' ಅಂತ ಕೇಳಿದೆ. ''ಒಳ್ಳೇ ಬೀಗ ಹಾಕಿದ್ರೆ ನನಗೂ ಎರಡರಷ್ಟು ಮನಸ್ಸಿಗೆ ಸಮಾಧಾನ ಆಗುತ್ತೆ ಅಂದ್ರೆ. ಅದೂ ಅಲ್ಲದೆ, ಹೊರಗಿನಿಂದ ಇಂತಹ ಬೀಗಾನ ನೋಡಿದಾಗಲೆಲ್ಲಾ, ಒಳಗಿರೋ ನಿಮ್ಮ ನೆನಪು ಬಂದು ಇರೋ ಕಂಟೆಂಪ್ಟ್ ಎಲ್ಲಾ ಮಾಯಾವಾಗುತ್ತೆ. ಐಡಿಯಾ ಚೆನ್ನಾಗಿಲ್ವೆ? ಸರಿ, ಇನ್ನು ಗೆಸ್ಟ್ ರೂಮಿಗೆ ಹೊರಡಿ!'' ಅಂತ ಆರ್ಡರ್ ಕೊಟ್ಟಳು.

ಈ ವ್ಯವಸ್ಥೆ ಸುಮಾರು ಕಳೆದ ಆರು ತಿಂಗಳುಗಳಿಂದ ಚೆನ್ನಾಗಿ ನಡ್ಕೊಂಡು ಬರ್ತಿದೆ. ಅವಳಿಗೂ ನನ್ನ ಮೇಲೆ ಪ್ರೀತಿ ಹೆಚ್ಚಿದೆ ಅಂತ ನನಗೆ ಅನ್ನಿಸಿದೆ. ರೂಮಿನಿಂದ ಹೊರಗೆ ಬಂದಾಗಲೆಲ್ಲಾ ಐ ಮಿಸ್ಡ್ ಯೂ ಅಂತಾಳೆ! ಏನಂದ್ರಿ, ಗೆಸ್ಟ್ ರೂಮ್ ಅನುಕೂಲ ವಾಗಿದೆಯೇ ಅಂತ ಕೇಳಿದ್ರಾ? ಪರವಾಗಿಲ್ಲ, ಪರಪ್ಪನ ಅಗ್ರಹಾರದಲ್ಲಿ ಜಯಲಲಿತಾಗೆ ಕೊಟ್ಟಿದ್ರಲ್ಲ-ಸ್ಪೆಶೆಲ್ ರೂಮ್-ಹೆಚ್ಚು ಕಮ್ಮಿ ಹಾಗೇ ಇದೆ. ನನಗೆ ಈ ಭೌತಿಕ ಸುಖಗಳೆಲ್ಲಾ ಇನ್ನ್ಯಾತಕ್ಕೆ ಬೇಕು ಹೇಳಿ? ಕಂಟೆಂಪ್ಟ್ ಮುಕ್ತ ಜೀವನ (ಕಾಂಗ್ರೆಸ್ಸ್ ಮುಕ್ತ ಭಾರತ ಅನ್ನೋ ಹಾಗೆ) ಅಲ್ಲವೆ ಮುಖ್ಯ?

**ಚಿಕಿತ್ಸೆ**

ಡಾಕ್ಟರು : ನಿಮಗೇನು ಕಾಹಿಲೆ ಇಲ್ಲ ಆದರೂ ನನ್ನತ್ರ ಯಾಕೆ ಬರ್ತೀರ

ರೋಗಿ : ನೀವು ಮನೆ ಕಟ್ತಿದೀರಿ ಅಂತ ಗೊತ್ತಾಯ್ತು, ನಮ್ಮಿಂದ ಕಿಂಚಿತ್ ಸಹಾಯ ಆಗ್ಲಿ ಅಂತ

# ತಪ್ಪಿಸಿಕೊಂಡ ಮಗ

- ಬೇಲೂರು ರಾಮಮೂರ್ತಿ

ಆಸೆ ಪಟ್ಟ ವಸ್ತು ಸಿಗದಿದ್ದರೆ ಅಥವಾ ಮನೆಯವರು ಕೊಡಿಸದಿದ್ದರೆ ಮಕ್ಕಳು ಏನು ಮಾಡ್ತಾರೆ ಮನೆ ಬಿಟ್ಟು ಹೋಗ್ತಾರೆ. ಮನೆ ಬಿಟ್ಟು ಹೋದರೆ ಸಿಗಬೇಕಾದ್ದು ಸಿಗುತ್ತಾ ಅಂತ ಕೇಳಿದರೆ ಇಲ್ಲ ಸಿಗೋದಿಲ್ಲ ಆದರೆ ಮನಸ್ಸಿಗೆ ಸ್ವಲ್ಪ ಸಮಾಧಾನ ಆಗಬಹುದು. ಅಥವಾ ಏನೋ ಹುಡುಕಿದರೆ ಇನ್ನೇನೊ ಸಿಗುತ್ತಲ್ಲ ಹಾಗೆ ಇನ್ನೇನೋ ಸಿಗಬಹುದು. ಅದೂ ಇಲ್ಲದಿದ್ದರೆ ನಾನು ಕೇಳಿದ್ದು ಕೊಟ್ಟರೆ ಮಾತ್ರ ಮನೆಗೆ ಬರ್ತೀನಿ ಅಂತ ಅಮ್ಮನಿಗೆ ಮೆಸೇಜ್ ಕೊಟ್ಟ ಹಾಗಾಗಬಹುದು.

ತುಂಬಾ ಚಿಕ್ಕ ಮಕ್ಕಳು ಮನೆ ಬಿಟ್ಟು ಹೋದರೆ ತಂದೆ ತಾಯಿಗೆ ಆತಂಕ. ಅಯ್ಯೋ ಮಗೂಗೆ ಮಾತಾಡೋಕೂ ಬರಲ್ಲ, ಹಸಿವಾದರೆ ಏನು ಮಾಡುತ್ತೋ ಅತ್ತರೆ ಯಾರಾದರೂ ಏನಾದರೂ ಕೊಡ್ತಾರೋ ಇಲ್ವೋ ಅಂತ ನೂರಾರು ಆತಂಕ ಬೆರೆತ ಪ್ರಶ್ನೆಗಳು ಮನದಲ್ಲಿ ಮನೆ ಮಾಡುತ್ತವೆ. ಸ್ವಲ್ಪ ದೊಡ್ಡದಾದ ಮಗ ಮನೆ ಬಿಟ್ಟು ಹೋದರೆ ಇಲ್ಲೇ ಎಲ್ಲೋ ಇರ್ತಾನೆ ರಾತ್ರಿ ಹೊತ್ತಿಗೆ ಮನೆಗೆ ಬರ್ತಾನೆ ಅಂತ ಧೈರ್ಯ ಇರುತ್ತೆ. ಸ್ವಲ್ಪ ದೊಡ್ಡ ಮಗ ಮನೆ ಬಿಟ್ಟು ಹೋದರೆ ಯಾವುದೋ ಹುಡುಗಿ ಜೊತೆ ಓಡಿಹೋಗಿರಬಹುದು. ಒಂದು ವಾರವೋ ಒಂದು ತಿಂಗಳೋ ಆದ ನಂತರ ನಾನು ಇಂಥವಳನ್ನು ಮದುವೆಯಾಗಿದ್ದೀನಿ, ಇಂಥಾ ಕಡೆ ಇದ್ದೀನಿ ಇಂಥಾ ದಿನ ಬರ್ತೀನಿ ಅಂತ ಒಂದು ಸಂದೇಶ ಕಳಿಸಬಹುದು ಅಂತ ನಿರೀಕ್ಷೆ ಇರುತ್ತೆ.

ಹೆಣ್ಣು ಮಕ್ಕಳು ಏಕಾಏಕಿ ಮನೆಯಿಂದ ಕಾಣೆಯಾದರೆ ಅದು ಪ್ರೇಮಕ್ಕೆ ಸಂಬಂಧ ಪಟ್ಟಿದ್ದೇ ಅಂತ ಖಚಿತವಾಗಿ ಹೇಳಬಹುದು. ಆದರೆ ಗಂಡು ಹುಡುಗರ ವಿಚಾರ ಹಾಗಲ್ಲ. ಕೇಳಿದ್ದು ಸುಳ್ಳಾಗಬಹುದು, ನೋಡಿದ್ದು ಸುಳ್ಳಾಗಬಹುದು, ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು ಅನ್ನೋ ಹಾಗೆ ಹುಡುಗರ ಕಾಣೆಯಾಗುವಿಕೆಗೆ ನಿಜವಾದ ಕಾರಣವನ್ನೇ ಹುಡುಕಬೇಕಾಗುತ್ತದೆ. ಅಮ್ಮ ಮಗ ಇಬ್ಬರೇ ಇರೋ ಮನೇಲಿ ಕಾರಣ ಅಂದ್ರೆ ಅಮ್ಮ ಮಗ ಒಪ್ಪಿದ ಹುಡುಗಿಯನ್ನು ಒಪ್ಪದೇ ಇರಬಹುದು. ಮಗ ಕೇಳಿದ್ದನ್ನು ಅಮ್ಮ ಕೊಡಿಸದೇ ಇರಬಹುದು. ಅಥವಾ ಮಗನಿಗೆ ಇಷ್ಟ ಇಲ್ಲದ್ದನ್ನು ಅಮ್ಮ ಬಲವಂತ ಮಾಡುತ್ತಿರಬಹುದು. ಮಗ ಮನೆ ಬಿಟ್ಟು ಹೋಗಿರುವುದರಿಂದ ಎದುರಿಗೆ ಮಾತಾಡೋ ಧೈರ್ಯ ಇಲ್ಲದವರು ಹಿಂದೆ ಬಾಯಿಗೆ ಬಂದ ಹಾಗೆ ಮಾತಾಡ್ಕೊತಾರೆ ಅನ್ನೋದು ತಾಯಿಗೆ ಗೊತ್ತಿರುತ್ತೆ. ಆದರೇನು ಮಾಡೋದು.

ಎಲ್ಲ ತಾಯಿಯಂತೆ ಆ ತಾಯಿಗೂ ಮಗ ಸರಿಯಾದ ವಯಸ್ಸಿಗೆ ಮದುವೆಯಾಗಲಿ, ಸರಿಯಾದ ವಯಸ್ಸಿಗೆ ತಂದೆಯಾಗಲಿ ಅನ್ನೋ ಆಸೆ ಇತ್ತು, ಈಗಲೂ ಇದೆ. ಮಗ ಮದುವೆಯಾಗದೇ ಬೇಸತ್ತಿರುವ ಕುಟುಂಬದಲ್ಲಿ ಅವನು ಒಂದು ಕತ್ತೆಗೆ ತಾಳಿ ಕಟ್ಟಿ ಕರ್ಕೊಂಡು ಬಂದ್ರೂ ನಾನು ಒಪ್ಕೊತೀನಿ. ಆದರೆ ಅವನು ಮದುವೆಯಾಗಲಿ ಅಂತ ತೀರ್ಮಾನ ಮಾಡಿರ್ತಾರೆ. ಏಕೆಂದರೆ ಹೆಣ್ಣು ಅಂತ ಒಂದು ಹಿಂದೆ ಗಂಟುಬಿದ್ದಿದ್ದರೆ ಮಗ ದಾರಿಗೆ ಬರಬಹುದು ಮತ್ತು ಹೀಗೆಲ್ಲ ಮನೆ ಬಿಟ್ಟು ಹೋಗೋಕೆ ಆಗೋಲ್ಲ. ಏನು ಮಾಡೋದು ಮಗ ಯಾರನ್ನೂ ಲವ್ ಮಾಡಲೂ ಇಲ್ಲ ತಾಯಿ ತೋರಿಸಿದ ಹುಡುಗಿಯರನ್ನೆಲ್ಲ (ತೋರಿಸಿರಬಹುದು, ಸಲಹೆ ಕೊಟ್ಟಿರಬಹುದು) ಈಗ-ಆಗ ಅಂತ ಮುಂದೂಡುತ್ತಲೇ ಬಂದ. ಹೀಗೆ ಅವನು ಗುಂಡ್ರು ಗೋವಿಯಾಗಿದ್ದರಿಂದಲೇ ಎಲ್ಲಂದರಲ್ಲಿ ಹೊರಟು ಹೋಗುತ್ತಾನೆ. ಪಾಪ ಅಮ್ಮ ಏನು ಮಾಡ್ತಾಳೆ ಹೇಳಿ.

ತುಂಬಾ ಹತ್ತಿರದವರಿಗೆ ಇನ್ನರ್ ಸರ್ಕಲ್ ಅಂತಾರಲ್ಲ ಅಂಥೋರಿಗೆ ಮಗ ಇಲ್ಲೇ ಎಲ್ಲೋ ಹೋಗಿದಾನೆ ಬಂದುಬಿಡ್ತಾನೆ ಅಂತ ಸಮಜಾಯಿಷಿ ಕೊಡಬೇಕು. ಕೆಲವು ಗಂಡು ಹುಡುಗರಿಗೆ ಏನು ಮಾಡಕ್ಕೆ ಹೋದರೂ ಕೈ ಹತ್ತೋಲ್ಲ, ಒಂದು ಕಡೆ ಯಾವ ಕೆಲಸವೂ ಸಿಗೋಲ್ಲ, ಅಧಿಕಾರವೂ ಸಿಗೋಲ್ಲ, ಏನು ಕೆಲಸಕ್ಕೆ ಕೈ ಹಾಕಿದರೂ ಸೋಲು ಸೋಲು ಮತ್ತು ಸೋಲು. ಹಾಗಂತ ಸುಮ್ಮನೇ ಕೂರೋ ಹಾಗಿಲ್ಲ, ಮತ್ತೆ ಮತ್ತೆ ಕೆಲಸಕ್ಕೆ ಪ್ರಯತ್ನ ಮಾಡುತ್ತಲೇ ಇರಬೇಕಾಗುತ್ತದೆ. ಪ್ರತಿಷ್ಠೆಗೋಸ್ಕರ ಕೆಲವು ಮಾತುಗಳನ್ನು ಆಡುತ್ತಲೇ ಇರಬೇಕಾಗುತ್ತದೆ. ಆದರೆ ಓಲ್ಡ್ ಮಾಡೆಲ್ ಅಂತ ಕರೆಯೋಕೆ ಆಗದಿದ್ದರೂ ಅಮ್ಮನದು ಅಂಥಾ ಸಲಹೆಗಳೇ. ಏನೋ ಭ್ರಮೆ. ಮತ್ತೆ ನನ್ನ ಕೈ ನಡೆಯುತ್ತೆ ಅಂತ. ಈ ಹಿಂದೆ ಎಲ್ಲ ಕೈ ಯಾರದೋ ಹೊಡೆಯೋರು ಯಾರೋ ಅನ್ನೋ ಹಾಗಾಗಿದ್ದು ಎಲ್ಲರಿಗೂ ಗೊತ್ತು. ತಾಯಿಯ ಒಬ್ಬನೇ ಮಗನದು ಇನ್ನೂ ಯಾಕೆ ಮದುವೆ ಆಗಿಲ್ಲ ಅನ್ನೋ ಗುಸುಗುಸು ಅಂತೂ ಇದ್ದೇ ಇದೆ. ಕೆಲಸ ಇಲ್ಲದಿರೋ ಹುಡುಗರಿಗೆ ಹೆಣ್ಣು ಯಾರು ಕೊಡ್ತಾರೆ ಅಲ್ವಾ? ಗಂಡು ಹುಡುಗರು ಮದುವೆ ಮುಂದೂಡಿದರೆ ಜನ ನೂರೆಂಟು ಮಾತಾಡ್ತಾರೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡದಿದ್ದರೂ ನೂರೆಂಟು ಮಾತಾಡುತ್ತಾರೆ.

ಕೆಲವು ಗಂಡು ಹುಡುಗರಿಗೆ ಕೆಲವೇನು ಬಹುಷಃ ಎಲ್ಲ ಗಂಡು ಮಕ್ಕಳಿಗೂ ತಂದೆ, ತಾಯಿ ಅಥವಾ ದೊಡ್ಡವರು ಯಾರೂ ತಮ್ಮನ್ನು ನಿಯಂತ್ರಣ ಮಾಡೋದು ಇಷ್ಟ ಆಗೋಲ್ಲ. ನಮಗೇನು ಗೊತ್ತಿಲ್ವಾ ಅನ್ನೋ ಉಡಾಫೆ ಉತ್ತರ ಬರುತ್ತೆ. ಮಕ್ಕಳು ಎಂಥೆಂಥದೋ ಕೆಲಸಗಳಿಗೆ ಕೈ ಹಾಕಿ ಸುಟ್ಟುಕೊಳ್ಳುತ್ತಾ ಇರುವಾಗ ತಾಯಿ ಸುಮ್ಮನೆ ನೋಡಿಕೊಂಡು ಇರೋದು ಹೇಗೆ ಅಂತ ಸಲಹೆ ಕೊಡ್ತಾಳೆ. ಅಷ್ಟಕ್ಕೇ ಮಗ ಮನೆ ಬಿಟ್ಟು ಹೋದರೆ ಹೇಗೆ? ಅಂತೂ ಮಗ ಎಲ್ಲೋ ಹೋಗಿದಾನೆ ಬರ್ತಾನೆ ಅನ್ನೋ ನಂಬಿಕೆ ತಾಯಿಯದು. ಬರೋನು ಬರ್ತಾನೆ ಅಮ್ಮಾ ನೋಡು ನಿನ್ನ ಸೊಸೆ ಅಂತ ಒಂದು ಹುಡುಗಿ ಕರ್ಕೊಂಡು ಬರಲಿ ಅಂತ

ಒಳಾಸೆನೂ ಇರಬಹುದು. ಮಗ ಮಾತ್ರ ಎಲ್ಲೋ ಇದ್ದು ಅಲ್ಲಿಂದನೇ ನಾನು ಮತ್ತೆ ಬರ್ತೀನಿ, ಎದ್ದು ಬರ್ತೀನಿ (ಧೂಳಿನಿಂದ ಎದ್ದು ಬರ್ತೀನಿ ಅಂತ ಯಾರೋ ಹೇಳಿದ್ದು ನೆನಪಾಗ್ತಾ ಇದೆಯಾ) ಮಗ ಬರಲಿ ಅವನಿಗಾಗಿ ಒಂದು ಕುರ್ಚಿ ಖಾಲಿ ಇದೆ ಅಂತ ಅಮ್ಮ ಹೇಳ್ತಿದಾರೆ. ಮಗನಿಗೂ ಅದೇ ಬೇಕಾಗಿರೋದೇನೋ. ಮಕ್ಕಳು ದೊಡ್ಡೋರಾಗಿ ಮನೆ ಜವಾಬ್ದಾರಿ ತಗೊಂಡ ಮೇಲೆ ಕೆಲವು ಅಪ್ಪ ಅಮ್ಮಂದಿರಿಗೆ ವೃದ್ಧಾಶ್ರಮವೇ ಗತಿ? ಆದರೆ ಈ ತಾಯಿಗೆ? ಕಾದು ನೋಡೋಣ.

ಇಷ್ಟೆಲ್ಲ ಯಾರ ಬಗ್ಗೆ ಬರೆದಿದ್ದೀನಿ ಎನ್ನೋದು ನನಗಂತೂ ಗೊತ್ತು ನಿಮಗೂ ಗೊತ್ತಾದರೆ ಜನ್ಮ ಸಾರ್ಥಕ.

---


## ಅಪರಂಜಿಗೆ 31ರ ಸಂಭ್ರಮದ

## ಶುಭಾಶಯಗಳನ್ನು

## ಕೋರುವ

**ಶ್ರೀಮತಿ ಮತ್ತು ಶ್ರೀ ಅಚ್ಯುತರಾವ್ ಪದಕಿ**

ಹಿರಿಯ ರಂಗಕರ್ಮಿಗಳು ಮತ್ತು ಹಾಸ್ಯ ಕಲಾವಿದರು

"ಕೃಷ್ಣ", 55/84, ಸರ್ವೇಯರ್ ರಸ್ತೆ

ಬಸವನಗುಡಿ

ಬೆಂಗಳೂರು 560 004

ಸಂಪರ್ಕ ದೂರವಾಣಿ: 9945622450


********

# ದೇಖೋ ಹಸನ್.....

- ಎಚ್. ಗೋಪಾಲಕೃಷ್ಣ

ಸಾಸಿವೆ ತಗೊಂಡು ಬಾ ಅಂತ ಹೇಳಿ... ಅಂದಳು ಹೆಂಡತಿ.

ಪಕ್ಕದಲ್ಲಿ ನಿಂತು ನಾವು ಮಾಡುತ್ತಿರುವುದನ್ನು ಕುತೂಹಲದಿಂದ ನೋಡುತ್ತಾ ನಿಂತಿದ್ದ ಹಸನ್ ಕಡೆ ತಿರುಗಿ

ಜರಾ ಮಸ್ಟರ್ಡ್ ಲಾವ್.. ಅಂದೆ.

ಮಸ್ಟರ್ಡ್? ಅಂತ ಅವನಿಗೆ ಅವನೇ ಹೇಳಿಕೊಂಡ. ಒಳಗಡೆ ನಡೆದ. ಎರಡು ಮೂರು ನಿಮಿಷದ ನಂತರ ಕೈಯಲ್ಲಿ ಒಂದು ಎರಡು ಕೇಜಿ ಹಿಡಿಸಬಹುದಾದ ಇನ್ನೂ ಮುಚ್ಚಳವನ್ನೇ ತೆರೆಯದ ಎಣ್ಣೆ ಬಾಟಲು ಹಿಡಿದು ತಂದ.

**ಛಳಿ ರಾಜ್ಯದಲ್ಲಿ ಉಪ್ಪಿಟ್ಟು ಮಾಡಿ ತಿನ್ನಲು ಹೊರಟಾಗ ಸಾಸುವೆ ಸಿಗದೊಲ್ಲದು**

ಲೀಜೀಯೇ ಸಾಬ್ ಅಂದ !

ಯೆ ಕ್ಯಾ ? ಅಂದೆ ಎಣ್ಣೆ ಬಾಟಲು ತಂದು ಸಾಸಿವೆ ಅಂತ ಹೇಳ್ತಿದ್ದಾನಲ್ಲಾ ಅಂತ.

ಆಪ್ ಪೂಚ್ ಲಿ ಯೇನಾ ಮಸ್ಟರ್ಡ್...?

ಕ್ಷಮಿಸಿ. ಕಥೆಯನ್ನು ಮಧ್ಯಭಾಗದಿಂದ ಶುರು ಹಚ್ಚಿದರೆ ಇದೇ ತೊಂದರೆ. ನಿಮಗೆ ಕನ್‌ಫ್ಯೂಷನ್ನು ಮತ್ತು ನನಗೆ ನಿಮಗೆ ಎಲ್ಲಿ ಹಳಿ ತಪ್ಪಿದ ಭಾವ ಉಂಟು ಮಾಡ್ತಾ ಇದೀನೋ ಎನ್ನುವ ಪಾಪಪ್ರಜ್ಞೆ! ಮೊದಲಿಂದ ಕಥೆ ಆರಂಭ ಮಾಡ್ತೀನಿ, ಅಲ್ಲೀಗಂಟ ಮೇಲಿನ ಭಾಗ ತಮ್ಮ ಮೆದುಳಿನ ಯಾವ ಮೂಲೆಯಲ್ಲಿ ಸ್ಥಳವಿದೆಯೋ ಅಲ್ಲಿ ವಿಶ್ರಾಂತಿ ಪಡೀತಿರಲಿ.

ನನ್ನ ತಿಂಗಳ ಭವಿಷ್ಯದಲ್ಲಿ ದಕ್ಷಿಣ ದಿಕ್ಕಿಗೆ ಪಯಣ, ಸ್ವಂತ ನೆಲೆ ತಪ್ಪುತ್ತೆ ಅಂತ ಅದ್ಯಾರೋ ಜ್ಯೋತಿಷಿ ಬರೆದಿದ್ದ - ಯಾವುದೋ ಪೇಪರಿನಲ್ಲಿ. ಮಾಮೂಲಾಗಿ ನಾನು ಇಂತಹ ಭವಿಷ್ಯಗಳನ್ನು ನೋಡಿ ಖುಷಿ ಪಟ್ಟುಕೊಂಡು ಅದೇನು ಬರೆದಿರ್ತಾನೋ ಅದಕ್ಕೆ ವಿರುದ್ಧವಾಗಿ ನಡೆದು ಜ್ಯೋತಿಷಿಯನ್ನು ಸೋಲಿಸಿಬಿಟ್ಟ ಸಂತೃಪ್ತಿ ಪಡೆಯುವ ಜಾಯಮಾನವನ್ನು ರೂಢಿಸಿಕೊಂಡಿದ್ದೇನೆ.

ಅದರಿಂದ ಈ ಭವಿಷ್ಯ ಓದಿದ ಎರಡನೇ ದಿವಸವೇ ಗೆಳೆಯರು ಬಂದು ಬನ್ರೀ, ನಾರ್ಥ್ ಭಾರತಕ್ಕೆ ಹೋಗೋಣಾ... ಅಂತ ಕರೆದಾಗ ಹೂಂ ಅಂತಂದುಬಿಟ್ಟೆ! ಜ್ಯೋತಿಷಿಗೆ ದೋಭೀ ಪಟ್ಟು ಹಾಕಿದ ಹಾಕಿ ಮುಖಾಡೆ ಬೀಳಿಸಿಬಿಟ್ಟ ಸಂತೋಷ ಸಿಕ್ಕಿತ್ತು.

ನಾರ್ಥ್‌ಗೆ ಹೊರಟ್ವಾ ? ಅದೂ ಅಮಾಸೆ ಮುಸ್ಸಂಜೆ ರೇಲು ಹತ್ತಿದ್ವಾ ? ಅಲ್ಲಿಂದ್ಲೇ ನೋಡೀ ನಮ್ಮ ಪ್ರಾಬ್ಲಮ್ಮುಗಳು ಶುರುವಾಗಿದ್ದು !




ರೈಲ್ವೆ ಸ್ಟೇಷನ್ ಸೇರಿದ್ದೇ ರೈಲು ಹೊರಡಲು ಎರಡೇ ನಿಮಿಷ ಇರಬೇಕಾದರೆ. ಡಬ್ಬಿ ಹುಡುಕಿ ಸೇರೋ ಹೊತ್ತಿಗೆ ಹೃದಯ ಬಾಯಿಗೆ ಬಂದಿತ್ತು. ಬಾಗಿಲಿಗೆ ಹತ್ತಿರದ ಸೀಟೋ? ರೈಲು ಏಸೀ ಆದರೂ ಯಾವಾಗಲೂ ಟಾಯ್ಲೆಟ್ಟಿನ ಗಬ್ಬು ವಾಸನೆ... ಓಡಿ ಹೋಗಿ ಬಾಗಿಲು ತೆರೆದು ಗಾಳಿ ಹೀರಬೇಕು ಅನ್ನೋ ಹಾಗೆ.. ತಾಪತ್ರಯ ಇಷ್ಟಕ್ಕೇ ನಿಲ್ತಾ ಅಂದರೆ ಅದೂ ಇಲ್ಲ. ಸ್ಟೇಷನ್ನು ಬಂತು ಅಂದ್ರೆ ನಮ್ಮ ಬೋಗಿ ಪ್ಲಾಟ್ ಫಾರ್ಮಿನಿಂದ ಮೂರು ಕಿಲೋಮೀಟರು ದೂರ! ಏನೂ ಕೊಂಡ್ಕೋಳ್ಳೋ ಹಾಗಿಲ್ಲ, ಏನೂ ಬಾಯಾಡಿಸೋ ಹಾಗಿಲ್ಲ.......! ಇಡೀ ಜೀವಮಾನದ ರೈಲು ಪ್ರಯಾಣದಲ್ಲಿ, ಸದರಿ ಇಡೀ ಎರಡೂವರೆ ದಿವಸದ ಪ್ರಯಾಣದಲ್ಲಿ ಇಡೀ ಜೀವನದಲ್ಲಿ ಮೊಟ್ಟಮೊದಲನೇ ಬಾರಿಗೆ ಪ್ಲಾಟ್‌ಫಾರ್ಮಿನಲ್ಲಿ ಸಿಗುವ ಯಾವುದೇ ತಿಂಡಿ ತಿನ್ನದೇ ಪ್ರಯಾಣದ ಅಂತಿಮ ಹಂತಕ್ಕೆ ಬಂದು ಒಂದು ವಿಶ್ವದಾಖಲೆ ಸೃಷ್ಟಿ ಮಾಡಿಬಿಟ್ಟಿದ್ದೆವು. ಇದು ಯಾರಿಗೆ ತಾನೇ ಶೋಭೆ ತರುತ್ತೆ ಹೇಳೀ....?

ರೈಲಿನವರು ತಂದುಕೊಡುತ್ತಿದ್ದ ಅಕ್ಕಿ ಅಕ್ಕಿ ಅನ್ನ,ಅದಕ್ಕೆ ಕೊಡುತ್ತಿದ್ದ ಧಾಲು,ಮಜ್ಜಿಗೆ ,ಅಂಗೈ ಅಗಲದ ಅಂಗೈ ದಪ್ಪದ ಚಪಾತಿ... ಅಬ್ಬಾ ನೆನೆಸಿಕೊಂಡರೇ ಸಾಕು ಜೀವ ತಗೋಬೇಕು ಅನ್ನಿಸೋದು.

ರೈಲು ಇಳಿದು ಉತ್ತರ ದೇಶದ ನೆಲ ಮುಟ್ಟಿದ ಮೇಲೆ ಏನಾದರೂ ಜೀವ ಹಿಡಿದು ಇಟ್ಟುಕೊಳ್ಳುವ ಆಹಾರ ಸಿಗುತ್ತೆ ಅಂತ ಇದ್ದರೆ ಅಲ್ಲೂ ಅದೇ ಪಾಡೇ ...!

ಒಂದೂವರೆ ಇಂಚಿನಷ್ಟು ಉದ್ದದ ಅಕ್ಕಿ,ಅದಕ್ಕೆ ಕಡಲೆಬೇಳೆ ಧಾಲು,ಅದೇನೋ ಕಾಳು ಹಾಕಿ ಮಾಡುತ್ತಿದ್ದ ಹುಳಿಯೋ ಸಾರೋ..ಅದೂ ತಿಳಿಯದ್ದು, ಪ್ರತಿದಿವಸ ಬೆಳಿಗ್ಗೆ ಮತ್ತು ರಾತ್ರಿ ಪನ್ನೀರಿನ ಹುಳಿ - ಮತ್ತು ಮೊಸರು ಎಂದು ಕೊಡುತ್ತಿದ್ದ ವಸ್ತು ಬರೀ ಸಿಹಿ ಸಿಹಿ.! ಥೂ ಯಾಕಪ್ಪಾ ನಮ್ಮೂರು ಬಿಟ್ಟು ಬಂದು ಈ ಪಾಡು ಪಡಬೇಕೇ ಅನ್ನಿಸಿತು. ಹೇಗೋ ಸಾವರಿಸಿಕೊಂಡರೆ ಆಯಿತು, ಎರಡು ವಾರದ ಪ್ರವಾಸ ತಾನೇ ಅಂತ ಮನಸ್ಸಿಗೆ ಸಮಾಧಾನ ಕೂಡಾ ಮಾಡಿ ಸ್ವಸ್ಥಾನದಲ್ಲಿ ಅದನ್ನ ಪ್ರತಿಷ್ಠಾಪಿಸಿದ್ದೂ ಆಯಿತು.

ಹತ್ತು ದಿವಸದ ಪ್ರವಾಸ ಮುಗೀತು.ಇನ್ನು ಐದೇ ಐದು ದಿವಸ ಅಂತ ಪ್ರತಿದಿವಸ ದಿನ ಲೆಕ್ಕ ಹಾಕುತ್ತಿದ್ದ ಗೆಳೆಯ ಹೇಳಿದ್ದ. ಅವಾಗಲೇ ನಾವು ಉತ್ತರದ ತುದಿಯ ಛಳಿ ರಾಜ್ಯದಲ್ಲಿ ಎರಡು ದಿವಸ ಹೇಗೋ ಕಳೆದಿದ್ದೋ...

ಉಪ್ಪಿಟ್ಟು ತಿನ್ನಬೇಕು ಅಂಬುವ ಚಪಲ ಹುಟ್ಟಿಬಿಡಬೇಕೇ.? ಅದೂ ಬಸ್ಸಿನಲ್ಲಿ ಬಂದಿದ್ದ ಎಲ್ಲರಿಗೂ ಉಪ್ಪಿಟ್ಟು ಕನಸಿನಲ್ಲಿ ಬಂದು ಕಾಡಬೇಕೇ...?

ಆಗಲೇ ನಾವು ಆ ಫೈವ್ ಸ್ಟಾರ್ ಹೋಟಲಿನ ಷೆಫ್ ಹಸನ್ ಕಾಂಟಾಕ್ಟ್ ಮಾಡಿದ್ದು ನಮ್ಮ ಅಹವಾಲನ್ನು ಮಡಗಿ ಹಮೇ ಉಪ್ಪಿಟ್ಟು ಛಾಹಿಯೇ ಅಂತ ವಿವರಿಸಿದ್ದು.

ಉತ್ತರದ ಒಂದು ಫೈವ್‌ಸ್ಟಾರ್ ಹೋಟಲಿನಲ್ಲಿ ಬರೀ ವೆಜಿಟೇರಿಯನ್ ಆಹಾರ ಬಡಿಸಿಕೊಂಡು ಜೀವನ ಸಾಧ್ಯವೇ ? ಅಲ್ಲೂ ನಾನ್ ವೆಜ್ ಇತ್ತು.ಆದರೆ ನಾವುಗಳು ಊಟಕ್ಕೆ ಬಂದಾಗ ಅದು ಇಲ್ಲದೇ ಇರೋಹಾಗೆ ನೋಡಿಕೋ ಅಂತ ಹೋಟೆಲ್ಲಿನವರಿಗೆ ನಮ್ಮ ಗೈಡು ರಿಕ್ವೆಸ್ಟು ಮಾಡಿದ್ದ ಅಂತ ಕಾಣುತ್ತೆ - ನಾವು ಊಟಕ್ಕೆ ಹೋದಾಗ ನಾನ್‌ವೆಜ್ ಇರ್ತಾ ಇರಲಿಲ್ಲ. ಅದರಿಂದ ಹೋಟಲಿನ ಛೀಫ್ ಷೆಫ್ ನಮಗೆ ಪರಿಚಿತ ಮತ್ತು ಪಾಪ ಸೊಪ್ಪು ಸದೆ ತಿಂದ್ಕೊಂಡು ಬದುಕ್ತಾವೆ ಅಂತ ನಮ್ಮ ಮೇಲೆ ಕರುಣೆ ಅವನಿಗೆ. ಆಗಾಗ ಪ್ರೀತಿಯಿಂದ ಹಸೀ ತರಕಾರಿ ತಂದು ಖಾವೋ ಅಂತ ಉಪಚರಿಸುವಷ್ಟು ಒಳ್ಳೆಯವನು.

ಉಪ್ಪಿಟ್ಟಾ ಅದೇನು ನಮಗೆ ತಿಳೀದೇ ಅಂತ ಅವನು ಅವನ ಭಾಷೇಲೇ ಕೈ ಮೈ ಅಲ್ಲಾಡಿಸಿಬಿಟ್ಟ. ಆಪ್‌ಕೊ ನೈ ಆತಾ ಕ್ಯಾ? ಹಂ ಬನೇಂಗೇ...ಆಪ್‌ಕೊ ಹಮ್ ಸೀಕೇಗೇ ಅಂತ ಅವನನ್ನ ಉಬ್ಬಿಸಿ ಅವನ ಅಡಿಗೆ ಮನೇಗೆ ಪ್ರವೇಶ ಗಿಟ್ಟಿಸಿಕೊಂಡೆವು. ಮಾರನೇ ದಿವಸದ ಬೆಳಗಿನ ನಾಷ್ಟಾ ಉಪ್ಪಿಟ್ಟು ಅಂತ ಡಿಸೈಡಿಸಿ ಅದನ್ನ ಸೀಕ್ರೇಟ್ ಆಗಿ ಇಟ್ಟೆವು. ಸುಭಾ ಫೋನ್ ಕರೋ ಹಂ ಆಯೇಂಗೇ.. ಅಂತ ಹಸನ್‌ಗೆ ಹೇಳಿ ಮಾರನೇ ಬೆಳಿಗ್ಗೆ ಐದಕ್ಕೇ ಫೋನಿನ ಪಕ್ಕ ಪ್ರತಿಷ್ಠಾಪನೆ ಆದೆವು. ಮುಕ್ಕಾಲು ಗಂಟೆ ನಂತರ ಫೋನು ಮಾಡಿದ. ಅಡಿಗೆ ಮನೆ ಸೇರಿದೆವು, ಹಿಂದಿನ ದಿವಸ ಹೇಳಿದ್ದ ಹಾಗೇ ರವೆ ತಂದಿರಿಸಿದ್ದ, ಕಾಜೂ ಇರಿಸಿದ್ದ, ಈರುಳ್ಳಿ ಟಮಾಟೋ, ಮೆಣಸಿನಕಾಯಿ ಹೆಚ್ಚಿಕ್ಕೊಟ್ಟ... ಕೊತ್ತಂಬರಿ ಇಲ್ಲ, ಕರಿಬೇವೂ ಇಲ್ಲ.... ಪರವಾಗಿಲ್ಲ ಇರೋದನ್ನೇ ಹಾಕಿ ಮಾಡೋಣ ಅಂತ ತೀರ್ಮಾನಿಸಿದೆವು.

ಎಣ್ಣೆ ಹಾಕಿ ರವೆ ಹುರಿದುಕೊಂಡೆವು. ವಗ್ಗರಣೆಗೆ ಅಂತ ಪಾತ್ರೆ ಇಟ್ಟು ಎಣ್ಣೆ ಸುರಿದೆವು. ಆಗಲೇ ಮೊದಲನೇ ಪುಟದ ಸಂಭಾಷಣೆ ನಡೆದದ್ದು. ಮೊದಲನೇ ಪ್ಯಾರಾ ಓದಿ ಮತ್ತೆ ಇಲ್ಲಿಗೇ ಬನ್ನಿ....

ಕ್ಯಾ ಆಪ್ ಕಾ ಪಾಸ್ ಮಸ್ಟರ್ಡ್ ನಹೀ...? ಅಂದೆ.

ಎರಡು ನಿಮಿಷ ಯೋಚಿಸಿದ,ಅವನಿಗೆ ಅರ್ಥ ಆಗಲಿಲ್ಲ! ಸಾಸಿವೆ ಚಿತ್ರ ಬರೆದೆ, ಯೇ ಐಸಾ ಹೈ.. ಅಂದೆ. ಹಮೆ ಯೇ ದೇಖಾ ಹೈ..ಅಂದ. ಆದರೆ ಅಲ್ಲಿ ಅವನ ಹತ್ತಿರ ಇಲ್ಲ. ಮಸಾಲಾ ಡಬ್ಬಿ ಲಾವ್... ಅಂದೆ. ಅಡಿಗೆ ಮನೆ ಟಚ್ ಇರುವವರಿಗೆ ಮಸಾಲಾ ಡಬ್ಬಿ ಅಂದರೆ ಏನು ಅಂತ ಗೊತ್ತಿರುತ್ತೆ. ಅದರಲ್ಲಿ ಆರೋ ಏಳೋ ಪುಟ್ಟ ಪುಟ್ಟ ಡಬ್ಬಿಗಳು ಒಂದು ಗುಂಡಗಿನ ಪಾತ್ರೆಯಲ್ಲಿ ಇರುತ್ತೆ, ಒಂದೊಂದು ಡಬ್ಬಿಯಲ್ಲಿಯೂ ವಗ್ಗರಣೆಗೆ ಬೇಕಾದ ಸಾಸಿವೆ, ಜೀರಿಗೆ, ಮೆಂತ್ಯ, ಒಣ ಮೆಣಸಿನಕಾಯಿ, ಅರಿಸಿನ, ಕಡ್ಲೆ ಬೇಳೆ, ಹೆಸರು ಬೇಳೆ.... ಹೀಗೆ ತುಂಬಿಟ್ಟುಕೊಂಡಿರುತ್ತಾರೆ...ಇದು ನಮ್ಮ ಕಡೆ ಅಂದರೆ ಸೌತಿನಲ್ಲಿ, ನಾರ್ಥಿನಲ್ಲೂ ಹೀಗೇ ಇರಬೋದು ಅಂತ ಮಸಾಲಾ ಡಬ್ಬಿ ಲಾವ್ ಅಂದಿದ್ದು.

ಉದರ್ ಹೈ ದೇಖೋ.... ಅಂದ

ಅದನ್ನ ತೆರೆದು ನೋಡಿದರೆ, ನಾಲ್ಕು ಚೌಕದ ಡಬ್ಬಿ - ಒಂದರಲ್ಲಿ ಅರಿಸಿನ, ಮತ್ತೊಂದರಲ್ಲಿ ಒಣದ್ರಾಕ್ಷಿ, ಚೆಕ್ಕೆ ಪುಡಿ, ಲವಂಗ....! ಇಷ್ಟರಲ್ಲೇ ಅವರ ಮಸಾಲೆ

ಮುಗೀತದಾ ಅನಿಸಿತು. ಹಾಸ್ಟಲಿನಲ್ಲಿ ಆರು ವರ್ಷ ವಾರ್ಡನ್ ಆಗಿದ್ದೋನು, ಯಾವ ಅಡಿಗೆಯವರು ಯಾವುದನ್ನ ಎಲ್ಲಿ ಮುಚ್ಚಿಡ್ತಾರೆ ಅನ್ನೋದನ್ನ ಚೆನ್ನಾಗಿ ಅನುಭವದಿಂದ ಕಲಿತಿದ್ದೆ. ಔರ್ ಏಕ್ ಡಬ್ಬಾ ಹೈ ಕ್ಯಾ...? ಅಂದೆ.

ಮತ್ತೊಂದು ಇದಕ್ಕಿಂತಲೂ ಸ್ವಲ್ಪ ಚಿಕ್ಕ ಡಬ್ಬಿ ತಂದಿಟ್ಟ. ಅದರಲ್ಲಿ ಆರು ಬೇರೆಬೇರೆ ಬಣ್ಣದ ಪುಡಿಗಳು, ಚಿಲ್ಲಿ ಪುಡಿ, ಮೆಣಸು ಪುಡಿ... ಹೀಗೆ.

ಸರಿ ಬಿಡು ಅಂದೆವು. ಡಬರಿ ತರಹದ ಪಾತ್ರೇಲಿ ಸಾಸಿವೆ ಇಲ್ಲದೇ ವಗ್ಗರಣೆ ಆಯಿತು. ಕಾಜು ಹಾಕಿದ್ದು, ಖಾರ ಇಲ್ಲದೇ ಇರೋ ಮೆಣಸಿನಕಾಯಿ ಸೇರಿಸಿದ್ದು, ಈರುಳ್ಳಿ ಟಮೇಟೋ ಸುರಿದು ಹುರಿದಿದ್ದ ರವೆಯನ್ನು ಪಕ್ಕದಲ್ಲಿಟ್ಟು ಡಬರಿಲಿ ನೀರು ಮರಳಕ್ಕೆ ಇಟ್ಟೆವು. ಉಪ್ಪು ಸುರಿದು ವಗ್ಗರಣೆ ಬೆರೆಸಿ ಅದಕ್ಕೆ ರವೆ ಸೇರಿಸಿ ಘಮಘಮಾಡಿಸ್ತಿರೋ ಹಳದಿ ಬಣ್ಣದ ಉಪ್ಪಿಟ್ಟೂ ತಯಾರಿಸಿಯೇ ಬಿಟ್ಟೆವು ! ಅದರ ಮೇಲೆ ತುಪ್ಪ ಸುರಿದರೆ ಉಪ್ಪಿಟ್ಟಿನ ರುಚಿಯೇ ಬೇರೆ.......... ತುಪ್ಪ-ತುಪ್ಪ ತಗೊಂಡು ಬಾ ಅಂದೆ ಹಸನ್‌ಗೆ. ಆತ ಕಣ್ಣುಕಣ್ಣು ಬಿಟ್ಟ.

ಅಯ್ಯೋ ನಿಮ್ಮ ಮಾತೃಭಾಷಾ ಪ್ರೀತಿಯೇ ಘೀ ಲಾವ್.. ಅಂದಳು ಹೆಂಡತಿ ಅವನಿಗೆ.

ಪಕ್ಕದ ರೂಮಿಗೆ ಹೋದ. ಬರ್ತಾ ಅವನ ಕೈಲಿ ಡಾಲ್ಡಾ ಡಬ್ಬ ತಂದಿದ್ದ. ಅವರ ಊರಿನಲ್ಲಿ ಯಾವುದೋ ಇಸ್ಪೆಷಲ್ ಘೀ ಸಿಗುತ್ತೆ, ಆರು ಸಾವಿರ ಕೇಜೀದು. ಆದರೆ ಅದು ಇವರ ಹತ್ತಿರ ಈಗಿಲ್ಲ......! ಮತ್ತೆ ವಾರ್ಡನ್ ಆಗಿದ್ದ ಅನುಭವ ಇಲ್ಲಿ ನೆರವು ಕೊಟ್ಟಿದ್ದು. ಉಪ್ಪಿಟ್ಟಿಗೆ ಅಲಂಕಾರವಾಗಿ ಸುತ್ತಲೂ ಹಸಿಮೆಣಸಿನಕಾಯಿ ಜೋಡಿಸಿ ಮಧ್ಯೆ ಮಧ್ಯೆ ಟಮಾಟೋ ಪೀಸು ಇಟ್ಟು ಅಲ್ಲಲ್ಲಿ ಕೋಸು ಎಲೆ ಇಟ್ಟು ಸಿಂಗರಿಸಿ, ಪಕ್ಕದಲ್ಲಿ ಎರಡು ಗುಲಾಬಿ ಹೂವು ಇಟ್ಟು ಅದು ಉಪ್ಪಿಟ್ಟು ಹೌದೋ ಅಲ್ಲವೋ ಅನ್ನೋ ಹಾಗೆ ನಮ್ಮ ಹಾಸ್ಟಲಿನ ಮೇನ್ ಕುಕ್ ಮಾಡುವ ಹಾಗೆ ಮಾಡಿಬಿಟ್ಟಿದ್ದೆವು !

ಅವತ್ತು ಬೆಳಿಗ್ಗೆ ಬ್ರೇಕ್‌ಫಾಸ್ಟಿಗೆ ನಮ್ಮ ಬಸ್ಸಿನವರಲ್ಲದೇ ಬೇರೆ ಗೆಸ್ಟುಗಳೂ ಇರಬೇಕೇ ? ಆ ಸಾಬರ ಹೋಟಲಿನ ಅವತ್ತಿನ ಹೊಸಾ ರುಚಿ ನಮ್ಮ ಕರ್ನಾಟಕದ ಉಪ್ಪಿಟ್ಟು.!

ಹೇಗೆ ಚಪ್ಪರಿಸಿಕೊಂಡು ಜನ ಉಪ್ಪಿಟ್ಟು ತಿಂದರೂ ಅಂತೀರೀ...! ಮಿಕ್ಕಿದ್ದನ್ನು ಮಧ್ಯಾಹ್ನಕ್ಕೂ ಪಾರ್ಸಲ್ಲೂ ಮಾಡಿಕೊಂಡರು ಅಂದರೆ............

ಹಸನ್ ಬಂದು ಆಮೇಲೆ ಉಪ್ಪಿಟ್ಟಿನ ರೆಸಿಪೀ ಬರೆಸಿಕೊಂಡು ಹೋದ. ಅವನಿಗೆ ಒಂದು ಹಿಂಟ್ ಕೊಟ್ಟಿದ್ದೀನಿ.. ದೇಖೋ ಹಸನ್, (ಈ ಭಾಗವನ್ನು ಅವನಿಗೆ ಅವನ ಭಾಷೆಯಲ್ಲಿಯೇ ಹೇಳಿದ್ದು, ಆದರೆ ನಿಮಗೋಸ್ಕರ ಕಸ್ತೂರಿ ಭಾಷೇಲೀ...) ಬೆಂಗಳೂರಿನ ಡಿಷಸ್ ಬೇಕು ಅನ್ನೋ ಹಾಗಿದ್ರೆ ನಿಮ್ಮ ಯಜಮಾನ್ ಹತ್ರ ಮಾತಾಡು. ಬರೇ ಒಂದು ತಿಂಗಳು ನಮ್ಮನ್ನ ಕರೆಸಿಕೊಳ್ಳಲಿ, ನಮಗೆ ಬರೋ ಎಲ್ಲಾ ತಿಂಡಿಗಳನ್ನೂ ನಿಮಗೆ ಹೇಳಿಕೊಡ್ತೀವೀ....ಅಂತ ಅವನಿಗೆ ಪ್ರಾಮಿಸ್ ಮಾಡಿದ್ದೀವಿ. ಇನ್ನು ಮೇಲೆ ನಿಮಗೆ ಉತ್ತರದಲ್ಲಿ ನಮ್ಮ ಹೋಳಿಗೆ, ಉಪ್ಪಿಟ್ಟು, ಬಿಸಿಬೇಳೆ ಭಾತು, ಪುಳಿಯೋಗರೆ ಇನ್ನೂ ಮೊದಲಾದ ಭಕ್ಷ್ಯಗಳು ಸಿಗುತ್ತೆ ಅಂದರೆ ಅದರಲ್ಲಿ ನಮ್ಮ ಅಳಿಲು ಸೇವೆ ಸಹಾ ಇದೆ............!

# ನಾಯಿ ಮತ್ತು ಪ್ರವಾಸೋದ್ಯಮ

- ಕೃಷ್ಣ ಸುಬ್ಬರಾವ್

ಪ್ರತಿಯೊಂದು ನಾಯಿಗೂ ತನ್ನದೇ ಆದ ದಿನವಿದೆಯೆಂದು ದೇವರು ನಿಗದಿ ಪಡಿಸಿರುತ್ತಾನೋ ಇಲ್ಲವೊ ಸ್ಪಷ್ಟವಾದ ಮಾಹಿತಿಯಿಲ್ಲ. ಆದರೆ ಮಾನವ ಅಂತ ಒಳ್ಳೆ ದಿನ ಎಲ್ಲ ನಾಯಿಗಳಿಗೂ ಬಂದೇ ಬರುತ್ತದೆ ಎಂದು ನಂಬಿದ್ದಾನೆ. ಆ ಗಾದೆಯ ಮೂಲಕ ತನ್ನ ಭವಿಷ್ಯದಲ್ಲಿ ಒಳ್ಳೆ ದಿನಗಳ ಕನಸನ್ನು ಕಂಡುಕೊಂಡಿದ್ದಾನೆ.

ನಾಯಿ ಸಾಕುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹಾಗೆ, ನಾಯಿ ಸಾಕುವವರ ಸಮಸ್ಯೆಗಳು ಹೆಚ್ಚಾಗುತ್ತಿದೆ. ಮಾಲಿಕರು ತಮ್ಮನ್ನು ಬಿಟ್ಟು ಆಗಾಗ್ಗೆ ತಿಂಗಳಗಟ್ಟಲೇ ಹೊರಟು ಹೋಗುವುದು ನಾಯಿಗಳ ಸಮಸ್ಯೆಯಾದರೆ ಮಾಲಿಕರಿಗೆ ತಮ್ಮ ಸಂಸಾರ ಒಟ್ಟಿಗೆ ಪ್ರವಾಸ ಮಾಡುವುದಕ್ಕೆ ನಾಯಿಯಿಂದ ಸಮಸ್ಯೆಯಾಗುತ್ತಿದೆ. ಮಗಳ ಬಾಣಂತನಕ್ಕೆ ಹೋಗಿ ಆರು ತಿಂಗಳ ಕಾಲ ಅಮೆರಿಕಾಗೆ ಹೋಗುವುದಕ್ಕೆ ಗಂಡ ಹೆಂಡತಿಯರಿಗೆ ಆಗುತ್ತಿಲ್ಲ. ಕೆಲವು ಬೀಗರು ಬಾಣಂತನಕ್ಕೆ ಮೊದಲು ಆರು ತಿಂಗಳು ಹೋದಾಗ ಅವರ ನಾಯಿಯನ್ನು (ಒಂದು ವೇಳೆ ಅದರ ಬಾಣಂತನವಿದ್ದರೆ ಅದನ್ನು) ಭಾರತದಲ್ಲಿ ನೋಡಿಕೊಳ್ಳಬೇಕಾಗುತ್ತೆ. ಆದರೆ ಎಲ್ಲ ಮಾನವರೂ ನಾಯಿ ಪ್ರೇಮಿಗಳಾಗಿ ಇರುವುದಿಲ್ಲ. ಹೀಗಾಗಿ ಸಮಸ್ಯೆಗಳು ಉದ್ಭವ!

**ಅತ್ತ ಓನರ್ ವಿದೇಶಕ್ಕೆ ಹೊರಟರೆ ಇತ್ತ ಅವರ ನಾಯಿಗಳಿಗೆ ಫೈವ್ ಸ್ಟಾರ್ ಸವಲತ್ತುಗಳು!**

ಇತ್ತೀಚಿನ ಸಮೀಕ್ಷೆ ಪ್ರಕಾರ ನಾಯಿಗಳನ್ನು ಸಾಕುವುದರಿಂದ ಪ್ರವಾಸೋದ್ಯಮಕ್ಕೆ ಭಾರಿ ನಷ್ಟವಾಗುತ್ತಿದೆಯಂತೆ. ದೇಶದ ವಿದೇಶಿ ವಿನಿಮಯಕ್ಕೆ ಏಳು ಬಿದ್ದಿದೆ ಈ ನಿಟ್ಟಿನಲ್ಲಿ ಒಂದು ಪರಿಹಾರ ಇತ್ತೀಚೆಗೆ ಬಂದಿದೆ. ನಾಯಿಗಳು, ಅದನ್ನು ಸಾಕುವವರು ಹಾಗೆ ನಾಯಿಗಳಿಂದ ತಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವ ಉದ್ಯಮಿಗಳಿಗೆ ಒಳ್ಳೆ ದಿನಗಳು ಬರಲಿವೆ. ಪತ್ರಿಕೆಗಳಲ್ಲಿ ಜಾಹಿರಾತು ರಾರಾಜಿಸುತ್ತಿವೆ. "ನಿಮ್ಮ ನಾಯಿ ಚಿಂತೆ ನಮಗೆ ಬಿಡಿ, ನೀವು ಎಷ್ಟು ದಿನ ಬೇಕಾದರೆ ಅಷ್ಟು ದಿನ ಪ್ರವಾಸ ಕೈಗೊಳ್ಳಿ – ಸಂಪರ್ಕಿಸಿ ಹೋಟೆಲ್ 'ಮನೆನಾಯಿ' ಇನ್ಮುಂದೆ ಯಾರು ಬೇಕಾದರೂ ಸಾಕು ನಾಯಿಗಳನ್ನು ಫೈವ್‌ಸ್ಟಾರ್ ಸೌಲಭ್ಯವಿರುವ ಹೋಟೆಲ್‌ನಲ್ಲಿ ನಾಯಿ ಬಿಡಬಹುದು. ಎಂಬುದನ್ನು ಪ್ರಚುರ ಪಡಿಸಿತ್ತು, ಆ ಜಾಹಿರಾತು.

ಬಹಳ ವರ್ಷಗಳ ನಂತರ ಧಿಡೀರ್ ಅಂತ ಪ್ರತ್ಯಕ್ಷನಾದ ರಾಮಣ್ಣ ಕಾಣಿಸಿಕೊಂಡ. ಅವನ ಕಣ್ಣುಗಳಲ್ಲಿ ಹೊಸ ಹೊಳಪು ಕಾಣಿಸಿಕೊಂಡಿತು. ಅವನ ಮನೆಯ ಸಮಸ್ಯೆಗಳೆಲ್ಲ ಒಮ್ಮೆಲೆ

ನಿವಾರಣೆಯಾದಂತೆ ಮೇಲ್ನೋಟಕ್ಕೆ ಕಾಣಿಸುತ್ತಿತ್ತು. ಏನಯ್ಯಾ ಮಗಳಿಗೆ ಗಂಡು ಸಿಕ್ತಾ? ಮಗನಿಗೆ ಕೆಲಸ ಸಿಕ್ತಾ ಅಂತ ವಿಜಿಯ ಕೇಳಿದಳು.

''ಅಯ್ಯೋ ಅದೆಲ್ಲ ಹೇಗೊ ಆಗುತ್ತೆ ಬಿಡಿ. ನಮ್ಮ ಬಹಳ ವರ್ಷದ ಸಮಸ್ಯೆ ಪರಿಹಾರ ಆಯ್ತು. ನಮ್ಮ ನೆಂಟರಿಷ್ಟರೆಲ್ಲ ಇಷ್ಟು ವರ್ಷ ತಮ್ಮ ವಿದೇಶಿ ಪ್ರವಾಸಗಳ ಬಗ್ಗೆ ಕೊರೆದು ಹೊಟ್ಟೆ ಉರಿಸ್ತಾ ಇದ್ರು. ಈಗ ನಾವು ಒಂದು ವಿದೇಶಿ ಪ್ರವಾಸನ ಕುಟುಂಬ ಸಮೇತ ಮಾಡುವ ಅವಕಾಶ ಸಿಕ್ತಿದೆ. ಮುಂದಿನ ತಿಂಗಳು ಮನೆಯವರೆಲ್ಲ 21 ದಿನ ಯುರೋಪ್ ಟ್ರಿಪ್ ಪ್ಲಾನ್ ಮಾಡಿದ್ದೀವಿ. ನಮ್ಮ 'ಡಾಂಕಿ' ಹೋಟೆಲ್ ಒಂದರಲ್ಲಿ ಬಿಟ್ಟು ಹಾಯಾಗಿ ಹೋಗ್ತಿವಿ. ಮೊದಲು ನಿಮ್ಮನೇಲಿ ಬಿಟ್ಟು ಹೋಗೋಣಾಂತ ಇದ್ವಿ, ಆದರೆ ಅದನ್ನು ನೀವು ಸರಿಯಾಗಿ ನೋಡಿಕೊಳ್ತಿರೊ ಇಲ್ವೊ ಅನ್ನೊ ಆತಂಕ ಇತ್ತು ನನ್ನ ಹೆಂಡ್ತಿಗೆ...''

''ಅಲ್ವೊ ನೀನು ನಾಯಿ ವಿಷಯ ಮಾತಾಡ್ತಾ 'ಡಾಂಕಿ' ಅಂತ ಹೇಳ್ದಿಯಲ್ಲಾ?'' ಅರ್ಥವಾಗದೇ ಕೇಳಿದೆ.

''ನಮ್ಮ ನಾಯಿಗೆ ಹೋದ ವಾರ 'ಡಾಂಕಿ' ಅಂತ ಹೆಸರು ಬದಲಾಯಿಸಿದ್ದಾಳೆ ನನ್ಮಗಳು. ಪೇಪರ್‌ನಲ್ಲಿ ಅದರ ಬಗ್ಗೆ ಪ್ರಕಟಣೆ ಕೊಟ್ಟಿದ್ವಿ. ನೋಡಿಲಿಲ್ವಾ?'' ಕೇಳಿದ.

''ವಿಷಯಾಂತರವಾಗ್ತಿದೆ, ಆದರೂ 'ಡಾಗ್'ನ ಡಾಂಕಿ ಅಂತ ಕರೆಯೊದು ಯಾಕೆ?''

''ಮರಿಯಾಗಿದ್ದಾಗ ಕತ್ತೆ ತುಂಬ ಮುದ್ದಾಗಿರುವಂತೆ ಇದೆ ನಮ್ಮ ನಾಯಿ ಅದಕ್ಕೆ ಆ ಹೆಸರು. ಅದ್ಸರಿ ನಾನು ನಿನ್ನೆ ಹೋಟೆಲ್ 'ಮನೆನಾಯಿ'ಗೆ ಹೋಗಿದ್ದೆ ಬಹಳ ಒಳ್ಳೆ ಸವಲತ್ತುಗಳಿವೆ. ನಮ್ಮ ನಾಯಿಗೆ ಒಳ್ಳೆ ವ್ಯಾಯಾಮ ಒಳ್ಳೆಯ ಆಹಾರ ಒಳ್ಳೆಮನರಂಜನೆಯ ಏರ್ಪಾಡಿದೆ. ಅದಕ್ಕಿಂತ ಹೆಚ್ಚಾಗಿ ನಮಗೆ ಯಾವಾಗಲೂ ಅದರ ಸ್ಟೇಟಸ್ ನಮ್ಮ ಸ್ಮಾರ್ಟ್‌ಫೋನ್‌ಗೆ ರವಾನೆಯಾಗುತ್ತಾ ಇರುತ್ತೆ. ನಾವು ನಮ್ಮ ನಾಯಿನ ನೋಡ್ತಾ ಇರಬಹುದು. ಅದು ನಮ್ಮನ್ನು ಸ್ಕೈಪ್‌ನಲ್ಲಿ ನೋಡುತ್ತಿರಬಹುದು...'' ಒಂದೇ ಉಸರಿಗೆ ಹೇಳ್ತಿದ್ದ ರಾಮಣ್ಣ.

''ಅದ್ಸರಿ, ಖರ್ಚು ಎಷ್ಟಾಗುತ್ತೆ?'' ಕೇಳಿದೆ.

''ಸ್ವಲ್ಪ ದುಬಾರಿನೆ. ನಾವು ನಾಯಿಯನ್ನು ವಿದೇಶಿ ಪ್ರವಾಸಕ್ಕೆ ಕರೆದು ಕೊಂಡು ಹೋಗಿದ್ದರೆ ಎಷ್ಟು ಖರ್ಚಾಗುತ್ತಿತ್ತೊ ಅದಕ್ಕಿಂತ ಸ್ವಲ್ಪ ಜಾಸ್ತಿಯಾಗುತ್ತೆ 'ಆದರೂ ಪರವಾಗಿಲ್ಲ ಅಂತಾರೆ' ನನ್ನ ಮಕ್ಕಳು. ಹೇಗೋ ನಮಗೀಗ ದುಡ್ಡಿನದೇನೂ ತಾಪತ್ರಯವಿಲ್ಲ'' ಎಂದ ಜಂಬದಿಂದ.

ಸಧ್ಯ, ಏನಾದರೂ ಆಗಲಿ ನಮ್ಮನೇಲಿ ನಾಯಿ ಬಿಟ್ಟು ಹೋಗುವ ವಿಚಾರವಿಲ್ಲವೆ ಎಂದು ಸಮಾಧಾನವಾಯ್ತು ನನಗೆ ನನ್ನ ಹೆಂಡ್ತಿಗೆ.

# ಪಟ್ಟಾಭಿರಾಮಾಚಾರ್ಯರಿಗೆ ಪ್ಯಾಂಟ್ ಹಾಕಿಸಿದ್ದು

**- ವೈ.ಎನ್. ಗುಂಡೂರಾವ್**

**ಕ**ಳೆದ ಶತಮಾನದ 50-60ರ ದಶಕ. ಬೆಂಗಳೂರಿನಲ್ಲಿದ್ದ ಉದ್ಯೋಗಾವಕಾಶಗಳೆಂದರೆ ಕರ್ನಾಟಕ ರಾಜ್ಯದ ಸರಕಾರಿ ಹುದ್ದೆಗಳು, ಕಾರ್ಪೊರೇಷನ್ ಕಚೇರಿ, ತಾಲ್ಲೂಕು ಆಫೀಸು, ಎಲ್ಲೈಸಿ, ಕೆಲ ಬ್ಯಾಂಕುಗಳು, ರೈಲ್ವೆ, ಪೋಸ್ಟಲ್ ಡಿಪಾರ್ಟ್‌ಮೆಂಟ್‌ಗಳು. ಇವು ಬಿಟ್ಟರೆ ಕೆಲ ಖಾಸಗಿ ಕಚೇರಿಗಳಲ್ಲಿ ಹೇಳಿಕೊಳ್ಳುವಂತಹ ಅವಕಾಶಗಳು ಇರದಿದ್ದ ಸಂದರ್ಭದಲ್ಲಿ 1938ರಲ್ಲಿ ಏರ್‌ಕ್ರಾಫ್ಟ್ ಕಾರ್ಖಾನೆ ಪ್ರಾರಂಭವಾಯಿತು.

ಕಾರ್ಖಾನೆಗಳು ಪ್ರಾರಂಭವಾದ ನಂತರ ಸಿಬ್ಬಂದಿಯನ್ನು ಕರೆ ತರಲು ತನ್ನದೇ ಆದ ಸಾರಿಗೆ ವ್ಯವಸ್ಥೆ ಹೊಂದಿದ್ದ ಬಸ್ಸುಗಳದ್ದೇ ಸಿಟಿ ತುಂಬ ಕಾರುಬಾರು. ದಿನ ಬೆಳಿಗ್ಗೆ ಕರೆದೊಯ್ಯಲು, ಸಂಜೆ ಮನೆಗೆ ಕರೆದು ತಂದು ಬಿಡಲು ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲೆಲ್ಲಾ ಕಾರ್ಖಾನೆಯ ಬಸ್ಸುಗಳದ್ದೇ ಓಡಾಟ. ಇವು ಬಿಟ್ಟರೆ ಹಿಂದೆ ಇದ್ದುದು ಬಿಟಿಸಿ ಬಸ್ಸುಗಳು. ಈ ಬಸ್ಸುಗಳು ಬರುತ್ತಿರುವುದನ್ನು ದೂರದಿಂದಲೇ ಗುರುತಿಸುವಂತೆ ಬಳಿದಿದ್ದ ಕೆಂಪು ಬಣ್ಣ. ಅದೂ ಗಂಟೆಗೋ ಎರಡು ಗಂಟೆಗೋ ಒಂದು ಬಸ್ಸು, ಬಂದರೆ ಅದೇ ಅದೃಷ್ಟ. ಬಸ್ಸಿಗಾಗಿ ಕಾಯಲಾರದಂತಹವರಿಗೆ ಇದ್ದ ವಾಹನ ಸೌಕರ್ಯವೆಂದರೆ ಟಾಂಗಾಗಳು. ರಿಕ್ಷಾ ಅಥವಾ ಸ್ಕೂಟರ್‌ಗಳು ಆಗ ತಾನೇ ರಸ್ತೆಗಳಲ್ಲಿ ಅಲ್ಲೊಂದು ಇಲ್ಲೊಂದು ಓಡಾಡುತ್ತ ಕಣ್ಣು ಬಿಡುತ್ತಿದ್ದ ಕಾಲ. ವಾಹನ ಸಂಚಾರ ಕಡಿಮೆ ಇದ್ದುದರಿಂದ ರಸ್ತೆಗಳು ತುಂಬಾ ಅಗಲವಾಗಿದ್ದಂತೆ ಕಂಡು ಬರುತ್ತಿದ್ದುವು.

**ಮಕ್ಕಳ ಅಭಿರುಚಿ ಬದಲಾದ ಕಾಲದ ಮುಂದೆ ಆಚಾರ್ಯರು ಸೋತುಹೋದರೆ?**

ಕಾಲ ಓಡುತ್ತಾ ಓಡುತ್ತಾ ಹಲವಾರು ಬದಲಾವಣೆಗಳಿಗೂ ಕಾರಣವಾಗಿತ್ತು. ವೈದಿಕ ವಿದ್ಯೆ ಕಲಿತ ವಿಪ್ರ ಸಮೂಹದಲ್ಲಿನ ಕುಟುಂಬಗಳಲ್ಲಿ ಬೇರಾವ ರೀತಿಯ ಅಭಿವೃದ್ಧಿ ಕಾಣದಿದ್ದರೂ ಕುಟುಂಬದ ಜನಸಂಖ್ಯೆ ಮಾತ್ರ ಏರುತ್ತಲೇ ಇದ್ದುದು, ಕಾರ್ಖಾನೆಗಳ ಹೆಚ್ಚಳದಿಂದ ಉದ್ಯೋಗಿಗಳಾಗಿ ಸಂಪ್ರದಾಯಸ್ಥರೂ ಸೇರುತ್ತಿದ್ದುದರಿಂದ, ಸಂಪ್ರದಾಯದ ಕಟ್ಟಳೆಗಳನ್ನು ಪೂರ್ಣ ಆಚರಿಸಲಾಗದಿದ್ದುದು, ವೈದಿಕ ವೃತ್ತಿಯನ್ನೇ ನಂಬಿದವರಿಗೆ ಅವಕಾಶಗಳು ಕಡಿಮೆಯಾಗ ತೊಡಗಿದ್ದುದು, ಜೀವನ ನಿರ್ವಹಣೆಗಾಗಿ ವಿಪ್ರಸಮೂಹವು ತಾವೂ ಏಕೆ ಕಾರ್ಖಾನೆಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬಾರದು ಎಂಬ ಯೋಚನೆ ಬಂದದ್ದು

ಅಸಹಜವೇನಾಗಿರಲ್ಲಿಲ್ಲ. ವಿಪ್ರ ಸಮೂಹದಲ್ಲಿ ವೈದಿಕ ವಿದ್ಯೆಯ ಜೊತೆಗೆ ಲೌಕಿಕ ವಿದ್ಯೆಯನ್ನೂ ಕಲಿತದ್ದರಿಂದ ಕೆಲಸ ಗಿಟ್ಟಿಸಿ ಕೊಳ್ಳುವುದು ಅಷ್ಟೇನು ಕಷ್ಟವಾಗಿರಲ್ಲಿಲ್ಲ.

ವೈದಿಕ ಕರ್ಮ ಪ್ರಯೋಗದಲ್ಲಿ ನಿರತರಾಗಿದ್ದ ಚಾಮರಾಜಪೇಟೆಯ ಹಲವಾರು ಮಂದಿ ಎಚ್.ಎ.ಎಲ್., ಐ.ಟಿ.ಐ., ಬಿ.ಇ.ಎಲ್. ಕಾರ್ಖಾನೆಗಳಿಗೆ ಸೇರಿಕೊಂಡಿದ್ದರಿಂದ ಬೆಳಿಗ್ಗೆ ಏಳು–ಏಳುವರೆಗೆ ರಾಘವೇಂದ್ರಸ್ವಾಮಿ ಮಠಕ್ಕೋ, ಮಧ್ವ ಸಂಘಕ್ಕೋ ಓಡುತ್ತಿದ್ದವರ ಕೈಗಳಲ್ಲಿ ರಾಮೋಜಿರಾವ್ ಹೊಲಿದು ಕೊಟ್ಟಿದ್ದ ಬಟ್ಟೆಯ ಕೈ ಚೀಲದೊಳಗೆ ಊಟದ ಕ್ಯಾರಿಯರ್ ಇರುತ್ತಿತ್ತು. ಎಲ್ಲಾ ಕಾರ್ಖಾನೆಯ ಬೆಳಗಿನ ಪಾಳಿಗಳೂ ಸಾಮಾನ್ಯವಾಗಿ ಒಂದೇ ಸಮಯದಲ್ಲಿ ಪ್ರಾರಂಭವಾಗುತ್ತಿದ್ದುದರಿಂದ ಐ.ಟಿ.ಐ., ಎಚ್.ಎ.ಎಲ್., ಬಿ.ಇ.ಎಲ್. ಬಸ್ಸು ಹಿಡಿಯಲು ವಿಭೂತಿ, ಕುಂಕುಮ, ಮುದ್ರೆ ಅಂಗಾರ – ಆಕ್ಷತೆ ಹಚ್ಚಿಕೊಂಡು ಬೆಳಿಗ್ಗೆ ಏಳುವರೆಗೆ ಆತುರಾತುರವಾಗಿ ಊಟ ಮುಗಿಸಿ, ಹೊಟ್ಟೆಯಿಂದ ಕೆಳಗಿಳಿಯಲು ಪ್ರಯತ್ನಿಸುತ್ತಿದ್ದ ಪ್ಯಾಂಟಿಗೊಂದು ಬೆಲ್ಟ್ ಬಿಗಿದು ಕಟ್ಟಿ, ಸ್ಕೂಲ್ ಮಾಸ್ಟರ್ ರೀತಿ ತಲೆಗೊಂದು ಕಪ್ಪು ಟೊಪ್ಪಿ ಧರಿಸಿ, ಚಾಮರಾಜಪೇಟೆಯ ಐದನೆಯ ರಸ್ತೆಯ ಸರ್ಕಲ್‌ನಲ್ಲಿ ಟೆಂಟು ಹೊಡೆದು ಕುಳಿತಿದ್ದ ತ್ಯಾಗಯ್ಯ ರಚಿಸಿಕೊಟ್ಟಿದ್ದ ಟೈರ್ ಚಪ್ಪಲಿ ಮೆಟ್ಟಿ ಕಾರ್ಖಾನೆಯ ಬಸ್ಸು ಹಿಡಿಯಲು ಧಾವಂತ ಪಡುತ್ತಿದ್ದುದು ಸಾಮಾನ್ಯ ದೃಶ್ಯವಾಗಿತ್ತು.

ಚಾಮರಾಜಪೇಟೆಯ ವೇದ ವಿದ್ವಾನ್ ಜಯಾಚಾರ್ಯರ ಮಗ ಸುಧೀಂದ್ರಾಚಾರ್, ಗಮಕಿ ವೇದ ಮೂರ್ತಿಗಳ ಮಗ ಪ್ರಹ್ಲಾದಾಚಾರ್ಯ, ನಂದಗುಡಿ ಜಯತೀರ್ಥಾಚಾರ್ಯರ ಮಗ ಗೋಪಾಲಾಚಾರ್ಯ, ಸುಬ್ಬಣ್ಣಾಚಾರ್ಯರ ಮಗ ಬಿಂದಾಚಾರ್ಯ, ಕೊಪ್ಪರಿಗೆ ವೆಂಕಟ ರಮಣಾಚಾರ್ಯರ ಮಗ ರಾಮಾಚಾರ್ಯ (ಕೊಪ್ಪರಿಗೆ ಎಂಬ ಹೆಸರು ಬರಲು ಅವರ ವಂಶಕ್ಕೇನು ಏಳು ಕೊಪ್ಪರಿಗೆ ಹಾಗಿರಲಿ ಒಂದು ಕೊಪ್ಪರಿಗೆ, ಕಡೇ ಪಕ್ಷ ಒಂದು ಬಾಂಡ್ಲೆ ತುಂಬ ನಿಧಿ ಕೂಡಾ ಸಿಕ್ಕಿರದಿದ್ದರೂ ಹಾಗೆ ಕರೆಯಲು ಕಾರಣವೆಂದರೆ ಬೆಂಗಳೂರಿಗೆ ಸಮೀಪದ ದಾಸರಹಳ್ಳಿಯ ಬಳಿ ಕಬ್ಬಿನ ಗದ್ದೆಯಿದ್ದು, ಆಲೆಮನೆ ಹಾಕಿಸುತ್ತಿದ್ದರು. ತಮ್ಮ ಕೆಲಸದ ನಂತರ ಬೆಲ್ಲ ತಯಾರಿಸುವ ಕೊಪ್ಪರಿಗೆಯನ್ನು ವೆಂಕಟರಮಣಾಚಾರ್ಯರ ತಂದೆ ಸುಬ್ಬಣ್ಣಾಚಾರ್ಯರು ಇತರರ ಕೆಲಸಕ್ಕೂ ಉಚಿತವಾಗಿ ಕೊಡುತ್ತಿದ್ದುದರಿಂದ 'ಕೊಪ್ಪರಿಗೆ' ಎಂಬುದು ವಂಶಪಾರಂಪರ್ಯವಾಗಿ ಬಂದ ಹೆಸರೆಂಬುದನ್ನು ನಾನು ಸಂಶೋಧಿಸಿದ್ದೆ. ಆದರೆ 'ಉಳುವವನೇ ಭೂಮಿಗೆ ಒಡೆಯ' ಎಂಬ ಕಾನೂನು ಬಂದು ಜಮೀನಿನ ಜೊತೆ ಕೊಪ್ಪರಿಗೆಯೂ ಅದೆಲ್ಲಿ ಹೋಯಿತೋ ತಿಳಿಯದು. ರಾಮಾಚಾರ್ಯರು ತಮ್ಮ ಹೆಸರಿಗೆ ಅಂಟಿಕೊಂಡಿದ್ದ ಕೊಪ್ಪರಿಗೆಯನ್ನು ಕಿತ್ತೊಗೆದಿದ್ದರು.) ಹೀಗೆ ಹಲವಾರು ಮಂದಿ ತಮ್ಮ ವೈದಿಕ ವೃತ್ತಿಯ ಜೊತೆಗೆ ಕಾರ್ಖಾನೆಯ ಕೆಲಸಗಳಿಗೂ ಸೇರಿಕೊಂಡಿದ್ದರಿಂದ ಮೂಲೆ ಮನೆ ಜಯಾಚಾರ್ಯರ ಮಗ ಪಟ್ಟಾಭಿರಾಮಾಚಾರ್ಯರಿಗೂ ಕಾರ್ಖಾನೆಯ ಕೆಲಸಕ್ಕೆ ಸೇರಲು ಜಯಾಚಾರ್ಯರೇ ಒತ್ತಾಯಿಸ ತೊಡಗಿದರು. ಪಟ್ಟಾಭಿರಾಮಾಚಾರ್ಯರು ಬಿ.ಎ. ಪಾಸು ಮಾಡಿದ್ದರಿಂದ ಎರಡನೆಯ ದರ್ಜೆ ಗುಮಾಸ್ತೆ ಕೆಲಸ ಸಿಕ್ಕುವುದೇನು ಕಷ್ಟವಾಗಿರಲ್ಲಿಲ್ಲ. ಬರೇ ವಿಪ್ರರಷ್ಟೇ ಅಲ್ಲದೆ ಎಲ್ಲಾ ಸಮೂಹದವರೂ ಈಗ ಕಾರ್ಖಾನೆಯ ಉದ್ಯೋಗಿಗಳೇ!

ಕೆಲಸಕ್ಕೆ ಅರ್ಜಿ ಹಾಕಿದ ನಂತರ ಐ.ಟಿ.ಐ.ನಿಂದ ಪಟ್ಟಾಭಿರಾಮಾಚಾರ್ಯರಿಗೆ ಸಂದರ್ಶನಕ್ಕೆ ಬಂದೇ ಬಿಟ್ಟಿತು. ಬಿ.ಟಿ.ಸಿ. ಬಸ್ಸು ಹಿಡಿದು ಯಾರ್ಯಾರನ್ನೋ ಕೇಳಿಕೊಂಡು ಕಾರ್ಖಾನೆ ತಲುಪಿದ ಪಟ್ಟಾಭಿರಾಮಾಚಾರ್ಯರು ಸಂದರ್ಶನ ಪತ್ರ ತೋರಿಸಿದಾಗ ವಾಚ್‌ಮನ್ ಒಳಗೆ ಬಿಟ್ಟ, ಸಿಬ್ಬಂದಿ ವಿಭಾಗವನ್ನು ಹುಡುಕಿಕೊಂಡು ಇವರು ತಲುಪುವಲ್ಲಿ ನಾಲ್ಕಾರು ಅಭ್ಯರ್ಥಿಗಳು ಇವರಿಗಿಂತ ಮುಂಚೆಯೇ ಬಂದು ಕಾದಿದ್ದರು. ಅಲ್ಲಿ ಕುಳಿತಿದ್ದವರಿಗೆಲ್ಲ ಪಟ್ಟಾಭಿರಾಮಾಚಾರ್ಯರನ್ನು ಕಂಡು ಆಶ್ಚರ್ಯ. ಕಚ್ಚೆಪಂಚೆಯುಟ್ಟು ಶರಟಿನ ಮೇಲೆ ಶಲ್ಯದಂತೆ ತುಂಡು ಪಂಚೆ ಹೊದ್ದು ಬಂದ ಈತ ಬಹುಶಃ ಅದು ಶುಕ್ರವಾರವಾದ್ದರಿಂದ ಪೂಜೆ ಮಾಡಲು ಬಂದಿರಬೇಕೆಂದು ಭಾವಿಸಿದರು. ಸಂದರ್ಶನ ಪ್ರಾರಂಭವಾಗಿ ಮೂರನೆಯವರಾಗಿ ಇವರನ್ನೇ ಕರೆದದ್ದು ಕಂಡ ಇತರ ಅಭ್ಯರ್ಥಿಗಳು ದಂಗಾದರು. ಎಲ್ಲರ ಸಂದರ್ಶನ ಮುಗಿದ ನಂತರ ಪಟ್ಟಾಭಿರಾಮಾಚಾರ್ಯರನ್ನುಳಿಸಿಕೊಂಡು ಇತರರು ಹೋಗಬಹುದು. ಮುಂದೆ ತಿಳಿಸುತ್ತೇವೆಂದಾಗ ಇತರರು ಆಶ್ಚರ್ಯಕ್ಕೆ ಬಿದ್ದರೆ, ಇವರಿಗೆ ಭಯ ಪ್ರಾರಂಭವಾಯಿತು. ಇಂತಹ ಸಂದರ್ಶನ, ಕಾರ್ಖಾನೆ ಎಲ್ಲವೂ ಹೊಸದೆ. ಆದರೂ ತಮ್ಮ ಮನೆಯ ಅಕ್ಕಪಕ್ಕದಲ್ಲಿದ್ದ ಕೆಲವರು ಮೊದಲೇ ಕಾರ್ಖಾನೆಗೆ ಸೇರಿದ್ದು, ಅವರೆಲ್ಲ ಯಾವ ಯಾವ ವಿಭಾಗದಲ್ಲಿದ್ದಾರೋ ಎಂಬುದು ತಿಳಿಯದಿದ್ದರೂ ಕಡೇ ಪಕ್ಷ ಇದೇ ಕಾರ್ಖಾನೆಯಲ್ಲೇ ಇದ್ದಾರಲ್ಲ ಎಂದು ಧೈರ್ಯ ತಂದುಕೊಂಡು ಮನಸ್ಸಿನಲ್ಲೇ ವಾಯುಸ್ತುತಿ ಪಠಿಸಲಾರಂಭಿಸಿದರು.

ಅಷ್ಟರಲ್ಲಿ ಊಟದ ಸಮಯ ಬಂದಿದ್ದರಿಂದ ಊಟದ ಕೂಪನ್ ಕೊಟ್ಟ ಸಿಬ್ಬಂದಿಯೊಬ್ಬ ಕ್ಯಾಂಟೀನ್ ದಾರಿ ತೋರಿಸಿ ಊಟ ಮಾಡಿ ಬರಲು ತಿಳಿಸಿದ. ಹೋಟೆಲ್ ಮುಖವೇ ಕಾಣದ ಸಂಪ್ರದಾಯಸ್ಥ ಪಟ್ಟಾಭಿರಾಮಾಚಾರ್ಯರು ಇನ್ನು ಕ್ಯಾಂಟೀನಿನಲ್ಲಿ ತಿಂದಾರೆಯೆ! ಕೂಪನ್‌ನನ್ನು ಜೇಬಿಗಿಟ್ಟು ಕಾರಿಡಾರ್‌ನ ಬೆಂಚಿನ ಮೇಲೆ ಕುಳಿತರು. ಕಡೆಗೆ ಸಿಬ್ಬಂದಿ ವಿಭಾಗದ ವ್ಯವಸ್ಥಾಪಕರು ಊಟ ಮುಗಿಸಿ ಬಂದ ನಂತರ ಒಳಗೆ ಕರೆದು ಕೆಲಸದ ಆರ್ಡರ್ ಕೊಟ್ಟು ಸೋಮವಾರದಿಂದ ಬಂದು ಸೇರಿಕೊಳ್ಳಿ, ಆದರೆ ಪ್ಯಾಂಟು, ಶರಟಿನಲ್ಲಿ ಬರಬೇಕು ಎಂದು ಹೇಳಿದಾಗ ಇವರಿಗೆ ಸಂಕಟ, ಆಶ್ಚರ್ಯ, ತಳಮಳ ಏಕಕಾಲದಲ್ಲಿ ಉಂಟಾಗಿತ್ತು.

ಕಾರ್ಖಾನೆಯಿಂದ ಹೊರಟು ಬಿ.ಟಿ.ಸಿ. ಬಸ್ಸು ಹಿಡಿದು ಮನೆ ತಲುಪುವಲ್ಲಿ ಸಂಜೆ ಐದಾಗಿತ್ತು. ತಂದೆಗೆ ವಿಷಯ ತಿಳಿಸುತ್ತಲೇ ಅವರಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಪ್ರಾಣ ದೇವರನ್ನು ಪೂಜಿಸಿದ್ದಕ್ಕೂ ಸಾರ್ಥಕವಾಯಿತು. 'ವೈದಿಕ ವಿದ್ಯೆಗೂ ಲೋಪವಾಗದಂತೆ ಅನುಸರಿಸಿಕೊಂಡು ಲೌಕಿಕದಲ್ಲೂ ಅಭಿವೃದ್ಧಿ ಹೊಂದು' ಎಂದು ಆಶೀರ್ವದಿಸಿದರು.

ಕಾರ್ಖಾನೆಗೆ ಶನಿವಾರದಂದು ಅರ್ಧದಿನ ರಜೆಯಿದ್ದುದರಿಂದ ಶನಿವಾರ ಸಂಜೆ ಅವರು ಮಾಡಿದ ಮೊದಲ ಕೆಲಸವೆಂದರೆ ಅಕ್ಕಪಕ್ಕ, ಹಿಂದೆ ಮುಂದೆ ಬೀದಿಗಳಲ್ಲಿದ್ದ ರಾಮಯ್ಯ, ಸಿಂಗಾರಪ್ಪ, ಚೆಲುವೇಗೌಡ, ಆನಂದವೇಲು, ಆಂಜನೇಯಲು, ಪ್ರಹ್ಲಾದಾಚಾರ್ಯ, ಬಿಂದಾಚಾರ್ಯ ಮುಂತಾದವರುಗಳನ್ನು ನೋಡಲು ಹೋದರು. ಎಲ್ಲರದ್ದೂ ಒಂದೇ ಸಲಹೆ. 'ಸ್ವಾಮೇರ ಹಿಂಗ್ ಹ್ವಾದ್ರೆ ಕಷ್ಟ, ಪ್ಯಾಂಟು ಹಾಕಳ್ಳೇಬೇಕು, ಕಚ್ಚೆ ಪಂಚೆ ಕಟ್ಟಿ ಅಲ್ಲೇನ್ ತೀರ್ಥ

ಬುಡ್ತೀರಾ, ಹಿಂಗೆಲ್ಲ ಬರಾಣಿಲ್ಲ' ಎಂದ ಸಿಂಗಾರಪ್ಪ. 'ಪ್ಯಾಂಟು-ಸರಟಿನಲ್ಲೇ ಬರ್ಬೇಕೂಂತ ಸಾಹೇಬ್ರು ಹೇಳಿಲ್ಲುದ್ರಾ' ಎಂದು ರಾಮಯ್ಯ ಹೇಳಿದ ಮೇಲೆ ಬಸವನಗುಡಿಯ 'ಚೆಂದಂ' ಡ್ರೆಸೆಸ್‌ನಲ್ಲಿ ಪ್ಯಾಂಟು-ಶರಟು ಕೊಂಡು ತಂದರು.

ಸೋಮವಾರದ ದಿವಸ ಪ್ಯಾಂಟು-ಶರಟಿನಲ್ಲಿ ಬಂದ ಪಟ್ಟಾಭಿರಾಮಾಚಾರ್ಯರನ್ನು ಚಾಮರಾಜಪೇಟೆಯ ಸರ್ಕಲ್ ಬಳಿ ಕಂಡ ಕಾರ್ಖಾನೆ ಕೆಲಸಗಾರರಿಗೆ ಆಶ್ಚರ್ಯ. ಬಸ್ಸು ಬಂತು. ಇವರೂ ಹತ್ತಿದರು. ಇವರಿಗಿಂತ ಮುಂಚೆ ಹತ್ತಿ ಕುಳಿತಿದ್ದವರೆಲ್ಲ ಇವರನ್ನು ನೋಡಿ 'ಹೋ...' ಎಂದು ಕೂಗಿ ಸ್ವಾಗತಿಸಿದರು.

**ಬದಲಾವಣೆ**

ರವಿ : ನೀನು ಮೆಡಿಕಲ್ ಸೇರ್ತೀನಿ ಅಂದಿದ್ದೋನು ಯಾಕೆ ಇಂಜಿನಿಯರಿಂಗ್ ಸೇರಿದೆ

ಗುರು : ಆ ಹಲ್ಲುಬ್ಬಿ ಸಣಕಲಿ ಗಿರಿಜ ನಾನು ಡಾಕ್ಟರನ್ನೇ ಮದುವೆಯಾಗೋದು ಅಂದ್ಲು ಅದಿಕ್ಕೆ



ಶರಟನ್ನು ಒಳ ತುರುಕಿದ ದೊಗಳೆ ಪ್ಯಾಂಟ್‌ಗೊಂದು ಬೆಲ್ಟ್ ಸಿಗಿಸಿ ಹೊಟ್ಟೆಯ ಮೇಲೆ ಬಿಗಿದು ಕೂಡಿಸಿದ್ದಾರೆ. ರಾಮೋಜಿರಾವ್ ಹೊಲಿದು ಕೊಟ್ಟಿದ್ದ ಬಟ್ಟೆಯ ಬ್ಯಾಗಿನೊಳಗಿದ್ದ ಊಟದ ಕ್ಯಾರಿಯರನ್ನು ಮೈಲಿಗೆಯಾದೀತೆಂದು ಕೆಳಗಿಡದೆ ಕೈಯಲ್ಲೇ ಹಿಡಿದು ಕುಳಿತಿದ್ದಾರೆ. ಕಾಲಲ್ಲಿ ತ್ಯಾಗಯ್ಯ ರಚಿಸಿಕೊಟ್ಟಿದ್ದ ಚಪ್ಪಲಿ ಇದೆ.

ಹೀಗೆ ಮಡಿಮಡಿಯಾಗಿ ಫ್ಯಾಕ್ಟರಿ ಬಸ್ಸಿನಲ್ಲಿ ಸಂಚರಿಸುತ್ತಾ, ಕೆಲಸದಲ್ಲಿ ತೊಡಗಿಕೊಂಡಿದ್ದ ಪಟ್ಟಾಭಿರಾಮಾಚಾರ್ಯರಿಗೆ ದಿನಗಳು ಕಳೆದು ಹೋಗುತ್ತಿದೆ. ಕಾರ್ಖಾನೆಯ ಕೆಲಸಗಳಿಗೆ ನಿಧಾನವಾಗಿ ಹೊಂದಿಕೊಂಡಿದ್ದಾರೆ. ದಿನವೂ ಬಸ್ಸಿನ ಹಿಂದಿನ ಸೀಟಿನಲ್ಲಿ ಕುಳಿತು ರಾಜಕೀಯದಿಂದ ರಾಜಕುಮಾರ್‌ವರೆಗೆ, ಪರಮಾಣುವಿನಿಂದ ಪಂಡರಿಬಾಯಿವರೆಗೆ ಹೀಗೆ ಎಲ್ಲಾ ವಿಷಯಗಳ ಬಗ್ಗೆಯೂ ಬಿಸಿಬಿಸಿ ಚರ್ಚೆ ನಡೆದಾಗ ಮೊದಲು ಸುಮ್ಮನೆ ಕುಳಿತು ನೋಡುತ್ತಿದ್ದವರು ಈಗೀಗ ಅತ್ಯುತ್ಸಾಹದಿಂದ ಚರ್ಚೆಯಲ್ಲಿ ಮೇಲುಗೈ ಪಡೆಯುತ್ತಿದ್ದಾರೆ. ಹಿಂದಿನ ಪಟ್ಟಾಭಿರಾಮಾಚಾರ್ಯರು ಕ್ರಮೇಣ ಕಳೆದು ಹೋಗುತ್ತಿದ್ದಾರೆ.

60-70 ದಶಕದಲ್ಲಿ ಯಾರ ಬಾಯಲ್ಲೂ ಕೇಳಿರದ ಐಟಿ-ಬಿಟಿ, ಎಂ.ಎನ್.ಸಿ., ಔಟ್ ಸೋರ್ಸಿಂಗ್ ಪದಗಳು ಈಗ ಎಲ್ಲರ ಬಾಯಲ್ಲೂ ಬಹು ಭರಾಟೆಯಿಂದ ಹರಿದಾಡುತ್ತಿದೆ. 70ರ ದಶಕದಲ್ಲಿ ಬೆಂಗಳೂರಿನಲ್ಲಿ ಕಣ್ಣು ಬಿಡುತ್ತಿದ್ದ ಕಂಪ್ಯೂಟರ್ ಎಂಬ ಮಾಯಾಜಾಲ ಯಂತ್ರ ಜನರ ಇಡೀ ಬದುಕನ್ನು ಆವರಿಸಿಕೊಂಡಿದೆ. ಆಫೀನಲ್ಲಿರಲಿ, ಮನೆಯಲ್ಲಿರಲಿ, ಮದುವೆ-ಮುಂಜಿಗೆ ಹೋಗಲಿ ಹೆಚ್ಚೇಕೆ ಆಸ್ಪತ್ರೆಯಲ್ಲಿ ಯಾರನ್ನಾದರೂ ನೋಡಿಕೊಳ್ಳಲು ಹೋದರೂ ಇವರ ತೊಡೆಯ ಮೇಲೆ ಆವರಿಸಿರುವ ಲ್ಯಾಪ್‌ಟಾಪ್‌ನಿಂದ ಸದಾ ವೇಳಾತೀತ

ಕೆಲಸದ ಒತ್ತಡದ ಬದುಕಿನಲ್ಲಿ ಸುಖ ಕಾಣುತ್ತಿದ್ದೇವೆಂಬ ಮಹಾಭ್ರಮೆಗೆ ಬಿದ್ದಿದ್ದಾರೆ. ಕುಶಲೋಪರಿ, ಆತ್ಮೀಯತೆ, ಬಾಂಧವ್ಯ ಮುಂತಾದವುಗಳು ಅರ್ಥ ಕಳೆದುಕೊಂಡು ದುಡಿಮೆ ಎಂಬ ಚಕ್ರದಡಿ ಸಿಕ್ಕಿ ನಲುಗಿ ಹೋಗಿದೆ. ದುಡಿಯುವ ಮಗನಿಗೆ ತಂದೆ-ತಾಯಿಗಳು ನಗಣ್ಯರಾಗಿರುವುದು ಹಾಗಿರಲಿ ವೇಳಾತೀತ ದುಡಿಮೆಯ ಬದುಕಿನಲ್ಲಿ ಮಕ್ಕಳ ಒಡನಾಟದಿಂದಲೂ ವಂಚಿತರಾಗಿ, ಆ ಮಕ್ಕಳಿಗೆ ತಂದೆ-ತಾಯಿಗಳಿದ್ದೂ ಪ್ರೀತಿ ಕಾಣದೆ ಅನಾಥ ಬದುಕನ್ನೆದುರಿಸುತ್ತಿವೆ.

ಹಣ-ಮನುಷ್ಯನ ಜೀವನದಲ್ಲಿ ಅತ್ಯಂತ ಪ್ರಮುಖ ಸ್ಥಾನದಲ್ಲಿ ಕುಳಿತು, ಕುರುಡು ಕಾಂಚಾಣ ಕುಣಿ ಕುಣಿದು ಕಾಲಿಗೆ ಬಿದ್ದವರ ತುಳಿದು ಹಾಕುತ್ತಿದೆ. ಪಗಾರ ಹೆಚ್ಚಾದಂತೆಲ್ಲ ಬೆಂಗಳೂರಿನಂತಹ ನಗರಗಳಲ್ಲಿ ಬೆಲೆಗಳು ಗಗನಕ್ಕೇರಿದ್ದು, ಬೀಸುವ ಗಾಳಿಯಲ್ಲಿಯೂ ಹಣದ ಝುಣಝುಣ ಸದ್ದು ಕೇಳಿ ಬರುತ್ತಿದೆ.

60-70ರ ದಶಕದಲ್ಲಿ ಸಾವಿರವೆನ್ನುತ್ತಿದ್ದವರ ಬಾಯಲ್ಲಿ ಇಂದು ಕೋಟಿ ಕುಣಿದಾಡುತ್ತಿದೆ. ಪಟ್ಟಾಭಿರಾಮಾಚಾರ್ಯರ ತಂದೆ ತಾಯಿಗಳು ವೈಕುಂಠ ಲೋಕಕ್ಕೆ ತೆರಳಿದ್ದಾರೆ. ವಿಶ್ರಾಂತರಾದ ಆಚಾರ್ಯರು ಪೂಜೆ-ಪಾರಣೆಗಳಲ್ಲಿ ತೊಡಗಿ ಹುಟ್ಟಿದ ಮನೆಯನ್ನು ತೊರೆಯಲು ಮನಸ್ಸು ಬಾರದಾಗಿ ತೊಳಲಾಡುತ್ತಿದ್ದಾರೆ. ಮಗನೊಬ್ಬ ಡೆಟ್ರಾಯಿಟ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿದ್ದರೆ, ಮಗಳು-ಅಳಿಯ ಬೆಂಗಳೂರಿನಲ್ಲಿ ಇನ್ ಫೋಸಿಸ್‌ನಲ್ಲಿದ್ದಾರೆ, ಹಳೆ ಮನೆ ಮಾರಿ ಹೊಸ ಬಡಾವಣೆಗೆ ಹೋಗಿ, ಹೊಸ ರೀತಿಯ ವಿಶಾಲವಾದ ಮನೆ ಕಟ್ಟಿಸಲು ಮಗ ಹುನ್ನಾರ ನಡೆಸಿದ್ದಾನೆ. ಮಕ್ಕಳ ಅಭಿರುಚಿ ಬದಲಾದ ಕಾಲದ ಮುಂದೆ ಆಚಾರ್ಯರು ಸೋತು ಹೋಗಿದ್ದಾರೆ.

ಪಟ್ಟಾಭಿರಾಮಾಚಾರ್ಯರ ಬಣ್ಣಗೆಟ್ಟ 35X45ರ ಮನೆಯನ್ನು ಮಾರ್ವಾಡಿಯೊಬ್ಬ ಒಂದುವರೆ ಕೋಟಿಗೆ ಕೊಂಡಿದ್ದಾರೆ!! ಇದೇ ರೀತಿ ಹಲವಾರು ಸಂಪ್ರದಾಯಸ್ಥ ಕುಟುಂಬಗಳಲ್ಲಿ ಬದಲಾವಣೆಯ ಗಾಳಿ ಬೀಸಿ ಮಕ್ಕಳ ಬಲವಂತಕ್ಕೋ, ಹೆಚ್ಚಿಗೆ ಹಣ ಸಿಗುತ್ತದೆ ಎಂಬ ಕಾರಣಕ್ಕೋ, ತಲೆತಲಾಂತರದ ಹಳೆಯ ಮನೆಗಳನ್ನು ಮಾರಿ ಹೊಸ ಬಡಾವಣೆಗಳಲ್ಲಿ ಮನೆ ಕಟ್ಟಿಸಿ, ಕೈಯಲ್ಲಿ ಕೊಂಚ ಕಾಸು ಉಳಿಸಿಕೊಂಡ ಕುಟುಂಬಗಳ ಹಿರಿಯರು, ಮಕ್ಕಳು ಕೊಂಡ ಕಾರಿನಲ್ಲಿ ಓಡಾಡುತ್ತಾ ನೆಮ್ಮದಿಯ ಜೀವನ ಕಂಡು ಕೊಂಡಿದ್ದಾರೆ.

ಬೆಂಗಳೂರಿಗೆ ಹಿಂದಿರುಗಿದ ಆಚಾರ್ಯರ ಮಗ ಈಗ ಉತ್ತರ ಹಳ್ಳಿಯಲ್ಲಿ 100 X 120ರ ಗೇಟೆಡ್ ವಿಲ್ಲಾ ಖರೀದಿಸಿದ್ದಾನೆ. ಆಫೀಸು, ಮೀಟಿಂಗು, ಕ್ಲಬ್ಬು, ವಿದೇಶದ ಟೂರ್ ಎಂದು ಯಾವಾಗಲೂ ಬಿಜಿಯಾಗಿದ್ದರೆ ಆಚಾರ್ಯರು ಮಾತ್ರ ಪೂರ್ವಕ್ಕೆ ಮುಖ ಮಾಡಿದ ಬಂಗಲೆಯ ವಿಶಾಲವಾದ ದೇವರ ಮನೆಯಲ್ಲಿ ರೇಷಿಮೆ ಮೊಗಟದಿಂದ ಕಚ್ಚೆ ಹಾಕಿ ಪದ್ಮಾಸನದಲ್ಲಿ ಕುಳಿತು ರಾಮಾಯಣದ ಸುಂದರ ಕಾಂಡದಲ್ಲಿ ಬರುವ ಸೀತೆಯ ಸ್ಥಿತಿಯನ್ನು ವರ್ಣಿಸುತ್ತಾ ''ಸೀತೆಯು ರಾಕ್ಷಸ ಸ್ತ್ರೀಯರಿಂದ ಅಶೋಕ ವನದಡಿಯಲ್ಲಿ

ಸುತ್ತುವರೆಯಲ್ಪಟ್ಟಿದ್ದಾಳೆ. ಇಬ್ಬನಿಯಿಂದ ಕಳೆಗುಂದಿದ ಕಮಲದಂತೆ ಬಾಡಿ, ದುಃಖ ಪರಂಪರೆಯಿಂದ ನೊಂದು ಕಂಗೆಟ್ಟು ಮರದಡಿಯನ್ನಾಶ್ರಯಿಸಿ ಗಂಡು ಚಕ್ರವಾಕ ಪಕ್ಷಿಯಿಲ್ಲದ ಹೆಣ್ಣು ಚಕ್ರವಾಕ ಪಕ್ಷಿಯಂತೆ ಹಂಬಲಿಸುತ್ತಿದ್ದಾಳೆ. ಈ ಸಮಯದಲ್ಲಿ ಸಮಸ್ತ ಪ್ರಾಣಿಗಳ ಶೋಕಗಳನ್ನು ಪರಿಹರಿಸುವ ಪುಷ್ಪಗಳಿಂದ ಪರಿಪೂರ್ಣವಾದ ಈ ಅಶೋಕ ವೃಕ್ಷಗಳು ಈಕೆಯ ಮನಸ್ಸಿಗೆ ವ್ಯಥೆಯನ್ನುಂಟು ಮಾಡುವುದಲ್ಲದೆ ಸುಖವನ್ನುಂಟು ಮಾಡಲಾರವು'' ಎಂದು ಪಟ್ಟಾಭಿರಾಮಾಚಾರ್ಯರು ಓದಿ ಹೇಳಿದ್ದಕ್ಕೆ, ಕಾಂಚೀಪುರದ 9 ಮೊಳೆ ಸೀರೆಯನ್ನು ಕಚ್ಚೆಯುಟ್ಟು ಕುಳಿತ ಇವರ ಹೆಂಡತಿ ಸೇತೂಬಾಯಿಯವರು, ಸೀತೆಯ ಸ್ಥಿತಿ ಕೇಳಿ ತಡೆಯಲಾರದ ದುಃಖದಿಂದ ಕಣ್ಣಂಚಿನಿಂದ ಹೊರಬಿದ್ದ ಹನಿಗಳು ಕೆಳಗೆ ಬೀಳದಂತೆ ಸೆರಗಿನ ತುದಿಯನ್ನು ಉಂಡೆಮಾಡಿ ಕಣ್ಣುಗಳನ್ನು ಒತ್ತುತ್ತಾ, ದೇವರ ಮನೆಯೊಳಗಿದ್ದ ಪಟ್ಟಾಭಿರಾಮನ ಫೋಟೋವನ್ನೇ ದುಃಖದಿಂದ ದೃಷ್ಟಿಸುತ್ತಾ ಕುಳಿತಿದ್ದಾರೆ.




'ಮುಕ್ಕಾಲು ಟೆಂತ್' ಹೋಗಿದೆ....
ಇನ್ನೊಂದು 'ಕ್ವಾರ್ಟರ್' ಬಗ್ಗಿಸು...

# ಬಾಣಸಿಗೋಪಾಖ್ಯಾನ

**- ಎಚ್.ಆರ್. ಹನುಮಂತ ರಾವ್**

ಪ್ರಶ್ನೆ : ಈ ಬರಹ ಬರೆಯುತ್ತಿರುವ ನೀವು ಅಡಿಗೆ ಭಟ್ಟರೆ? ನಮಗೆ ಅದರ ಅವಶ್ಯಕತೆಯಿಲ್ಲ.

ನಾನು : ಕ್ಷಮಿಸಿ, ಖಂಡಿತ ಅಲ್ಲ, ಅಡಿಗೆಯ ವಿಚಾರದಲ್ಲಿ ಅತ್ಯಂತ ಹಿಂದುಳಿದ ಪಂಗಡದವನು. ನನ್ನ ಜ್ಞಾನ ಹೆಚ್ಚೆಂದರೆ ಊಟದ ಸವಿಯನ್ನು ಅನುಭವಿಸುವುದಷ್ಟೆ

ಪ್ರಶ್ನೆ : ಹಾಗಿದ್ದ ಮೇಲೆ ಈ ತಲೆ ಬರಹದಿಂದ ನಾವು ಅಂದರೆ ಓದುಗರಿಗೆ ಆಗಬೇಕಾದ್ದೇನು? ಪಾಕಶಾಸ್ತ್ರದ ಬಗ್ಗೆ ಬೇಕಿದ್ದರೆ ನಾವು 'ಬೊಂಬಾಟ್ ಭೋಜನ'ದ ಚಂದ್ರು ಅವರನ್ನು ಕೇಳಿ ತಿಳಿಯುತ್ತೇವೆ, ಅದೂ ಬೇಡ, ಯಾವುದೇ ಕನ್ನಡ ಚಾನೆಲ್ಗೆ ಮಧ್ಯಾನ್ಹ ತಿರುಗಿಸಿದರೆ ಇಲ್ಲವಾ ಹೋಟೆಲ್ನಲ್ಲಿ ಅವರ 'ಬೊಂಬಾಟ್ ಊಟದ ಸವಿಯೂಟ' ಕಾರ್ಯಕ್ರಮವಿದ್ದರೆ ಅಲ್ಲೇ ತಿಳಿಯುತ್ತೇವೆ. ನಿಮ್ಮ ಈ ಪುರಾಣ ಯಾರಿಗೆ ಬೇಕು?

**ಎಲ್ಲರನ್ನೂ ಮಾತಿನಲ್ಲೇ ಬೇಯಿಸಿಟ್ಟಾಗ....**

ನಾನು : ಕ್ಷಮಿಸಿ, ನಿಮಗೆ ತೊಂದರೆ ಕೊಡುವ ಜಾಯಮಾನದವನಲ್ಲ ನಾನು...

ಪ್ರಶ್ನೆ : ಹಾಗಿದ್ದ ಮೇಲೆ ನಿಮ್ಮ ಲೇಖನಿ ಪಕ್ಕಕ್ಕಿಟ್ಟು 'ರಿಟೈರ್' ಆಗಿರಿ. ನಮ್ಮ ತಾಳ್ಮೆಯನ್ನು ಪರೀಕ್ಷಿಸದಿರಿ.

ನಾನು : ನನ್ನ ಬದುಕಿನ ಜಂಜಾಟದಲ್ಲಿ ಸ್ವಲ್ಪ ಮಟ್ಟಿಗೆ 'ಟೈರ್ಡ್' ಆಗಿರುವುದೇನೋ ನಿಜವೆ. ಹಾಗೆಂದು ಉತ್ತರ ಕುಮಾರನಂತೆ 'ಬೀಟಿಂಗ್ ದಿ ರಿಟ್ರೀಟ್' ಮಾಡುವವನೂ ಅಲ್ಲ, ಸವೆದ ಟೈರುಗಳಂತೆ ರಿಟ್ರೆಡ್ಡೂ ಒಪ್ಪುವವನಲ್ಲ, ಬೇಕಿದ್ದರೆ ನನ್ನ ಸಹೋದ್ಯೋಗಿಗಳನ್ನೇ ಕೇಳಿರಿ. ''ಇವನು ಬಲು ಗಟ್ಟಿ ಪಿಂಡ, ಸುಲಭಕ್ಕೆ ಸೋಲುವವನಲ್ಲ' ಎಂದು ನನ್ನ ಬೆನ್ನು ಹಿಂದೆಯೇ ಆಡಿಕೊಂಡವರಿದ್ದಾರೆ.

ಪೃಚ್ಛಕ 2: ನೀವು ಉದ್ದೇಶ ಪೂರ್ವಕವಾಗಿಯೇ ಈ ಬಗ್ಗೆ ಬರೆಯಲು ಕಾಡುವವರಾದರೆ, ಬೇರೆ ಪತ್ರಿಕೆಯನ್ನವಲಂಬಿಸಿ, ಈ ಪತ್ರಿಕೆಯ ಓದುಗರಾದ ನಮ್ಮನ್ನು ಬಿಟ್ಟುಬಿಡಿ.

ನಾನು : ಆ ಮಾತು ಬಿಡಿ. ಈ ಸಿಹಿ ಕಹಿ ಚಂದ್ರು ನಾಟಕ, ಸಿನಿಮಾ ರಂಗದಲ್ಲಿ ಪ್ರಸಿದ್ಧಿ ಯಾದವರು, ಮುಂದೊಂದು ದಿನ ಡಾಕ್ಟರೇಟ್ ಕೂಡ ಪಡೆಯುವರೇನೋ. ಪಾಪ ಪಾಂಡು, ಸಿಲ್ಲಿ ಲಲ್ಲೀ ಇತ್ಯಾದಿ ಸೀರಿಯಲ್‌ಗಳಿಂದಾಗಿ, ಇವರ ಪ್ರತಿಭೆಗೆ

ಇನ್ನಷ್ಟು ಮೆರಗು ಬಂದಿರುವುದೇನೋ ನಿಜ. ಆದರೆ, ಇದೀಗ, ಈ 'ಬೊಂಬಾಟ್ ಊಟ'ದ ಆಟದಲ್ಲೂ ಟಿ.ವಿ ಚಾನೆಲ್ಗಳ ಡಾರ್ಲಿಂಗ್ ಆಗುತ್ತಿದ್ದಾರೆ ಎಂದರೆ!?

ಪೃಚ್ಛಕ 1: ನಿಮಗೇನು ಸಂಕಟ ಅದರಿಂದ? ನೀವು ಈ ರೀತಿ ನಮ್ಮ ಔದಾರ್ಯವನ್ನ ಹಾಳು ಕೆಡವಬೇಡಿ.

ನಾನು : ಅಡಿಗೆ ನಮ್ಮ ಜೀವನದ ದಿನನಿತ್ಯದ ಒಂದು ಅತ್ಯಂತ ಮಹತ್ವಗಳೊಲ್ಲೊಂದು. ನಿಮ್ಮ ಹೆಂಡತಿ ಇಲ್ಲವೇ ಅಡಿಗೆ ಭಟ್ಟ ನಿಮ್ಮ ಆರೋಗ್ಯ ಸರಿಯಾಗಿಟ್ಟಿರಲೂ ಅಥವಾ ಹಾಳುಗೆಡವಲೂ ಕಾರಣ, ತಿಳಿದಿದೆಯೇ? ಇಡೀ ಪ್ರಪಂಚದಲ್ಲಿ ಮನುಷ್ಯನ ಉನ್ನತಿಗೂ, ಅಧೋಗತಿಗೂ ಇವರಿಬ್ಬರೇ ಕಾರಣ ಎಂದು ನನ್ನ ಅಭಿಪ್ರಾಯ.

ಪೃಚ್ಛಕ 2: ಹಾಗಿದ್ದ ಮೇಲೆ ನೀವೇ ಅಡಿಗೆ ಮಾಡಿಸಿ ಇಲ್ಲವೇ ಮಾಡಿ, ಬಡಿಸಿ, ಬಡಿಸಿಕೊಂಡು ನಿಮ್ಮ ಹೆಂಡತಿಯನ್ನಷ್ಟೇ ಮೆಚ್ಚಿಸಿ ಇಲ್ಲ ಕಾಡಿಸಿ. ನಮ್ಮನ್ನಲ್ಲ...

ಪೃಚ್ಛಕ 1: ನಿಮ್ಮದು ಅತಿರೇಕದ ಮಾತು, ನ್ಯೂಟನ್, ಜಾನ್ ಫೋರ್ಡ್, ಮರ್ಲಿನ್ ಮನ್ರೋ, ಐನ್ಸ್ಟನ್, ಗಾಂಧಿ, ಬುದ್ಧ, ಭಟ್ಟ ಭಾಸ್ಕಾರಾಚಾರ್ಯ, ಕುವೆಂಪು ಮುಂತಾದವರುಗಳು ರಸ ಭೋಜನ ಬಡಿಸಿಸಿಕೊಂಡೇ ಪ್ರಸಿದ್ಧಿಯಾದರೆಂದು ನಿಮ್ಮ ಅನಿಸಿಕೆಯೇ?

ನಾನು : ನಿಮ್ಮ ತರ್ಕ ಒತ್ತಟ್ಟಿಗಿರಿಲಿ, ನೀವು 'ಬಡಿಸಿ' ಎಂದಾಗ ಜ್ಞಾಪಕಕ್ಕೆ ಬಂತು ನೋಡಿ. ಪ್ರೊ ಎ.ಎನ್. ಮೂರ್ತಿರಾಯರು ಒಂದೆಡೆ ಬರೆಯುತ್ತ, ವಿ.ಸೀ.ಯವರನ್ನು ಒಂದು ಬಾರಿ ಊಟಕ್ಕೆ ಕರೆದಿದ್ದರಂತೆ. ಬಡಿಸುವಾಗ, ದೋಸೆಯ ಬಗ್ಗೆ ಮಾತು ಬಂದು, ಒಂದು ಪಿಹೆಚ್.ಡಿ.ಯ ಸಂಶೋಧನೆಗೆ ಸಾಕಾಗುವಷ್ಟರ ಮಟ್ಟಿಗೆ ವಿಚಾರವನ್ನು ವಿಮರ್ಶಿಸಿದರೆಂದಿದ್ದಾರೆ. ಸ್ವತಃ ವಿ.ಸೀ.ಯು ಕೂಡ ದೋಸೆಯ ಬಗ್ಗೆ ಮೂರು ಸಾವಿರ ಪದಗಳಷ್ಟು ವಿಸ್ತೃತ ಪ್ರಬಂಧವನ್ನು ಬರೆದಿದ್ದಾರೆ ಗೊತ್ತಾರಾಯರೆ?

ಪೃಚ್ಛಕ 2: ಮತ್ತೆ ಅದೇ ಪುರಾಣ. ಅಲ್ರೀ, ಹಿಂದೆ 'ಬರಹಗಾರನ ಬವಣೆ' ಎಂಬ ಲೇಖನ ಪತ್ರಿಕೆಯಲ್ಲಿ ಬರೆದು ನಮ್ಮ ಹಣೆ ಬರಹವನ್ನ ಹಾಳ್ಕೆಡವಿದಿರಿ. ಇನ್ನೂ ಸಾಲದೇ?

ನಾನು : ಸಾಧ್ಯವಿಲ್ಲ ಬಿಡಿ, ನಾನೇನೂ ಬ್ರಹ್ಮನಲ್ಲ, ಅಷ್ಟಕ್ಕೂ 'ವಿಧಿ ಲಿಖಿತ' ಅನ್ನುವ ಮಾತುಂಟಲ್ಲವಾ? ಮರೆಯಬೇಡಿ, ಅಡಿಗೆ ಮಾಡಲು ಕಲಿತ ಭೀಮ ಯುದ್ಧದಲ್ಲೂ ಅಷ್ಟೇ ನಿಪುಣನಾದ! ಹಾಗಾದರೆ ಅದು ಅವನ ಹಣೆ ಬರಹವೋ? ಅವನು ಜೀವನದಲ್ಲಿ ಕಷ್ಟಪಟ್ಟು ಸಾಧಿಸಿದ್ದಲ್ಲವೋ?

ಪೃಚ್ಛಕ 3: ಈಚೆಗೆ, ಜಯಲಲಿತರ ಬಗ್ಗೆ ತೀರ್ಮಾನವೊಂದು ಅವರ ಗಳಿಕೆಯ ಬಗ್ಗೆ ಪ್ರಕಟವಾಗಿದೆಯಲ್ಲವೇ? ಅದು ಕೂಡ ಅವರ ಹಣೆ ಬರಹವನ್ನು ಕುರಿತಾದ್ದೇ. ತಮ್ಮ ಹಣೆ ಬರಹ ತಾವೇ ಬರೆದುಕೊಂಡಂತಾಗಲಿಲ್ಲವೇ?

ಪೃಚ್ಛಕ 2: ನಿಮಗೂ ಆ ಪರಿಸ್ಥಿತಿ ಬರಬಾರದೆಂದೇ, ಇಲ್ಲಿಗೇ ನಿಲ್ಲಿಸಿ, ಮುಂದಿನ ಕೆಲಸ ನೋಡಿ.

ನಾನು : ಆಕೆಯ ಮಾತು ಬೇಡ. 'ಪೆನ್ ಇಸ್ ಮೈಟಿಯರ್ ದಾನ್ ಸ್ವೋರ್ಡ್' ಅನ್ನುವ ಮಾತಿದ್ದರೂ ನನ್ನ ಲೇಖನದಿಂದ ನಿಮಗೇನೂ ಬವಣೆಯಾಗಲಾರದು. ಏನಿದ್ದರೂ ಸಂಪಾದಕರ ದೃಷ್ಟಿ ಕಸದ ಬುಟ್ಟಿಯಿಂದ ಮೇಜಿಗೂ, ಮೇಜಿನಿಂದ ಕ.ಬು.ಗೂ ಹೊರಳಬಹುದಷ್ಟೆ. ಆದರೆ ನೋಡಿ, ಆಕೆಯ ಊಟ ಜೈಲಿನಲ್ಲಿರುವವರೆಗೆ ಮೊದಲಿನಂತೆ ಬೊಂಬಾಟಾಗಿರಲಾರದಷ್ಟೆ?

ಪೃಚ್ಛಕ 1: ಸಾಕು ಬಿಡಿ, ಆಕೆಯ ಹಣೆ ದೊಡ್ಡದಾಗಿದೆ, ಆಕೆ ಇನ್ನಷ್ಟು ಬರೆದುಕೊಳ್ಳಲೂ ಜಾಗವಿದೆ, ಬಂಗಾರದ ತಟ್ಟೆಯಲ್ಲೂ ಊಟ ಮಾಡುತ್ತಾಳೆ. ಆದರೆ ನಿಮ್ಮಿಂದಾಗಿ ನಮಗೆ.....

ನಾನು : ಈ ಊಟದ ಬಗ್ಗೆ ಮಾತಾಡುವಾಗ, ''ರಂಗ ಬಿನ್ನಪ'' ಖ್ಯಾತಿಯ ದಿ|| ಎಮ್.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು'ವಿನಲ್ಲಿಯ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ಹೇಳಲೆ? 'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲಾರದು' ಗಾದೆ ನೆನಪಿಸುವ ಈ ಕಥೆ....

ಪೃಚ್ಛಕ 3: ಸತ್ತು ಸ್ವರ್ಗದಲ್ಲಿರುವ ಆ ಪ್ರಾತಃ ಸ್ಮಾರಣೀಯರನ್ನೇಕೆ ಈಗ ಎಳೆದು ತಂದು ಅವರ ಆತ್ಮಕ್ಕೆ ಹಿಂಸಿಸುವಿರಿ? ನಮಗೂ ಅಷ್ಟೆ ಉಸಿರಾಡಲು ಬಿಡಿ. ನಮ್ಮ ಬಳಿ ಯಾವ ತಲೆನೋವಿನ ಮಾತ್ರೆಯು ಇಲ್ಲ, ಊಟದ ಬಗ್ಗೆ....

ನಾನು : ಹೌದೌದು, ಆ ಬಗ್ಗೆಯೇ ನಾನು ಹೇಳಬೇಕೆಂದಿದ್ದುದು. ನನಗೆ ಅಪರೂಪವಾಗಿ ಅಡಿಗೆ ಮನೆಯ ಕೆಲಸ, ಹೆಂಡತಿ ತೌರಿಗೆ ಹೋದಾಗ, ಅದು ಬಲು ಅಪರೂಪ – ಬೀಳುತ್ತದೆ. ಹೋಗುವಾಗ, ನನಗೆ ಒಂದು ಪುಸ್ತಕ ಬರೆಯುವಷ್ಟಾದರೂ ನನ್ನ ನಿತ್ಯ ಕರ್ಮಗಳ ಪಟ್ಟಿಯನ್ನು ಒಪ್ಪಿಸಿ ಹೋಗುತ್ತಾಳೆ, 'ಅಡಿಗೆ ನೀವೇ ಮಾಡಿಕೊಳ್ಳಿ, ಹೋಟೆಲಲ್ಲಿ ತಿಂದು ಆರೋಗ್ಯ ಕೆಡಿಸಿಕೊಳ್ಳಬೇಡಿ, ಮೊದಲೇ ನಿಮಗೆ ಅಸಿಡಿಟಿ ಬೇರೆ, 'ಸಂಜೆಯಾಗುತ್ತಲೇ ಸ್ನೇಹಿತರೊಡನೆಕಾಲ ಹರಣ ಮಾಡಿ, ಮನೆಗೆ ತಡವಾಗಿ ಸೇರುವ ಚಾಳಿಬಿಟ್ಟು ಮನೆ ಬೇಗ ಸೇರಿ, ಪಕ್ಕದ್ಮನೆ ರಂಗಪ್ಪನ ಜೊತೆ ಸೇರಿ ಇಸ್ಪೀಟ್ ಆಡೋದು ನಂಗೇನಾದ್ರೂ ಗೊತ್ತಾದ್ರೆ ನಿಮ್ಮದೃಷ್ಟ ನೆಟ್ಟಗಿರಲ್ಲ ಜೋಕೆ, ಹೊರಗೆ ಹೋದಾಗ ಬೀಗಗಳನ್ನು ಹಾಕೋದ್ಮರೀಬೇಡಿ, 'ನೋಡಿ,

**ಅಭ್ಯಾಸ**

ಸೋಮವಾರ
ಸೋಮಾರಿ
ಆದರೆ
ಮಂಗಳವಾರ
ಮಂಗ

ಆ ಕಡೇ ಮನೆ ಸುಗುಣಾ ಜತೆ ಮಾತ್ಗೆ ನಿಲ್ಬೇಡಿ, ಹಾಳಾದವ್ವು ಕಣ್ಣು ದೃಷ್ಟಿ ಒಳ್ಳೆಯದಲ್ಲ.' 'ನಿಮಗೆ ಈ ವಯಸ್ಸಿಗೇ ಮರೆವು ಖಾಯಿಲೆ ಬೇರೆ ಬಂದುದು ನನ್ನ 'ಹಣೆಬರಹ', ಮನೇಕಡೇ 'ಜೋಪಾನ,' 'ಬೆಂಗಳೂರಲ್ಲಿ ಇದೀಗ ಒಳ್ಳೆಯವರಿಗಿಂತ ಸುಳ್ಳರು, ಕಳ್ಳರೇ ಜಾಸ್ತಿಯಾಗುತ್ತಿದ್ದಾರೆಂದು ಆಚೆ ಮನೆ ವೆಂಕಟ ಸುಬ್ಬಿ ನಿಮ್ಮೆದುರ್ಗೇ ಹೇಳಿದ್ದು ಗೊತ್ತಲ್ವಾ?' ಎಂದೆಲ್ಲ ಒದರಿಕೊಂಡೇ ಹೋಗುತ್ತಾಳೆ. ನನ್ನ ಹೆಂಡತಿ ಈ ಸುಬ್ಬಿಯನ್ನೇನೂ ಹಚ್ಚಿಕೊಂಡಿಲ್ಲ. ನನಗೂ ಅಷ್ಟೆ. ಆಕೆಯದು ಬರೀ ಕುಹುಕವಷ್ಟೇ. ಇಬ್ಬರ ಮಧ್ಯೆ ಕಿಚ್ಚು ಹಚ್ಚುವುದರಲ್ಲಿ ಮಾತ್ರ ಈ ಸುಬ್ಬಿ ಎತ್ತಿದ ಕೈ. ಆದರೂ ಆಕೆಯ ಹೆಡ್ಲೈನ್ ವಾರ್ತೆಗಳೆಂದರೆ ಟೀವೀಲಿ ಬರೋ ಬ್ರೇಕಿಂಗ್ ನ್ಯೂಸ್ ತರಹ...

ಪೃಚ್ಛಕ 2: ಏನಾದ್ರೂ, ಇಷ್ಟೆಲ್ಲ ವಾರ್ನಿಂಗುಗಳ ಮರೆತು ಕಸಿವಿಸಿ ಮಾಡಿಕೊಳ್ಳುವಿರಲ್ಲವೆ? ಬಿಡಿ, ಹೆಚ್ಚುಕಮ್ಮಿ ಎಲ್ಲ ಗಂಡಂದಿರ ಸಾಮಾನ್ಯ ಕೆಟ್ಟ ಚಾಳಿ. ''ಹೆಂಡತಿಯೊಬ್ಬಳು ಮನೆಯಲಿ ಇಲ್ಲವೋ, ಎಂದೆಂದಿಗೂ ನಾ 'ಶೂನ್ಯಕೆ' ಸಮವೋ'' ಎಂದು ನರಸಿಂಹ ಸ್ವಾಮಿಗಳು ಹಾಡಿದ್ದರೆ ಇನ್ನೂ ಚೆನ್ನಾಗಿತ್ತಲ್ಲವೇ?

ನಾನು : 'ಟೆಂಪೊರರಿ' ಅಡಿಗೆ ಭಟ್ಟನಾಗಲು ಸಾಕಷ್ಟು ಶ್ರಮ ಪಟ್ಟರೂ, ಅದು ಹೇಗೋ ಅನಾಹುತಗಳಾಗಿಬಿಡುತ್ತವೆ. ನೋಡಿ, ಉದಾಹರಣೆಗೆ ಬೆಳಗೆದ್ದು, ಕಾಫಿ ಮಾಡಲು ಗ್ಯಾಸ್ ಸ್ಟೋವ್ ಹೊತ್ತಿಸಲು, ಏನೇ ಉಪಾಯ ಹೂಡಿದರು ಹತ್ತುವುದೇ ಇಲ್ಲ. ಅದು ಹೇಗೋ ಆ ಸ್ಟೊವ್ಗೂ ತಿಳಿದು ಬಿಡುತ್ತದೆ ನಾನೊಬ್ಬ ಅಡಿಗೆ ಮನೆಗೆ ನಿರುಪಯೋಗಿ ವಸ್ತು ಎಂಬುದು! ಹೊರಗೆ ಹೋಗುವಾಗ ಅವಳಿಗೊಂದು ಕೆಟ್ಟ ಚಾಳಿಯೊಂದಿದೆ. ಮೊಬೈಲ್ ಫೋನನ್ನು ಬಳಿ ಇಟ್ಟಿರುವುದೇ ಅಪರೂಪ. ಅದೂ ಅವಳ ಸ್ನೇಹಿತರ, ಇಲ್ಲವೇ ಆತ್ಮೀಯರನ್ನು ಕಾಣಲು ಹೋದಾಗ, ಆ ಫೋನನ್ನು ಎಲ್ಲಿಯೋ ಬಿಟ್ಟು, ಅವಳ ಗಮನ ಬೇರೆಡೆಯೇ ಇರುತ್ತದೆ. ಈಗಲೂ ಹಾಗೆಯೇ ಆಯಿತು. ನನ್ನ ಫೋನಿನ ಕರೆಗಳ ಸಪ್ತ ಸ್ವರಗಳೂ ಸಂಗಮದಲ್ಲಿ ತೇಲಿ ಹೋದಂತಾಯಿತಷ್ಟೆ. ಕೊನೆಗೆ ಸಾಕಷ್ಟು ಬೆವರು ಸುರಿಸಿದ ನಂತರ, ಗ್ಯಾಸ್ ಎಲ್ಲೆಡೆ ಹರಡಿದ ಮೇಲೆ ಇದ್ದಕ್ಕಿದ್ದ ಹಾಗೆ 'ಬುಸ್' ಎನ್ನುವ ಭಾರಿ ಶಬ್ದದೊಡನೆ ಹಚ್ಚಿಕೊಳ್ಳುತ್ತದೆ. ಒಂದು ಬಾರಿ, ಗ್ಯಾಸು ಅದೆಷ್ಟು ಸೋರಿ ಹೋಯಿತೆಂದರೆ, ಗಾಬರಿಯಿಂದ ಪಕ್ಕದ ಮನೆ ಶ್ಯಾಮಲಾ ಆಂಟೀ ಬೀದಿಯವರನ್ನೆಲ್ಲ ಕರೆದು ತಂದಿದ್ದರು ಏನೋ 'ಅನಾಹುತವಾಗಿದೆ' ಎಂದು!

ಪೃಚ್ಛಕ 1: ಅದು ನಿಜ, ನನಗೂ ಆ ರೀತಿ ಆಗಿರುವುದುಂಟು.

ನಾನು : ಇದೀಗ ಕಾಫಿ ಪುಡಿಯ ಸರದಿ. ಪುಡಿಯ ಡಬ್ಬಿ ಖಾಲಿ. ಆಗಷ್ಟೆ ಜ್ಞಾಪಕಕ್ಕೆ ಬಂತು. ಅವಳು ಬಸ್ಸು ಹತ್ತುವಾಗ, ಹೇಳಿದ್ದಳು. 'ನೀವೀಗ ಮನೆಗೆ ಹೋಗುವಾಗ ಕಾಫಿ ಪುಡಿ ಕೊಂಡು ಹೋಗಿ. ಇಲ್ಲವಾದರೆ ನಾಳೆ ನಿಮಗೆ ಕಾಫಿಗೆ

ಹೋಟೆಲೇ ಗತಿ'. ದಾರಿಯಲ್ಲಿ ಸ್ನೇಹಿತರೊಬ್ಬರು ಸಿಕ್ಕಿ ಅದರ ಕಡೆ ಗಮನವೇ ಹೋಗಲಿಲ್ಲ.

ಪೃಚ್ಛಕ 3: ಟೀ ಮಾಡಬಹುದಿತ್ತಲ್ಲ. ಹಾರ್ಲಿಕ್ಸ್...

ಪೃಚ್ಛಕ 1: ಅದು ಹಾಗಿರಲಿ, ಆಮೇಲೆ ಊಟಕ್ಕೆ ಏನು ಮಾಡಿದಿರಿ?

ನಾನು : ಶಿವ, ಶಿವ ತರಕಾರಿಯೇನೋ ಹಚ್ಚಿದ್ದೆ, ಅಕ್ಕಿ, ಬೇಳೆ, ಎಣ್ಣೆ, ಸಾಸುವೆ ಎಲ್ಲ ಅವಳು ಹೇಳಿದ್ದ ಜಾಗದಲ್ಲಿಯೇ ಇದ್ದವು. ನಲ್ಲಿಯನ್ನು ತಿರುಗಿಸಿದೆ. ಜೋರಾಗಿ ಗಗನಚುಕ್ಕಿ, ಬರಚುಕ್ಕಿಯಂತೆ ಅದರಿಂದ ನೀರಲ್ಲ, ಹೊರಟಿದ್ದು ಬರೀ ಗಾಳಿ, ಆ ದಿನ ನೀರು ಸಪ್ಲೆ ಇಲ್ಲ. ಅವಳು ಶೇಖರಿಸಿಟ್ಟಿದ್ದು ನೀರು ಧಾರಾಳವಾಗಿ ಪಾತ್ರೆ ತೊಳೆಯಲು ಉಪಯೋಗಿಸಿಬಿಟ್ಟಿದ್ದೆ. ನೀರಿಗಾಗಿ ನೆರೆಹೊರೆಯನ್ನು ಆಶ್ರಯಿಸುವುದು ನನ್ನ ಜಾಯಮಾನವಲ್ಲ, ಸ್ನಾನವನ್ನ ಹೇಗೊ ಗೀಸರಿನಲ್ಲಳಿದುಳಿದಿದ್ದ ನೀರಲ್ಲೇ ಮುಗಿಸಿ ದಾರಿಯಲ್ಲಿನ 'ದರ್ಶಿನಿ'ಯಲ್ಲಿ ತಿಂಡಿ, ಕಾಫಿ ಮುಗಿಸಿ, ಕಛೇರಿಗೆ ಹೊರಟೆ. ಮತ್ತೊಂದು ದಿನ ಅಡಿಗೆ ಮಾಡಲು ಎಲ್ಲ ಸಾಮಗ್ರಿಗಳು ಸಿಕ್ಕು, ನೀರು ಓಲೆ ಎಲ್ಲಾ ಸಹಕರಿಸಿದುವೇನೋ ನಿಜ. ಖುಷಿಯಿಂದಲೇ ಉಡುಪಿ ಹೋಟೆಲ್ಲುಗಳಲ್ಲಿನ ಐತಾಳ, ಮೈಯ್ಯ, ಅಡಿಗ, ಕಾಮತ ಇತ್ಯಾದಿ ಬಾಣಸಿಗರಿಂದ ಬಂದಿಯಾಗಿರಬಹುದಾದ ನಳ, ಭೀಮರನ್ನು ಸ್ಮರಿಸಿ ಶುರು ಹಚ್ಚಿದೆ. ಎಲ್ಲ ರೂಲ್‌ಬುಕ್‌ನ ಆಧಾರದ ಮೇಲೆ ಮಾಡುತ್ತಿದ್ದುದು ನನಗೆ ಅಹಂ ಕೂಡ ಇತ್ತೇನೋ.

ಪೃಚ್ಛಕ 3: ಇದೀಗ 'ಭಲೇ' ಎನ್ನುವ ಸರದಿ ನಮ್ಮದು! ಆದರೆ, ಅದನ್ನು ತಿಂದವರು ನೀವೇನೂ? ಇನ್ಯಾರ ಮೇಲೂ ಪ್ರಯೋಗಿಸಲಿಲ್ಲವಷ್ಟೆ, ಹೊಟ್ಟೆಗೆ ಏನೂ ಆಗಲಿಲ್ಲವೋ?

ನಾನು : ತಾಳಿ ಸ್ವಲ್ಪ, ಅನ್ನ, ಬೇಳೆ ಬೇಯಿಸಲು ಕುಕರೇನೋ ಸರಿಯಾಗೇ ಜೋಡಿಸಿದ್ದೆ. ನೀರು ಕಮ್ಮಿ ಏನೋ ಎಂಬ ಅನುಮಾನ ಮೂಡಿ ಮತ್ತೆ ಮುಚ್ಚಳ ಜೋಡಿಸುವಾಗ ವೈಟ್ ವಾಲ್ವ್ ಮೇಲಿಡಲು ಮರೆತಿದ್ದೆ. ಆ ವೇಳೆಗೆ ತರಕಾರಿಯನ್ನು ಹಚ್ಚಿಸಿದ್ದವಾಗಿದ್ದೆ. ಕುಕರ್ ಕೂಗುವ ಉತ್ಸಾಹವೇ ತೋರಲಿಲ್ಲ. ಅರ್ಧಗಂಟೆ ಕಳೆದರೂ, ಇನ್ನು ಸ್ವಲ್ಪ ಹೊತ್ತು ಆಗಲಿ ಎಂದು ಆ ದಿನದ ಪೇಪರ ನೋಡಲು ಕೂತೆ ಕುಕರ್ ಕೂಗಿಗೆ ಕಾಯುತ್ತಾ. ಮನುಷ್ಯನಿಗೆ ತಾಮಸ ಗುಣ ಹ್ಯಾಗೆ ಕೂಡಿ ಬರುತ್ತದೆ ಎನ್ನುವುದಕ್ಕೆ ಈ ಪತ್ರಿಕೆ ಓದುವ ಹವ್ಯಾಸವೂ ಕೂಡಾ ಕಾರಣವೆನ್ನುವುದು ಈಗ ಮನದಟ್ಟಾಯಿತು! ಕುಕರ್ 'ಧಿಡೀರ್' ಜ್ಞಾಪಕಕ್ಕೆ ಬಂದು, ಕೂಡಲೆ ಹೋಗಿ ನೋಡಿದೆ. ಆವಿ ಒತ್ತಡ ನಿಯಂತ್ರಣವಿಲ್ಲದೆ, ಸಲೀಸಾಗಿ ಹೊರಗೆ ಹೋಗುತ್ತಾ, ನೀರು ಖಾಲಿಯಾಗುತ್ತಿತ್ತು. ಮುಚ್ಚಳವನ್ನು ತೆರೆದು ನೋಡಿದರೆ ಅನ್ನ ಹಾಗೂ ಬೇಳೆ ಅರ್ಧದಷ್ಟೂ ಬೆಂದಿರಲಿಲ್ಲ! ನಾನೀಗ ಮತ್ತೆ ನೀರು ಹಾಕಿ, ಬೇಯಿಸಲು ಕಾದಿರಬೇಕು. ಅದರ ಬದಲು ನೇರ ಒಲೆಯ

ಮೇಲಿಟ್ಟು ಪ್ರತ್ಯೇಕವಾಗಿ ಬೇಯಿಸಿದೆ ಹೇಗೆ ಹೇಗೋ. ಹೀಗೆ 'ಒಂಭತ್ತು, ಹತ್ತು ಊಟದ ಶಾಸ್ತ್ರ ಮುಗಿದಿತ್ತು'!

ಪೃಚ್ಛಕ 1: ಹೋಗಲಿ ಬಿಡಿ, ಕೊನೆಗೂ ನೀವು ಗೆದ್ದಿರಿ, ಆದರೆ ನಮ್ಮನ್ನು ಕೂಡ ನಿಮ್ಮ ಮಾತಲ್ಲೇ ಬೇಯಿಸಿಬಿಟ್ಟರಲ್ಲವೇ?

ಪೃಚ್ಛಕ 2: ಇದಕ್ಕೇ ಅಲ್ಲವೇ ನಮ್ಮ 'ಹಣೆ ಬರಹ' ಸರಿಯಿಲ್ಲ ಎನ್ನುವುದು? ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಬೆಳಿಗ್ಗೆನೇ 'ಕರಾಗ್ರೇ ವಸುಧೇ'... ಹೇಳಿಕೊಂಡು ಕೂಡ

ನಾನು : ಸಾಕು ಬಿಡಿ, ಇನ್ನು ಹೆಚ್ಚು ಮಾತಾಡಿ ಪ್ರಯೋಜನವೇನು? 'ಚಂದನ'ದ ಕಾರ್ಯಕ್ರಮವೊಂದರಲ್ಲಿ ಬರುವ 'ಅಡಚಣೆಗಾಗಿ ಕ್ಷಮಿಸಿ, ಸಾರಿ ಫಾರ್ ದಿ ಇಂಟರಪ್ಷನ್' ಜ್ಞಾಪಕಕ್ಕೆ ಬರುತ್ತದೆ. ನಿಮಗೆ ನನ್ನ ಮಾತಿಂದ ಅಡಚಣೆ ಆಗಿದ್ದರೆ ದಯವಿಟ್ಟು ಕ್ಷಮಿಸಿ.

ಪೃಚ್ಛಕ 3: ಇದೀಗ ನಾವು ನಿಮ್ಮಂಥವರ ಕೈಗೆ ಸಿಕ್ಕಿದರೆ ಯಾವ ಸೂತ್ರ ಅನುಸರಿಸಬೇಕೆಂದು ಮನದಟ್ಟಾಗಿದೆ ಬಿಡೀ.

★★★

''ರೀ, ಏಳ್ರೀ, ಟೀವೀಲಿ 'ಬೊಂಬಾಟ್ ಊಟ'ದ ಪ್ರೋಗ್ರಾಮ್ನ ಸೋಫಾದ್ಮೇಲೆ ನೋಡ್ತಾ ಕೂತೇ, ನಿದ್ದೆ ಮಂಪರ್ನಲ್ಲಿ ಅದೇನೇನೋ ಒದರ್ಕೊಳ್ತಾ ಇದ್ದೀರಲ್ಲಾ? ಆಟ, ಊಟ, ಅದೇನು? ಊಟ ರೆಡಿ ಇದೆ, ಎದ್ಬನ್ನಿ''....

## ಆತ್ಮೀಯ ಚಂದಾದಾರರ ಗಮನಕ್ಕೆ

ಚಂದಾ ಹಣವನ್ನು **ಮನಿ ಆರ್ಡರ್** ಮೂಲಕ ಕಳಿಸಬೇಡಿ ಎಂದು ವಿನಂತಿ.
ಬದಲಿಗೆ, ಚಂದಾ ಹಣವನ್ನು

**ಚೆಕ್ ಅಥವಾ ಡಿಡಿ**

ಮುಖಾಂತರ ಮಾತ್ರ

ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ

**ಈ ಕೆಳಗಿನ ವಿಳಾಸಕ್ಕೆ ಮಾತ್ರ ಕಳಿಸಿಕೊಡಿ.**

**ಕೊರವಂಜಿ ಅಪರಂಜಿ ಟ್ರಸ್ಟ್**

ನಂ. 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

# ಸಮಕಸವೇ ಜೀವನ

*''ಆಳುವ ಕಡಲೊಳು ತೇಲಿ ಬರುತಿದೆ.. ನಗೆಯ ಹಾಯಿದೋಣಿ''*

*- ಗೋಪಾಲಕೃಷ್ಣ ಅಡಿಗ*

**- ಗಣೇಶ ಹೆಗ್ಗಡೆ**

ಬಾಳ ಸಂಜೆಯ ಕಡಲಿನೊಳಗೆ ಮುಳುಗುವ ನೌಕೆಯಂತಿರುವ ನನಗೆ ಮತ್ತು ನನ್ನಂಥ ವೃದ್ಧರಿಗೆ, ಈ ಬದುಕಿನದಾರಿ ಅದೆಷ್ಟು ದೂರ ಕ್ರಮಿಸಿದೆ ಅನ್ನಿಸುತ್ತದೆ. 'ನಾವಿಬ್ಬರು ಮತ್ತು ನಮಗಿಬ್ಬರು' ಎನ್ನುವ ಇಂದಿನ ಕುಟುಂಬ ವ್ಯವಸ್ಥೆಯ ಅಲೆಯ ಹೊಡೆತಕ್ಕೆ ನಾವು ಬಲುದೂರ ಕೊಚ್ಚಿಹೋಗಿದ್ದೇವೆ. ಊರಾಚೆಯಿರುವ ಒಂದು ವೃದ್ಧಾಶ್ರಮ ಈಗ ನಮ್ಮ ತಂಗುದಾಣ. 'ನಾವಿಬ್ಬರು ಮತ್ತು ನಮಗೆಲ್ಲರೂ' ಎಂದು ಭಾವಿಸುತ್ತಿದ್ದ ಸುಭಿಕ್ಷಾ ಕಾಲದಲ್ಲಿ ಹುಟ್ಟಿ ಬೆಳೆದ ನಮಗೆ, ಆ ಕುಟುಂಬ ವ್ಯವಸ್ಥೆ ಈಗ ಕೇವಲ ಮರೀಚಿಕೆಯಷ್ಟೆ. ನಮ್ಮ ವೃದ್ಧಾಶ್ರಮದ ಅನತಿದೂರದಲ್ಲಿ ಕಾರ್ಪೋರೇಷನ್‌ಗೆ ಸಂಬಂಧಿಸಿದ ದೊಡ್ಡ ಜಾಗವಿದೆ. ಊರಿನ 'ಕಸ'ವನ್ನೆಲ್ಲಾ ಅಲ್ಲಿ ಲಾರಿಗಳಲ್ಲಿ ತುಂಬಿ ತಂದು ಸುರಿಯುತ್ತಾರೆ. ಒಂದು ಕಾಲಕ್ಕೆ ಉಪಯೋಗವಾಗುತ್ತಿದ್ದ ವಸ್ತು, ಇದ್ದಕ್ಕಿದ್ದಂತೆ ಒಂದು ದಿನ 'ಕಸ'ವಾಗಿ ಗೋಚರಿಸಿಬಿಡುವ ಈ ಪರಿವರ್ತನಾ ಕ್ರಿಯೆಯೇ ನನಗೆ ಬಲು ವಿಚಿತ್ರವೆನಿಸುತ್ತದೆ. ಇಂದಿನ ಪೀಳಿಗೆಯವರಿಗೆ ಇಂಥ 'ಕಸ'ಗಳ ಬಗ್ಗೆ ಯಾಕಿಷ್ಟು ತಾತ್ಸಾರವೋ ನನಗೆ ತಿಳಿಯದಾಗಿದೆ.

ಐದಾರು ತಿಂಗಳಿನ ಹಿಂದೆ ನಮ್ಮೂರಿನ ರಸ್ತೆ ರಸ್ತೆಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ, ಕಸ ಶೇಖರಣೆ ಹೆಚ್ಚಾಗಿ, ಸರಿಯಾಗಿ ಕಸ ವಿಲೇವಾರಿ ಮಾಡದ ಕಾರ್ಪೋರೇಷನ್ ವಿರುದ್ಧ, ಘನ ಸರ್ಕಾರದ ವಿರುದ್ಧ ಕಛೇರಿಯೆದುರು ಒಂದು ದೊಡ್ಡ ಪ್ರತಿಭಟನೆಯೇ ನಡೆದುಬಿಟ್ಟಿತ್ತು. ಧರಣಿ ಕುಳಿತಿದ್ದ ನೂರಾರು ಪ್ರಜೆಗಳ ಹಸಿವಿನ ಜವಾಬ್ದಾರಿ ಹೊತ್ತ ಶ್ರೀಮಂತ ವರ್ತಕರೊಬ್ಬರು ಊಟೋಪಚಾರದ ಹೊಣೆ ಹೊತ್ತು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಸಂಜೆಯ ವೇಳೆಗೆ, ಧರಣಿ ಸತ್ಯಾಗ್ರಹ ಮುಗಿದು, ಸಾರ್ಥಕ್ಯ ಮನೋಭಾವದಿಂದ 'ಜನ' ಕರಗಿಹೋಗಿದ್ದರು. ಆದರೆ ಆ ಧರಣಿ ನಡೆದ ಸ್ಥಳದಲ್ಲಿ, ಅವರು ಬಿಸಾಡಿ ಹೋಗಿದ್ದ ಎಂಜಲು ಪೇಪರ್ ತಟ್ಟೆಗಳು, ಟೀ, ಕಾಫಿ ಕುಡಿದು ಬಿಸಾಕಿದ ಪೇಪರ್ ಕಪ್‌ಗಳು, ಇನ್ನೂ ಸತ್ಯಾಗ್ರಹವನ್ನು (!) ಮುಂದುವರೆಸಿದ್ದವು. ಈ ಆಂದೋಲನ ಕಂಡು ಬೆಚ್ಚಿಬಿದ್ದ ಘನ ಸರ್ಕಾರ, ತುರ್ತು ಗಮನ ಹರಿಸಲೇ ಬೇಕಾಯಿತು. ಇದೇ ಸೂಕ್ತ ಸಮಯವೆಂದು ಬಗೆದು, ಕಾರ್ಪೋರೇಟರುಗಳು ಸರ್ಕಾರಿ ದುಡ್ಡಿನಲ್ಲಿ ವಿದೇಶ ಪ್ರವಾಸ ಮಾಡಿ, ಅಲ್ಲಿ 'ಕಸವಿಲೇವಾರಿ' ಪದ್ಧತಿಯ ಬಗ್ಗೆ ದೀರ್ಘ ಅಧ್ಯಯನ ನಡೆಸಿ ಸ್ವದೇಶಕ್ಕೆ ಮರಳಿದಾಗ ಒಂದು ದೊಡ್ಡ ಅಚ್ಚರಿಯೇ ಕಾದಿತ್ತು. ಪರಿಸ್ಥಿತಿ ತುಂಬಾ ಶಾಂತವಾಗಿತ್ತು. ತಮ್ಮ ಬೀದಿಗಳಲ್ಲಿ ಕಸ ಶೇಖರಣೆ ಹೆಚ್ಚಾಗಿದ್ದರೂ 'ಜನ'

ಕಸದೊಂದಿಗೆ ಬಾಳಲು ಕಲಿತಿದ್ದರು. ವಿಧಿಯಿಲ್ಲದೆ ಅದರ ವಾಸನೆಗೆ ಒಗ್ಗಿ ಹೋಗಿದ್ದರು.

ಹೀಗಿರುವಾಗಲೇ ಒಂದು ತಮಾಷೆಯ ಪ್ರಸಂಗ ನಡೆದಿದ್ದುದು. ಒಂದು ಮಧ್ಯಾಹ್ನ ಕಾರ್ಪೊರೇಷನ್‌ಗೆ ಸೇರಿದ, 'ಕಸ ವಿಲೇವಾರಿ' ಮಾಡುವ ಖಾಲಿ ಲಾರಿಯೊಂದು ನಮ್ಮ ವೃದ್ಧಾಶ್ರಮ ಗೇಟು ಬಳಿ ನಿಂತಾಗ, ಆಶ್ರಮದ ಮೇನೇಜರು ನಖಶಿಖಾಂತ ನಡುಗಿ ಹೋಗಿದ್ದರು.

''ನೀವ್ಯಾರೂ ದಯವಿಟ್ಟು ಆಚೆಗೆ ಹೋಗಬ್ಯಾಡಿ. ಬಾಗಿಲಿನಲ್ಲಿ 'ಕಸ'ದ ಲಾರಿಯೊಂದು ನಿಂತಿದೆ. ವ್ಯತ್ಯಾಸ ತಿಳಿಯದೆ ಅನಾಹುತವಾದೀತು?''

ಮೇನೇಜರನ ಈ ಅಣತಿ ಕೇಳಿ, ನನ್ನ ಸುಪ್ತ ಹೃದಯದಲ್ಲಡಗಿದ್ದ 'ಭಾವನಾಕಸ'ಗಳೆಲ್ಲಾ ಕಣ್ಣಂಚಿನ ಮೂಲಕ ಹೊರಬಂದಿತ್ತು. ಬಾಲ್ಯಾವಸ್ಥೆಯ ನೆನಪಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಎಂಥೆಂತ ಸ್ವಾತಂತ್ರ್ಯ ಪ್ರೇಮಿಗಳು, ದೇಶ ಭಕ್ತರು, ಪ್ರಾಮಾಣಿಕರೂ ಈ ನೆಲದಲ್ಲಿ ಹುಟ್ಟಿ, ಆದರ್ಶಪ್ರಾಯರಾಗಿ ಬದುಕಿ ಈ ನೆಲವನ್ನು ಮತ್ತಷ್ಟು ಪವಿತ್ರಗೊಳಿಸಿದ್ದರು. ಅಂಥ ಪ್ರಾತಃಸ್ಮರಣೀಯರು ಹುಟ್ಟು ಹಾಕಿದ ಆಲದ ಮರದ ಕೆಳಗೆ ಈಗ ಎಂಥೆಂಥಹ ನಾಯಿಕೊಡೆಗಳು ಹುಟ್ಟಿಕೊಂಡವು. ಅಂದಿನವರ 'ಸರಳ' ಜೀವನವೆಲ್ಲಿ? ಇಂದಿನ ರಾಜಕೀಯ ನಾಯಕರ 'ಸರಳು' ಜೀವನವೆಲ್ಲಿ? ಈಗ, ನಮ್ಮ ದೇಶದಲ್ಲಿ ತುಂಬಿ ತುಳುಕಾಡುತ್ತಿರುವ ರಾಜಕೀಯದ ಕೆಟ್ಟ ಕಸವನ್ನು ಗುಡಿಸಿ ಹಾಕಲು ಜೆ.ಪಿ., ಶಾಸ್ತ್ರೀಜಿ, ಗಾಂಧಿಜಿಯಂತಹವರು ಅದೆಷ್ಟು ಬಾರಿ ಮರುಜನ್ಮ ಪಡೆಯಬೇಕು? ಸೋಜಿಗದ ವಿಷಯವೆಂದರೆ ಈ ದೇಶದ ಸತ್ತಪ್ರಜೆಗಳಾದ ನಾವು ಅಷ್ಟೇನೂ ತಲೆಕೆಡಿಸಿಕೊಳ್ಳಬೇಕಿಲ್ಲ. ನಾವು ಅತ್ಯಂತ ಸಹನಾಶೀಲರು. ಭ್ರಷ್ಟಾಚಾರವೆಂಬ 'ಕಸ'ದ ತಿಪ್ಪೆಯೊಳಗಿನಿಂದ ಮೇಲೆದ್ದು ಬರಲು ನಾವು ಪ್ರಯತ್ನವೇ ಪಡುತ್ತಿಲ್ಲ. ಈ ದಿಶೆಯಲ್ಲಿ 'ಪೊರಕೆ'ಯೆಂಬ ಒಂದು ಕಸದ ವಸ್ತು ದೇಶದ ರಾಜಧಾನಿಯಲ್ಲಿ ದುರ್ವ್ಯವಸ್ಥೆಯ ಕಸವನ್ನೆಲ್ಲಾ ಒಮ್ಮೆಗೇ ಗುಡಿಸಿ ಹಾಕುವ ಅವಕಾಶವನ್ನು ಪಡೆದುಕೊಂಡಿತು. ನಮ್ಮ ರಾಜ್ಯದ ರಾಜಕಾರಣವೂ ಇದಕ್ಕೆ ಹೊಸತೇನಲ್ಲ. ಇಲ್ಲಿ ಎಷ್ಟು ರಾಜಕೀಯ ಪಕ್ಷಗಳಿವೆಯೋ ಅವುಗಳ ಬೆನ್ನೆಲುಬಾಗಿ ಅಷ್ಟೇ ಪ್ರಭಾವಿ ಮಠಗಳು, ಮಠಾಧೀಶರು ಇರುವುದು ಕಟುಸತ್ಯ. 'ಧರ್ಮೋರಕ್ಷತಿ..... ರಕ್ಷಿತಃ.....' ಎನ್ನುವ ಭಾವನೆ ಅಂದಿನ ಪೀಳಿಗೆಯ ಮಠಾಧೀಶರುಗಳಲ್ಲಿತ್ತು. ಈಗ ಕೊಂಚ ಅದಲು ಬದಲಾಗಿ, 'ಮಠೋರಕ್ಷತಿ..... ಚುನಾಯಿತಃ......' ಎಂಬ ರಾಜಕಾರಣಿಗಳ ಗೊಡ್ಡು ನಂಬಿಕೆ ನಿಜವಾಗಿ ಹೋಗಿದೆ. ಜಾತಿಯೆಂಬ 'ಕಸ'ದಗೋಡೆಯ ಆವರಣದೊಳಗೆ ಮಠಗಳನ್ನು ಕಟ್ಟಿಕೊಂಡು ರಾರಾಜಿಸುತ್ತಿರುವ ಇಂದಿನ ಮಠಾಧಿಪತಿಗಳ ಮನಃ ಪರಿವರ್ತನೆಯಾಗುವುದಾದರೂ ಎಂತು? ಎನ್ನುವ ಪ್ರಶ್ನೆ ನನ್ನನ್ನು ಅನುಗಾಲವೂ ಕಾಡುತ್ತಿರುತ್ತದೆ.

ಒಂದು ಮಠದಲ್ಲಿ, ತಲೆಮಾರಿನಿಂದ ತುಂಬಿ ಹೋಗಿದ್ದ ಹಳೆಯ ಸಾಮಾನುಗಳನ್ನು ತೂಕಕ್ಕೆ ಹಾಕಿ, ಕಸ ವಿಲೇವಾರಿ ಮಾಡಲು, ಗುಜರಿಯಿಂದ ಒಬ್ಬ ವ್ಯಾಪಾರಿಯನ್ನು ಕರೆಸಲಾಗಿತ್ತು. ಹಳೆಯ ಕಸದ ಸಾಮಾನಿನೊಳಗೆ ಒಂದು ದೇವರ ವಿಗ್ರಹವೂ ಅಲ್ಲಿ

ಸೇರಿಹೋಗಿತ್ತು. ಅಲ್ಲಿ ನಡೆದ ಒಂದು ಸಂಭಾಷಣೆ ಹೀಗಿತ್ತು:

''ಕ್ಯಾ ಸಾಮಿ..... ಇದು ನಿಮ್ದೂಕೆ ದೇವರ್ದು ಅಲ್ವಾ?''

''ಹೌದು ಸಾಬ್''

''ಇದ್ರ ಹೆಸ್ರು?''

''ಸರಸ್ವತಿ''

''ಇದನ್ನ ನೀವು ಮಾರ್ತೀರೀ? ಬಿಲ್‌ಕುಲ್ ನಾನು ತಗೋಳಲ್ಲ.''

ಆಶ್ಚರ್ಯಕರ ಸಂಗತಿಯೆಂದರೆ, ಆ ಮಠದ ಅಧೀನದಲ್ಲಿ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಮತ್ತಿತರ ವಿದ್ಯಾ ಸಂಸ್ಥೆಗಳಿದ್ದು, ಅಲ್ಲಿ ಸೀಟುಗಳೇ ಬಿಕರಿಗೆ ಇದ್ದುದು ಆ ಮುಗ್ಧ ಸಾಹೇಬನಿಗೆ ತಿಳಿಯದಾಗಿತ್ತು. ಇನ್ನು ಈ ಸರಸ್ವತಿ ವಿಗ್ರಹದ ಪಾಡು..... ನಮ್ಮ ಊಹೆಗೇ ನಿಲುಕದ್ದು.

## ಮಾಡಬಾರದಿತ್ತು

ಅವನು : ನೋಡು ಇವನು ಲಾಂಗ್ ಜಂಪ್‌ನಲ್ಲಿ ಚಿನ್ನ ಕಳೆದುಕೊಂಡನಂತೆ.

ಇವಳು : ಚಿನ್ನ ಹಾಕ್ಕೊಂಡು ಜಂಪ್ ಮಾಡಬಾರದಿತ್ತು.

ಮೊನ್ನೆ ನಾನಿರುವ ವೃದ್ಧಾಶ್ರಮಕ್ಕೆ ಯಾರೋ ದಂಪತಿಗಳು ಹಾಗೂ ಎಂಟು ವರ್ಷದ ಬಾಲಕ ನನ್ನನ್ನು ಹುಡುಕಿಕೊಂಡು ಬಂದಿರುವ ವಿಷಯ ಮೇನೇಜರಿನಿಂದ ತಿಳಿಯಿತು. ಸಂದರ್ಶಕರ ಕೊಠಡಿಗೆ ಬರಲು ನನ್ನನ್ನು ವಿನಂತಿಸಲಾಯಿತು. ನಾನು ಬಂದೊಡನೆಯೆ ಆ ದಂಪತಿಗಳು ಹಾಗೂ ಬಾಲಕ ವಿನಮ್ರಭಾವದಿಂದ ಕೈ ಜೋಡಿಸಿದರು. ಇಲ್ಲಿ ನಡೆದ ಸಂಭಾಷಣೆ ಹೀಗಿತ್ತು:

''ಹೇಳಿ, ನನ್ನಿಂದೇನಾಗಬೇಕು?''

''ಸರ್ ನಾವೊಂದು ಸಂದಿಗ್ಧ ಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ನಮ್ಮ ಮಗ, ಈ ಊರಿನ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಲ್ಲಿ ಎರಡನೇ ಸ್ಟ್ಯಾಂಡರ್ಡಿನಲ್ಲಿ ಓದುತ್ತಿದ್ದಾನೆ. ನಾಡಿದ್ದು ಅವನ ಸ್ಕೂಲ್‌ಡೇ ಪ್ರೋಗ್ರಾಮಿನಲ್ಲಿ ಶಾಲಾ ನಿಯೋಜಕರು ಒಂದು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. 'ಅಜ್ಜನೊಂದಿಗೆ ಹೆಜ್ಜೆ... ಅಜ್ಜಿಯೊಂದಿಗೆ ಗೆಜ್ಜೆ...' ಎಂಬ ಇಪ್ಪತ್ತು ನಿಮಿಷದ ಕಾರ್ಯಕ್ರಮದಲ್ಲಿ ತಾವು ಈ ಹುಡುಗನಿಗೆ 'ಅಜ್ಜ'ನಾಗಿ ಬರಲು ದಯವಿಟ್ಟು ಒಪ್ಪಿಕೊಳ್ಳಬೇಕು.''

''ಯಾಕೆ? ಈ ಮಗುವಿಗೆ ನಿಜವಾದ ಅಜ್ಜ..ಅಜ್ಜಿಯರಿಲ್ಲವೇ?''

''ಇದ್ದಾರೆ ಸರ್, ಆದರೆ ಅವರು ಈಗ ನಮ್ಮ ಜೊತೆಯಲ್ಲಿಲ್ಲ. ತಮ್ಮಂತೆಯೇ ಅವರು ವೃದ್ಧಾಶ್ರಮದಲ್ಲಿ ಬೇರೆ ಊರಿನಲ್ಲಿದ್ದಾರೆ.''

ಆ ದಂಪತಿಗಳ ಕೆಂಪಾದ ಮುಖ ನೋಡಲಾಗದೆ, ನಾನು ಒಂದು ನಿಮಿಷ ಕಣ್ಣು ಮುಚ್ಚಿಕೊಂಡಾಗ, ಗಾಬರಿಯಾಗುವ ಸರದಿ ಅವರದಾಯಿತು.

''ಸರ್, ತಾವು ಕೇಳಿದಷ್ಟು ದುಡ್ಡುಕೊಡಲು...''

''ಛೇ.. ಛೇ.. ಶಾಂತಂ ಪಾಪಂ'' ಎಂದು ಬಲವಾಗಿ ಕಿವಿ ಮುಚ್ಚಿಕೊಂಡೆ.

''ನನ್ನಂಥಹ 'ಕಸ'ದ ಮುಖ ಹೊತ್ತುಕೊಂಡವನಲ್ಲಿಯೂ 'ರಸ' ಕಂಡ ನಿಮ್ಮಂಥವರ ಕೈಯಿಂದ ದುಡ್ಡು ಇಸಿದು ಕೊಳ್ಳುವುದೇ?

ನೋಡಿ, ಈ ಮಗುವಿಗೆ ನಾನು ಇಪ್ಪತ್ತು ನಿಮಿಷವಷ್ಟೇ ಆನಂದಕೊಡಲು ಸಾಧ್ಯ. ಆದರೆ ಅದಕ್ಕೆ ಪ್ರತಿಯಾಗಿ ನಿಮ್ಮ ಮಗು ಕೊಡುವ ಆನಂದಕ್ಕೆ ನಾನು ಬೆಲೆ ಕಟ್ಟುವುದೇ ಅಸಾಧ್ಯ. ನನ್ನ ಸುದೈವವೋ ಏನೋ ನೀವು ದಯಪಾಲಿಸುವ ಆ ಇಪ್ಪತ್ತು ನಿಮಿಷಗಳು ನನ್ನ ಜೀವನಘಟ್ಟದಲ್ಲಿ ಅತ್ಯಮೂಲ್ಯ, ಯಾಕೆಂದರೆ ಪ್ರತಿ ಅವಧಿಯಲ್ಲೂ ಅಂದು ನಾನು 'ಸಮರಸವೇಜೀವನ'ವೆಂಬ ಭಾವನೆಯಲ್ಲಿ ಮುಳುಗಿ ಹೋಗಿರುತ್ತೇನೆ. ನಂತರ.. ನಂತರ.. ನಾನು 'ಸಮಕಸವೇ ಜೀವನ' ಎಂಬ ಒಂದು ಸತ್ಯ ಪ್ರಪಂಚಕ್ಕೆ ಜಾರಿ ಹೋಗಿಬಿಡುತ್ತೇನೆ.

ನನ್ನ ಮಾತು ಕೇಳಿ ಆ ದಂಪತಿಗಳು ನಿಬ್ಬೆರಗಾಗಿ, ನಿರುತ್ತರರಾಗಿ ಹೊರಟು ಹೋಗಿ, ಬಲು ಸಮಯವೇ ಹಿಡಿದಿದ್ದರೂ, ನನ್ನ ಯೋಚನಾ ಲಹರಿ ಮುಂದುವರಿದೇ ಇತ್ತು. ನಾವು ಮನೆಯನ್ನು ಕಟ್ಟುತ್ತೇವೆ. ಮನಸ್ಸನ್ನು ಕಟ್ಟುವುದಿಲ್ಲ. ಮನೆಯ ಷೋಕೇಸಿನ ಗೂಡಿನೊಳಗೆ ನಿರ್ಜೀವ ಗೊಂಬೆಗಳನ್ನಿಟ್ಟು ಆನಂದಿಸುತ್ತೇವೆ. ಆದರೆ ನಮ್ಮ ಜತೆಯೇ ಬಾಳನ್ನು ಸವೆಸಿದ ಜೀವಂತ ಮುದಿಗೊಂಬೆಗಳಿಗೆ ಜಾಗವನ್ನೇ ಮೀಸಲಿಡುವುದಿಲ್ಲ. 'ಕಸ'ವೆಂದು ಪರಿಗಣಿಸಿ ದೂರ ಬಿಸಾಕಿಬಿಡುತ್ತೇವೆ. ಇದಲ್ಲವೇ ಇಪ್ಪತ್ತೊಂದನೆಯ ಶತಮಾನದ ವಿಪರ್ಯಾಸ!

**''ಕಸಾಯತಸ್ಮೈ ನಮಃ''**



*With Best Compliments from*

**Omega Lasertech**
Pre-press and Print Service
since 1989

No. 17, Mission Road, Subbaiah Circle
Bangalore - 560 027
Tel: 080-22225633

*With Best Compliments from*

SRLB

**Sreeraj Lassi Bar**
*Since 1973*

• Lassi • Kulfi • Falooda • Milk Shakes
• Icecreams • Fruit Juices • Curds
• Shreekhand and • Special Items

Shantinagar Kammanahalli Palace Road Jayanagar
Shivajinagar Commercial Street RT Nagar **and Dubai**

For Bulk requirements, contact: 98861 35656

# ಮುಖ ಪುಟ ಮುಚ್ಚಿದಾಗ

**- ಸಹನಾ ಪ್ರಸಾದ್**

ಬೆಳಗ್ಗಿಂದ ತಲೆ ಕೆಟ್ಟು ಹೋಗಿದೆ. ಮುಂಚೆಯಾದರೆ ಬಿಸಿ ಬಿಸಿ ಕಾಫಿ ಕುಡಿದು ತಲೆ ಸರಿ ಮಾಡಿಕೊಳ್ಳಬಹುದಿತ್ತು. ಆದರೆ ಇತ್ತೀಚೆಗೆ ತಲೆ ಸರಿಯಾಗಲು ಫೇಸ್‌ಬುಕ್ ನೋಡಬೇಕು. ಯಾರು ಯಾವ ಫೋಟೋ ಹಾಕಿದ್ದಾರೆ, ಯಾರು ಹೊಸ ಬಟ್ಟೆ ಕೊಂಡರು? ಯಾರು ಯಾರ ಜೊತೆ ತಿಂಡಿಗೆ, ಊಟಕ್ಕೆ, ನಿದ್ದೆಗೆ (!) ಹೋದರು? ಯಾರ ಮೂಡ್ ಕೆಟ್ಟಿದೆ, ಯಾರದು ಸರಿಯಾಗಿದೆ, ಯಾರ್ಯಾರು ಹೆಂಡತಿಯ ಜತೆ ಜಗಳವಾಡಿ ಆಮೇಲೆ ಮನೆಯಿಂದ ಹೊರದೂಡಲ್ಪಟ್ಟು, ಆಮೇಲೆ ಆಕೆಗೆ ಶರಣಾಗಿ, ಹೊಸ ಸೀರೆ ದಂಡ ತೆತ್ತರು? ಯಾರು ಬಾಸ್ ಕೈಲಿ ಉಗಿಸಿಕೊಂಡರು? ಯಾರು ಇದನ್ನೆಲ್ಲ ಹಾಕಲು ಧೈರ್ಯ ಮಾಡಿದರು? ಆದರೆ ಇದನ್ನೆಲ್ಲ ನೋಡುವ ಎಂದರೆ ನನ್ನ ಫೇಸ್‌ಬುಕ್ ಓಪನ್ ಆಗುತ್ತಿಲ್ಲ, ಛೇ! ಡಾಟಾ ಪ್ಯಾಕ್ ಮುಗಿದಿಲ್ಲ, ವೈಫೈ ಸರಿಯಿದೆ, ಆದರೂ ಮುನಿಸಿಕೊಂಡ ಪ್ರೇಯಸಿಯಂತೆ ಮುಖ ಮರೆಸಿಕೊಂಡಿದೆಯಲ್ಲ, ದೇವರೇ ನನಗೇಕೆ ಈ ಶಿಕ್ಷೆ, ಯಾವ ತಪ್ಪು ಮಾಡಿದೆ ನಾನು? ನನ್ನ ಸ್ನೇಹಿತರೆಲ್ಲ ಏನೇನು ಸ್ಟ್ಯಾಟ್ಸ್ ಹಾಕಿರುವರೋ, ಯಾವ್ಯಾವ ಚಿತ್ರ ಹಾಕಿರುವರೋ, ಅದಕ್ಕೆಲ್ಲ ಮಿಕ್ಕವರು ಎಷ್ಟು 'ಲೈಕ್' ಹಾಕಿರುವರೋ, ಕಾಮೆಂಟ್ ಬಿದ್ದಿರುವವೋ ಯಾವುದೂ ತಿಳಿಯುತ್ತಿಲ್ಲವಲ್ಲ, ಫೇಸ್ ಬುಕ್ಕಿದ್ದರೆ ಜೈಲಲ್ಲಾದರೂ ಇದ್ದೇನು, ಊಟವಿಲ್ಲದೆ, ನಿದ್ದೆಯಿಲ್ಲದೆ ಇದ್ದೇನು, ಆದರೆ ಆದಿಲ್ಲದೆ ಒಂದು ನಿಮಿಷವೂ ಇರಲಾರೆ.

**ಫೇಸ್ ಬುಕ್ಕಿದ್ದರೆ ಜೈಲಿನಲ್ಲಾದರೂ ಇದ್ದೇನು, ಊಟವಿಲ್ಲದೆ, ನಿದ್ದೆಯಿಲ್ಲದೆ ಇದ್ದೇನು, ಆದರೆ ಆದಿಲ್ಲದೆ ಒಂದು ನಿಮಿಷವೂ ಇರಲಾರೆ.**

''ಬಾಸ್ ಕರೆಯುತ್ತಿದ್ದಾರೆ, ಈಗಲೇ ಬರಬೇಕಂತೆ, ಆಗಲೇ ಎರಡು ಸಲ ಹೇಳಿಕಳಿಸಿದ್ದಾರೆ, ನೀವು ಯಾವುದೋ ಲೋಕದಲ್ಲಿದ್ದೀರಿ ಸಾರ್'' ಜವಾನ ಬೇಸರದಿಂದ ತಲೆ ಕೊಡವಿ ಹೋದ. ಮಂಗನ ತರಹ ಮುಖ ಮಾಡಿಕೊಂಡು ಹೋದೆ, ಅವರು ಬೈದರಾ, ಹೊಗಳಿದರಾ? ಕೆಲಸ ಹೇಳಿದರಾ, ಮನೆಗೆ ಹೋಗಲು ಹೇಳಿದರಾ? ಯಾವುದೂ ಗೊತ್ತಿಲ್ಲ. ಸೀಟಿನಲ್ಲಿ ಕುಕ್ಕರಿಸಿದೆ. ಮತ್ತೆ ಟ್ರೈ ಮಾಡಿದೆ. ಇಲ್ಲ, ಓಪನ್ ಆಗುತ್ತಲೇ ಇಲ್ಲ, ಮನೆಯಿಂದ ಹೆಂಡತಿಯ ಕರೆ. ನಲ್ಲಿ ನೀರು ಬಿಟ್ಟಂತೆ ಮಾತು. ಸಾರಾಂಶ ಇಷ್ಟೇ, ನಾನು ಒಬ್ಬ ಅಪ್ರಯೋಜಕ, ನನ್ನನ್ನು ಮದುವೆಯಾಗದೆ, ಅವಳ ಪಕ್ಕದ ಮನೆ ಹುಡಗನನ್ನು ಮದುವೆಯಾಗಿದ್ದರೆ ಈಗ ಅವಳು ರಾಣಿಯ ಹಾಗೆ ಇರಬಹುದಿತ್ತು. ಮೊನ್ನೆ ತಾನೇ ಅವನು

ಕೊಂಡ ಹೊಸ ಕಾರಿನ ಚಿತ್ರವನ್ನೂ ಫೇಸ್ ಬುಕ್ಕಿನಲ್ಲಿ ನೋಡಿದಾಗಲಿಂದ ಅವಳು ಕಾಳಿಯಾಗಿದ್ದಾಳೆ. ಅವನು ಸರಿಯಿಲ್ಲ, ನಂಬಿಕಸ್ತನಲ್ಲ, ಇವಳ ಕೈ ಬಿಟ್ಟು ಓಡಿ ಹೋದ ಎಂದು ಅವಳ ತಾಯಿ ನನ್ನ ಬಳಿ ಬಾಯಿಬಿಟ್ಟಿದ್ದು ಇವಳಿಗೆ ಗೊತ್ತಿಲ್ಲ, ಫೋನ್ ಇಟ್ಟು ತಲೆ ಕೆರೆದುಕೊಂಡೆ.

'ಸಾರ್' ಸುಮಧುರ ಧ್ವನಿಯೊಂದು ಉಲಿಯಿತು. ''ತುಂಬಾ ಥ್ಯಾಂಕ್ಸ್, ನಿಮ್ಮ ದುಡ್ಡು ತೊಗೊಳ್ಳಿ, ತುಂಬಾ ಸಹಾಯವಾಯಿತು'' ಎಂದು 500ರ 2 ನೋಟನ್ನು ನೀಡಿದಳು. ಅರೆ, ಈ ಚೆಲುವೆ ಯಾರು? ಇವಳಿಗೆ ನಾನೆಂದು ಹಣ ನೀಡಿದೆ? ಯೋಚಿಸುವಷ್ಟರಲ್ಲಿ ಹೊಳೆಯಿತು, ಈಕೆ ನಮ್ಮ ಬಾಸ್ ಸೆಕ್ರೆಟರಿ, ಬಾಸ್ ಮುಂದೆಯೂ ನನ್ನ ಬಗ್ಗೆ ಒಮ್ಮೆ ಹೊಗಳಿದ್ದಳು, ತುಂಬಾ ಒಳ್ಳೆ ಮನಸ್ಸು ಇವರದು ಎಂದು. ಮನಸ್ಸು ಸ್ವಲ್ಪ ನಿರಾಳವಾಯಿತು. ಯಾರೋ ಇಬ್ಬರು ಮೂವರು ನಕ್ಕ ಹಾಗಾಯ್ತು. ಎದ್ದು ನೋಡಿದರೆ ಪಕ್ಕದ ಕ್ಯಾಬಿನ್‌ನಲ್ಲಿ 3-4 ಜನ ಸೇರಿ ಏನೋ ಹರಟೆ ನಡೆಸಿದ್ದಾರೆ. ನಾನೂ ಹೋದೆ. ಕೊಂಚ ಹರಟೆ, ನಗೆ, ಹಾಸ್ಯ ಚಟಾಕಿ, ಮಧ್ಯೆ ಬಂದ ಬಿಸಿಬಿಸಿ ಚಹಾ ಮನಸ್ಸಿಗೆ ಮುದ ನೀಡಿತು. ಸಹೋದ್ಯೋಗಿಯೊಡನೆ ಚರ್ಚಿಸಿ, ಸೀಟಿಗೆ ಬಂದು ಕೆಲಸ ಮಾಡಲು ಶುರು ಮಾಡಿದಾಗ ಏನೋ ಧನ್ಯತೆ. ಬಾಸ್‌ಗೆ ಹೋಗಿ ಕೆಲಸ ಒಪ್ಪಿಸಿ ಬಂದಾಗ, ಅವರದನ್ನು ಸಣ್ಣ ತಿದ್ದುಪಡಿ ಮಾಡಿ ಒಪ್ಪಿಕೊಂಡಾಗ ಸಂತೋಷ. ಪ್ರತಿ ದಿನ ಒಬ್ಬನೇ ಕುಳಿತು ಫೇಸ್‌ಬುಕ್ ತೆರೆದು ನೋಡುತ್ತಾ ಊಟ ಮಾಡುತ್ತಿದ್ದೆ. ಈ ದಿನ ಅಕ್ಕಪಕ್ಕದ ಕ್ಯಾಬಿನ್‌ಗಳಿಗೆ ನುಗ್ಗಿ, ಎಲ್ಲರ ಡಬ್ಬಿಯಿಂದ ಚೂರು ಪಾರು ತಿಂದಾಗ ಹೊಟ್ಟೆ ತುಂಬಿದಂತೆ. ಮನೆಗೆ ಕರೆ ಮಾಡಿ ಹೆಂಡತಿಯನ್ನು ರಮಿಸಿದೆ. ಖುಷಿಯಾಗಿ ಸಂಜೆ ನಾನು ಬರುವ ವೇಳೆಗೆ ರುಚಿ ರುಚಿಯಾದ ತಿಂಡಿಗೆ ರೆಡಿ ಮಾಡಲು ಹೋದಳು. ಎಲ್ಲ ಕೆಲಸ ಮುಗಿಸಿ ಟೀ ಸಮಯಕ್ಕೆ ಕ್ಯಾಂಟೀನ್‌ಗೆ ಹೋದೆ. ಭಾರಿ ಚರ್ಚೆ, ಮಾತುಕತೆ, ಗದ್ದಲ. ಇದರ ಮಧ್ಯೆ ಯಾರೋ ಕೇಳಿದರು. ''ಅದೇನು, ಯಾವಾಗಲೂ ಮೊಬೈಲ್ ಅಥವಾ ಲ್ಯಾಪ್‌ಟಾಪ್ ಮುಂದೆ ಇರುವ ನೀವು ನಮ್ಮ ಬಳಿ ಮಾತನಾಡುತ್ತಿದ್ದೀರಾ?'' ಅಯ್ಯೋ ಹೌದಲ್ಲವೇ? ನಾನ್ಯಾವಾಗಲೂ ನನ್ನ ಪಾಡಿಗೆ ಮುಖ ಪುಸ್ತಕದಲ್ಲಿ ಹುದುಗಿರುತ್ತಿದ್ದೆ. ಅಲ್ಲಿಯ ಜಗತ್ತಿನಲ್ಲಿ ಹೊರ ಪ್ರಪಂಚವನ್ನೇ ಮರೆತಿದ್ದೆ. ಏನೂ ಹೇಳದೆ ಪೆಚ್ಚು ನಗೆ ನಕ್ಕೆ.


ಸಂಜೆ ಹೊರ ಬಂದಾಗ ಮನಸ್ಸು ಉಲ್ಲಾಸಿತವಾಗಿತ್ತು. ಇನ್ನು ಮುಂದೆ ವಾರಕ್ಕೆ ಹಲವು ನಿಮಿಷ ಮಾತ್ರ ಮುಖ ಪುಟ ತೆರೆಯಬೇಕು ಎಂದು ನಿರ್ಧಾರ ಮಾಡಿ, ಸಣ್ಣಗೆ ಸಿಳ್ಳೆ ಹೊಡೆಯುತ್ತಾ ಬೈಕ್ ಸ್ಟಾರ್ಟ್ ಮಾಡಿದೆ.

### ನಾನು ಯಾರು?

ತಾನೊಬ್ಬ ಫೇಮಸ್ ವ್ಯಕ್ತಿ ಎಂದುಕೊಂಡಿದ್ದ ವ್ಯಕ್ತಿ ರಸ್ತೆ ನಿಯಮ ಉಲ್ಲಂಘನೆಗಾಗಿ ಪೋಲೀಸರ ಕೈಗೆ ಸಿಕ್ಕಿಬಿದ್ದ. ಅವನ ಮೇಲೆ ಕ್ರಮ ಜರುಗಿಸಲು ಪೋಲೀಸರು ಮುಂದಾದಾಗ 'ನಾನು ಯಾರು ಗೊತ್ತೇನ್ರೀ?' ಎಂಬ ಆವಾಜು ಹಾಕಿದ ಇನ್ಸ್‌ಪೆಕ್ಟರ್‌ಗೆ. 'ನನಗೆ ತಿಳಿದುಕೊಳ್ಳುವ ಕುತೂಹಲ ಇಲ್ಲ' ಎಂದರು ಅವರು.

# ಕೊರವಂಜಿ ಪದಬಂಧ – 17

**- ವಿದ್ಯಾ ವಿ. ಹಾಲಭಾವಿ**




**ಎಡದಿಂದ ಬಲಕ್ಕೆ**

1. ವ್ಯತ್ಯಾಸ ಈ ತರ ಬಂದಿದೆ (3)
3. ಮೊಸರು ಮಾರುವವಳಿಗೆ ಸಿಡಿದಿರುವ ರಾಡಿ (3)
5. ಜನರ ನಡುವೆಯೇ ಈ ಆಳು ನುಸುಳಿಹನಲ್ಲಾ? (3)
7. ಉದಾಲಿಗೆ ಕಾಣಿಸಿದ ರಸ್ತೆ (2)
8. ಛೇ! ಚೇಲಾ ಅಲ್ಲ, ಶ್ರೀ ಕೃಷ್ಣನ ಸ್ನೇಹಿತ (3)
9. ಇಳೆಯಲ್ಲಿ ಸಿಕ್ಕಿರುವ ಸ್ನೇಹಿತ (3)
10. ಇದು ಒಳ್ಳೆಯ ದಿನ ಬಿಡಿ (3)
11. ಗುರುಗುಟ್ಟುತ್ತಿರುವ ಗಂಡು ಕುರಿ (3)
13. ಶಿಕಾರಿ ಮಾಡುತ್ತಲೇ ತಲುಪಿದ್ದು ವಿಶ್ವನಾಥನ ಸನ್ನಿಧಿ (2)
14. ಕಳ್ಳನಿಗೆ ಅಂಟಿಕೊಂಡಿರುವ ಅಪವಾದ (3)
15. ಈತ ಪಾಪ ಮಾಡಿದವನು (3)
16. ಮಿತಿಗೆ ಒಳಪಟ್ಟ ಕನ್ನಡಿಗರ ಕಮಿಟಿ (3)

**ಮೇಲಿಂದ ಕೆಳಕ್ಕೆ**

2. ಪರಾಕು ಹೇಳಿದರೂ ಕಪಾಳಮೋಕ್ಷ! (4)
4. ದಾಯಾದಿ ಬಳಿ ಕಾಣಿಸಿರುವ ಗುಂಪು (4)
5. ನೀರಿನಿಂದಾದ ಅನಿಲ (5)
6. ಇದು ಹಾಸ್ಯ ಪ್ರಹಸನ (5)
10. ಶಿಕ್ಷೆ ಸಿಕ್ಕರೂ ಒಳ್ಳೆಯ ಶಿಕ್ಷಣ ಪಡೆದವ (4)
12. ದರಿದ್ರನ ಹೆಣ ಹೂಳಿದ ಸ್ಮಶಾನ (4)

***(ಉತ್ತರಕ್ಕೆ 144ನೇ ಪುಟ ನೋಡಿ)***

# ಗಣಪತಿವಾಹನ ಉಪದ್ರವಾದಾಗ

**- ಅನಿತಾ ನರೇಶ್ ಮಂಚಿ**

ಎಷ್ಟೆಷ್ಟೋ ಪುರಾಣಗಳನ್ನು ಓದಿ ಅರಗಿಸಿ ನುಂಗಿ ನೀರು ಕುಡಿದು, ಇನ್ನೊಬ್ಬರಿಗೂ ನೀರು ಕುಡಿಸುವ ಪಂಡಿತರು ನೀವಿರಬಹುದು. ಆದರೆ ಈ ಪುರಾಣವನ್ನು ನೀವು ಓದಿರಲು ಸಾಧ್ಯವಿಲ್ಲ. ಆದರೆ ಚಿಂತಿಸಬೇಡಿ. ನಿರಾಶರಾಗಬೇಡಿ. ಈ ಪುರಾಣದ ಪುಣ್ಯ ವಾಚನವನ್ನು ನಿಮ್ಮದಾಗಿಸುವ ಹೊಣೆ ನನ್ನದು. ಓದಿ ಜೀವನ ಪಾವನವಾಗಿಸಿಕೊಳ್ಳಿ.

**ಮಾಯವಾಗುತ್ತಿದ್ದ ಈರುಳ್ಳಿಯ ಹಿಂದಿನ ಮರ್ಮವೇ ಈ ಅಡುಗೆಮನೆ ಪುರಾಣ**

ಮನೆಯಲ್ಲಿರುವ ಎಲ್ಲಾ ಕೋಣೆಗಳು ಒಂದಲ್ಲ ಒಂದು ಅಲಂಕಾರಿಕ ವಸ್ತುಗಳಿಂದ ತುಂಬಿರುವುದು ಸಹಜ. ಆದರೆ ಅಡುಗೆ ಮನೆ ಮಾತ್ರ ಚಾಕು, ಚೂರಿ, ಸೌಟು, ಲಟ್ಟಣಿಗೆ, ಖಾರದ ಪುಡಿಗಳಂತಹ ವಿಧ್ವಂಸಕ ವಸ್ತುಗಳಿಂದ ಕೂಡಿ ಮಕ್ಕಳು ಮರಿಗಳಿಗೆ ನಿಷೇಧಿತ ಪ್ರದೇಶವಾಗಿರುತ್ತದೆ. ಆದರೆ ಅದಕ್ಕೆಲ್ಲಾ ರೀತಿ ನೀತಿ ನಿಯಮಗಳಿದ್ದರೆ ವ್ಯವಸ್ಥಿತವಾಗಿಯೂ ಅನುಕೂಲಕರವಾಗಿಯೂ ಇಟ್ಟುಕೊಳ್ಳುವುದು ಕಷ್ಟವೇನಲ್ಲ.

ಅಡುಗೆ ಮನೆ ಆದ್ರೇನು ಹೂವಿನ ಕುಂಡ ಇಟ್ರೆ ಬೇಡ ಅನ್ನಲು ಅದಕ್ಕೇನು ಬಾಯಿ ಇದೆಯೇ? ನನ್ನ ಅಡುಗೆ ಕೋಣೆಯ ಒಂದು ಕಿಟಕಿ ಹೂವಿನ ಕುಂಡದಿಂದ ಅಲಂಕೃತಗೊಂಡಿದ್ದರೆ ಇನ್ನೊಂದು ಬದಿಯ ಕಿಟಕಿ ಕರೆಂಟ್ ಹೋದರೆ ಕೈಗೆ ಪಕ್ಕನೆ ಸಿಗಬೇಕಾಗಿರುವ ಎಣ್ಣೆಯ ಕಾಲು ದೀಪದಿಂದ ಕಂಗೊಳಿಸುತ್ತಿತ್ತು. ಸ್ಟವ್ವಿನ ಒಂದು ಪಕ್ಕದ ಶೆಲ್ಫಿನಲ್ಲಿ ಅಡುಗೆಗೆ ಅಗತ್ಯವಾದ ಸಾಂಬಾರ ಪದಾರ್ಥಗಳು, ಇನ್ನೊಂದು ಕಡೆ ಸೌಟಿನಿಂದ ಹಿಡಿದು ಚಮಚದವರೆಗೆ ಚಾಕುವಿನಿಂದ ಹಿಡಿದು ಕತ್ತಿಯವರೆಗೆ ಸಿಗುವಂತಿತ್ತು. ಕೆಳಭಾಗದ ನಾಲ್ಕು ಕಪಾಟುಗಳಲ್ಲಿ ಈಳಿಗೆ ಮಣೆ ಮೆಟ್ಟುಗತ್ತಿ, ಪಾತ್ರೆಗಳು, ಬೇಗ ಹಾಳಾಗದಿರುವ ತರಕಾರಿಗಳಾದ ಆಲೂಗಡ್ಡೆ, ಈರುಳ್ಳಿಗಳು ಆಟವಾಡುತ್ತಿದ್ದವು. ವರ್ಷಪೂರ್ತಿಯ ಖರ್ಚಿಗೆ ಬೇಕಾಗುವ ಹುಣಸೆಹಣ್ಣಿನ ಉಂಡೆಗಳು ಕತ್ತಲಿನ ಮೂಲೆಯಲ್ಲಿ ದೊಡ್ಡ ಮಣ್ಣಿನ ಹಂಡೆಯಲ್ಲಿ ತುಂಬಿ ಅದರ ಮಂಡೆಗೆ ಪ್ಲಾಸ್ಟಿಕ್ಕಿನ ಶಿರಾಲಂಕಾರದೊಂದಿಗೆ ಕೂರಿಸಲ್ಪಟ್ಟಿತ್ತು. ನಿತ್ಯದ ಅಡುಗೆಗೆ ಬೇಕಾಗುವಷ್ಟನ್ನು ಸಣ್ಣ ಡಬ್ಬದಲ್ಲಿಡುವುದರಿಂದ ಹಂಡೆಯನ್ನು ಪ್ರತಿದಿನ

ಮುಟ್ಟಬೇಕಾಗಿರಲಿಲ್ಲ. ಯಾವ ಯಾವ ವಸ್ತುಗಳು ಎಲ್ಲೆಲ್ಲಿ ಇವೆ ಎಂದು ಕತ್ತಲಿನಲ್ಲಿಯೂ ಕೈ ಹಾಕಿ ತೆಗೆದುಕೊಳ್ಳುವಷ್ಟು ವ್ಯವಸ್ಥಿತ ಅಡುಗೆ ಮನೆ ನಮ್ಮದು ಎಂಬ ಹೆಮ್ಮೆ ನನ್ನದು.

ನಮ್ಗ್ಯಾಕೆ ನಿಮ್ಮ ಅಡುಗೆ ಮನೆ? ಏನೋ ಪುರಾಣ ಎಂದು ಓದ ಹೊರಟರೆ ಇದೇನು ತಲೆಹರಟೆ. ಇದರ ಬದಲು ಏನಾದ್ರು ರುಚಿ ಶುಚಿಯಾಗಿ ಮಾಡಿ ಹಾಕಿ ಆಹ್ವಾನಿಸಿದರೆ ಪ್ರಸಾದ ಎಂದುಕೊಂಡಾದರೂ ಬಂದು ತಿಂತೀವಿ ಅಂತೀರಾ? ಅಡುಗೆ ಮಾಡೋದೇನೋ ಮಾಡಬಹುದು. ಆದರೆ ಲಭ್ಯವಿರುವ ಸಾಮಗ್ರಿಗಳ ಸಮರ್ಪಕ ನಿರ್ವಹಣೆ ಹೇಗೆ ಅನ್ನೋದನ್ನು ಯಾವುದೇ ಮ್ಯಾನೇಜ್‌ಮೆಂಟ್ ಪುಸ್ತಕಗಳನ್ನು ಓದದ ನಮ್ಮಂತವರಿಂದ ಕಲಿಯಬೇಕು.

ಈ ಖರ್ಚುಗಳು ಅನ್ನೋದು ನಮ್ಮಲ್ಲಿನ ಸಾಮಗ್ರಿಯ ಪೂರೈಕೆಯ ಮೇಲೆ ಹೋಗುತ್ತೆ ಅನ್ನೋದು ನನ್ನ ಸಿದ್ಧಾಂತ. ಉದಾಹರಣೆಗೆ ಮನೆಗೆ ಬೇಳೆಕಾಳುಗಳು ತಂದ ಮರುದಿನ ಸಾರು ಕೂಡ ತೊವ್ವೆಯಂತೆ ದಪ್ಪ ಗಾಗಿದ್ದರೆ, ಮುಗೀತಾ ಬರುವಾಗ ತೊವ್ವೆ ಸಾರಿಗಿಂತಲೂ ನೀರು. ಈರುಳ್ಳಿ ತಂದ ದಿನ ಪಕೋಡಗಳು, ಬಜ್ಜಿಗಳು ಡೈನಿಂಗ್ ಟೇಬಲನ್ನು ಅಲಂಕರಿಸಿದರೆ ಖಾಲಿ ಆಗುತ್ತಾ ಬರುವಾಗ ಉಪ್ಪಿಟ್ಟಿನಲ್ಲಿ ಸೂಕ್ಷ್ಮದರ್ಶಕ ಹಾಕಿ ಹುಡುಕಿದರೂ ಒಂದು ತುಂಡು ಈರುಳ್ಳಿ ಸಿಗಲಾರದು. ಸಿಗಲಿಕ್ಕೆ ಹಾಕಿದರೆ ತಾನೇ.. ಒಂದ್ನಾಲಕ್ಕು ಈರುಳ್ಳಿಗಳು ಉಳಿದಿದ್ದರೂ ಅದು ಅವಸರಕ್ಕೆ ಬೇಕಾಗುತ್ತೆ ಅಂತ ಮನೆಯವರಿಗೆ ಸಪ್ಪೆ ಸಪ್ಪೆಯಾಗೇ ಬಡಿಸುವುದು ಮಾಮೂಲು. ಒಂದು ತಿಂಗಳ ಮನೆ ಸಾಮಾನು ಒಂದೇ ಸಲ ಬರುವುದರಿಂದ ನಡು ನಡುವಲ್ಲಿ ಸಾಮಾನು ಪಟ್ಟಿ ನೀಡಬಾರದೆನ್ನುವುದು ನಮ್ಮ ಮನೆಯ ಅಲಿಖಿತ ಒಪ್ಪಂದ. ವರ್ತಮಾನ ಪರಿಸ್ಥಿತಿಯನ್ನು ಹೇಳುವುದಾದರೆ ತಳ ಕಾಣುತ್ತಿದ್ದ ಸಾಮಗ್ರಿಗಳಿಂದಾಗಿ ನನ್ನ ಸ್ಥಿತಿ ಕುಚೇಲನ ಮನೆಯಂತಾಗಿತ್ತು. ಹಾಗಾಗಿ ಕಣ್ಣಿಗೆ ಕಾಣಿಸುತ್ತಿದ್ದ ಇಡಿಯಾದ ಎರಡು ಈರುಳ್ಳಿಗಳು ನನ್ನ ಕಣ್ಣಗೊಂಬೆಗಳಿಗಿಂತಲೂ ಅತಿಪ್ರಿಯವಾಗಿ ನನ್ನ ಮನಸ್ಸನ್ನು ಮುದಗೊಳಿಸುತ್ತಿದ್ದವು.

ಅದ್ಯಾಕೋ ಇಂತಹ ಕಾಲದಲ್ಲೇ ಭಗವಂತನು ಭಕ್ತರ ಪರೀಕ್ಷೆ ಮಾಡೋದೇನೋ.. ಬರಗಾಲದಲ್ಲಿ ಅಧಿಕಮಾಸ ಅಂತಾರಲ್ಲ ಹಾಗೇ..

ಅವತ್ತಿನ ಅಡುಗೆಯನ್ನು ಕೆದಕಿ ಬೆದಕಿ ಬೇಯಿಸಿ ಇಟ್ಟಿದ್ದೆ ಅನ್ನುವಾಗ ಮಗರಾಯ ತನ್ನಿಬ್ಬರ ಗೆಳೆಯರ ಜೊತೆ ಮನೆಗೆ ಬಂದ. 'ಅಮ್ಮಾ.. ಈರುಳ್ಳಿ ಹಾಕಿ ಫಸ್ಟ್ ಕ್ಲಾಸ್ ಒಂದು ಉಪ್ಪಿಟ್ಟು ಮಾಡಿ ಕೊಡು. ನಿನ್ನ ಕೈಯ ಉಪ್ಪಿಟ್ಟು ಇವರಿಗೆ ತಿನ್ನಿಸೋಣ ಅಂತ ಕರ್ಕೊಂಡು ಬಂದೆ. ಆದ ತಕ್ಷಣ ಕರಿ ಬರ್ತೀವಿ' ಎಂದು ತನ್ನ ರೂಮಿಗೆ ಅವರಿಬ್ಬರ ಜೊತೆ ಹೋಗಿ ಪಟ್ಟಾಂಗ ನಿರತನಾದ. ಇದ್ದಿದ್ದೇ ಎರಡು ಈರುಳ್ಳಿ.. ಕ್ಯಾಲೆಂಡರ್ ನೋಡಿದರೆ ತಿಂಗಳ ಕೊನೆ. ಸಾಕು, ಹೇಗೂ ನಾಳೆ ಮನೆ ಸಾಮಾನು ಬರುತ್ತೆ. ಮುಗಿಸಿದರೇನೂ ತೊಂದರೆ ಇಲ್ಲ ಎಂದುಕೊಂಡು ರವೆ ಹುರಿದಿಟ್ಟು ಚಾಕು ಮಣೆ ಇಟ್ಟುಕೊಂಡು ಈರುಳ್ಳಿಗಾಗಿ ಅತ್ತ ಕಡೆ

ನೋಡಿದೆ. ನನ್ನೆದೆ ಧಸಕ್ಕೆಂದಿತು. ನಿನ್ನೆ ನೋಡಿದ ಈರುಳ್ಳಿಗಳು ಎಲ್ಲಿ ಹೋದವು? ಇಟ್ಟ ಜಾಗದಿಂದ ಮಾಯವಾಗಬೇಕಾದರೆ ಕಾರಣವೇನು? ಅತ್ತಿತ್ತ ನೋಡಿದೆ. ಪಾತ್ರೆಗಳನ್ನು ಸರಿಸಿದೆ..ಉಹೂಂ.. ಎಲ್ಲೂ ಇಲ್ಲ..

ಇನ್ನೇನು ಮಾಡುವುದು ಅಂತ ಹುರಿದಿಟ್ಟ ರವೆಗೆ ಸಕ್ಕರೆ ತುಪ್ಪ ಸೇರಿಸಿ ಮಗನ ಫೇವರಿಟ್ ಕೇಸರಿಬಾತ್ ಮಾಡಿ ಅವರಿಗೆ ಕೊಟ್ಟೆ. ಕುತೂಹಲದಿಂದ ಯಾವುದೋ ಕಾರ್ ರೇಸಿನ ವಿಡಿಯೋ ನೋಡುತ್ತಿದ್ದ ಅವರಿಗೆ ನಾನು ಕೊಟ್ಟದ್ದು ಉಪ್ಪಿಟ್ಟೋ ಕೇಸರಿಬಾತೋ ಎನ್ನುವುದು ಕೂಡಾ ಗೊತ್ತಾಗಲಿಲ್ಲ.

ಅಡುಗೆ ಮನೆಗೆ ಬಂದು ಮತ್ತೆ ಚಿನ್ನಕ್ಕಿಂತಲೂ ಅಮೂಲ್ಯವಾದ ಎರಡು ಈರುಳ್ಳಿಯ ಶೋಧನಾ ಕಾರ್ಯದಲ್ಲಿ ಮುಳುಗಿದೆ. ಅಡುಗೆ ಮನೆಯ ಮೂಲೆ ಮೂಲೆಗೂ ಬೆಳಕು ಚೆಲ್ಲಿ ಹುಡುಕತೊಡಗಿದೆ. ಆಹಾ.. ನನ್ನ ಭಾಗ್ಯವೇ.. ಎರಡು ಈರುಳ್ಳಿಗಳು ಇನ್ನೂ ನಾಲ್ಕು ಈರುಳ್ಳಿಗಳ ಜೊತೆ ಹುಳಿ ತುಂಬಿದ ಹಂಡೆಯ ಹಿಂದೆ ಹೋಗಿ ಕುಳಿತುಕೊಂಡಿದ್ದವು. ಎಳೆದು ತಂದು ಎದುರಿಟ್ಟೆ. ಪತ್ರಿಕೆಯ ದಿನಭವಿಷ್ಯದಲ್ಲಿ ಅನಿರೀಕ್ಷಿತ ಲಾಭ ಎಂದೇನೂ ಓದದೇ ಇದ್ದುದರಿಂದ ಈ ಸ್ಥಾನಪಲ್ಲಟದ ಹಿಂದೇನೋ ದೊಡ್ಡ ಹುನ್ನಾರವೇ ಇದೆಯೆಂದು ಅರ್ಥವಾದರೂ ಏನೂ ಕಾಣಿಸಲಿಲ್ಲ. ಮರುದಿನ ಬೆಳಗ್ಗೆ ನೋಡಿದರೆ ಮತ್ತೆ ಐದೇ ಈರುಳ್ಳಿ. ಒಂದು ಈರುಳ್ಳಿ ಮಾಯ. ಈ ಸಲ ಫ್ರಿಡ್ಜಿನ ಹಿಂದೆ ಈರುಳ್ಳಿಯ ಜೊತೆಗೆ ಮೊದಲೇ ಅಲ್ಲಿದ್ದ ಎರಡು ಸಿಪ್ಪೆ ಸುಲಿದ ಮೆಣಸು ಮತ್ತು ಅರ್ಧ ಕೆರೆದ ಆಲೂಗಡ್ಡೆ ಸಿಕ್ಕಿತು. ಇದು ಗಣಪತಿ ವಾಹನನ ಉಪದ್ರವವೇ ಎಂದು ಮನದಟ್ಟಾಗಲು ಬೇರೆ ಪುರಾವೆಗಳು ಬೇಕಾಗಲಿಲ್ಲ.

ಅಡುಗೆ ಕೋಣೆಯ ಎರಡೂ ಕಿಟಕಿಗಳು ಸಣ್ಣ ವೈರ್ ಮೆಶ್‌ನಿಂದ ಆವೃತವಾಗಿದ್ದ ಕಾರಣ ಹೊರಗಿನಿಂದ ಒಳಗೆ ನಿತ್ಯ ಓಡಾಟ ಅಸಾಧ್ಯ. ಯಾವತ್ತೋ ಸಂಜೆ ಅಡುಗೆ ಮನೆ ಬಾಗಿಲು ತೆರೆದಿಟ್ಟ ಸಮಯದಲ್ಲಿ ಒಳ ನುಗ್ಗಿದ ಈ ಅನಪೇಕ್ಷಿತ ಅತಿಥಿ ಈಗ ತನ್ನ ಕೈ ಚಳಕ ತೋರಿಸುತ್ತಿದ್ದಾನೆ ಅಂದುಕೊಂಡೆ. ಆ ದಿನ ಹೊರಗಡೆ ಹೋಗಬೇಕಾಗಿದ್ದುದರಿಂದ ಹುಡುಕುವ ಆಲೋಚನೆ ಬಿಟ್ಟೆ. ನಂತರದ ದಿನ ಪಾತ್ರೆ ತೊಳೆಯುವ ಸ್ಕ್ರಬ್ಬರ್ ಮಾಯ ಮಾತ್ರವಲ್ಲ ಅಲ್ಲೇ ಇಟ್ಟಿದ್ದ ಪುಟ್ಟ ಬ್ರಶ್ ತನ್ನೆಲ್ಲಾ ಕೂದಲುಗಳನ್ನು ಕಳೆದುಕೊಂಡು ಬೋಳಾಗಿತ್ತು.

ಇನ್ನು ಅದನ್ನು ಹುಡುಕದಿದ್ದರೆ ಉಳಿಗಾಲವಿಲ್ಲ ಎಂದುಕೊಂಡು ಒಂದು ಕೈಯಲ್ಲಿ ಗಟ್ಟಿ ಪೊರಕೆ, ಇನ್ನೊಂದು ಕೈಯಲ್ಲಿ

**ಆಹಾರ**

ಕಂಪ್ಯೂಟರ್‌ಗೆ ಹಸಿವಾದರೆ ಏನು ತಿನ್ನುತ್ತದೆ?

ಚಿಪ್ಸ್, ಮೈಕ್ರೋಚಿಪ್ಸ್

ಟಾರ್ಚೆಂಬ ಆಯುಧಗಳನ್ನು ಧರಿಸಿಕೊಂಡು ಮನಸ್ಸಿನಲ್ಲಿ ಅಂಬಾಭವಾನಿ ಶಕ್ತಿ ನೀಡು ಎಂದು ಸ್ಮರಿಸುತ್ತಾ ಮೂಲೆ ಮೂಲೆಗಳಿಗೆ ಬೆಳಕು ಚೆಲ್ಲುತ್ತಾ ಬಂದೆ. ಒಂದು ಮೂಲೆಗೆ ಪೊರಕೆ ಆಡಿಸುವಾಗ ಫಕ್ಕನೆ ಅಲ್ಲಿಂದ ಚಿಮ್ಮಿತೊಂದು ಸಣ್ಣ ಆಕಾರ. ನೋಡಿದರೆ ಮುಷ್ಟಿಯೊಳಗೆ ಹಿಡಿಯುವಷ್ಟೇ ದೊಡ್ಡದು... ಛೇ.. ಶತ್ರುವಾದರೂ ಸಮಾನತೆ ಬೇಡವೇ.. ಸಮಾನರಲ್ಲದವರಲ್ಲಿ ಸಾಮಾನು ಹಾಳು ಮಾಡಿದರೂ ಯುದ್ಧ ತರವೇ.. ಎಂದೆನ್ನ ಮನ ನ್ಯಾಯಾನ್ಯಾಯದ ವಿಮರ್ಶೆಯಲ್ಲಿ ತೊಡಗಿರುವಾಗ ಅದು ಮಿಂಚಿ ಮಾಯವಾಯಿತು. ಮತ್ತೆಷ್ಟು ಹುಡುಕಿದರೂ ಸಿಗಲಿಲ್ಲ. ಹಾಗಿದ್ದರೆ ಬಾಗಿಲಿನ ಮೂಲಕ ಹೊರಗೆ ಹೋಗಿರಬಹುದು ಎಂದುಕೊಂಡು ನನ್ನ ಆಯುಧಗಳನ್ನಿಳುಹಿ ಫ್ರಿಡ್ಜಿನ ಥಂಡಾ ಪಾನಿ ಕುಡಿದು ಸುಧಾರಿಸಿಕೊಂಡೆ.

ಇನ್ನೇನು ಭಯವಿಲ್ಲ ಎಂದು ರಾತ್ರೆ ನಿರಾತಂಕವಾಗಿ ನಿದ್ರಿಸುತ್ತಿದ್ದಾಗ ಅಡುಗೆ ಮನೆಯಲ್ಲಿ ಬಾಂಬ್ ಸ್ಫೋಟವಾದಂತಹ ಶಬ್ದ. ಹೆದರುತ್ತಲೇ ಕಾಲಿಟ್ಟ ನಮಗೆ ಕಂಡದ್ದು ಪುಟ್ಟ ಹೂವಿನ ಕುಂಡದ ಅವಶೇಷಗಳು. ಹಾಗಿದ್ದರೆ ಅದು ಹೋಗಿಲ್ಲ ಇಲ್ಲೇ ಇದೆ. ಬಡಿಯೋಣ ಎಂದು ಇವರನ್ನೆಲ್ಲಾ ಹುರಿದುಂಬಿಸಿದೆ. ಮಗ ಕ್ರಿಕೆಟ್ ಬ್ಯಾಟ್ ಹಿಡಿದು ಬಂದರೆ ಇವರು ಬಾಗಿಲಿಗೆ ಅಡ್ಡವಾಗಿ ನಿಂತು ಕ್ಷೇತ್ರ ರಕ್ಷಣೆಯ ಕೆಲಸ ಮಾಡಲು ಸಜ್ಜಾದರು. ನಾನು ಒಂದು ಮೂಲೆಯಿಂದ ಅದನ್ನು ಹುಡುಕುತ್ತಾ ಬಂದೆ. ಒಂದು ಕಡೆ ಹಳೇ ಪೇಪರಿನ ಚೂರುಗಳ ನಡುವೆ ಕಣ್ಣುಗಳೆರಡು ಹೊಳೆಯತೊಡಗಿತು. 'ಸಿಕ್ಕಿದ ನಿನ್ನನು ಕೊಲ್ಲದೇ ಬಿಡುವೆನೇ..' ಎಂದು ಯಕ್ಷಗಾನದ ಏರುಪದ್ಯದ ಧಾಟಿಯಲ್ಲಿ ಹಾಡುತ್ತ ಪೊರಕೆಯಲ್ಲಿ ಒಂದು ಪೆಟ್ಟು ಕೊಟ್ಟೆ. ಹೊರಗೆ ಬಂತು. ಹೊಡೀ ಹೊಡೀ ಎಂದೆ ಮಗನಿಗೆ. ಮಗ ಬ್ಯಾಟ್ ಬೀಸಿದ.. ಇವರು ಸಿಕ್ಸರ್ ಎಂಬಂತೆ ಕೈ ಎತ್ತಿದರು. ನೆಲಕ್ಕೊರಗಿತು ಎರಡು ಗಾಜಿನ ಲೋಟಗಳು. ಮತ್ತೊಂದು ಉಪ್ಪಿನಕಾಯಿ ಜಾಡಿ.

ಇಲಿ ಮಾಯ..

ಈಗ ಆಗುವ ಕೆಲಸ ಅಲ್ಲ ಇದು ಎಂದು ಎಲ್ಲರೂ ಕೈ ಚೆಲ್ಲಿ ರೂಮಿಗೆ ಮರಳಿದರೆ ನಾನು ಅಡುಗೆ ಮನೆ ಕ್ಲೀನ್ ಮಾಡಿ ಬರುವಾಗ ಮಧ್ಯರಾತ್ರಿಯ ಗಂಟೆ ಬಾರಿಸಿತು.

ಮರುದಿನ ಏಳುವಾಗಲೇ ಕರೆಂಟಿಲ್ಲ.. ಅಡುಗೆ ಮನೆಗೆ ಹೋಗಿ ದೀಪ ತೆಗೆದುಕೊಂಡು ಹಚ್ಚಲೆಂದು ನೋಡುತ್ತೇನೆ ದೀಪದ ಬತ್ತಿಯೇ ಮಾಯ. ಉಕ್ಕೇರಿದ ಕ್ರೋಧಾಗ್ನಿಯಲ್ಲೇ ನಾನು ಉರಿದುರಿದು ಹೊಸಾ ಬತ್ತಿ ತಂದು ಹಾಕಿ ದೀಪ ಹಚ್ಚಿ ಕೆಲಸ ಪ್ರಾರಂಭಿಸಿ, ಸ್ವಲ್ಪ ಹೊತ್ತಿನಲ್ಲೇ ಕರೆಂಟು ಬಂತು. ಚಟ್ನಿ ಕಡೆಯೋಣವೆಂದು ಮಿಕ್ಸಿಗೆ ತೆಂಗಿನತುರಿ ಹಾಕಿ ಸ್ವಿಚ್ ಹಾಕಿದರೆ ಮಿಕ್ಸಿ ಅಲುಗಾಡುತ್ತಿಲ್ಲ. ನೋಡಿದರೆ ವೈರ್ ನಡುವಿನಿಂದ ತುಂಡಾಗಿತ್ತು. ಪುಣ್ಯಕ್ಕೆ ಶಾಕ್ ಹೊಡೆಸಿಕೊಂಡು ಸಾಯಲಿಲ್ಲ ನಾನು ಎಂದುಕೊಂಡು ಚಟ್ನಿ ಇಲ್ಲದ ದೋಸೆಯನ್ನೇ ಉಣಬಡಿಸಿದೆ.

ಇಂದಂತೂ ಇಲಿಗೊಂದು ಗತಿ ಕಾಣಿಸಿಯೇ ಸಿದ್ಧ ಎಂದು ನಿಶ್ಚಯಿಸಿ, ವೀರಗಚ್ಚೆಯನ್ನು ಬಿಗಿದು, ಸರ್ವ ಆಯುಧಗಳೊಂದಿಗೆ ಸನ್ನದ್ಧಳಾಗಿ ಎಲ್ಲಾ ಮೂಲೆ ಹುಡುಕಿದರೂ ಇಲಿ ಇಲ್ಲ. ನನ್ನ ಹಠವನ್ನು ಬಿಡದೇ ಸ್ಟವ್ವಿನ ಪಕ್ಕದ ಸಾಮಗ್ರಿಗಳು ಇಟ್ಟ ಕಡೇ ಇಣುಕಿದೆ. ಉಪ್ಪಿನ ಪಿಂಗಾಣಿ ಜಾಡಿಯ ಮೂಲೆಯಲ್ಲಿ ಇದೆ ಆ ಶತ್ರು. ದುಷ್ಟ ಸಂಹಾರಕ್ಕೆ ತಡ ಮಾಡುವುದು ಸರಿಯಲ್ಲ ಎಂದು ಕೈಯಲ್ಲಿರುವ ಆಯುಧಗಳನ್ನು ಬಿಸುಟು, ಉಪ್ಪಿನ ಜಾಡಿಯನ್ನೇ ಅದರ ತಲೆಗೆ ಕುಕ್ಕಿದೆ. ಒಂದೇಟಿಗೆ ಗತಪ್ರಾಣವಾಯಿತು. ಒಂದು ಕೇಜಿ ಉಪ್ಪು ಸಮೇತ ಒಡೆದ ಪಿಂಗಾಣಿ ಜಾಡಿಯ ತುಣುಕುಗಳೊಂದಿಗೆ ಇಲಿಯನ್ನು ದಫನ ಮಾಡಿ ಬಂದೆ.

ಇದನ್ನು ಓದಿದವರೂ, ಕೇಳಿದವರೂ, ಪಾಡಿ ಕೊಂಡಾಡಿದವರೂ ಇಲಿ ಹೊಡೆಯುವ ಅದ್ಭುತ ಶಕ್ತಿಯನ್ನು ತಮ್ಮದಾಗಿಸಿಕೊಳ್ಳುತ್ತಾರೆ ಎನ್ನುವಲ್ಲಿಗೆ ಅಡುಗೆ ಮನೆ ಪುರಾಣದ ಒಂದಧ್ಯಾಯವು ಮುಗಿದುದು..

ಮಂಗಳಂ..

## ಯಾರು ಹೆಚ್ಚು ಪೆದ್ದ? ಅಪ್ಪನೊ, ಮಗನೊ?

ಇಬ್ಬರು ಅಪ್ಪಂದಿರು ತಮ್ಮ ತಮ್ಮ ಪುತ್ರರ ಪೆದ್ದುತನವನ್ನು ಹೇಳಿಕೊಳ್ಳುತ್ತಿದ್ದರು. ಒಬ್ಬ ಹೇಳಿದ: ನೋಡಿ, ಐದು ರೂಪಾಯಿ ಕೊಟ್ಟು ಒಂದು ಟಿ.ವಿ. ಕೊಂಡುಕೊಂಡು ಬಾ ಎಂದರೆ ಸುಮ್ಮನೆ ಐದು ರೂಪಾಯಿ ತಗೊಂಡು ಹೊರಟೇಬಿಟ್ಟ, ಅಷ್ಟಕ್ಕೆ ಟಿ.ವಿ. ಸಿಗಲ್ಲ ಎಂಬುದೂ ಗೊತ್ತಾಗಲ್ಲ ಅಷ್ಟು ಪೆದ್ದ! ಇನ್ನೊಬ್ಬ ಹೇಳಿದ, ''ನನ್ನ ಮಗ ಇನ್ನೂ ಹೆಚ್ಚು ಪೆದ್ದ: ''ಹೋಗೊ ನಿಮ್ಮ ಅಪ್ಪ ಮನೇಲಿದ್ದಾರೊ ಇಲ್ಲವೊ ಎಂದು ನೋಡಿಕೊಂಡು ಬಾ ಎಂದರೆ ನೋಡಿಕೊಂಡು ಬರಲು ಹೊರಟೇ ಬಿಟ್ಟ; ನಾನು ಅವರಪ್ಪ ಇಲ್ಲೇ ಇದೇನೆ ಎಂಬುದೂ ಗೊತ್ತಾಗಬೇಡವೆ?!''

ಅತ್ತ ಈ ಮಕ್ಕಳಿಬ್ಬರೂ ತಮ್ಮಲ್ಲೆ ಮಾತನಾಡಿಕೊಳ್ಳುತ್ತಿದ್ದರು. ಒಬ್ಬ ಹೇಳಿದ: ''ನನ್ನ ಅಪ್ಪನಷ್ಟು ಪೆದ್ದರು ಯಾರೂ ಇಲ್ಲ ಕಣೊ. ಐದು ರೂಪಾಯಿ ಕೊಟ್ಟು ಒಂದು ಟಿ.ವಿ. ಕೊಂಡು ಕೊಂಡು ಬಾ ಅಂದರು ನೆನ್ನೆ. ಐದು ರೂಪಾಯಿಗೆಲ್ಲಾದ್ರೂ ಟಿ.ವಿ. ಸಿಕ್ಕುತ್ತಾ ಕೊಳ್ಳೋಕೆ? ಅಷ್ಟು ಗೊತ್ತಾಗಲ್ಲ, ಅವರಿಗಿದೆಲ್ಲ ಏನು ಹೇಳೋದು ಅಂತ ನಾನೂ ದುಡ್ಡು ಇಸಕೊಂಡು ಹೋದೆ.'' ಇದಕ್ಕೆ ಇನ್ನೊಬ್ಬ, ''ಅಯ್ಯ! ನನ್ನ ಅಪ್ಪ ಇನ್ನೂ ಹೆಚ್ಚು ದಡ್ಡ, ಏನಾಯ್ತು ಅಂತೀಯ. ಅಲ್ಲೆ ನಿಂತಿದ್ದಾನೆ, ತಾನು ಮನೇಲಿದ್ದೀನೊ ಇಲ್ಲವೊ ನೋಡಿಕೊಂಡು ಬಾ ಅಂತ ಕಳಿಸಿದ ಬೆಳಿಗ್ಗೆ! ಅಷ್ಟು ಅನುಮಾನ ಇದ್ರೆ ನನ್ನನ್ನ ಯಾಕೆ ಕಳಿಸಬೇಕು. ಮನೆಗೆ ತಾನೆ ಫೋನ್ ಮಾಡಿ ತಿಳಕೋಬಹುದಾಗಿತ್ತು.''

– ಜಯಣ್ಣ

# ಬಾಂಬೇ ಬಾಂಬು!

**- ಚಿತ್ರಾ ರಾಮಚಂದ್ರನ್**

''ನಮ್ಮ ಅಶೋಕ ಮರದಲ್ಲಿ ಕೂಗಾಡಿ ಕಿರಿಚಾಡಿ ರಂಪ ಮಾಡಿ ಗಲಬೆ ಎಬ್ಬಿಸೋ ಕೋಗಿಲೆಗಳ ಹಾಗೆ ಎಲ್ರೂ ಒಟ್ಟೊಟ್ಟಿಗೆ ಮಾತಾಡ್ತೀರಲ್ಲ! ಕೇಳಿಸ್ಕೊಳ್ಳೋರಾದ್ರೂ ಯಾರಮ್ಮಾ?'' ವರುಷವಿಡೀ ಹಸಿರಾಗಿದ್ದು ತಂಪನ್ನು ನೀಡುತ್ತಿದ್ದ ದಪ್ಪ ಬೊಡ್ಡೆಯ ಹೆಮ್ಮರ ನನ್ನ ತವರು ಮನೆಯಲ್ಲಿದ್ದ ಅಶೋಕ ಮರ.

ಹಸಿರು ಎಲೆಗಳೆಡೆ ಹಸಿರು ನಕ್ಷತ್ರದ ಹೂ ಗೊಂಚಲುಗಳು.

ನೇರಳೆ ಬಣ್ಣದ ಮಾಗಿದ ಕಾಯಿಗಳಿಗಾಗಿ ಸದಾ ಮುತ್ತುಗೆ ಇಡುತ್ತಿದ್ದ ಹಕ್ಕಿಗಳ ಕಿಲ ಕಿಲ.

ಪ್ರೀತಿಯಿಂದಲೋ ದ್ವೇಷದಿಂದಲೋ ಅವುಗಳು ಘೋಷ್ಟಿಯಾಗಿ ಎಬ್ಬಿಸುತ್ತಿದ್ದ ಕಲರವ.

ಹನ್ನೆರಡು ಜನ ಆಪ್ತ ಸ್ನೇಹಿತೆಯರಾದ ನಾವು ನಮ್ಮ ತೋಟದ ಅಶೋಕ ಮರದ ಕೆಳಗೆ ಕೂಡಿ ವಟ ವಟ ಹರಟೆ ಕೊಚ್ಚುತ್ತಿದ್ದರೆ, ನನ್ನ ತಂದೆಯವರು ನಗುತ್ತಲೇ ನಮ್ಮನ್ನು ಹೀಗೆ ತಮಾಷೆ ಮಾಡುತ್ತಿದ್ದರು. ಇದೆಲ್ಲ ಐವತ್ತು ವರ್ಷಗಳ ಹಿಂದಿನ ಮಾತು. ಅಶೋಕ ಮರ ಇಲ್ಲಿಲ್ಲ! ಹಕ್ಕಿಗಳಂತೂ ಇಲ್ಲವೇ ಇಲ್ಲ! ಆದರೂ ಅವುಗಳ ಕಲರವ ಮಾತ್ರ ಈ ನನ್ನ ಮನೆಯ ಹಾಲಿನಿಂದಲೂ ಕೇಳಿಬರುತ್ತಿದೆ ನೋಡಿ!

**ಟೇಬಲ್ ಮೇಲೆ ಅರೆ ತೆರೆದು ಬಿದ್ದಿದ್ದ ಪಾರ್ಸಲ್ ನೋಡಿ ಹೆದರಿಕೆಯಾಗಲು ಕಾರಣ?**

ಒಟ್ಟಿಗೆ ಶಾಲೆಗೇ ಹೋಗಿ –

ಒಟ್ಟಿಗೆ ಕಾಲೇಜಲ್ಲಿ ಕಲಿತು –

ಜೀವನೋಪಾಯಕ್ಕಾಗಿ ದೇಶ ವಿದೇಶಗಳಲ್ಲೆಲ್ಲ ತಿರುಗಾಡಿದ ಪತಿ ರಾಯರುಗಳೊಂದಿಗೆ ನಾವೂ ತಿರುಗಾಡಿ – ಹದಿನೈದು ವರ್ಷಗಳ ಹಿಂದೆ ನಿವೃತ್ತ ಜೀವನವನ್ನು ನೆಮ್ಮದಿಯಾಗಿ ಕಳೆಯಲೆಂದು ಎಲ್ಲರೂ ಆಯ್ದುಕೊಂಡದ್ದು ಈ ಸುಂದರವಾದ ಉದ್ಯಾನ ನಗರ ಎನ್ನಿಸಿಕೊಂಡ ಬೆಂಗಳೂರು ನಗರವನ್ನೇ. ವಾತಾವರಣದ ಉಸಿರು ಕಟ್ಟಿಸುವಂತಹ ಪರಿಸರ ಮಾಲಿನ್ಯಗಳನ್ನೂ, ದಿನೇ ದಿನೇ ಇಮ್ಮಡಿಯಾಗಿ ಮೂರ್ಮಡಿಯಾಗಿ ಹಿಗ್ಗುತ್ತಿರುವ ಟ್ರ್ಯಾಫಿಕ್ ಕಿರಿ ಕಿರಿಯನ್ನೂ, ಮನೆಯ ಹೊರಗೆ ಕಾಲಿಟ್ಟಾ ಕ್ಷಣ ಕಿಕ್ಕಿರಿವ ಜನ ಸಂದಣಿಯನ್ನೂ ಸಹಿಸಿಕೊಂಡು ಬದುಕು ಸವೆಸುತ್ತಿರುವ ನಮಗೆ, ತಿಂಗಳಿಗೊಮ್ಮೆ ನಡೆಯುವ ಈ ನಮ್ಮ ಆಪ್ತ ಸ್ನೇಹಿತಿಯರ ಮಿಲನ ಸಾಂತ್ವನ ನೀಡುವ ಸಂಜೀವಿನಿ ಎನ್ನಬಹುದು. ಹಾಲಿನಿಂದ ತೇಲಿ ಬಂದ ಮಾತುಗಳನ್ನು ಗ್ರಹಿಸಿಕೊಳ್ಳುತ್ತಲೇ ನಾನು ಬಿರ ಬಿರನೆ ಲೋಟಗಳಿಗೆ ಪಾನಕ ತುಂಬಿದೆ.

''ಕಾಶಿ ಯಾತ್ರೆ ಹೇಗಿತ್ತೆ ಭಾರ್ತಿ?''

‘‘ಓ! ತುಂಬಾ ಚೆನ್ನಾಗಿತ್ತು ಕಣೆ! ಗಂಗೆಯಲ್ಲಿ ಸ್ನಾನ ಎಷ್ಟು ಸುಖ! ಎಲ್ಲ ತುಂಬಾನೇ ಕ್ಲೀನಾಗಿತ್ತು!'' ಅಗೋ! ಭಾರತಿ ತನ್ನ ಪಯಣದ ಬಗ್ಗೆ ಸ್ವಾರಸ್ಯವಾಗಿ ಮಾತನಾಡತೊಡಗಳು. ಪದ್ಮಜಾ ಒಂದು ಕಡೆ ‘‘ವೆಂಕಟಗಿರಿ ಸೀರೆನೇ ನಾನು ಉಡ್ತೀನಿ.'' ಎನ್ನುತ್ತಿದ್ದಳು!

‘‘ನೆಕ್ಸ್ಟ್ ಟೈಮ್ ಹೈದರಾಬಾದಿಗೆ ಹೋದಾಗ ನನ್ಗೂ ಒಂದ್ ತಂದ್ ಕೊಡೆ! ಹಾಗೇ ನನ್ನ ಒರಗಿತ್ತಿಗೂ ಒಂದು!'' ರಜಿನಿ ಲಿಸ್ಟ್ ಹಾಕುತ್ತಿರಲು, ‘‘ಬರ್ತೀನಿ ಬರ್ತೀನಿ ಅಂತಾನೆ ಹತ್ತು ವರ್ಷ ಕಳೀತು! ಇನ್ನೆಲ್ಲಿ ಬರೋದು?'' ಎಂದು ಸ್ವೇಟ್ಸಲ್ಲೇ ಕೂತು ಬಿಟ್ಟಿದ್ದ ತನ್ನ ಮಗನ ಬಗ್ಗೆ ಪ್ರಲಾಪ ತೆಗೆದಳು.

‘‘ನನ್ ತಂಗಿ ಮಗನ್ಗೆ ಯಾವ್ದಾದ್ರೂ ಒಳ್ಳೆ ಹುಡುಗಿ ಇದ್ರೆ ಹೇಳ್ರೆ. ಯಾವ ಜಾತಿಯಾದ್ರೂ ಪರ್ವಾಗಿಲ್ಲ.'' ಸ್ವರ್ಣ ವಧುವಿನ ತಲಾಶೆಗೆ ಹೊರಟಾಗ, ‘‘ಅಯ್ಯೋ! ನನಗಂತೂ ಬಿ.ಪಿ., ಶುಗರು ನೋಡ್ಕೊಂಡು ನೋಡ್ಕೊಂಡು ಸಾಕಾಗ್ಬಿಟ್ಟಿದೆ. ಯಾವ್ ಮಾತ್ರೆನೂ ಸರಿ ಹೋಗ್ತಿಲ್ವೆ.'' ಎಂದು ಮಂಜು ಹಲುಬಿದಳು.

‘‘ಏ ಪ್ರೇಮ! ನಿನ್ ಮೊಮ್ಮಗ ಹೇಗಿದ್ದಾನ್ಯೇ? ಇಂಜಿನೀರಿಂಗ್ ಮಾಡ್ತಿದ್ದಾನೆ ಅಂದ್ರೆ ನಂಬಕ್ಕೇ ಆಗ್ತಿಲ್ಲ!'' ಪ್ರೇಮಳ ಮೊಮ್ಮಗನ ಬಗ್ಗೆ ದುರ್ಗಾ ಪ್ರೀತಿಯಿಂದ ವಿಚಾರಿಸುತ್ತಿದ್ದಳು.

‘‘ಅವನು ಮಗುವಾಗಿದ್ದಾಗ, ಅವನನ್ನೂ ಎತ್ಕೊಂಡು ಬರ್ತಿದ್ಯಲ್ಲಾ? ಅಬ್ಬಬ್ಬ! ಎಷ್ಟು ಬೇಗ ಟೈಮು ಓಡಿ ಹೋಗತ್ತಲ್ಲಾ?'' ಎಂದು ಆಶ್ಚರ್ಯ ವ್ಯಕ್ತ ಪಡಿಸುತ್ತಿದ್ದಳು ಸುಧ.

‘‘ಮನೇಲಿ ಹೇಗೋ ಏನೋ! ನಾವೆಲ್ಲಾ ಒಟ್ಗೆ ಕೂಡ್ಬಿಟ್ರಂತೂ ಇನ್ನೂ ಕಾಲೇಜಲ್ಲಿರೋ ಹಾಗೇ ಅನ್ಸತ್ತೆ. ಟೈಮು ಹೋದಂತೆ ಅನ್ಸೋದೇ ಇಲ್ಲ.'' ಎಂದಳು ಪದ್ಮ.

‘‘ಆದಕ್ಕೆ ಮತ್ತೆ ಮನೇಲಿ ಯಾರೂ ಇಲ್ದಿರೋವಾಗ ನಮ್ ಮೀಟಿಂಗ್ ಇಟ್ಕೊಳ್ಳೋಣ ಅಂದಿದ್ದು! ಮಕ್ಳು ಸೋಸೇರ ಮುಂದೆ ಹೀಗೆಲ್ಲ ಪೆಕ್ರು ಪೆಕ್ರಾಗಿ ಆಡಕ್ಕಾಗತ್ಯೆ?''

‘‘ಅಲ್ವೇ ಮತ್ತೆ? ಗಭೀರ ಗುಂಡುಗಳಂತೆ ಕೂರ್ಬೇಕಾಗತ್ತಷ್ಟೇ!''

ನಾನು ಎಲ್ಲರಿಗೂ ಪಾನಕ ಸರಬರಾಜು ಮಾಡುತ್ತಾ ಭಾರತಿ ತಂದು ಕೊಟ್ಟ ಗಂಗಾ ಜಲಕ್ಕೆ ಥ್ಯಾಂಕ್ಸ್ ಹೇಳಿ, ನನಗೂ ನನ್ನ ಮಗಳಿಗೂ ಬೇಕಾದ ಸೀರೆಗಳಿಗೆ ಪದ್ಮಜಳ ಬಳಿ ಲಿಸ್ಟ್ ಕೊಟ್ಟು, ನನಗೆ ಪರಿಚಿತರಾಗಿದ್ದ ಶಾಂತಮ್ಮನಿಗೆ ಮದುವೆ ವಯಸ್ಸಲ್ಲಿ ಮಗಳಿರುವುದನ್ನು ಸ್ವರ್ಣಳಿಗೆ ತಿಳಿಸಿ, ಮಂಜುವಿನ ಬಿ.ಪಿ. ಶುಗರ್ ಬಗ್ಗೆ ಅನುಕಂಪ ತೋರಿಸುತ್ತಿದ್ದ ಹಾಗೆಯೇ, ಬಹಳ ಗಡಿಬಿಡಿಯಲ್ಲಿ ಅವಸರ ಅವಸರವಾಗಿ ಯಾರೋ ಕರೆಗಂಟೆ ಒತ್ತಿದ್ದು ಕೇಳಿಸಿತು.

ನಾನು ತಟ್ಟೆ ಕೆಳಗಿಟ್ಟು ಬಾಗಿಲು ತೆರದರೆ –

‘‘ಮಾಲ್ತಿ!'' ಎಲ್ಲರೂ ಒಟ್ಟಿಗೆ ಜೋರಾಗಿ ಕುಪ್ಪಳಿಸಿ ಕೂಗಿ ಸ್ವಾಗತಿಸಿದೆವು. ಮಾಲ್ತಿ ನಮ್ಮ ಹುಮ್ಮಸ್ಸಿನ ಸ್ವಾಗತವನ್ನು ಗುರುತಿಸಲೇ ಇಲ್ಲವೇನೋ ಎಂಬಂತೆ ಪೆಚ್ಚು ಮೋರೆ ಹೊತ್ತುಕೊಂಡು ಒಳಕ್ಕೆ ಬಂದಳು. ಮುಖವೆಲ್ಲ ಕೆಂಪೇರಿ ಬೆವರು ಸುರಿಯುತ್ತಿತ್ತು.

‘‘ಯಾಕೆ ಮಾಲ್ತಿ ಒಂದ್ ಥರಾ ಇದ್ದೀಯಾ?''

''ಹುಷಾರಿಲ್ವೇನೇ?''

ಯಾರಿಗೂ ಉತ್ತರಿಸದೆ ಎಲ್ಲ ಕಡೆ ಕಣ್ಣು ಹೊರಳಿಸಿ ಚಂಚಲ ನೋಟ ಬೀರಿ 'ದೊಪ್' ಎಂದು ಸೋಫಾದಲ್ಲಿ ಮೈಚೆಲ್ಲಿ ಕುಳಿತಳು ಮಾಲ್ತಿ. ಇವಳನ್ನ ನೋಡಿತಾನೇ ಅದೆಷ್ಟು ದಿನಗಳಾಗಿ ಹೋಗಿದ್ದವು! ಯಾಕೋ ಏನೋ ಯಾವ ಮೀಟಿಂಗಿಗೆ ಕರೆದರೂ ಹುಷಾರಿಲ್ಲ ಅಂತ ಬರುತ್ತಲೇ ಇಲ್ಲ. ಏನು ಕಷ್ಟವೋ ಏನೋ ಪಾಪ ಅನ್ನಿಸಿತು.

''ತುಂಬಾ ಬಿಸ್ಲು. ತಗೋ, ಪಾನಕ ಕುಡಿದು ಸ್ವಲ್ಪ ಸುಧಾರಿಸ್ಕೋ.'' ಎನ್ನುತ್ತಾ ಪಾನಕದ ಲೋಟ ಅವಳ ಮುಂದೆ ಹಿಡಿದೆ.

ಪಾನಕ ಗುಟಕರಿಸಿ ಅವಳು ಲೋಟ ಕೆಳಗಿಡುವವರೆಗೂ ಯಾರೂ ಮಾತನಾಡಲಿಲ್ಲ.

''ಸರೂ! ನಿಮ್ ಮನೆ ಬಾಗಿಲ ಪಕ್ಕ ಒಂದು ಪಾಟ್ ಇದ್ಯಲ್ಲಾ?'' ಮಾಲ್ತಿ ಮೆಲ್ಲನೆ ಶುರು ಮಾಡಿದಳು.

''ಹುಮ್‌ಕಣೆ! ಅದು ಬರ್ಡ್ ಆಫ್ ಪ್ಯಾರಡೈಸ್ ಗಿಡ! ಎಷ್ಟು ಚೆನ್ನಾಗಿದೆ ನೋಡು ಅದ್ರ ಹೂವು...!'' ಎಂದೇ ಹೆಮ್ಮೆಯಿಂದ. ಫ್ಲವರ್ ಶೋಗೆ ಹೋಗಿದ್ದಾಗ ನಾನು ಹಠ ಮಾಡಿ ದುಬಾರಿ ಬೆಲೆ ತೆತ್ತು ಆ ಗಿಡವನ್ನ ತಂದಿದ್ದನಲ್ಲ!

''ಆ ಪಾಟ್ನ ಮೊದ್ಲು ತೆಗ್ಸಿ ಹಾಕು...'' ನಿಧಾನಕ್ಕೆ ಅವಳು ನುಡಿದಾಗ ನಾನು ನಿಜಕ್ಕೂ ಬೆಚ್ಚಿ ಬಿದ್ದೆ.

''ಯಾಕೇ? ಅದೇನ್ ಮಾಡ್ತು ಪಾಪ?''

''ಪಾಟ್ನ ಹಿಂದೆ ಅದೇನಿರತ್ತೋ ಏನೋ? ಹೊರಗಡೆ ಇಟ್ಟಿದ್ದೀಯ ಬೇರೆ! ಯಾರು ಬೇಕಾದ್ರೂ ಏನ್ ಬೇಕಾದ್ರೂ ಅದ್ರ ಹಿಂದೆ ಬಚ್ಚಿಡ್ ಬೋದಲ್ಲಾ!'' ಮಾಲ್ತಿಯ ಕಣ್ಣುಗಳು ಮತ್ತೆ ಭಯದಿಂದ ಎಂಬಂತೆ ಹೊರಳಿದವು.

''ಛೆ! ಎಲ್ಲ ಬಿಟ್ಟು ಅದ್ರ ಹಿಂದೆ ಯಾರೇನ್ ಇಡಕ್ಕೆ ಹೋಗ್ತಾರೆಯೇ?'' ಪದ್ಮಜ ಆಶ್ಚರ್ಯದಿಂದ ಕೇಳಿದಳು. ಎಲ್ಲರೂ ಒಬ್ಬರಿಗೊಬ್ಬರು ಬೀರಿಕೊಂಡ ನೋಟದಲ್ಲೇ 'ಇವಳಿಗೇನೋ ಆಗಿ ಹೋಗಿದೆ' ಎಂಬ ಗೂಡಾರ್ಥ ಹುದುಗಿತ್ತು.

''ನೀವೆಲ್ಲಾ ಪೇಪರ್ ನೋಡೋದೇ ಇಲ್ವೆ? ಟಿ.ವಿ.ಯಲ್ಲೆಲ್ಲ ಅದೇ ಸುದ್ದಿ. ಚರ್ಚ್ ಸ್ಟ್ರೀಟಲ್ಲಿ ಆ ಹೋಟಲ್ಲಿನ ಮುಂದಿದ್ದ ಪಾಟಿನ ಹಿಂದೆ ತಾನೇ ಬಾಂಬ್ ಇದ್ದದ್ದು?'' ಮಾಲ್ತಿ ಹೀಗಂದಾಗ ಎಲ್ಲರೂ ಒಂದು ಕ್ಷಣ ಮೌನವಾಗಿದ್ದರೂ ಮರುಕ್ಷಣಗೊಲ್ಲೆಂದು ನಕ್ಕುಬಿಟ್ಟರು.

''ಅಯ್ಯೋ! ಇದೇನಾ ನಿನ್ ಚಿಂತೆ? ನಮ್ ಫ್ಲ್ಯಾಟಿಗ್ ಬಂದು ಯಾರೇ ಬಾಂಬ್ ಇಡ್ತಾರೆ?'' ಎಂದು ನಾನು ಸಮಾಧಾನ ಹೇಳಿದೆ. ಇವಳಿಗೆಲ್ಲೋ ಬ್ರಾಂತು! ಮೊದಲೇ ನಾಜೂಕಾದ ಮನಸ್ಸು, ಬಾಂಬ್ ವಿಷ್ಯ ಕೇಳಿ ಕೇಳಿ ಬಾಂಬ್ ಫೋಬಿಯಾ ಆಗಿರಬೇಕು ಅನ್ನಿಸಿತು!

''ನಿಮಗೆಲ್ಲ ತಮಾಷೆ! ಸ್ವಲ್ಪ ಸೀರಿಯಸ್ಸಾಗಿ ಯೋಚ್ಸಿ! ನಮ್ ನಗರ ಹಿಂದಿನ ಹಾಗಿಲ್ಲ!

ಎಲ್ಲ ಕಡೆ ಬಾಂಬ್ ಸ್ಕೇರ್ ಇದೆ! ನಮ್ ಹುಷಾರೀಲಿ ನಾವಿರ್ಬೇಕುತಾನೆ?'' ಎಂದು ಸಿಡಿಮಿಡಿಗೊಂಡಳು ಮಾಲ್ತಿ.

''ಅದ್ಸರಿ! ಹುಷಾರಿ ಅಂದ್ರೆ ನಾವೇನ್ ಮಾಡ್ಬೇಕು ಹೇಳು!'' ಎಂದಳು ಸುಧಾ ಸಮಾಧಾನವಾಗಿ. ''ಅದೇ ಹೇಳಿದ್ನಲ್ಲಾ! ಮನೆ ಮುಂದಿರೋ ಪಾಟೆಲ್ಲಾ ಮೊದ್ಲು ತೆಗಿಸ್ಬಾಕ್ಬೇಕು. ಆಮೇಲೆ ಗಿಜಿ ಗಿಜಿ ಜನ ಸೇರೋ ಕಡೆಯಂತೂ... ಹೋಗ್ಲೇಬಾರ್ದು.''

ಅವಳು ಇನ್ನೂ ಮುಗಿಸಿರಲೇ ಇಲ್ಲ! ಅಷ್ಟರಲ್ಲಿ ಎಲ್ಲರೂ ಒಟ್ಟಿಗೆ ಆಕ್ಷೇಪ ತೆಗೆದರು.

''ಆದ್ ಹೇಗೇ ಸಾಧ್ಯ? ಮನೆ ಸಾಮಾನು, ಮೆಡಿಸನ್ನು ಫೋನ್ ಮಾಡಿ ತರಿಸ್ಕೋಬೋದು! ಚಿತ್ರ ಸಂತೆ, ಕಡ್ಲೇಕಾಯಿ ಪರಿಷೆ, ಬರ್ಡ್ ವಾಕ್, ಹೆರಿಟೇಜ್ ವಾಕ್, ಸೈಕಲ್ ದಿನ, ಅಂತ ನಮ್ ಬೆಂಗಳೂರಲ್ಲಿ ಎಷ್ಟೆಲ್ಲಾ ಒಳ್ಳೆ ಕಾರ್ಯಕ್ರಮಗಳು ನಡೀತಿವೆ? ಅವನ್ನೆಲ್ಲ ಬಿಟ್ಟು ಸನ್ಯಾಸಿನಿ ಹಾಗೆ ಮನೇಲಿ ಕೂರಕ್ಕಾಗತ್ಯೆ?'' ಎಂದು ಬಡ ಬಡಿಸಿದಳು ಪದ್ಮಜಾ.

''ಆಮೇಲೆ ನಾಟಕ, ಸಿನೆಮಾ, ಮಾಲ್ಗಳು, ಹೋಟೆಲ್‌ಗಳು ಇವನ್ನೆಲ್ಲ ಏಕೆ ಬಿಟ್ಟೆ! ನಾನಂತೂ ಯಾರಿಗೂ ಕಾಯಲ್ಲ! ಮೊನ್ಮೊನ್ನೆ ಒಬ್ಬೇ ಹೋಗಿ 'ಪಿ.ಕೆ' ನೋಡ್ಕೊಂಡ್ ಬಂದೆ ಗೊತ್ತಾ?'' ಎಂದಾಗ ಸ್ವರ್ಣಾಳ ಧ್ವನಿಯಲ್ಲಿ ಅದೆಷ್ಟು ಉತ್ಸಾಹ.

''ಅಯ್ಯೋ ಕಾಳು ಮೇಳಕ್ಕೆ ಹೋಗಿದ್ರೇನ್ರೆ ಯಾರಾದ್ರೂ? ನಾನು ನನ್ ತಂಗಿ ಆಟೋ ಮಾಡ್ಕೊಂಡು ಹೋಗಿದ್ವಿ. ಅಪ್ಪ! ಕಾಳು ದೋಸೆ ಅದೆಷ್ಟು ರುಚಿಯಾಗಿತ್ತು! ಒಂದು ಹತ್ತು ದೋಸೆ ಪಾರ್ಸಲ್ ಮಾಡಿಸ್ಕೊಂಡು ಬಂದ್ವಿ ಗೊತ್ತಾ?'' ದೋಸೆಯ ಘಮ ನೆನಪಾಗಿ ನನ್ನ ನಾಲಿಗೆಯಲ್ಲಿ ನೀರೂರ ತೊಡಗಿತು.

''ನೀವೆಲ್ಲ ಹೇಳೋದ್ ಕೇಳಕ್ಕೆ ಚೆನ್ನಾಗೇನೋ ಇದೆ. ಆದ್ರೆ ನಾನಂತೂ ಹೊರಗೆ ಎಲ್ಲೂ ಹೋಗೋದೇ ಇಲ್ಲ. ಭಯವಾಗತ್ತೆ. ಸರು ತುಂಬಾ ಒತ್ತಿ ಒತ್ತಿ ಕರೆದಿದ್ದಕ್ಕೆ ನಾನು ಇವತ್ತು ಬಂದೆ. ನೀವುಗಳೂ ಹುಷಾರಾಗಿರಿ ಅಷ್ಟೇ ನಾನ್ ಹೇಳೋದು.'' ಮಾಲ್ತಿ ತನ್ನದ್ದೇ ಕೊನೆಯ ಮಾತು ಎಂಬಂತೆ ನುಡಿದಳು.

''ನಿನ್ ಮುತ್ತಿನ ಸರ ಎಷ್ಟು ಚೆನ್ನಾಗಿದೆ! ಎಲ್ಲಿ ತಗೊಂಡ್ಯೇ?'' ದುರ್ಗಾ ಪರಿಸ್ಥಿತಿಯನ್ನು ಹಗುರಗೊಳಿಸುವಂತೆ ಪ್ರೇಮಾಳನ್ನು ವಿಚಾರಿಸಿದಳು.

'ಇವಳದ್ಯಾಕೋ ಅತ್ಯಾಯಿತು' ಎಂದು ಮನಸಲ್ಲೇ ಅಂದುಕೊಂಡು ನಾನು ಊಟಕ್ಕೆ ತಯಾರು ಮಾಡಲು ಹೊರಟೆ. ಹಾಲಲ್ಲಿ

### ಹೀಗೆ ಹೇಳು

ಇವನು: ನಡೆ ಸಿನಿಮಾಕ್ಕೆ ಹೋಗೋಣ.

ಇವಳು: ನೊ ನೊ.. ನನಗೆ ಡಾಕ್ಟರ್ ಅಪಾಯಿಂಟ್‌ಮೆಂಟ್ ಇದೆ.

ಇವನು: ಹೌದೆ? ಹಾಗಿದ್ದರೆ ನನಗೆ ಹುಷಾರಿಲ್ಲ ಬರೋದಿಕ್ಕೆ ಆಗೊಲ್ಲ ಎಂದು ಡಾಕ್ಟರ್‌ಗೆ ಹೇಳು.

ಮತ್ತೆ ಹಕ್ಕಿಗಳ ಕಿಲ ಕಿಲ ಶುರು. ನಾನೂ ಭಾರತಿ ಪದ್ಮಜಾ ಸೇರಿ ಊಟವನ್ನು ಟೇಬಲ್ಲ ಮೇಲೆ ತೆಗೆದಿಡುತ್ತಿದ್ದ ಹಾಗೆಯೇ ಮತ್ತೆ ಬಾಗಿಲ ಕರೆ ಗಂಟೆ ಟಿಂಗ್ ಟಾಂಗಿತು.

''ನಾನ್ ನೋಡ್ತೀನಿ ಬಿಡೆ!'' ಎನ್ನುತ್ತಾ ಸ್ವರ್ಣ ಎದ್ದು ಬಾಗಿಲು ತೆರೆದಳು. ವಾಚ್ ಮ್ಯಾನ್ ಯಾವುದೋ ಪಾರ್ಸಲ್ ಎಂದು ತಂದಿದ್ದ.

''ಎಂತದ್ದೋ ಪಾರ್ಸಲ್ ಕಣೆ!'' ಎನ್ನುತ್ತಾ ಸ್ವರ್ಣ ಪಾರ್ಸಲ್ ಹಿಡಿದು ನನ್ನ ಬಳಿ ಬಂದಳು.

ನಾನು ಹೊರಕ್ಕೆ ಇಣುಕಿ. ''ಹೆಸರಿಲ್ಲ ವಿಳಾಸವಿಲ್ಲ! ಯಾರು ಕೊಟ್ಟು ಹೋದ್ರಪ್ಪಾ?'' ಎಂದು ವಿಚಾರಿಸಿ ಪಾರ್ಸಲ್ ತಿರುಗು ಮುರುಗು ಮಾಡಿ ನೋಡಿದೆ.

''ಯಾರೋ ನಿಮ್ ಅಪಾರ್ಟ್ಮೆಂಟ್ ನಂಬರು ಹೇಳಿ, ಪಾರ್ಸಲ್ ಕೊಟ್ಟು ಅರ್ಜೆಂಟಲ್ಲಿ ಹೋದ್ರು ಅಮ್ಮ!'' ಎಂದು ವಾಚ್‌ಮ್ಯಾನ್ ಹೇಳಿದ್ದೇ ತಡ, ಮಾಲ್ತಿ ಮೈ ಮೇಲೆ ದೇವರು ಬಂದವಳಂತೆ ತಾಂಡವ ಆಡ ತೊಡಗಿಬಿಟ್ಟಳು.

''ಅನಾಮದೇಯ ಪಾರ್ಸಲ್! ಪಾರ್ಸಲ್ ಬಾಂಬ್ ಇರ್ಬೋದು! ಅದನ್ನ ಮುಟ್ ಬೇಡ! ದೂರ ಇಡು! ಮುಟ್ ಬೇಡ!''.

ನಾನು ಕೆಂಡ ಮುಟ್ಟಿದವಳಂತೆ ದಡಕ್ಕೆಂದು ಪಾರ್ಸಲ್ ದೂರ ಇರಿಸಿದೆ. ಮೊದಲನೇ ಬಾರಿಗೆ ಹೊಟ್ಟೆಯಲ್ಲಿ ಏನೋ ತಳಮಳ. ಮಾಲ್ತಿಯ ಮಾತು ಸತ್ಯವಿರಬಹುದೇ ಎಂಬ ಅಳುಕು ಮೆಲ್ಲನೆ ಹೃದಯವನ್ನು ಹಿಸುಕ ತೊಡಗಿತು. ಇವರಾದರೂ ಊರಲ್ಲಿದ್ದಿದ್ದರೆ?

''ಪಾರ್ಸಲ್ ತೆರೆದ್ರೆ ಕೂಡ್ಲೇ ಬಾಂಬ್ ಸಿಡೀಬೋದು! ಇಲ್ಲಾ ಟೈಮರ್ ಇಟ್ಟಿದ್ರೆ ಯಾವ ಟೈಮಿಗೆ ಸೆಟ್ ಮಾಡಿದ್ದಾನೋ ಯಾವ ಟೈಮ್ಗೆ ಸಿಡಿಯತ್ತೋ ಏನೋ! ಅಥವಾ ಇದನ್ನ ಕೊಟ್ಟು ಹೋದವ ರಿಮೋಟ್ ಅದುಮಿದರೆ...'' ಮಾಲ್ತಿ ಒಂದರ ಮೇಲೊಂದು ಅನುಮಾನಗಳನ್ನು ಜೋಡಿಸಿಕೊಂಡೇ ಹೋದಳು. ಎಲ್ಲರ ಮುಖಗಳೂ ಮೆಲ್ಲಮೆಲ್ಲನೆ ಕಳೆಗುಂದುತ್ತಲೇ ಹೋದವು.

''ಈವಾಗ್ ಏನ್ ಮಾಡೋದೇ?''

''ಮೊದ್ಲು ಪೋಲಿಸ್ಗೆ ಕರೆ ಮಾಡೋದೇ ಒಳ್ಳೇದು.''

''ಹೌದು ಹೌದು!'' ಎಂದು ಎಲ್ಲರೂ ಹೌಹಾರಿದರು.

ಎಲ್ಲರ್ರಿಗಿಂತ ಸ್ವಲ್ಪ ಧೈರ್ಯವಂತೆ ಅನ್ನಿಸಿಕೊಂಡಿದ್ದ ಮಂಜು ಪಾರ್ಸಲ್ ಸಮೀಪ ಬಗ್ಗಿ ಕಿವಿ ಕೊಟ್ಟು ಕೇಳಿ ''ಟೈಮರ್ ಇದ್ದ ಹಾಗಿಲ್ಲ! ಇದ್ದಿದ್ರೆ ಟಿಕ್ ಟಿಕ್ ಕೇಳಿಸ್ತಿತ್ತಲ್ಲ.'' ಎಂದಳು.

''ಪೋಲಿಸ್ ಪೋಲಿಸ್! ಬೇಗ ಕರೀರೆ!'' ಮಾಲ್ತಿ ಡವ ಡವ ನಡುಗುತ್ತಾ ಕಿವಿಗಳನ್ನು ಮುಚ್ಚಿಕೊಂಡು ಸೋಫಾದಲ್ಲಿ ಹುದುಗಿಕೊಂಡಳು.

''ನನ್ನ ಅತ್ತಿಗೆ ತಮ್ಮ ಈ ವಟಾರದ ಸ್ಟೇಷನ್ನಲ್ಲೇ ಇರೋದು. ತಡಿ ನಾನ್ ಫೋನ್ ಮಾಡ್ತೀನಿ.'' ಎಂದ ಪದ್ಮ ಮೊಬೈಲ್ ಗುಂಡಿ ಒತ್ತ ತೊಡಗಿದಳು.

ಸ್ವಲ್ಪ ಹೊತ್ತಲ್ಲೇ ಪೋಲಿಸ್ ಗಾಡಿ ಸೈರನ್ ಹೊಡೆದುಕೊಳ್ಳುತ್ತಾ ಬಿಲ್ಡಿಂಗ್ ಬಾಗಿಲಲ್ಲಿ ಬಂದು ನಿಂತಿತ್ತು.

''ಹಾಮ್! ಗುಡ್! ನಾನ್ ಹೇಳಿದ್ ಹಾಗೆ ಬಿಲ್ಡಿಂಗ್ನೋರೆಲ್ಲ ಹೊರಕ್ಕೆ ಬಂದ್ ಬಿಟ್ಟಿದ್ದೀರಿ. ವೆರಿ ಗುಡ್!'' ಎಂದ ಪದ್ಮಳ ಅತ್ತಿಗೆ ತಮ್ಮ ''ಯಾವ ಫ್ಲ್ಯಾಟು?'' ಎನ್ನುತ್ತಾ ಎರಡೆರಡು ಮೆಟ್ಟಿಲುಗಳು ಹಾರಿ ಮಹಡಿಗೆ ಧಾವಿಸಿದರು. ಅವರ ಹಿಂದೆ ನಾಯಿ ಹಿಡಿದ ಕಾನ್ಸ್ಟೇಬಲ್, ಬಾಂಬ್ ಡಿಟೆಕ್ಷನ್ ಸ್ಕ್ವಾಡ್ ಅಧಿಕಾರಿಗಳು ಎಲ್ಲ ದುಮು ದುಮು ನುಗ್ಗಿದರು.

ಅಕ್ಕ ಪಕ್ಕದ ಫ್ಲ್ಯಾಟ್ ವಾಸಿಗಳೆಲ್ಲ ಏನ್ ಪಾರ್ಸಲ್ ಬಂತು ಹೇಗ್ ಬಂತು ಯಾರು ತಂದಿದ್ದು ಎಂದು ನೂರಾರು ಪ್ರಶ್ನೆಗಳನ್ನು ಕೇಳತೊಡಗಿದರು.

''ನಾನು ಕಾಪಿಗೆ ಹೋಗಿ ಬಂದ್ನಾ? ಅವಾಗ ಯಾವನೋ ಒಬ್ಬ ಬಂದು 'ಈ ಪಾರ್ಸಲ್ 3010ಗೆ ಕೊಡು' ಅಂತ ಹೇಳಿ ಹೊರಟೇ ಹೋದ. ಅದು ನಮ್ ಸರೋಜಮ್ಮನ ಮನೆಯೇ ಅಂತ ನನ್ಗೆಗೊತ್ತಿಲ್ವೆ? ಏನಪ್ಪಾ ಇದು? ವಿಳಾಸ ಪಳಾಸ ಏನೂ ಇಲ್ವಲ್ಲಾ ಅನ್ಕೊಂಡೆ! ಆಮೇಲೆ.. ''ವಾಚ್ ಮ್ಯಾನ್ ತಾನೇನೋ ವೀರ ಧೀರ ಕೆಲಸ ಮಾಡಿದವನಂತೆ ರಸ್ತೆಯಲ್ಲಿ ಹೋಗಿ ಬಂದವರಿಗೆಲ್ಲಾ 'ಸುದ್ದಿಸ್ವಾರಸ್ಯ' ಪ್ರಸಾರ ಮಾಡುತ್ತಿದ್ದನು. 'ಸರೋಜಮ್ಮನ ಮನೇಲಿ ಬಾಂಬ್ ಪಾರ್ಸಲ್ ಬಂದಿದೆಯಂತೆ' ಎಂದು ನಮ್ಮ ಬಿಲ್ಡಿಂಗ್ವಾಸಿಗಳೆಲ್ಲ ಒಬ್ಬರಿಗೊಬ್ಬರರು ಗುಸು ಗುಸು ಮಾತನಾಡುತ್ತಾ ನನ್ನನ್ನು ವಿಚಿತ್ರವಾಗಿ ನೋಡ ತೊಡಗಿದರು. ಎಳೆಯರೆಲ್ಲ ತಮ್ಮ ತಮ್ಮ ಮೊಬೆಲ್ನಲ್ಲಿ ಕೂಡಿದ್ದ ಜನರನ್ನೂ, ಅಧಿಕಾರಿಗಳ ವಾಹನಗಳನ್ನೂ ವಾಚ್ ಮ್ಯಾನನ್ನೂ ಫೋಟೋ ತೆಗೆದಿದ್ದೇ ತೆಗೆದಿದ್ದು. ಇಗೋ ಈಗಾಗಲೇ ಫೇಸ್ ಬುಕ್ಕಲ್ಲಿ ಪ್ರಕಟಿಸಲೂ ತೊಡಗಿದ್ದರು. ನಾನಂತೂ ಏನೋ ತಪ್ಪು ಮಾಡಿದವಳ ಹಾಗೆ ಮುಖ ಮರೆಸಿಕೊಂಡು ಒಂದು ಕಡೆ ನಿಂತು ಬಿಟ್ಟೆ. ನನ್ನ ಆಪ್ತ ಸ್ನೇಹಿತಿಯರೆಲ್ಲ ಸುತ್ತುವರಿದು ನಿಂತು ಸಮಾಧಾನ ಹೇಳುತ್ತಿದ್ದರು. ಸಮಯ ಕಳೆದಂತೆ ನನಗೆ ಬಹಳ ಬೇಸರವಾಯಿತು. ಮಹಡಿಗೆ ಹೋದ ಅಧಿಕಾರಿಗಳ ಸುಳಿವೇ ಇಲ್ಲ. 'ನೋಡಿ! ನಾನು ಆಗ್ಲೇ ಹೇಳಿದ್ದೆ...' ಎಂದು ತನ್ನ ಬಾಂಬ್ ಬಗ್ಗೆಯ ತಿಳುವಳಿಕೆಯನ್ನೆಲ್ಲ ಕೂಡಿದ್ದವರ ಮುಂದೆ ಒದರುತ್ತಿದ್ದಳು ಮಾಲ್ತಿ. ಅದೇನು ವೀರ? ಅದೇನು ಧೈರ್ಯ? ಅದೇನು ಸ್ಟೈಲು? 'ಛೇ! ಇವಳ ನಾಲಿಗೆಯಲ್ಲಿ ಮಚ್ಚೆ ಇದೆಯೋ, ಇಲ್ಲವೇ ಇವಳು ಮನೆಯಲ್ಲಿ ಕೂತು 'ಬಾಂಬು ಬಾಂಬು' ಎಂದು ಹೆದರಿಸುತ್ತಿದ್ದಾಗ ಯಾವ ದೇವತೆ ತಥಾಸ್ತು ಎಂದಿತೋ! ನಿಜಕ್ಕೂ ನಮ್ಮ ಮನೆಗೆ ಪಾರ್ಸಲ್ ಬಾಂಬ್ ಬಂದೇ ಬಿಟ್ಟಿತಲ್ಲ!' ಪಾರ್ಸಲ್ ಬಂದಿದ್ದಕ್ಕೆ ಇವಳೇ ಕಾರಣ ಅನ್ನೋ ಹಾಗೆ ಮನಸ್ಸು ಕರುಬಿತು. ಬರಲ್ಲಾ ಎಂದವಳನ್ನ ಯಾಕಾದರೂ ಒತ್ತಾಯ ಮಾಡಿದೇನೋ ಅನ್ನಿಸಿತು. ಕೊನೆಗೊಮ್ಮೆ ಅಧಿಕಾರಿಗಳೆಲ್ಲ ಹೊರಬಿದ್ದರು.

''ಆಲ್ ಕ್ಲಿಯರ್! ನೀವೆಲ್ಲ ನಿಮ್ಮ ನಿಮ್ಮ ಮನೆಗೆ ಹೋಗಬಹುದು!'' ಎಂದರು. ಪದ್ಮಳ ಅತ್ತಿಗೆ ತಮ್ಮ. ''ರೀ! ಭಾವನ ತಂಗಿ! ನಿಮ್ ಫ್ರೆಂಡ್ಗೆ ಹೇಳಿ! ಇನ್ಮುಂದೆ ಪಾರ್ಸಲ್ ತಗೊಳೊವಾಗ ಹುಷಾರಾಗಿರ್ಲಿ! ರೀ ಸರೋಜಾ ಅವರೇ! ಗುರ್ತು ಪರಿಚಯ ಇಲ್ದೋರ ಹತ್ರ ಪಾರ್ಸಲ್ ತಗೋಬಾರ್ದೂಂತ ವಾಚ್ ಮ್ಯಾನಿಗೆ ಎಚ್ಚರಿಸಿ!'' ಎಂದವರೇ ಹೊರಡಲು ಸಿದ್ಧರಾದರು.

''ಸರ್! ತುಂಬಾ ಥ್ಯಾಂಕ್ಸ್ ಸರ್! ತುಂಬಾ ತೊಂದ್ರೆ ತಗೊಂಡ್ರಿ! ಮನೆಗ್ ಬಂದು ಒಂದ್ ಲೋಟ ಕಾಪಿನಾದ್ರೂ ಕುಡ್ಕೊಂಡು ಹೋಗಿ, ಬನ್ನಿ.'' ಎಂದೆ.

''ಏ...ನೂ ಯೋಚ್ನೆ ಮಾಡ್ಬೇಡಿ! ಕಾಪಿ ಯಾಕ್ರೀ? ನಿಪ್ಪಟ್ಟೂ ತಿಂದು ಹೋಗ್ತೀನಿ! ಮತ್ತೊಂದ್ ದಿವ್ಸ! ಭಾವನ ತಂಗಿ ಫ್ರೆಂಡ್ ನನ್ಗೂ ಫ್ರೆಂಡ್ ಅಲ್ವೇನ್ರೀ?'' ಎಂದು ಮರ್ಮವಾದ ನಗೆ ಬೀರಿ ಹೊರಟೇ ಹೋದರು ಅಧಿಕಾರಿ.

ಅವ್ರು ಯಾವಾಗ್ಲೂ ಅಷ್ಟೇ! ಸ್ವಲ್ಪ ತಲೆ ಹರಟೆ! ನೀ ಬಾ ಹೋಗೋಣ.! ''ಪದ್ಮ ನನ್ನ ಕಿವಿಯ ಬಳಿ ಪಿಸುಗುಟ್ಟಿದಳು. ಎಲ್ಲರೂ ಮನೆಯೊಳಕ್ಕೆ ನುಗ್ಗಿ ಬಾಗಿಲು ಮುಚ್ಚಿಕೊಂಡ ಕೂಡಲೇ ಹಕ್ಕಿಗಳ ಕಲರವ ಶುರು. ನಡೆದು ಹೋದ ಪ್ರಕರಣದ ಬಗ್ಗೆ ಎಲ್ಲರೂ ಎಂದಿನಂತೆ ಒಟ್ಟೊಟ್ಟಿಗೆ ವಿಮರ್ಶೆ ಮಾಡತೊಡಗಿದರು. ಆಗಲೇ ಊಟದ ವೇಳೆ ಮೀರಿತ್ತು. ಆರಿ ಹೋಗಿದ್ದ ಬಿಸಿ ಬೇಳೆ ಬಾತನ್ನು ಬಿಸಿ ಮಾಡುವುದಕ್ಕೆ ನಾನು ಒಳಗೆ ಓಡಿದೇ. ಟೇಬಲ್ಲ ಮೇಲೆ ತೆರೆದಂತೆ ಬಿದ್ದಿದ್ದ ಅದೇ ಪಾರ್ಸಲ್ ಕಂಡು ಎದೆ ದಸಕ್ ಎಂದಿತು! ಅದೇ ಸಮಯ ನನ್ನ ಮೊಬೆಲ್ ಕುಹೂ ಕುಹೂ ಎಂದಿತು. ಆ ಕಡೆಯಿಂದ ನನ್ನ ತಂಗಿಯ ದನಿ! ''ಅಕ್ಕ ನಿಮ್ ಮನೇಲಿ ಬಾಂಬ್ ಸ್ಕೇರ್ ಅಂತೆ! ಫೇಸ್ ಬೋಕ್ಕಲ್ಲಿ ನೋಡ್ದೆ!'' ''ಈಗ ತಾನೆ ಪೋಲಿಸರೆಲ್ಲ ಬಂದ್ ಹೋದ್ರು...'' ನಾನು ಎಲ್ಲವನ್ನೂ ವಿವರಿಸಿ ಹೇಳಿದೆ. ''ಕಂಡ ಕಂಡ ಪಾರ್ಸಲ್ ಎಲ್ಲ ನೀನ್ಯಾಕೆ ತಗೊತ್ತೀ? ಸಧ್ಯ! ಎಲ್ಲ ಸರಿ ಹೋಯ್ತಲ್ಲ ಬಿಡು! ಅಂದ ಹಾಗೆ, ಮೊನ್ನೆ ನಾವು ಅವರೇ ಮೇಳಕ್ಕೆ ಹೋದಾಗ ತಂದ ನಿಪ್ಪಟ್ಟಿನ ಪ್ಯಾಕೆಟ್ ಆಟೋದಲ್ಲೇ ಬಿಟ್ಟು ಹೋಗಿದ್ದೆ ನೀನು! ಇವತ್ತು ನಿನ್ ಫ್ರೆಂಡ್ಸ್ ಬರ್ತಾರೆ ಅಂದಿದ್ಯಲ್ಲಾ? ಅದಕ್ಕೆ ಕಾಪಿ ಜೊತೆ ಕುರುಕಕ್ಕೆ ಆಗತ್ತೇಂತ ಚೆನ್ನಾಗಿ ಬೇರೆ ಪಾರ್ಸಲ್ ಮಾಡಿ ಡ್ರೈವರ್ ಕೈಲಿ ಕಳಿಸ್ದೆ! ಡ್ರೈವರ್ ಹೊಸಬ! ನಿನ್ಗೆ ತಲುಪಿಸಿದ್ನೋ ಇಲ್ವೋ ನೋಡೋಣಾಂತ ಕರೆದೆ! ತಿಂದ್ರಾ? ಸ್ಪೆಷಲ್ ಕಾಳು ನಿಪ್ಪಟ್ಟು ಎಲ್ರಿಗೂ ಇಷ್ಟ ಆಯ್ತಾ?'' ಎಂದು ಹುಮ್ಮಸ್ಸಿನಿಂದ ಬಡ ಬಡಿಸಿದಳು ನನ್ನ ತಂಗಿ. ಟೇಬಲ್ಲ ಮೇಲೆ ತೆರೆದಿದ್ದ ಪಾರ್ಸಲಿನಿಂದ ಸ್ವಲ್ಪ ಜಾರಿ ಇಣುಕಿ ನೋಡುತ್ತಿದ್ದ ನಿಪಟ್ಟು ನನ್ನನ್ನು ಹಂಗಿಸುತ್ತಿದ್ದ ಹಾಗನ್ನಿಸಿತು!

**(ಮಧ್ಯಪ್ರದೇಶದ ಮೈಕಾಲ ಬೆಟ್ಟದ ಜಾನಪದ ಗೀತೆ)**

''ನಮಿಪೆ, ನಿನಗೆ ವೈದ್ಯರಾಜ ನೀನು ಯಮನಿಗಣ್ಣನು''
''ಎನ್ನನಿಂತು ಕರೆವುದೇಕೆ?'' ಎನಲು ''ಕೇಳು, ಪೇಳ್ವೆನು;
ಯಮನು ಜನರ ಹರಣವನು ಮಾತ್ರ ಸೆಳೆದು ಕೊಂಬನು;
ಹರಣದೊಡನೆ ಬಿಡದೆ ನೀನು ಸೆಳೆವೆ ಅವರ ಹಣವನೂ!

– ಜಯಣ್ಣ

# ಹನಿಗವನಗಳು

- ಎಚ್. ಡುಂಡಿರಾಜ್

## ಪತಿಯ ಮೊರೆ

ಮನದ ಬಾನಲ್ಲಿ ಸದಾ
ಮಿನುಗುತ್ತಿರುವ ತಾರೆ
ಒಂಟಿ ಬಾಳ ಮರುಭೂಮಿಯಲ್ಲಿ
ದೊರಕಿದ ನೀರೆ
ದಾಂಪತ್ಯದ ಇಡ್ಲಿಯ
ಚಟ್ನಿ ಸಾಂಬಾರೆ
ತವರಿಂದ ಬೇಗ ಬಾರೆ!

◈◈◈

## ಇಷ್ಟ

ಯಾರೂ ಸ್ವೀಕರಿಸುವುದಿಲ್ಲ
ಇಷ್ಟಪಡುವುದಿಲ್ಲ
ಕಳ್ಳ ನೋಟನ್ನು
ಆದರೆ
ಬಹಳಷ್ಟು ಜನರು
ಇಷ್ಟಪಡುತ್ತಾರೆ
ಕಳ್ಳ ನೋಟವನ್ನು!

◈◈◈

## ದೇವಸ್ಥಾನದಲ್ಲಿ

ದೇವರನ್ನು ನೋಡಲು
ಉದ್ದದ ಸರತಿಸಾಲು
ಸಹಿಸಲಸಾಧ್ಯ ಸೆಖೆ
ಒದ್ದೆಯಾಗಿತ್ತು ಮೈ ಬೆವರಿಗೆ
ಮನಸ್ಸಿನಲ್ಲೆ ಒಂದು
ಧನ್ಯವಾದ ಹೇಳಿದೆ
ಅಂಗಿ ತೆಗೆ ಅಂದವರಿಗೆ!

◈◈◈


## ಈಶ್ವರ

ಎಲ್ಲ ದೇವರಂತಲ್ಲ ನಮ್ಮ ಶಿವ
ಕೊಟ್ಟೇ ಕೊಡುತ್ತಾನೆ ಅವ
ಭಕ್ತರಿಗೆ ಬೇಡಿದ ವರ
ಏಕೆಂದರೆ ಆತನ ಹೆಸರೇ
ಈಶ್-ವರ!

◈◈◈

## ಸಮಸ್ಯೆ

ಕೆಲಸ ಬಾಕಿ ಉಳಿಯುವುದಕ್ಕೆ
ಬಹಳಷ್ಟು ಜನ ನೀಡುವ ಕಾರಣ
ಬಿಡುವಿಲ್ಲ ಅಥವಾ ನೆನಪಿಲ್ಲ
ನನಗೆ ಬಿಡುವೂ ಇರುತ್ತದೆ
ನೆನಪೂ ಆಗುತ್ತದೆ
ಸಮಸ್ಯೆ ಎಂದರೆ
ನೆನಪಾದಾಗ ಬಿಡುವಿರುವುದಿಲ್ಲ
ಬಿಡುವಿದ್ದಾಗ ನೆನಪಿರುವುದಿಲ್ಲ!


Ravi Graphics
OFFSET PRINTERS
BRINGING colours ALIVE
colours
53/8, 2nd Main Road, Industrial Town, Rajajinagar, Bangalore - 560 010
Tel: 4088 9999/77, Fax : 4088 9944 | website : www.ravigraphics.com

# ಅಶುಭ ಶುಕ್ರವಾರ

**- ಡಾ. ಡಿ.ವಿ. ಗುರುಪ್ರಸಾದ್**

"ಏನಪ್ಪಾ ಇದು? ಷಷ್ಠಿ ದಿವಸ ಪ್ರಯಾಣ ಮಾಡೋಕೆ ಹೊರಟಿದೀಯಾ, ಯಾವ ಕಾರಣಕ್ಕೂ ಈ ದಿನ ಪ್ರಯಾಣ ನಿಷಿದ್ಧ ಎಂದು ನಿನಗೆ ಗೊತ್ತಿಲ್ಲವೇ'' ಎಂದು 80 ವರ್ಷದ ಅಮ್ಮ ಕೇಳಿದಾಗ ತುಟಿ ಬಿಚ್ಚಲೇ ಇಲ್ಲ. ''ಅಲ್ಲಾ ಕಣಪ್ಪಾ, ಹೋದ ಸಲ ನೀನು, ನಿನ್ನ ಹೆಂಡತಿ ಷಷ್ಠಿ ದಿನ ಪ್ರಯಾಣ ಮಾಡಿ ಆಕ್ಸಿಡೆಂಟ್‌ಗೆ ತುತ್ತಾಗಿ ಇಪ್ಪತ್ತೊಂದು ದಿನ ಆಸ್ಪತ್ರೆಯಲ್ಲಿ ಕಳೆದ ಮೇಲೂ ನಿನಗೆ ಬುದ್ಧಿ ಬರಲಿಲ್ಲವೇ'' ಎಂದಾಗ ನನಗೂ ರೇಗಿತು.

''ಅಮ್ಮಾ ನಾನು ವಿಮಾನ ಪ್ರಯಾಣದ ಟಿಕೆಟ್ ಬುಕ್ ಮಾಡಿದಾಗ ದಿನ, ಘಳಿಗೆ ನೋಡೋದ್ರಲ್ಲಿ ಅರ್ಥ ಇಲ್ಲ ಅಂತಲೇ ನಂಬಿದ್ದೇನೆ. ಇವತ್ತಿನ ದಿನದ ಪ್ರಯಾಣಕ್ಕೆ ಅತಿ ಕಡಿಮೆ ಬೆಲೆಯಲ್ಲಿ ಯಾವ ಫ್ಲೈಟ್ ಟಿಕೆಟ್ ಸಿಗ್ತೋ, ಅದನ್ನೇ ಬುಕ್ ಮಾಡಿದೆ. ಮುಂಬೈನಿಂದ ಬೆಂಗಳೂರಿಗೆ ತಲಾ ಒಬ್ಬರಿಗೆ 1600 ರೂಪಾಯಿ ಅಂತೆ ಟಿಕೆಟ್ ಸಿಕ್ಕಿದೆ. ಬೇರೆ ಫ್ಲೈಟ್‌ನಲ್ಲಾಗಿದ್ದರೆ 3000 ರೂಪಾಯಿ ಆಗ್ತಾ ಇತ್ತು. ನಾಳೇಗೇ ಅಂತ ಬುಕ್ ಮಾಡಿದ್ರೆ 4000 ರೂಪಾಯಿ ಆಗ್ತಿತ್ತು. ಇದಕ್ಕೆ ಡೈನಾಮಿಕ್ ಟಿಕೆಟಿಂಗ್ ಅಂತ ಕರೀತಾರೆ'' ಎಂದೆ.

**ವಿಮಾನ ಸುರಕ್ಷಿತವಾಗಿ ಕೆಳಗಿಳಿಯಲು ಭಗವಂತನೇ ಕಾರಣ ಎಂದು ಅಜ್ಜಿಯ ನಂಬಿಕೆ**

''ಏನೋ ಅಪ್ಪಾ, ನೀನು ಸೀನಿಯರ್ ಸಿಟಿಜನ್ ಆದ ನಂತರವೂ ನಿನ್ನ ಬುದ್ಧಿ ಬಲೀಲಿಲ್ಲ. ನಾವು ಇಷ್ಟೊಂದು ಜನ ಒಂದೇ ಕುಟುಂಬದ ಸದಸ್ಯರು ಒಟ್ಟಾಗಿ ಪ್ರಯಾಣ ಮಾಡ್ತಾ ಇದೀವಿ. ನನ್ನನ್ನಾದರೂ ಬಿಡು, ವಯಸ್ಸಾದವಳು, ಒಂದು ವರ್ಷದ ಕಂದನ ಬಗ್ಗೆ ಯೋಚಿಸಬಾರದಿತ್ತೇ. ನೀನು ಪೊಲೀಸ್ ಕೆಲಸದಲ್ಲಿದ್ದಾಗ ಹೇಳ್ತಾ ಇದ್ದೆ. ಒಂದೇ ವಿಮಾನದಲ್ಲಿ ದೇಶದ ಪ್ರಧಾನಿ ಮತ್ತು ಅಧ್ಯಕ್ಷರು ಹೋಗಲೇಬಾರದೂಂತ ನಿಯಮ ಇದೆ ಅಂತ. ಷಷ್ಠಿ ದಿವಸ ಇಡೀ ಕುಟುಂಬವನ್ನೇ ಒಂದೇ ವಿಮಾನದಲ್ಲಿ ಕರೆದುಕೊಂಡು ಹೋಗಲು ನಿನಗೆ ಬುದ್ಧಿನಾದ್ರೂ ಹೇಗೆ ಬಂತು?'' ಅಂತ ಅಮ್ಮ ಅಂದಾಗ ''ನೀನು ಸುಮ್ನೆ ಇರು'' ಅಂತ ಬಾಯಿ ಬಡಿದು ಚೆಕ್‌ಇನ್ ಕೌಂಟರ್‌ನತ್ತ ಎಲ್ಲರನ್ನೂ ಕರೆದೊಯ್ದೆ.

ಪ್ರತಿಯೊಬ್ಬರನ್ನೂ ಅವರವರ ಗುರುತಿನ ಪತ್ರದ ಜತೆ ಹೋಲಿಸಿದ ಚೆಕ್‌ಇನ್ ಲಲನೆ ಎಲ್ಲರಿಗೂ ಬೋರ್ಡಿಂಗ್ ಪಾಸ್‌ಕೊಟ್ಟು ''ಒಟ್ಟು ನೀವು ಹದಿಮೂರು ಜನ ತಾನೇ?'' ಎಂದಳು. ನಾನು ''ಹೂಂ'' ಅಂದೆ.

ಅಷ್ಟರಲ್ಲಿ ನನ್ನ ಮಗ ''ಅಜ್ಜಿ, ನಿನಗೆ ಇವತ್ತಿನ ವಿಶೇಷ ಗೊತ್ತಾ'' ಎಂದ. ನಮ್ಮಮ್ಮ ಅವನತ್ತ ಪ್ರಶ್ನಾರ್ಥಕ ಮುಖ ಮಾಡಿದರು. ''ಅಜ್ಜಿ ನಮ್ಮ ಗುಂಪು 13 ಜನರದ್ದು, ಇವತ್ತಿನ ದಿನ 13ನೇ

ತಾರೀಖು'' ಮತ್ತೆ ಇವತ್ತು ಶುಕ್ರವಾರ, ಎಲ್ಲಾಅಶುಭವೇ. ನಮ್ಮ ಅಮೇರಿಕಾದಲ್ಲಿ ''ಫ್ರೈಡೇ, ದಿ ಥರ್ಟಿನ್ತ್'' ಬಂದರೆ ಯಾರೂ ಯಾವ ಕಾರ್ಯವನ್ನೂ ಮಾಡುವುದಿಲ್ಲ, ಪ್ರಯಾಣವನ್ನಂತೂ ಮಾಡುವುದೇಇಲ್ಲ'' ಎಂದು ನಮ್ಮಮ್ಮನಿಗೆ ತಿದಿ ಒತ್ತಿದ.

''ಮುಚ್ಕೋ ಬಾಯಿ, ಅಮೇರಿಕಾದಲ್ಲಿದ್ರೂ ನೀನು ಇಷ್ಟು ಮೂಢನಂಬಿಕೆ ಇಟ್ಕೊಂಡಿದೀಯಾ'' ಎಂದು ದಬಾಯಿಸಿದಾಗ ''ಅಪ್ಪಾ, ನನಗಂತೂ ಒಂಚೂರೂ ಮೂಢನಂಬಿಕೆ ಇಲ್ಲ, ಆದ್ರೆ ಅಜ್ಜಿಗೆ ಈ ದಿವಸದ ವಿಶೇಷ ನೆನಪಿಸಿದೆ ಅಷ್ಟೇ'' ಎಂದು ಕಣ್ಣು ಮಿಟುಕಿಸಿದ.

ವಿಮಾನ ಹೊರಡುವ ಕರೆ ಬರುವವರೆಗೂ ವೇಟಿಂಗ್ ಹಾಲ್‌ನಲ್ಲಿ ಕಾಯ್ತಾ ಇದ್ವಿ. ಅಮ್ಮನ ಮುಖದಲ್ಲಿ ಗಾಭರಿಯೋ, ಗಾಭರಿ. ಯಾರ ಜತೆಯೂ ಮಾತನಾಡಲಿಲ್ಲ, ಕಣ್ಣು ಮುಚ್ಚಿ ಎರಡೂ ಕೈಗಳನ್ನು ಬಿಗಿಹಿಡಿದು ಧ್ಯಾನ ಮಾಡುತ್ತಾ ಕುಳಿತಳು.

ಹಾಗೂ ಹೀಗೂ ಅಮ್ಮ ಹೆದರಿಕೊಂಡೇ ವಿಮಾನ ಏರಿದಳು. ವಿಮಾನದ ಬಾಗಿಲುಗಳು ಮುಚ್ಚಿದ್ದ ಕೂಡಲೇ ನನ್ನ ಮಗಳು ''ಅಜ್ಜಿ ಈಗ ಟೈಮ್ ಎಷ್ಟು ಗೊತ್ತಾ'' ಎಂದಳು. ವಾಚ್ ನೋಡಿಕಂಡ ಅಮ್ಮ ಒಂದು ಗಂಟೆ ಮಧ್ಯಾಹ್ನ'' ಎಂದುತ್ತರ ಕೊಟ್ಟಳು. ನನ್ನ ಪುತ್ರಿ ''ಅಜ್ಜಿ ಒಂದು ಗಂಟೆ ಅಂದರೆ ರೈಲ್ವೆ ಲೆಕ್ಕಚಾರದಲ್ಲಿ13.00 ಗಂಟೆ ಅಂತ. ನೋಡಿ ಇವತ್ತಿನ ದಿನ 13, ನಾವು ಪ್ರಯಾಣ ಮಾಡುತ್ತಿರುವ ಗುಂಪು 13 ಜನರದ್ದು, ಈ ವಿಮಾನ ಹೊರಡುವ ಸಮಯ 13 ಗಂಟೆ, ಮೇಲಾಗಿ ಇವತ್ತು ಷಷ್ಠಿ'' ಅಂದಳು.

''ಏನೇ, ಒಂದು ವರ್ಷದ ಕೂಸಿನ ತಾಯಿಯಾದ ನೀನು ನಿಮ್ಮಪ್ಪನಿಗೆ ಮೊದಲೇ ಹೇಳೊಕ್ಕೆ ಆಗ್ತಾ ಇರಲಿಲ್ವಾ'' ಅಂದಳು ಅಮ್ಮ. ಅಷ್ಟರಲ್ಲಿ ಅವಳೇ ''ನಿಮ್ಮಪ್ಪ ಯಾರ ಮಾತು ತಾನೇ ಕೇಳ್ತಾನೆ, ಮುಂದೆ ಏನು ಕಾದಿದೆಯೋ ಯಾರಿಗೆ ಗೊತ್ತು'' ಅಂತ ಹೇಳಿ ಸುಮ್ಮನಾದಳು.

ವಿಮಾನದ ಧ್ವನಿವರ್ಧಕದಲ್ಲಿ ''ಮುಂಬೈನಿಂದ ಬೆಂಗಳೂರಿಗೆ ಹೋಗುವ ಗೋ-ಏರ್ ವಿಮಾನದಲ್ಲಿ ನಿಮಗೆ ಸ್ವಾಗತ. ನಮ್ಮ ವಿಮಾನದ ಮುಖ್ಯ ಪೈಲೆಟ್ ಸ್ಯಾಮ್ ಕೊಲಂಬಿಯಾ ದೇಶದವನು. ಸಹ ವೈಮಾನಕಿ ರಶ್ಮಿ ಗುಜರಾತ್‌ನವಳು'' ಎನ್ನುವ ಅನೌನ್ಸ್‌ಮೆಂಟ್ ಬಂದಿತು.

ಕೆಲವೇ ನಿಮಿಷಗಳ ನಂತರ ವಿಮಾನ ಗಗನಕ್ಕೇರಿತು. ನನ್ನ ಪಕ್ಕದ ಸೀಟಿನಲ್ಲೇ ಇದ್ದ ಅಮ್ಮ ಸೀಟಿನ ಕೈ ಹಿಡಿಕೆಗಳನ್ನು ಗಟ್ಟಿಯಾಗಿ ಹಿಡಿದು ಬಿಗಿಯಾಗಿ ಕಣ್ಣು ಮುಚ್ಚಿದ್ದಳು. ಸುಮಾರು ಅರ್ಧ ಗಂಟೆಯ ನಂತರ ತಿಂಡಿ ತಿನಿಸುಗಳನ್ನು ಮಾರಲು ಪರಿಚಾರಕಿಯರು ಬಂದರು.

''ಅಮ್ಮಾ ಏನಾದ್ರೂ ತಿಂತೀಯಾ'' ಎಂದು ಕೇಳಿದೆ.

ನನ್ನತ್ತ ದುರುಗುಟ್ಟಿಕೊಂಡು ನೋಡಿದ ಸ್ಟೈಲ್ ನೋಡಿ ನಾನೇ ಬಾಯಿ ಮುಚ್ಚಿದೆ.

ಕೆಲವು ನಿಮಿಷಗಳ ನಂತರ ವಿಮಾನದ ಸಹ ವೈಮಾನಕಿ ಸೀಟ್‌ಬೆಲ್ಟ್ ಬಿಗಿಯಾಗಿ ಕಟ್ಟಿಕೊಳ್ಳಿ, ನಾವು ಈಗ ಹೊಯ್ದಾಟವನ್ನು ಅನುಭವಿಸುತ್ತಿದ್ದೇವೆ ಎಂದಳು. ನಾನು ಸುಮ್ಮನಿರಲಾರದೆ ಎಲ್ಲರಿಗೂ ಕೇಳುವ ಹಾಗೆ ಈಗ ಎರಡು ತಿಂಗಳ ಹಿಂದೆ ಆದ

ಅಫಘಾತದಲ್ಲಿ ವಿಮಾನದ ಚಾಲಕ ಬೇರೆ ದೇಶದ ಪ್ರಜೆಯಾಗಿದ್ದರಿಂದ ವಿಮಾನಯಾನ ಹಾರಾಟ ನಿಯಂತ್ರಕರು ಅವನಿಗೆ ಇಂಗ್ಲೀಷಿನಲ್ಲಿ ಕೊಟ್ಟ ಸೂಚನೆ ಅರ್ಥ ಮಾಡಿಕೊಳ್ಳದ್ದರಿಂದ ವಿಮಾನ ಬಿದ್ದು ಹೋಯಿತಂತೆ'' ಎಂದೆ. ಇದಕ್ಕೆ ಪೂರಕವಾಗಿ ನನ್ನ ಪುತ್ರ ''ಹೆಂಗಸರು ವೈಮಾನಿಕ ರಾಗಿರುವಾಗ ಅಫಘಾತಗಳು ಜಾಸ್ತಿ ಯಾಗುತ್ತವೆ ಎಂಬ ವರದಿ ಓದಿದ್ದೆ'' ಅಂದ.

ಅಷ್ಟರಲ್ಲಿ ವಿಮಾನ ಸುಂಟರಗಾಳಿಗೆ ಸಿಕ್ಕ ತರಗೆಲೆಯಂತೆ ತೀವ್ರವಾಗಿ ಹೊಯ್ದಾಡ ತೊಡಗಿತು. ಪ್ರಯಾಣಿಕರೆಲ್ಲಾ ಜೋರಾಗಿ ಕಿರುಚಲು ಪ್ರಾರಂಭಿಸಿದರು. ಎಲ್ಲರ ಮುಖದಲ್ಲೂ ಗಾಭರಿ. ಅಮ್ಮ ಅಷ್ಟರಲ್ಲಿ ಜೋರಾಗಿ ಹನುಮಾನ್ ಚಾಲೀಸಾ ಪಠಿಸಲು ಶುರುಮಾಡಿದಳು. ಹನುಮಾನ್ ಚಾಲೀಸಾ ಗೊತ್ತಿದ್ದ ಸಹಪ್ರಯಾಣಿಕರೆಲ್ಲರೂ ಮಂಗಳವಾರದ ಭಜನೆಯಂತೆ ಜೈ ಹನುಮಾನ್ ಜ್ಞಾನಗುಣ ಸಾಗರನ ಗುಣಗಾನ ಮಾಡತೊಡಗಿದರು.

ಹನುಮಾನ್ ಚಾಲೀಸಾ ಮುಗಿಯವ ವೇಳೆಗೆ ನಮ್ಮ ವಿಮಾನ ಶಾಂತವಾದ ಆಗಸವನ್ನು ಪ್ರವೇಶಿಸಿ ಕುಲಕದೇ ಪ್ರಯಾಣಿಸುತ್ತಿತ್ತು. ಎಲ್ಲಾ ಪ್ರಯಾಣಿಕರೂ ಒಟ್ಟಾಗಿ ನಿಟ್ಟುಸಿರುಬಿಟ್ಟಾಗ ಜೋರಾಗಿ ಸಿಡಿಲು ಬಡಿದಂತೆ ಭಾಸವಾಯಿತು.

ಹತ್ತು ನಿಮಿಷದ ನಂತರ ಸುರಕ್ಷಿತವಾಗಿ ನಮ್ಮ ವಿಮಾನ ಬೆಂಗಳೂರಿನಲ್ಲಿಳಿಯಿತು. ವಿಮಾನದಿಂದ ನಾವು ಹೊರ ಬರುತ್ತಿರುವಂತೆಯೇ ಸಣ್ಣದಾಗಿ ಮಳೆ ಹನಿಯತೊಡಗಿತು.

ಬೆಂಗಳೂರಿನ ನೆಲದ ಮೇಲೆ ಕಾಲಿಟ್ಟ ''ಅಮ್ಮ ನೋಡೋ ಎಂತಹ ಶುಭಶಕುನ. ನಾವು ಇಲ್ಲಿಗೆ ಬರುವುದಕ್ಕೂ ಮಳೆ ಪ್ರಾರಂಭವಾಗುವುದಕ್ಕೂ ಏನು ಅರ್ಥ ಗೊತ್ತೇ ? ಆ ಭಗವಂತ ನಮ್ಮನ್ನು ಕಾಪಾಡಿದ್ದಾನೆ ಅಂತ. ಇನ್ನು ಮುಂದಾದರೂ ಷಷ್ಠಿ ದಿನ ಪ್ರಯಾಣ ಮಾಡುವ ಮೂರ್ಖತನ ಮಾಡಬೇಡ '' ಎಂದಳು.

ಟರ್ಮಿನಲ್‌ನಲ್ಲಿ ನಾನು ಸೂಟ್‌ಕೇಸ್‌ಗಳಿಗಾಗಿ ಕಾಯ್ತಿದ್ದಾಗ ಸ್ನೇಹಿತನೊಬ್ಬ ಸಿಕ್ಕ. ಅವನು ''ಹದಿಮೂರನೇ ತಾರೀಖು ಹಾಗೂ ಮಂಗಳವಾರಗಳಂದು ವಿಮಾನ ಪ್ರಯಾಣ ದರಗಳು ಸಾಕಷ್ಟು ಕಡಿಮೆ ಆಗುತ್ತವೆ. ಏಕೆಂದರೆ ಆ ದಿನಗಳು ಡಿಮ್ಯಾಂಡ್ ಕಮ್ಮಿ. ನಾನು ನೋಡಿ ನೋಡಿ ಹದಿಮೂರನೇ ತಾರೀಖಿಗೇ ಟಿಕೆಟ್ ಖರೀದಿಸ್ತೀನಿ'' ಎಂದ.

ಇನ್ನು ಮುಂದೆ ನಾನೂ ಅದನ್ನೇ ಮಾಡೋದು ಎಂದೆ. ಇದನ್ನು ಕೇಳಿಸಿಕೊಂಡ ಅಮ್ಮ ''ಬಿಡ್ತು ಬಿಡ್ತು'' ಎಂದಳು.

**ಇಸಮಸ್ಯೆ**

ರೋಗಿ : ಡಾಕ್ಟರೇ ನನಗೆ ಇದ್ದಕ್ಕಿದ್ದಂತೆ ಕೋಪ ಏರಿಬಿಡುತ್ತೆ ಏನು ಮಾಡ್ಲಿ.

ಡಾಕ್ಟರು : ಯಾವಾಗ ಹಾಗಾಗುತ್ತೆ?

ರೋಗಿ : ಈಗ್ತಾನೆ ಬಡ್ಕೊಂಡ್ನಲ್ಲ ನಿನ್ನ ಮನೆ ಕಾಯವಾಗ. ನಿನಗೇನು ಕಿವುಡು ಬಂದು ಬಡ್ಕೊಂಡಿದ್ಯಾ.



# ಅಜ್ಜಿಯ ಆನ್-ಲೈನ್ ಟೂರ್

**- ಇ.ಆರ್. ರಾಮಚಂದ್ರನ್**

**ಮಾ**ರ್ಗಶಿರ ಮಾಸದಲ್ಲಿ ಭಕ್ತರು ಬೇಗೆದ್ದು ದೇವಸ್ಥಾನಕ್ಕೆ ಹೋಗುವುದು ಮುಂಚಿಂದ ಬಂದ ವಾಡಿಕೆ. ನಮ್ಮ ಮನೆಯ ಹತ್ತಿರದಲ್ಲಿರುವ ಬಾಲಾಜಿ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲೂ ಬೆಳಿಗ್ಗೆ 5.30ಕ್ಕೆ ಮೂಡುವ ಸುಬ್ಬುಲಕ್ಷ್ಮಿಯ ವೆಂಕಟೇಶ ಸುಪ್ರಭಾತ ಕಿವಿಗೆ ಬಿದ್ದ ಮೇಲೇ ಎಲ್ಲಾರು ಏಳುವುದು.

ಯಥಾ ಪ್ರಕಾರ ನಮ್ಮ ಅಜ್ಜಿಯ ಗ್ರೂಪು ನಸುಕಿನಲ್ಲೇ ಎದ್ದು ಕೊರೆಯುವ ಛಳಿಯಲ್ಲಿ ಸ್ನಾನ ಮಾಡಿ ದೇವಸ್ಥಾನಕ್ಕೆ ಹೊರಡಲು ಸಿದ್ಧರಾಗುತ್ತಿದ್ದರು.

ಅಲ್ಲಿ ಹೋಗಿ ಬಂದ ಮೇಲೇನೇ ಬಾಯಿಗೆ ಮೊದಲ ಕಾಫಿ ಬೀಳುತ್ತಿತ್ತು.

ಈ ಸರ್ತಿಯೂ ಬೆಳಿಗ್ಗೆ ಕತ್ತಲಲ್ಲಿಯೇ ಅಜ್ಜಿಯ ಪಟಾಲಂ, ಬೆಚ್ಚಗೆ ಶಾಲು ಮಫ್ಲರ್ ಹೊದ್ದುಕೊಂಡು, ಕಾಲಿಗೆ ಸಾಕ್ಸ್, ಸ್ಪೋರ್ಟ್ಸ್ ಶೂ ಹಾಕಿ ದಿನಾ ಒಂದು ತಿಂಗಳು ಹೋಗಿ ಬಂದರು.

**ನಿತ್ಯ ರಾಮಾ, ಕೃಷ್ಣಾ.... ಅನ್ನೋ ಅಜ್ಜಿ ಬಾಯಲ್ಲಿ ವರ್ಡ್, ಇಂಕ್‌ಜೆಟ್, ಲೇಸರ್!**

ಅರ್ಧ ನಿದ್ದೆಯಲ್ಲಿ ಎದ್ದು, ಮೈಗೆ ತಣ್ಣೀರು ಸುರುಕೊಂಡು, ಬರೀಹೊಟ್ಟೆಯಲ್ಲಿ ಹೋಗಿ ಬಂದ ಸುಸ್ತು ಇದ್ದರೂ ಅಜ್ಜಿಯ ಮುಖದಲ್ಲಿ ಒಂದು ಹೊಸ ಲವಲವಿಕೆ, ಎಲ್ಲಿಲ್ಲದ ಉತ್ಸಾಹ ಕಂಡು ಬರುತ್ತಿತ್ತು. ದೇವಸ್ಥಾನದ ಪ್ರಸಾದದ ಪ್ರಭಾವವೋ ಏನು ಕಥೆಯೋ ಅಂತ ಅಂದುಕೊಂಡೆ.

★★★

ಒಂದು ದಿನ ಬೆಳಿಗ್ಗೆ ನಾನು ಓದುತ್ತಿದ್ದ ಪೇಪರಿನ ಮುಂದೆ ಅಜ್ಜಿ ಒಂದು ಕಾಗದವನ್ನಿಟ್ಟರು. ಎ–4 ಶೀಟಿನಲ್ಲಿ ನೀಟಾಗಿ ಟೈಪಾದ ಕಾಗದದಲ್ಲಿ, 'ಟೂರ್ ಪ್ರೋಗಾಮ್ ' ಅಂತ ಬರೆದ ಹೆಡಿಂಗ್ನ ಕೆಳಗೆ, ತಾರೀಖ್ ಹಾಕಿ, ಯಾವ ಯಾವ ತೀರ್ಥಸ್ಥಳ ಎಲ್ಲಾ ಪಟ್ಟಿ ಮಾಡಿತ್ತು.

'ಅಜ್ಜಿ! ಏನಿದು? ಯಾರ್ದು ಈ ತೀರ್ಥಯಾತ್ರೆ ಪ್ರೋಗ್ರಾಮ್?'

'ನಮ್ಮದೇ ಕಣೋ! ಹೇಗಿದೆ?'

'ಚೆನ್ನಾಗಿದೆ. ಇದೆಲ್ಲಾ ಯಾರು ಟೈಪ್ ಮಾಡಿಕೊಟ್ರು?'

'ನಾನೇ ಮಾಡಿದ್ದು! ವರ್ಡ್ನಲ್ಲಿ. ಸೈಬರ್ ಸೆಂಟರ್ನವನ ಹತ್ತಿರ ಲೇಸರ್ ಪ್ರಿಂಟರ್ ಇರ್ಲಿಲ್ಲ, ಹಾಳು ಇಂಕ್ ಜೆಟ್ ನಲ್ಲಿ ಪ್ರಿಂಟ್ ಮಾಡ್ದ... ಅಲ್ಲಲ್ಲಿ ಕೆಟ್ಟ ಮಸಿ ಬಂದಿದೆ.'

'ನಿತ್ಯ ರಾಮಾ, ಕೃಷ್ಣಾ.... ಅನ್ನೋವ್ರು ವರ್ಡ್, ಇಂಕ್‌ಜೆಟ್, ಲೇಸರ್? ಅಜ್ಜಿ ಇದೆಲ್ಲಾ ಎಲ್ಲಿಂದ ಕಲಿತೆ?'

'ದಿನಾ ಬೆಳಿಗ್ಗೆ ಒಂದು ತಿಂಗಳು ಕ್ಲಾಸಿಗೆ ಹೋಗ್ತಿದ್ವಲ್ಲಾ... ಆಗ. ಸರಿಯಾಗಿ ಇದೆಯಾ?'

'ಸರಿಯಾಗಾ..? ಅದರಪ್ಪನಂತೆ ಬಂದಿದೆ.. ನೀನು ಈ ಸಲ ಮಾರ್ಗಶಿರ ಮಾಸದಲ್ಲಿ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ಹೋಗ್ಲಿಲ್ವಾ?'

'ಹುಟ್ಟಿದಾಗಿಂದ ಪ್ರತೀ ವರ್ಷ ಅದನ್ನೇ ಮಾಡ್ತಾ ಇದೀನಿ. ಅದಕ್ಕೆ ಈ ವರ್ಷ ನಮ್ಮ ಹಾರ್ಡ್‌ವೇರ್ ಹರಿಣಿ ನಾವು ಯಾತಕ್ಕೆ ಕಂಪ್ಯೂಟರ್ ಕೋರ್ಸ್ ಮಾಡ್ಬಾರ್ದೂಂತ ಸಲಹೆ ಕೊಟ್ರು. ಅದಕ್ಕೆ ನಮ್ಮ ಸಾಫ್ಟ್‌ವೇರ್ ಸೀತಮ್ಮ –ಅವರ ಮೊಮ್ಮಕ್ಕಳು ಇಬ್ಬರೂ ಸಾಫ್ಟ್‌ವೇರ್ನಲ್ಲಿ ಹೆಣ್ಣು ಹುಲಿಗಳು – ನಾವೂ ಮಾಡೋಣಾಂತ ಹಠಹಿಡಿದ್ರು.'

'ನೀನು ಗ್ರೂಪ್ ಲೀಡರ್ – ಅಂಡರ್ ವೇರ್ ಅಜ್ಜಿ; ಹೂಂ ಅಂದ್ಯಾ?'

'ಸಾಕೋ ನಿನ್ನ ತಲೆಹರಟೆ. ಒಟ್ನಲ್ಲಿ ಶುರು ಮಾಡಿದ್ವಿ.'

'ಅಜ್ಜಿ! ಗ್ರೇಟ್ ಕೆಲಸ ಮಾಡೀದೀರ ನೀವೆಲ್ಲಾ ಸೇರಿ...'

'ನಾವು ಒಂದಿಷ್ಟು ದೇವಸ್ಥಾನ ಟೂರ್ ಮಾಡೋಣಾಂತ ಪ್ಲಾನ್ ಹಾಕೀದೀವಿ. ನರ್ಮದಾ ಟ್ರಾವಲ್ಸ್ ಮೂಲಕ ಹೋಗ್ತೀವಿ. ನಮ್ಮ ಒಂಟಿಕೊಪ್ಪಲ್ ಪೋಸ್ಟ್ ಆಫೀಸಿನವರು ಬೆಳಿಗ್ಗೆ 4 ಘಂಟೆಗೆ ನಮಗೆ ತಿರುಪತೀಲಿ ಸ್ಪೆಷಲ್ ದರ್ಶನ ಬುಕ್ ಮಾಡಿದಾರೆ. ಅವರೇ ಫ್ಲಿಪ್‌ಕಾರ್ಟಿನಲ್ಲಿ ಲಾಡು ಮತ್ತು ವಡೆ ನಮ್ಮ ನಮ್ಮ ಮನೆಗೆ ತಲುಪಿಸ್ತಾರೆ, ಅಲ್ಲಿಂದ ಪ್ರಸಾದ ಹೊತ್ತುಕೊಂಡು ಬರೋ ತಂಟೆ ತಪ್ತು.'

'ಅಲ್ಲಿ ಎಲ್ಲಿ ಇಳ್ಕೋತೀರೀ ಅಜ್ಜಿ. ಈ ಟೂರಿಸ್ಟ್ ಸೀಸನ್‌ನಲ್ಲಿ ಎಲ್ಲೂ ರೂಂ ಸಿಗಲ್ಲ.. ಸಿಕ್ಕಾಪಟ್ಟೆ ಕಾಸ್ಟ್ಲಿ ಬೇರೆ !'

'ಅದಕ್ಕೆ ಹರಿಣಿ ಗಂಡ ಎಲ್ಲಾ ಕಡೆ ಅವರಿಗೆ ಗುರುತಿರುವ ಲೋಕಲ್ ಹಾರ್ಡವೇರ್– ಕೊಳಾಯಿ, ಕಮ್ಮೋಡು, ಪೈಪು – ಮಾರುವವರ ಜೊತೆ ಮಾತಾಡಿ ಅವರವರ ಮನೇಲಿ ಜಾಗ ಫಿಕ್ಸ್ ಮಾಡಿದಾರೆ. ಮೂರು ಕಾಸು ಖರ್ಚಿಲ್ಲ. ಅವರು ದಸರಾ ಜಂಬೂ ಸವಾರಿ ನೋಡೋದಕ್ಕೆ ಇಲ್ಲಿಗೆ ಬಂದಾಗ ಅವರನ್ನು ನಮ್ಮ ಮನೆಗಳಲ್ಲಿ ಎರಡು ಹೊತ್ತು ಇಟ್ಟುಕೋಬೇಕು. ಅಷ್ಟೆ.'

'ಪರವಾಗಿಲ್ಲ ಅಜ್ಜಿ! ಮ್ಯೂಚುಯಲ್ ಎಕ್ಸ್ಚೇಂಜ್ ಪ್ರೋಗ್ರಾಮ್ ಹಾಕಿದೀಯಾ! ಬೆಂಗಳೂರಿನಲ್ಲಿ ಗಾಳಿ ಆಂಜನೇಯ, ದೊಡ್ಡ ಗಣಪತಿ, ಕಾಡು ಮಲ್ಲೇಶ್ವರ ದೇವಸ್ಥಾನ ವಿಸಿಟ್ ಹಾಕೀದೀರಾ....'

'ಹೌದು....ಅದಾದ ಮೇಲೆ ಅಝಿಮ್ ಪ್ರಾಮ್ಜಿಯವರು ನಮ್ಮನ್ನು ವಿಪ್ರೋ ವಿಸಿಟ್ಗೆ ಇನ್ವೈಟ್ ಮಾಡಿದಾರೆ. ಆವತ್ತು ಅವರ ಗೆಸ್ಟ್ ಹೌಸಿನಲ್ಲೇ ಇರ್ತಿವಿ. ಅವರ ಹೊಸ ಪ್ರಿಂಟರ್ನ ತೋರಿಸ್ತಾರೆ. ನಾರಾಯಣ ಮೂರ್ತಿಯವರ ಪತ್ನಿ ಸುಧಾ ಮೂರ್ತಿಯವರೂ ನಮ್ಮ ಜೊತೆ

ಬೆಂಗಳೂರಿನ ದೇವಸ್ಥಾನಕ್ಕೆ ಬರ್ತಾರೆ. ಅವರ ಮನೆಯಲ್ಲಿ ನಮ್ಮನ್ನು ಊಟಕ್ಕೆ ಕರೆದಿದ್ದಾರೆ. ಊಟವಾದ ಮೇಲೆ ಅದೇನೋ ಕ್ಲೌಡ್ ಕಂಪ್ಯೂಟಿಂಗ್ ಕಲಿಸ್ತಾರಂತೆ ನಮಗೆ.

'ಕ್ಲೌಡ್ ಕಂಪ್ಯೂಟಿಂಗ್ ಅಂದ್ರೇನಜ್ಜಿ?'

'ಕ್ಲೌಡ್ ಅಂದ್ರೆ ಮೋಡ ಅಲ್ವಾ? ಬೆಂಗಳೂರಿನಲ್ಲಿ ಯಾವಾಗ್ಲೂ ಹಾಳು ಮೋಡವೇ! ಅದರಲ್ಲಿ ಏನು ಕಲಿಸ್ತಾಳೋ ಕಾಣೆ!'

'ಅಜ್ಜಿ! ಯು ಆರ್ ಫೆನ್ಟಾಸ್ಟಿಕ್ ಐ ಸೇ!'

'ಅಲ್ಲಿಂದ ಮಧುರೈ ಮೀನಾಕ್ಷಿಯ ದೇವಸ್ಥಾನ ವಿಸಿಟ್ ಆದ ಮೇಲೆ ಚೆನ್ನೈಲಿ ಮೈಲಾಪುರದ ಕಪಾಲೀಶ್ವರರ್ ದೇವಸ್ಥಾನದವರು, ಟ್ರಿಪ್ಲಿಕೇನ್ ಪಾರ್ಥಸಾರಥಿ ದೇವಸ್ಥಾನದವರು ಸೇರಿ ನಮಗೆ ಭೋಜನ ಕೂಟ ಏರ್ಪಾಡು ಮಾಡಿದಾರೆ. ಅಲ್ಲಿ ಸಿಸ್ಕೊನವರು ಅವರ ಹೊಸಾ ಇ-ಮೇಲ್ ಸೆಕ್ಯೂರಿಟಿ ಅಪ್ಲಿಕೇಷನ್ ನಮಗೆ ತೋರಿಸಿಕೊಡುತ್ತಾರೆ.'

'ಸೆಕ್ಯೂರಿಟಿ ಅಪ್ಲಿಕೇಷನ್ ಅಂದ್ರೆ?'

'ಗೊತ್ತಿಲ್ಲ. ಇದನ್ನು ಹಾಕಿಸಿದರೆ ನಮ್ಮ ಅಪಾರ್ಟ್‌ಮೆಂಟಿನ ಸೆಕ್ಯೂರಿಟಿಲಿ ಏನಾದ್ರೂ ಬದಲಾವಣೆ ಆಗುತ್ತಾ ನೋಡ್ಬೇಕು... ನಮ್ಮ ವಾಚ್ಮನ್ಗಳು ಮಧ್ಯಾಹ್ನ ಸದಾ ನಿದ್ದೆ ಹೊಡ್ದು ಹೋದ ತಿಂಗಳು ಎರಡು ಮೋಟರ್ ಸೈಕಲ್, ಮಕ್ಕಳ ಸ್ಕೂಟಿ ಕಳ್ತನವಾಯ್ತು. ಕಿವೀಲಿ ಗುಯ್‌ಗುಟ್ಟೋ ಸೊಳ್ಳೆ ಸಂಗೀತ ಬರೋ ಹಾಗೆ ಮಿನಿಯೇಚರ್ ಮೈಕ್ರೋಫೋನ್ ಸೆಕ್ಯೂರಿಟಿ ಅಪ್ಲಿಕೇಷನ್ಗೆ ಹಾಕಿ ಕೊಡಿ ಅಂತ ಕೇಳೋಣಾಂತ ಇದೀನಿ. ಅದನ್ನು ಅವರ ಕಿವಿಗೆ ಹಾಕ್ಸಿದರೆ ನಮ್ಮ ಅಪಾರ್ಟ್‌ಮೆಂಟು ಸೇಫಾಗಿ ಇರುತ್ತೆ.'

'ಹ ಹ ಅಜ್ಜಿ.. ನಿನ್ನ ಪ್ಲಾನ್ ಜೋರು...ಮುಂದೆ ಎಲ್ಲಿಗೆ ಪ್ರಯಾಣ?'

'ಹೈದರಾಬಾದು. ಅಲ್ಲಿ ಅಷ್ಟಲಕ್ಷ್ಮಿ ದೇವಸ್ಥಾನ ಮತ್ತು ಕಾಚಿಗೂಡ ಮಹಾನ್‌ಕಾಳಿ ದೇವಸ್ಥಾನಕ್ಕೆ ಹೋದ ಮೇಲೆ, ಸಂಜೆ ಗೂಗಲ್ ಕಂಪನಿಯವರು ನಮಗೆ 'ಎಚ್-ಪಿ' ಪ್ರೋಗ್ರಾಂ ಇಟ್ಟುಕೊಂಡಿದ್ದಾರೆ.'

'ಅಜ್ಜಿ! ಗೂಗಲ್ ಒಂದು ಕಂಪನಿ, 'ಎಚ್-ಪಿ' ಇನ್ನೊಂದು ಕಂಪನಿ, 'ಹ್ಯೂಲೆಟ್-ಪೆಕಾರ್ಡ್' ಅಂತ. ಒಬ್ಬರಿಗೊಬ್ಬರು ಎಣ್ಣೆ ಸೀಗೇಕಾಯಿ ತರಹ, ಕಂಡ್ರೆ ಆಗಲ್ಲ, ನೀನು ಎಲ್ಲೋ ಕನ್‌ಫ್ಯೂಸ್ ಮಾಡಿಕೊಂಡಿದೀಯ.'

'ಇಲ್ವೋ! ಸರಿಯಾಗಿದೆ. ಗೂಗಲ್‌ನವರು ನಮಗೋಸ್ಕರವೇ ಎಚ್-ಪಿ ಮಾಡ್ಸಿದಾರೆ! ಮೊಬೈಲ್ನಲ್ಲಿ ಎಲ್ಲಾ ಹರಿಕಥೆ – ಪುರಾಣ ಕಥೆಗಳನ್ನು ಹಾಕಿ ನಮಗೆ ತೋರಿಸ್ತಾರಂತೆ. ಬಟನ್ ಒತ್ತಿದ್ರೆ, ವಟ ಸಾವಿತ್ರಿ ವ್ರತ, ಸತ್ಯನಾರಾಯಣ ಪೂಜೆ ಕಥೆ ಎಲ್ಲಾ ಕೇಳ್ಬಹುದು. ಅದನ್ನೇ ಅವರು ಪುಟ್ಟದಾಗಿ ಎಚ್-ಪಿ ಅಂತ ಕರೆಯೋದು! ಇದಾದ ಮೇಲೆ ಕೊನೆಗೆ ಗುಜರಾತು.'

'ಅಜ್ಜಿ! ನಿನ್ನ ಪ್ರೋಗ್ರಾಂ ನರೇಂದ್ರ ಮೋದಿಯವರ ಎಲೆಕ್ಷನ್ ಟೂರ್ ತರಹ ಇದೆ ! ನೀನು

ಫೇಮಸ್ ಆಗಿದೀಯ ! ನೀನಿನ್ನು ಆಟೋಗ್ರಾಫ್ ಬರೆಯೋದಕ್ಕೆ ಅಭ್ಯಾಸ ಮಾಡ್ಕೊ!'

'ಮುಂದಿನ ಪೇಜಿಗೆ ಬಾ. ದ್ವಾರಕದಲ್ಲಿ ದ್ವಾರಕಾಧೀಶ ದೇವಸ್ಥಾನಕ್ಕೆ ಹಾಗೂ ಗುಜರಾತಿನ ಗಾಂಧೀನಗರದ ಸ್ವಾಮಿನಾರಾಯಣ ದೇವಸ್ಥಾನದಿಂದ ನಮಗೆ ಆಮಂತ್ರಣ ಬಂದಿದೆ. ಮೋದಿಯವರು ಸ್ವತಃ ಟ್ವಿಟರ್‌ನಲ್ಲಿ ನಮಗೆ ಇನ್ವಿಟೇಷನ್ ಕಳಿಸಿದ್ದಾರೆಂದು ಸೀತಮ್ಮ ಹೇಳಿದರು. ಚೆನ್ನೈನಿಂದ ಅವರ ಪ್ಲೇನಿನಲ್ಲಿ ಕರೆದುಕೊಂಡು ಎಲಾ ್ಲಮುಗಿಸಿ ವಾಪಸ್ಸು ಮೈಸೂರಿಗೆ ಬಿಡುತ್ತಾರೆ. ಅಹಮದಾಬಾದಿನಿಂದ ಭಾರತದೆಲ್ಲಡೆ ಉದ್ಘಾಟನೆ ಮಾಡಲಾಗುವ 'ಸ್ಮಾರ್ಟ ಸಿಟಿ' ಸಮಾರಂಭಕ್ಕೆ ನಾವು ಸೀನಿಯರ್ ಅಜ್ಜಿಯವರು ಸೇರಿಕೊಳ್ಳಬೇಕೆಂದು ಪ್ರಧಾನಿಯವರು ಟ್ವೀಟ್ ಮಾಡಿದ್ದಾರೆ.

'ಅಜ್ಜಿ! ನನ್ನ ಬಾಯಿ ಒಣಗಿ ಹೋಗಿದೆ. ಒಂದು ಗ್ಲಾಸ್ ನೀರು ಕೊಡು. ಎಲೆಕ್ಟ್ರಾಲ್ ಅಥವ ಹಾರ್ಲಿಕ್ಸ್ ಇದ್ದರೆ ಸ್ವಲ್ಪ ಹಾಕಿ ತೊಗೊಂಡು ಬಾ.'

★★★

ಪ್ಲೇನು ಮೈಸೂರಿಗೆ ಬಂದಿಳಿಯುವ ಮುಂಚೆ ಅಜ್ಜಿ ಗ್ರೂಪು ಪ್ರಧಾನಿ ಮೋದಿಯವರಿಗೆ ಮೈಸೂರು ಅರಮನೆ, ಕೃಷ್ಣರಾಜ ಸಾಗರ ಅಣೆಕಟ್ಟು, ಇನ್ಫೋಸಿಸ್ ಆಫೀಸು ಎಲ್ಲಾ ಸಣ್ಣ ಹುಡುಗಿಯವರ ಹಾಗೆ ಕೈ ಬೆಟ್ಟು ಮಾಡಿ ತೋರಿಸಿದರು. ಇವರ ಉತ್ಸಾಹವನ್ನು ನೋಡಿ ಮೋದಿ ಮುಗುಳ್ನಕ್ಕರು.

ಮೈಸೂರು ಏರ್‌ಪೋರ್ಟಿನಲ್ಲಿ ಪ್ಲೇನಿನಿಂದ ಇಳಿದು ನಡಿಯುವಾಗ ಅಜ್ಜಿ ಅಲ್ಲಿದ್ದ ಕೊಚ್ಚೆಯ ಮೇಲೆ ಕಾಲಿಟ್ಟಾಗ ಯಾರೋ, 'ಅಯ್ಯೋ! ಅಜ್ಜಿ ಕಾಲು ಜಾರಿತು!' ಅಂತ ಕೂಗಿದರು.

★★★

'ಯಾಕೋ, ನನ್ನ ಕಾಲು ಜಾರಿತು ಅಂತ ಕೂಗಿದೆ?'

'ಅಜ್ಜಿ, ಜಾರಿ ಬಿದ್ದೆಯಲ್ಲ.. ನಿನ್ನ ಕಾಲು ಏನಾಗಿಲ್ಲ ತಾನೆ? ನಿನ್ನ ಫ್ರೆಂಡ್ಸ್ ಎಲ್ಲಿ? ಪ್ರಧಾನಿ ಮೋದಿಯವರು ಹೊರಟು ಹೋದರಾ?'

'ನನಗೆ ಏನಾಗಿದಿಯೋ ಧಾಡಿ? ನನ್ನ ಫ್ರೆಂಡ್ಸ್ ಇಲ್ಲೇ ಇದಾರೆ, ಹರಿಕಥೆಗೆ ಹೋಗ್ತಿದೀವಿ. ಪ್ರಧಾನಿ ಮೋದಿನಾ? ಮೈ ಸರಿಯಾಗಿದಿಯಾ? ಹಾಳೂ ಮೂಳೂ ತಿಂದು ಮಧ್ಯಾಹ್ನ ಮಲಗಿದ್ರೆ ಕೆಟ್ಟ ಕನಸು ಬರ್ದೆ ಮತ್ತೇನು?'

'ಅಜ್ಜಿ! ಹರಿಕಥೆನ 'ಎಚ್-ಪಿ' ಲಿ ನೋಡಲ್ವಾ?'

'ಎಚ್-ಪಿ' ನಾ? 'ಎಚ್-ಎಮ್' ಇರ್ಬೇಕು. ಹುಚ್ಚು- ಮುಂಡೇದೇ!'

ಅಜ್ಜಿಯವರ ಗುಂಪು ಒಟ್ಟಾಗಿ ಹೋಗುವುದನ್ನು ನೋಡ್ತಾ ನಾ ಕಂಡ ಕನಸನ್ನು ಮತ್ತೆ ಮೆಲುಕು ಹಾಕಿದೆ.

# ಜನ್ಮ ದಿನ

**- ಕು.ಗೋ.**

**ಮಾ**ಸ್ತಿ ವೆಂಕಟೇಶ ಐಯ್ಯಂಗಾರರ ಜನ್ಮ ದಿನ ಜೂನ್ ಆರು. ನನ್ನದೂ ಅದೇ. ಆ ಮಹಾನುಭಾವ ಬೇಕಾದಷ್ಟು ವರ್ಷ ಬದುಕಿ, ಬರೆದು ಸಂಪಾದಕರಾಗಿ, ಆಡಳಿತಾಧಿಕಾರಿಯಾಗಿ, ತುಂಬ ಕೆಲಸ ಮಾಡಿ ಒಂದಷ್ಟೂ ಪ್ರಶಸ್ತಿ ಗಳಿಸಿ ಬದುಕಿದರು. ನಾನು ಇನ್ನೂ ಇದ್ದೇನೆ. ಪ್ರತಿ ವರ್ಷವೂ ಜೂನ್ ಆರನೇ ತಾರೀಖು ಬರುತ್ತದೆ. ವೃದ್ಧಾಪ್ಯದ ಕೆಲವು ಸುಖ, ದುಃಖ, ಸಂತೋಷ ಹಾಗೂ ಆಗಾಗ್ಯೆ ಕಾಡುತ್ತಿದ್ದ ಸಣ್ಣ ಪುಟ್ಟ ರೋಗ ರುಜಿನಗಳಿಗೂ ತುತ್ತಾಗಿ ಆದಷ್ಟು ಸಂತೋಷವಾಗಿ ಇರಲು ಪ್ರಯತ್ನಿಸಿ ಈಗಾಗಲೇ ಸುಮಾರು ಏಳು ದಶಕಗಳನ್ನು ಕಳೆದಿದ್ದೇನೆ. ಜೂನ್ ಆರು ಬಂದಾಗ ನಾನು ಎಲ್ಲರನ್ನೂ, ಅಲ್ಲದಿದ್ದರೂ, ಕೆಲವರನ್ನಾದರೂ ಜ್ಞಾಪಿಸಿಕೊಳ್ಳುತ್ತೇನೆ. ಅಲ್ಲದೆ ಎಷ್ಟೋ ಜನ ನನ್ನ ಅಭಿಮಾನಿಗಳು, ಸ್ನೇಹಿತರು, ಬಂಧುಗಳು ನನಗೆ ಆ ದಿನ ನನ್ನ ಜನ್ಮ ದಿನ ಎಂದು ನೆನಪಿಸುವುದೂ ಇದೆ. ಶುಭಾಶಯಗಳನ್ನು ಕಳಿಸುವುದೂ ಇದೆ. ಇರಲಿ.

**ಜೂನ್ 6 ನನ್ನ ಹುಟ್ಟು ಹಬ್ಬ, ಆದರೆ 5ರಂದೇ ಹೀಗಾಗಬೇಕೆ?**

ಹೀಗೆಯೇ ಈ ವರ್ಷವೂ ಜೂನ್ ಆರು ಬರಲಿಕ್ಕಾಯಿತು. ಜೂನ್ ಐದರ ಸಂಜೆಯಿಂದಲೂ ನಾನು ಸರಿ ಇರಲಿಲ್ಲ. ಕಾಲಿನಲ್ಲಿ, ಕಾಲಿನ ಗಂಟಿನಲ್ಲಿ ವಿಪರೀತ ನೋವು ಕಾಣಿಸಿಕೊಂಡಿತು. ಎಣ್ಣೆ, ಬಾಮ್ ಅದೂ ಇದೂ ಇಲ್ಲ ಹಚ್ಚಿ ನೋಡಿದೆ. ಊಹೂಂ, ನೋವು ಸಾಯಲಿಲ್ಲ. ನನ್ನನ್ನೇ ಸಾಯಿಸುವಷ್ಟು ಕಠೋರವಾಗಿ ತನ್ನ ಪ್ರತಾಪವನ್ನು ತೋರಿಸತೊಡಗಿತು. ಮನೆಯಲ್ಲಿ ಯಾರಿಗೂ ಹೇಳಲಿಲ್ಲ. ಇದೇ ಕಾಲುನೋವಿನ ಚಿಕಿತ್ಸೆಗಾಗಿ ಮೂರು ಬಾರಿ ಆಸ್ಪತ್ರೆಗೆ ಹೋಗಿ ಬಂದಿದ್ದೆ. ಅಲ್ಲಿಗೆ ಹೋದಾಗ ಗುಣವಾಗುತ್ತೆ. ಇಲ್ಲಿಗೆ ಬಂದಾಗ ಮರುಕಳಿಸುತ್ತದೆ. ಪುನಃ ಮನೆಯಲ್ಲಿ ಹೇಳಿ ರಾದ್ಧಾಂತ ಮಾಡುವುದು ಬೇಡವೆಂದು ನೋವನ್ನು ಸಹಿಸಿಕೊಳ್ಳಲು ಪ್ರಯತ್ನಿಸಿದೆ. ಯಥಾ ಪ್ರಕಾರ ರಾಮ, ಕೃಷ್ಣ, ಗೋವಿಂದ, ನಾರಾಯಣ ಎಲ್ಲ ಬಂದು ಹೋದರು. ಅವರ ಧ್ಯಾನದಿಂದಲೂ ಉಪಯೋಗವಾಗಲಿಲ್ಲ. ಕಾಲನ್ನು ಅಲ್ಲಾಡಿಸಲೂ ಆಗುತ್ತಿರಲಿಲ್ಲ. ವಿಪರೀತ ನೋವು, ಸಿಡಿತ. ರಾತ್ರಿ ಗಂಟೆ ಹನ್ನೊಂದಾಯಿತು. ಹನ್ನೆರಡೂ ಆಯಿತು. ತಾರೀಖು ಐದು ಹೋಗಿ ತಾರೀಖು ಆರು ಬಂದೇ ಬಿಟ್ಟಿತು. ಮಧ್ಯರಾತ್ರಿಯಲ್ಲಿ, ನನ್ನ ಮೊಬೈಲು ನನ್ನ ಪಕ್ಕದಲ್ಲೇ ಇತ್ತು. ನನ್ನ ಗಮನವನ್ನು ಬೇರೆಡೆಗೆ ಹರಿಸಲು ಪ್ರಯತ್ನವೋ ಎಂಬಂತೆ ನನ್ನ ಮೊಬೈಲಿನಲ್ಲಿ ಎಷ್ಟು ಫೋನ್ ನಂಬರ್‌ಗಳಿದ್ದವೋ ಅಷ್ಟೂ ನಂಬರ್‌ಗಳಿಗೆ ಸಂದೇಶ ಟೈಪ್ ಮಾಡಿ ಕಳಿಸತೊಡಗಿದೆ. 'ಇಂದು ನನ್ನ ಜನ್ಮ ದಿನ. ನಿಮ್ಮನ್ನು ಪ್ರೀತಿಯಿಂದ, ವಿಶ್ವಾಸದಿಂದ, ಗೌರವದಿಂದ ನೆನಪಿಸಿ

ಕೊಳ್ಳುತ್ತಿದ್ದೇನೆ. ನಿಮಗೆ ಶುಭವಾಗಲಿ.' ಇದು ನನ್ನ ಸಂದೇಶ. ಈ ಕೆಲಸ ಮುಗಿಯುವಾಗ ಗಂಟೆ ಎರಡಾಗಿರಬಹುದು. ಎಷ್ಟು ಜನರ ನಿದ್ದೆ ಕೆಡಿಸಿದೆಯೋ, ಎಷ್ಟು ಜನರಿಗೆ ಕಿರಿಕಿರಿ ಮಾಡಿತ್ತೋ ಈ ಸಂದೇಶ ಎಂಬುದು ಆಗ ತಿಳಿಯಲಿಲ್ಲ. – ನನ್ನ ನೋವು ನೋವೇ! ಹೇಗಾದರೂ ಬೆಳಗಾದರೆ ಸಾಕು. ಆಮೇಲೆ ಆಸ್ಪತ್ರೆಗೆ ಹೋಗುವ ಸಿದ್ಧತೆ ಮಾಡಲೇಬೇಕು ಎಂದು ಹಾಸಿಗೆಯಲ್ಲಿ ಬಿದ್ದುಕೊಂಡೆ, ನಿದ್ರೆಬಾರದು, ನೋವೂ ಹೋಗದು. ಸಾವಾದರೂ ಬರಬಾರದೇ ಎಂಬ ವೈರಾಗ್ಯವೂ ಉಂಟಾಯಿತು. ಬೆಳಗಿನ ಜಾವ ಹೌದೋ ಅಲ್ಲವೋ ಎಂಬಂತೆ ಅಮಲಾಗಿರಬೇಕು, ಸ್ವಲ್ಪ ನಿದ್ರೆ ಬಂದಿರಬೇಕು. ಎಂದಿನಂತೆ ನಾಲ್ಕು ಗಂಟೆಗೆ ಏಳಬೇಕಾದ ನಾನು ಗಂಟೆ ಆರಾದರೂ ಏಳದಿದ್ದಾಗ, 'ಅಪ್ಪಾ ಚಾ ಕೊಡಲಾ' ಎಂದು ಮಗಳು ಎಚ್ಚರಿಸಿದಾಗ ಕಣ್ಣು ಬಿಟ್ಟೆ. ಮುಖಕ್ಕೆ ನೀರು ತೋರಿಸಿ ಅವಳು ತಂದಿರಿಸಿದ ಚಾ ಗುಟುಕರಿಸುತ್ತಾ ಕೇಳಿದೆ. 'ಇವತ್ತು ಆಸ್ಪತ್ರೆಗೆ ಹೋಗಬೇಕಾಗುತ್ತೆ. ಕಾಲು ನೋವು ವಿಪರೀತ ಇದೆ' ಎಂದೆ. 'ಯಾಕೆ ಏನಾಯಿತು? ಎಂದಳು. ಹೇಳಿದೆ, ರಾತ್ರಿ ನಡೆದುದೆಲ್ಲವನ್ನೂ ಹೇಳಿದೆ. ಸ್ವಲ್ಪ ನಕ್ಕಳು. ಸ್ವಲ್ಪ ಗಾಬರಿಯಾದಳು. 'ಆಸ್ಪತ್ರೆಗೆ ಹೋಗುವಾ. ರೆಡಿಯಾಗಿ, ರಿಕ್ಷಾಕ್ಕೆ ಹೇಳಿ ಕಳಿಸುತ್ತೇನೆ. ಎಂಟು ಗಂಟೆ ಮೊದಲು ಡಾಕ್ಟರ್ ಬರಲಿಕ್ಕಿಲ್ಲ. ಅಷ್ಟರೊಳಗೆ ಸ್ನಾನಗೀನ ಮಾಡಿ ತಿಂಡಿ ತಿಂದು ಹೊರಡಿ' ಎಂದಳು. ಅಮ್ಮಾ, ಅಪ್ಪಾ, ರಾಮಕೃಷ್ಣಾ ಎಂದು ತಯಾರಾದೆ ಆಸ್ಪತ್ರೆಗೆ ಹೋಗಲು ರಿಕ್ಷಾ ಬಂತು. ಗೇಟು ತೆರೆದು ಬಾಗಿಲ ಬುಡಕ್ಕೇ ಬಂತು ರಿಕ್ಷಾ. ಅಷ್ಟರಲ್ಲೇ ನಮ್ಮ ನಾಡೋಜ ರಾಯರು ಕೈಯಲ್ಲೊಂದು ಗಂಧದಹಾರ ಹಿಡಿದುಕೊಂಡು ಬಾಗಿಲ ಬಳಿ ಬಂದು ನಿಂತಿದ್ದರು. ಜನ್ಮದಿನದ ಶುಭಾಶಯ ಎಂದು ಹಾರವನ್ನು ನನ್ನ ಕೊರಳಿಗೆ ಹಾಕಿಯೇ ಬಿಟ್ಟರು. ಆಮೇಲೆ ಅವರಿಗೆ ಗೊತ್ತಾದದ್ದು, ನಾನು ಆಸ್ಪತ್ರೆಗೆ ಹೊರಟಿದ್ದ ವಿಚಾರ. ಅವರೂ ಕೈಕೊಟ್ಟು ನಡೆಸಿ ರಿಕ್ಷಾದೊಳಗೆ ನನ್ನನ್ನು ತುರುಕಿಸಿದರು. ಹೋಗಿ ಬರುತ್ತೇವೆ ಎಂದೆ. ಬೇಗ ಹುಶಾರಾಗಿ ಎಂದೂ ಹಾರೈಸಿದರು. ನಾನೂ ಮಗಳೂ ರಿಕ್ಷಾದಲ್ಲಿ ಆಸ್ಪತ್ರೆಗೆ ಹೊರಟೆವು. ನನ್ನ ಮೊಬೈಲ್, ಮೊಬೈಲ್ ಎಂದೆ. ''ಅದು ಈಗ ಬೇಡ ಮನೆಯಲ್ಲೇ ಇದೆ. ಮನೆಗೆ ಬಂದ ಮೇಲೆ ನೋಡಿದರಾಯ್ತು. ಎಷ್ಟೋ ಮೆಸೇಜ್ ನನ್ನ ಇನ್ ಬಾಕ್ಸ್‌ನಲ್ಲಿ ಬಂದು ಬಿದ್ದಿದೆಯೋ ತಿಳಿಯಲಿಲ್ಲ, ಎಷ್ಟು ಜನ ಫೋನ್ ಮಾಡಿದರೋ ತಿಳಿಯಲಿಲ್ಲ.'' ಅವರಿಗೆಲ್ಲಾ ನೀವು ಹುಷರಾದ ಮೇಲೆ ಫೋನ್ ಮಾಡಿ. ಈಗ ಮೊಬೈಲ್ ಮುಟ್ಟಲಿಕ್ಕೆ ಬಿಡೋದಿಲ್ಲ. ಎಂದು ಖಡಾಖಂಡಿತವಾಗಿ ಆಜ್ಞಾಪಿಸಿದಳು. ನನ್ನನ್ನು ನೋಡಿಕೊಳ್ಳಬೇಕಲ್ಲಾ, ಬಾಯಿ ಮುಚ್ಚಿಕೊಂಡೆ. ಆಸ್ಪತ್ರೆಗೆ ಕೈಗಾಡಿಯಲ್ಲಿ ದೂಡಿಕೊಂಡು ಹೋದರು. ಎಮರ್ಜೆನ್ಸಿ ವಾರ್ಡ್‌ನಲ್ಲಿ ಹಾಸಿಗೆ ಮೇಲೆ ಪವಡಿಸಿದೆ. ಪೂರ್ವಕರ್ಮ ಎಲ್ಲಾ ಆದವು. ರಕ್ತ ಪರೀಕ್ಷೆ,

**ಓಡದವ**

**ರನ್ನಿಂಗ್ ರೇಸ್ ಸ್ಪರ್ಧೆ. ರೆಫ್ರಿ ಒನ್ ಟು ತ್ರೀ ಗೋ ಅಂದಾಗ ಎಲ್ಲರೂ ಓಡಿದರು. ಒಬ್ಬನನ್ನು ಬಿಟ್ಟು 'ಏಕೆ ಓಡಲಿಲ್ಲ?' ಎಂದಾಗ ಅವನುತ್ತರ – ನನ್ನದು 4ನೇ ನಂಬರ್**

ರಕ್ತದೊತ್ತಡ ಪರೀಕ್ಷೆ, ಮೂತ್ರ ಪರೀಕ್ಷೆ ಇತ್ಯಾದಿ ಪರೀಕ್ಷೆಗಳಾದವು. ನನ್ನ ವೈದ್ಯರು ಬಂದರು. ಕಾಲು ಹಿಡಿದರು. ಕಾಲು ಒತ್ತಿದರು. ನಡೆದದ್ದು ಜಾಸ್ತಿಯಾಯಿತು ಎಂದರು. ಅದೇನೇ ಇರಲಿ. ನನಗೆ ನೋವು ಕಡಿಮೆ ಆಗುವ ಹಾಗೆ ಇಂಜೆಕ್ಷನ್ನೋ ಮಾತ್ರೆಯೋ ಏನನ್ನಾದರೂ ಕೊಡಿ ಮೊದಲು ಎಂದೆ. ಎಲ್ಲಾ ಸರಿ ಮಾಡುವಾ ಎಂದರು. ಒಂದು ವಾರ ಇರಬೇಕಾಗುತ್ತೆ ಎಂದರು. ಒಂದು ತಿಂಗಳು ಬೇಕಾದರೂ ಇಟ್ಟುಕೊಳ್ಳಿ ಎಂದೆ, ಅವರಿಗೆ ಕೇಳಿಸದ ಹಾಗೆ. ಅವರ ಕರ್ಮ ಶುರುವಾಯಿತು. ನಾಲ್ಕಾರು ನರ್ಸಮ್ಮಗಳು ಹತ್ತಿರ ಬಂದು ಏನಾಯ್ತು, ಏನಾಯ್ತು? ಕಳೆದ ಬಾರಿ ಬಂದಾಗ ಅವರಿಗೆಲ್ಲಾ ಒಳ್ಳೊಳ್ಳೆಯ ಪುಸ್ತಕಗಳನ್ನು ಕೊಟ್ಟು ಓದುವ ರುಚಿ ಹಚ್ಚಿದ್ದೆ. ಅಯ್ಯೋ ಪಾಪ ಎನ್ನುತ್ತಾ ಹೋದರು. ಮತ್ತೊಂದು ಅರ್ಧ ಗಂಟೆಯಲ್ಲಿ ಮೂರನೇ ಮಾಳಿಗೆ 309ನೇ ವಾರ್ಡಿನಲ್ಲಿ ಹಾಕಿದರು. ಫ್ಯಾನ್ ಏನು ಗಡಗಡಾ ಸದ್ದು ಮಾಡುತ್ತಾ ತಿರುಗುತ್ತಿತ್ತು. ರೋಡ್ ರೋಲರ್‌ನ ಶಬ್ದ. ನನಗೆ ಚಿಕಿತ್ಸೆ ಕೊಡುವ ಹಾಗೆ ಈ ಫ್ಯಾನುಗಳಿಗೂ ಚಿಕಿತ್ಸೆ ಕೊಟ್ಟು ಅವುಗಳು ಸದ್ದಿಲ್ಲದೆ ಕೆಲಸ ಮಾಡುವಂತೆ ಮಾಡಿದ್ದರೆ ಒಳ್ಳೆಯದಿತ್ತು. ನನ್ನ ನೋಡಲು ಬಂದ ಆಸ್ಪತ್ರೆಯ ಯಜಮಾನರಿಗೂ ಅದನ್ನೇ ಹೇಳಿ ನಕ್ಕೆ, ಅವರೂ ನಕ್ಕರು. ಮೊದಲು ನಿಮ್ಮನ್ನು ರಿಪೇರಿ ಮಾಡುವಾ, ಆಮೇಲೆ ಫ್ಯಾನ್ ಎಂದರು. ಒಬ್ಬಿಬ್ಬರು ನರ್ಸ್‌ಗಳು ಬಂದು ಪುಸ್ತಕ ತಂದಿದ್ದೀರಾ? ಎಂದರು. ತರುವುದಕ್ಕೆ ಪುರುಸೊತ್ತು ಇರಲಿಲ್ಲ, ಪುಸ್ತಕಗಳ ಚೀಲ ಬಿಟ್ಟು ಬಂದಿದ್ದೇನೆ ಎಂದೆ. ಸ್ವಲ್ಪ ನಿರಾಸೆಗೊಂಡು ಹೋದರು. ಆದರೆ ನನ್ನ ನೋವಿನ ಕಾಲನ್ನು ಒಮ್ಮೆ ಒತ್ತಿ ಹೋಗಲು ಮರೆಯಲಿಲ್ಲ. ನನ್ನ ಪಾದ ಸೇವೆ ಮಾಡಿದ ಅವರಿಗೆ ಒಳಿತಾಗಲಿ.

ಹಾಸಿಗೆಯಲ್ಲಿ ಅಂಗಾಂತವಾಗಿ ಬಿದ್ದುಕೊಂಡಿದ್ದೇನೆ. ನೋವಿಗೆ ಕಾಲಿಗೆ ಎತ್ತರದ ಸ್ಥಾನ ಸಿಕ್ಕಿತ್ತು. ಅಲ್ಲಾಡಿಸಬಾರದು ಎಂಬ ಆಜ್ಞೆ ಆಗಿತ್ತು. ಗೂಟಕ್ಕೆ ಕಟ್ಟಿದ ಬಾಟಲಿಯಿಂದ ದ್ರಾವಣ ಹಿಂಡು ಹಿಂಡಾಗಿ ನನ್ನ ರಕ್ತನಾಳಕ್ಕೆ ಸೇರಿ ಮೈ ಬಿಸಿಬಿಸಿಯಾಗುತ್ತಿತ್ತು. ನನ್ನ ಸ್ಪೆಷಲ್ ವಾರ್ಡಿನಲ್ಲಿ ನಾನೊಬ್ಬನೇ. ನೋವನ್ನು ಸಹಿಸಿಕೊಳ್ಳುವಷ್ಟು ತ್ರಾಣ ಬಂದಿತ್ತು. ಆಗಲೇ ಎರಡು ಇಂಜೆಕ್ಷನ್ ಚುಚ್ಚಿ ಹೋಗಿದ್ದಾರೆ. ಒಂದಷ್ಟು ಗುಳಿಗೆ ತಂದು ಪಕ್ಕದಲ್ಲಿಟ್ಟಿದ್ದಾರೆ. ಒಂದು ರೀತಿಯ ಅಮಲಿನಲ್ಲಿ ನಾನು ಮುಳುಗಿದ್ದೆ. ಲೋಕದ ವ್ಯವಹಾರ ಒಂದೂ ನನ್ನ ಗಮನಕ್ಕೆ ಬಾರದಂತಿತ್ತು.

ಸಂಜೆ ಅದರಂತೆ ನನ್ನ ಮೊಬೆಲ್‌ನ ನೆನಪಾಯಿತು. ಎಷ್ಟು ಮೆಸೇಜುಗಳು ಬಂದಿವೆಯೋ, ಎಷ್ಟು ಕಾಲ್‌ಗಳು ಬಂದಿವೆಯೋ ಎಂಬುದನ್ನು ನೋಡುವ ಕುತೂಹಲ! ಊಹೂಂ ಮೊಬೈಲ್ ಏನಿದ್ದರೂ ನಾಳೆ. ಇವತ್ತು ಸುಮ್ಮನೆ ಮಲಗಿ.' ಸುಮ್ಮನೆ ಮಲಗಿದೆ.

ಮಾರನೆಯ ದಿನ ಮಲಗಿದವನು ಕುಳಿತುಕೊಳ್ಳುವಂತಾಯಿತು. ನಾಲ್ಕು ಹೆಜ್ಜೆ ನಡೆಯುವಂತಾಯಿತು. ನೋವಿನ ಪ್ರತಾಪ ಸ್ವಲ್ಪ ಕುಂದಿತ್ತು. ಪೇಪರ್ ಓದುವಂತಾಯಿತು. ಕಾಲು ಎತ್ತರದಲ್ಲಿ ಇಟ್ಟೇ ಮಲಗಬೇಕು ಎಂಬ ಆಜ್ಞೆಯೂ ಆಗಿತ್ತು. ಹೌದು, ಮಲಗುವಾಗಲೂ ಕಾಲನ್ನು ಎತ್ತರವಾಗಿ ಇರಿಸಿದ್ದ ದಿಂಬಿನ ಮೇಲೇ ಇಡುತ್ತಿದ್ದೆ. ಕುಳಿತು ಪೇಪರ್ ಓದುವಾಗಲೂ ಹಾಗೆಯೇ ಮಾಡಿದ್ದೆ. ಆಗಾಗ್ಗೆ ನನ್ನ ಮೇಲೆ ನಿಗಾ ಇಡಬೇಕಾದ ನರ್ಸ್‌ಗಳು ಬಂದಾಗ ಅವರ ಆಜ್ಞೆಯಂತೆ ಕಾಲಿಗೆ ಉಪಚಾರ ಮಾಡುತ್ತಿದ್ದೆ. ಯಾರೋ ಒಬ್ಬ

ನರ್ಸಮ್ಮ ಬಂದವಳೇ ಜೋರು ಮಾಡಿದಳು. ನಿಮ್ಮ ಬಲಗಾಲು ನೋವಲ್ವಾ? ಅದನ್ನು ಎತ್ತರದಲ್ಲಿ ಇಡಬೇಕಂತ ಅಲ್ವಾ ಡಾಕ್ಟರರು ಹೇಳಿದ್ದು? ಹೌದು ಎಂದೆ. ಈಗ ನಿಮ್ಮ ಯಾವ ಕಾಲು ಎತ್ತರದಲ್ಲಿಟ್ಟಿದ್ದೀರಿ? ನೋಡಿದೆ ಹೌದು, ಎಡಗಾಲು! ತಪ್ಪು ಒಪ್ಪಿಕೊಂಡು ಎಡಗಾಲನ್ನು ಕೆಳಗಿಳಿಸಿ, ಬಲಗಾಲನ್ನು ಮೇಲಕ್ಕೆ ಏರಿಸಿದೆ. ಗುಡ್ ಗುಡ್ ಎಂದು ಹೇಳಿ ನನ್ನ ಕಾಲನ್ನೊಮ್ಮೆ ಒತ್ತಿ ಆಕೆ ನಿರ್ಗಮಿಸಿದಳು. ಈ ಕಾಲುಗಳಿಗೆ ಬಂದ ಭಾಗ್ಯವೇ? ಎಷ್ಟೊಂದು ವೈದ್ಯರಿಂದ ಶುಶ್ರೂಷಿಕಿಯರಿಂದ ಸೇವೆ ಮಾಡಿಸಿಕೊಳ್ಳುತ್ತಿದೆಯಲ್ಲಾ ಎಂದು ಕಾಲುಗಳ ಮೇಲೆ ಹೊಟ್ಟೆಕಿಚ್ಚು ಆಯಿತು. ಬೆಳಗಿನ ಉಪಾಹಾರವಾಯಿತು. ಕಷ್ಟದಲ್ಲಿ ಸ್ನಾವೂ ಆಯಿತು. ಬಂದು ಹೋಗುವವರ ಸಂಖ್ಯೆಯೂ ಹೆಚ್ಚಾಯಿತು. ಯಾರ್‍ಯಾರದೋ ಮೊಬೈಲ್ ಕೆಲಸ ಮಾಡಿ ನಾನು ಆಸ್ಪತ್ರೆಯಲ್ಲಿರುವ ಸುದ್ದಿ ಎಲ್ಲೆಲ್ಲೂ ಪಸರಿಸಿತು. ಒಬ್ಬೊಬ್ಬರಾಗಿ, ಹಿಂಡು ಹಿಂಡಾಗಿ ಬಂದು ನನ್ನ ಜೀವ ಹಿಂಡ ತೊಡಗಿದರು. ಹೇಳಿದ್ದನ್ನೇ ಹೇಳಿ ಅವರಿಗೆ ಸಮಾಧಾನ ಪಡಿಸಿ ನನ್ನ ಜನ್ಮದಿನದ ಆಚರಣೆ ಆಸ್ಪತ್ರೆಯ ಸ್ಪೆಷಲ್ ವಾರ್ಡ್‌ನಲ್ಲಿ ಆಚರಿಸುವಂತಾಗಿತ್ತು.

ಡ್ಯೂಟಿ ಡಾಕ್ಟರರು ಬಂದರು. ಕಾಲು ಒತ್ತಿದರು. 'ಇವತ್ತು ಹೋಗಬಹುದೇ'? ಎಂದೆ. ದೊಡ್ಡ ಡಾಕ್ಟರರು ಬಂದು ಪರೀಕ್ಷಿಸಿ ಹೇಳಿದ ಮೇಲೆ ಹೋಗಬಹುದು ಎಂಬ ಉತ್ತರ ಬಂತು. ದೊಡ್ಡ ಡಾಕ್ಟರರೂ ಬಂದರು. ಅವರ ಹಿಂದೆ ಮುಂದೆ ಒಂದಷ್ಟು ಜನ ಮರಿ ಡಾಕ್ಟರರು, ನರ್ಸಮ್ಮಗಳು ಬಂದರು. ಚಾರ್ಟ್ ನೋಡಿದರು, ಮದ್ದಿನ ಪಟ್ಟಿ ನೋಡಿದರು. ಟೆಂಪರೇಚರ್ ನೋಡಿದರು. ನಾಡಿ ಹಿಡಿದರು, ರಕ್ತದೊತ್ತಡ ಪರೀಕ್ಷಿಸಿದರು. ಇವತ್ತೊಂದು ದಿನ ಇದ್ದು ಬಿಡಿ. ನಾಳೆ ಡಿಸ್ಚಾರ್ಜ್ ಮಾಡುವಾ ಎಂದರು.

ಈ ವೇಳೆಗಾಗಲೇ ನನ್ನ ಬಂಧು ಬಾಂಧವರಿಗೆಲ್ಲಾ ಕರೆಗಳು ಬಂದಿದ್ದವು. ದೂರದೂರಿನಲ್ಲಿದ್ದವರು ಊರಿನಲ್ಲಿದ್ದವರಿಗೆ ನನ್ನನ್ನು ನೋಡಿ ಬಂದು ರಿಪೋರ್ಟ್ ಕಳಿಸಬೇಕೆಂದು ವಿನಂತಿಸಿದ್ದರು. ಮೊಬೈಲ್ ಇಲ್ಲದಿದ್ದಲ್ಲಿ, ನಾನು ಮೆಸೇಜ್ ಕಳಿಸದಿದ್ದಲ್ಲಿ ಇಷ್ಟೆಲ್ಲ ಗಾಬರಿಯಾಗುವ ಪ್ರಮೇಯವಿರಲಿಲ್ಲ. ಒಂದಿಬ್ಬರು ನರ್ಸ್‌ಗಳು ಬಂದು ಪುಸ್ತಕ ಪುಸ್ತಕ ಎಂದರು. ಮನೆಗೆ ಹೋಗಿ ಮತ್ತೆ ಬಂದು ತಂದು ಕೊಡುತ್ತೇನೆ. ನನ್ನ ಸೇವೆ ಮಾಡಿ ಇಷ್ಟೆಲ್ಲಾ ಮಟ್ಟಿಗೆ ತಂದಿಟ್ಟಿದ್ದೀರಲ್ಲಾ ಎಂದೆ. ಕಾಲು ನೋವು ಶೇಕಡಾ 95ರಷ್ಟು ಕಡಿಮೆಯಾಗಿತ್ತು. ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯುವಂತಾಗಿತ್ತು. ಆಸ್ಪತ್ರೆಯ ಬಿಲ್ ಕಟ್ಟಿ ಮಗಳು ಬಂದಳು. ರಿಕ್ಷಾ ಬಂದಿದೆ, ಮನೆಗೆ ಹೋಗುವ ಎಂದಳು. ಹೋಗುವ ಎಂದು ಎಡಗೈ ಬೀಸುತ್ತಾ ಎಲ್ಲರಿಗೂ ವಿದಾಯ ಹೇಳಿ ಮನೆಗೆ ಬಂದು ಬಿದ್ದುಕೊಂಡೆ.

ನನ್ನ ಮೊಬೆಲ್, ಮೊಬೈಲ್ ಎಂದೆ. ಇನ್ ಬಾಕ್ಸ್‌ನಲ್ಲಿ ಜಾಗ ಇಲ್ಲ. ಮಿಸ್ಡ್ ಕಾಲ್ ಭರ್ತಿ ಎರಡು ಮೂರು ದಿನದಿಂದ ಎಷ್ಟೋ ಜನ ನನ್ನನ್ನು ಸಂಪರ್ಕಿಸಲು ಪ್ರಯತ್ನಿಸಿ ಬೇಸರಗೊಂಡಿದ್ದರೋ ತಿಳಿಯದು. ಯಾವುದನ್ನೂ ನೋಡದೆ ಎಲ್ಲವನ್ನೂ ಡಿಲೀಟ್ ಮಾಡಿದೆ. ಹೇಗೋ ನಾನು ಮನೆಗೆ ಬಂದು ಸೇರಿದ್ದು ಸುದ್ದಿಯಾಗಿ ಇಡೀ ದಿನ ಬಂದವರಲ್ಲಿ ನನ್ನ ಗ್ರಾಮಫೋನ್ ಪ್ಲೇಟನ್ನು ಕೇಳಿಸುತ್ತಾ ನನ್ನ ಜನ್ಮದಿನದ ಸಂಭ್ರಮ ಎಷ್ಟು ಚೆನ್ನಾಗಿ ನಡೆಯಿತಲ್ಲಾ ಎಂದು ಒಳಗೊಳಗೇ ಖುಷಿ ಪಟ್ಟೆ.

# ಮೃಷ್ಟಾನ್ನ ಭೋಜನೋಪಾಖ್ಯಾನ!

- ಶರತ್ ಕಲ್ಕೋಡ್

ಶಾಸ್ತ್ರೀ-ಶ್ರೀನಿವಾಸ ಶಾಸ್ತ್ರೀಗಳಿಗೆ ಮಾರ್ನಿಂಗ್ ವಾಕ್‌ನಲ್ಲಿ ಎಷ್ಟೇ ಜನ ಸಾಥ್ ಇದ್ದರೂ, ಪ್ರಸಾದಿ ಇಲ್ಲಾಂತಂದ್ರೆ ಏನೋ ಕಳಕೊಂಡಂತೆ! ಎಂಥದ್ದೋ ಇರಸ್ಸುಮುರಸ್ಸು! ಒಂಥರಾ ಚಡಪಡಿಕೆ!!

ಪ್ರಸಾದಿ-ಗುರುಪ್ರಸಾದಿ ಸಿಕ್ಕರೆ ಸಾಕು, ಜೊತೆಯಲ್ಲಿರುವವರನ್ನೆಲ್ಲಾ - ಅಷ್ಟೇ ಏಕೆ ಸಮಸ್ತ ಲೋಕವನ್ನೇ ಮರೆತು - ಸರಸ ಸಲ್ಲಾಪ ಆರಂಭವಾಗುತ್ತದೆ! ಮುಖ್ಯವಾಗಿ ಕಾಣೆಯಾದ ಕಳೆದ ದಿನಗಳಲ್ಲಿ ಗೈರಾಗಲು ಆಧಾರ-ಪುರಾವೆ-ದಾಖಲೆ ಸಹಿತ ಸಂಕ್ಷಿಪ್ತ ವಿವರಣೆ ನೀಡಿ, ಆದಷ್ಟು ಬೇಗ ಎಲ್ಲೆಲ್ಲಿ ಏನೇನು ತಿಂದೆ, ಎಂಥಹ ಊಟ ಮಾಡಿದೆ ಎಂಬುದರ ಬಗ್ಗೆ ಸಮಗ್ರ ವರದಿ ಒಪ್ಪಿಸಲೇ ಬೇಕಾದದ್ದು ಪ್ರಸಾದಿಯ ಆದ್ಯ ಕರ್ತವ್ಯ.

> ಎಲ್ಲೆಲ್ಲಿ ಏನೇನು ತಿಂದೆ, ಎಂಥಹ ಊಟ ಮಾಡಿದೆ ಎಂಬುದರ ಬಗ್ಗೆ ಸಮಗ್ರ ವರದಿ ಒಪ್ಪಿಸಲೇ ಬೇಕಾದದ್ದು ಪ್ರಸಾದಿಯ ಆದ್ಯ ಕರ್ತವ್ಯ.

ಇದೋ ಶಾಸ್ತ್ರೀಜಿ, ಪ್ರಸಾದಿ ನಡುವೆ ನಡೆಯುವ ಮೃಷ್ಟಾನ್ನ ಭೋಜನೋಪಾಖ್ಯಾನದ ಒಂದು ಝಲಕ್:

''ಗುರುಗಳೇ ಮೊನ್ನೆ ಭಾನುವಾರ ಮದುವೆಮನೆ ಊಟ ಉಣ್ಣುತ್ತಾ ತುತ್ತುತುತ್ತಿಗೂ ನಿಮ್ಮನ್ನ ನೆನಪಿಸಿಕೊಂಡೆ.''

''ಬರೀ ನನ್ನ ನೆನಪು ನೆಂಜಿಕೊಳ್ಳುತ್ತಾ ಕುಳಿತಿಯೋ! ಹೊಟ್ಟೆ ತುಂಬಾ ಉಂಡಿಯೋ ಇಲ್ಲವೋ ಪ್ರಸಾದಿ!?''

''ಹೊಟ್ಟೆಬಿರಿ ಹೊಡೆಯುತ್ತಲೇ ನಿಮ್ಮನ್ನ ಜ್ಞಾಪಿಸಿಕೊಂಡೆ.''

''ಹಾಗಾದರೆ ಬಾಳಾ ಗಡ್ಡಾಗಿತ್ತು ಅನ್ನು! ಬಾಳೆಲೆಯೋ? ಬಫೇಯೋ?''

''ಬಫೆ ಆದೆಂತ ಕರ್ಮ! ಶಿಸ್ತಾಗಿ ಬಾಳೆಯಲೆ ಊಟವೇ ನಿಮ್ಮ ಹಾಗೇ ನನಗೂ ಲೈಕ್ ಆಗೋದು.''

''ಡೈನಿಂಗ್ ಟೇಬಲೋ?''

''ಅಲ್ಲ, ವೈನಾಗಿ ಕಡಪಾಕಲ್ಲ ಹಾಸಿನ ಮೇಲೆ ಚಕ್ಕಾಮಕ್ಕಾ ಹಾಕಿ ಕೂತು''

‘‘ಸೀಳೋ, ಕುಡಿಬಾಳೆಯೋ?’’

‘‘ನಂಜನಗೂಡಿನ ಎಳೇಕುಡಿ ಬಾಳೇಲಿ ಕಂಡ್ರೀ.’’

‘‘ಕುಡಿ ಎಡಭಾಗ ಬರುವಹಾಗೆ ನೀಟಾಗಿ ಹಾಕಿದ್ರೋ, ಇಲ್ಲಾ ಯದ್ವಾತದ್ವಾ ಉಡಾಯಿಸಿದ್ರೋ?’’

‘‘ಇಲ್ಲಾ ಕುಡಿ ಎಡಭಾಗ ಚಾಚೋಹಾಗೇ ಹಾಕಿದ್ದರು. ಮೇಲ್ಭಾಗ ಉಪ್ಪು, ಉಪ್ಪಿನಕಾಯಿ, ಹೆಸ್ರು-ಸೌತೆಕಾಯಿ ಕೊಸುಂಬ್ರಿ, ಅದರ ಪಕ್ಕದಲ್ಲಿ ಕಡಲೆ ಚಟ್ನಿ, ಟೊಮೆಟೋ ಸಾಸ್ವೆ, ಆ ಮೇಲೆ ಚವುಳಿಕಾಯಿ, ಬಾಳೆಕಾಯಿ ಹಾಗೂ ಅಲ್ಸಂಡೆ ಪಲ್ಯ ನೆಂಜಿಕೊಳ್ಳೋ ಪದಾರ್ಥ ಕ್ರಮಪ್ರಕಾರ ಬಡಿಸಿದ್ದರು. ಕುಡಿಬಾಳೆ ಬಲಭಾಗದ ಮೇಲ್ತುದಿಯಲ್ಲಿ, ಶಾಸ್ತ್ರಕ್ಕೆ ಕುಂಬಳಕಾಯಿ ಮಜ್ಜಿಗೆಹುಳಿ, ಹುಣಸೆ ಗೊಜ್ಜು ಅಚ್ಚುಕಟ್ಟಾಗಿ ಬಡಿಸಿದ್ದರು. ಬಾಳೆಲೆಯ ಬಲಭಾಗದ ಕೆಳಂಚಿನಲ್ಲಿ ಗೋಧಿ ಪಾಯಸ ಅಲ್ಲದೆ ಎಡಭಾಗದ ಅಂಚಿನ ಮಧ್ಯಭಾಗದಲ್ಲಿ ಮಾವಿನಕಾಯಿ ಚಿತ್ರಾನ್ನ, ಕಡಬು, ಹಪ್ಪಳ-ಸಂಡಿಗೆ, ಎಲ್ಲಾ ಕ್ರಮಬದ್ಧವಾಗಿತ್ತು ಗುರುಗಳೇ!’’

‘‘ಕ್ರಮಬದ್ಧ ಅಂತಿಯಾ, ಪಾಯಸದ ಪಕ್ಕ ತುಪ್ಪದ ಅಭಿಗಾರದ ಪ್ರಸ್ತಾಪವೇ ಇಲ್ವಲ್ಲಾ!?’’

‘‘ಮಾಡಿದ್ರು ವರದಿ ಒಪ್ಪಿಸೋ ಭರದಲ್ಲಿ ಮರ್ತೇಹೋಯ್ತು! ಕ್ಷಮಿಸಿ!!’’

‘‘ಅನ್ನ ಯಾವುದು? ಸೋನಾ ಮಸ್ಸೂರಿಯೋ!?’’

‘‘ಅಲ್ಲಾ ಕಣ್ರೀ, ಲೋಕಲ್ ವೆರೈಟಿ ಸಣ್ಣವಾಳ್ಯ. ಉದುರುದುರಾಗಿ ಮಲ್ಲಿಗೆಅರಳಾಗ್ದಿತ್ತು!’’

‘‘ಮೊದ್ಲು ತಿಳಿಸಾರೋ?’’

‘‘ಹೌದು ಬೇಳೇ ತಿಳಿಸಾರು. ಲಿಂಬೆಹಣ್ಣು ಹಿಂಡಿ, ಇಂಗಿನ ವಗ್ಗರ್ಣೆ ಹಾಕಿದ್ರು. ಖಾರಖಾರವಾಗಿ ವೈನಾಗಿತ್ತು’’

‘‘ಆಮೇಲೆ ಬೇಳೆತೊವೆ’’

‘‘ಬೇಳೆತೊವೆಗೆ ಒಂದು ಮಿಳ್ಳೆ ತುಪ್ಪ ಹಾಕಿಕೊಂಡು ಒಂದೊಬ್ಬೆ ಎಳೆದರೆ ಅದರೆ ಮಜವೇ ಬೇರೆ ಅಲ್ವೇ ಪ್ರಸಾದಿ?’’

‘‘ಹೌದೌದು ಗುರುಗಳೇ, ನಾನೂ ಬೇಳೆತೊವೆ ಒಂದೊಬ್ಬೆ ಸರಿಯಾಗೇ ಎಳೆದೆ’’

‘‘ಇರ್ಲಿ, ನಿನ್ನ ಬಗ್ಗೆ ನನಗೆ ವಿಶ್ವಾಸವಿದೆ. ಆ ಮೇಲೇನು ಹುಳಿಯೋ? ಕೂಟೋ?’’

‘‘ವೆಜಿಟಬಲ್ ಕೂಟು ಮಾಡಿದ್ರು. ಆದ್ರೆ ಅದು ತುಂಬಾ ರಾಡಿಯಾಗಿತ್ತು. ನಂಗೆ ಅಷ್ಟು ಇಷ್ಟಾಗಲಿಲ್ಲ. ಹಾಗಾಗಿ ಆದನ್ನ ಬದಿಗೆ ಒತ್ತಿ, ಬೂದುಗುಂಬಳಕಾಯಿ ಮಜ್ಜಿಗೆಹುಳಿ ಎರಡು ಒಬ್ಬೆ ಎಳೆದೆ ನೋಡಿ!’’

‘‘ಬೂದುಗುಂಬಳ ಮಜ್ಜಿಗೆ ಹುಳಿಗೆ ಕರಿದ ಬಾಳ್ಕದ ಮೆಣಸಿನಕಾಯಿ ಇತ್ತೋ?’’

‘‘ಮಜ್ಜಿಗೆ ಹುಳಿ ಇದ್ದಮೇಲೆ ಅದಿಲ್ದೇಯಿರುತ್ತೆಯೇ!?’’

‘‘ನೀ ಏನೇ ಹೇಳು ಪ್ರಸಾದಿ, ನಮ್ಮ ಹಿರಿಯರು ಊಟದ ವಿಷಯದಲ್ಲಿ ಮಾತ್ರ ಬಹಳ ಶಿಸ್ತು ಅಳವಡಿಸಿದ್ದಾರೆ. ಸಾರು-ಪಲ್ಯ, ಮೇಲೋಗರ, ಪಾಯಸ, ಸಿಹಿ-ಕಾರ ಹೀಗೆ ಕ್ರಮಬದ್ಧವಾಗಿ ಆಸ್ವಾದಿಸುವುದರಲ್ಲೂ ಆರೋಗ್ಯಕ್ಕೆ ಮಹತ್ವ ನೀಡಿದ್ದಾರೆ ನೋಡು. ಬಾಳೆಎಲೆ ಮೇಲೆ ಸಿಂಗಾರವಾಗಿ ಆರಂಭಕ್ಕೆ ಬಳಸಿದ ಪದಾರ್ಥಗಳನ್ನು ನೋಡುತ್ತಲೇ ನಾಲಗೆಯ ಜಿಹ್ವಾಗ್ರಂಥಿಗಳಲ್ಲಿ ರಸ ಉಕ್ಕಬೇಕು. ಹಾಗೇ ತಿಳಿಸಾರು, ಗೊಜ್ಜು ಮುಂತಾದವುಗಳು ಜೀರ್ಣಾಂಗಗಳು ಕ್ರಿಯಾಶೀಲವಾಗಲು ಒಳ್ಳೇಯ ಅಪಟೈಸರ್ ನೋಡು. ಆಯ್ತು ಆಮೇಲೆ?’’

‘‘ಮಜ್ಜಿಗೆ ಹುಳಿಯಾದ ಮೇಲೆ ಇನ್ನೇನು ಬರುತ್ತೆ ಹೇಳಿ?’’

‘‘ಸ್ವೀಟ್ ಅಲ್ವೇ? ಏನ್ ಮಾಡಿದ್ರು...?’’

‘‘ನಿಮಗೆ, ನನಗೆ ಪ್ರಿಯವಾದ ಹಿಟ್ಟಿನ ಹೋಳಿಗೆ!’’

‘‘ವ್ಹಾ...ಅದಕ್ಕೆ...’’

‘‘ಮಾವಿನಹಣ್ಣಿನ ಸೀಕರಣೆ!’’

‘‘ವೈನಾಗಿತ್ತು ಅನ್ನು...ಮತ್ತೆ? ಹೋಳಿಗೆ ಅಂದ್ರೆ, ‘ಒಂಭತ್ತು ಜೋಡಿ ಹೋಳಿಗೆ ಭಟ್ರು’ ನೆನಪಾಗ್ತಾರೆ ನೋಡು. ಬಹಳ ವರ್ಷಗಳ ಹಿಂದೆ ಉತ್ತರಾದಿ ಮಠದ ಸ್ವಾಮಿಗಳ ಸವಾರಿ ಬೆಂಗಳೂರಿಗೆ ಚಿತ್ತೈಸಿದ್ದರು. ಪಾದಪೂಜೆಯಾದ ಮೇಲೆ ಭರ್ಜರಿ ಭೋಜನ. ಊಟ ಮುಗಿಯುತ್ತಿದ್ದಂತೆ ಪಂಕ್ತಿ ಮೇಲೆ ಬಂದ ಶ್ರೀಗಳು ಯಾರು ಎಷ್ಟು ಹೋಳಿಗೆ ತಿನ್ನುತ್ತಾರೆ ಅಂತ ನೋಡೋಣ. ಜೋಡಿ ಹೋಳಿಗೆಗೆ ಮಠದವತಿಯಿಂದ ಎರಡು ರೂಪಾಯಿಯ ಬೆಳ್ಳಿನಾಣ್ಯ ಇನಾಮು ಕೊಡಲಾಗುತ್ತೆ ಅಂತ ಘೋಷಿಸೋದೇ?’’

‘‘ನೀವು ಎಷ್ಟು ಜೋಡಿ ಹೊಡೆದಿರಿ ಗುರುಗಳೇ?’’

‘‘ಒಂದೆರಡು ಜೋಡಿ, ನಂದು ಯಾವ ಮಾಹಾ ಲೆಕ್ಕ? ಕತ್ರಿಗುಪ್ಪೆ ಅಪ್ಪಣ್ಣ ಭಟ್ರು ಅಂತ ಒಬ್ರು ಒಂಭತ್ತು ಜೋಡಿ ಹೊಡೆದು, ಹದಿನೆಂಟು ರೂಪಾಯಿ ಬೆಳ್ಳಿನಾಣ್ಯ ಇನಾಮು ಪಡೆದರು. ಅಂದಿನಿಂದ ಅವರಿಗೆ ಒಂಭತ್ತು ಜೋಡು ಹೋಳಿಗೆ ಭಟ್ರು ಅಂತಲೇ ಎಲ್ಲಾ ಕರೆಯುವುದು. ಎಂಭತ್ತು ಮೂರು ವರ್ಷದ ಅವರು ಈಗಲೂ ಕತ್ರೀಗುಪ್ಪೆಯಲ್ಲಿ ಇದ್ದಾರೆ. ಆಗಾಗ ಊಟದ ಮನೆಗಳಲ್ಲಿ ಸಿಕ್ಕುತ್ತಿರುತ್ತಾರೆ. ಹೊಟ್ಟೆ ಬೆನ್ನಿಗಂಟಿಕೊಂಡು ಬಡಕಲುಬಡಕಲಾಗಿ ಅಷ್ಟು ವಯಸ್ಸಾಗಿದ್ದರೂ ಉಣ್ಣೋದರಲ್ಲಿ ಅವರನ್ನ ಮೀರ್ಸೋಕೆ ಯಾರಿಂದಲೂ ಸಾಧ್ಯವಾಗೋಲ್ಲ ನೋಡು. ಹೋಗ್ಲಿ ಪ್ರಸಾದಿ ಆ ಮೇಲೇನು ಸ್ವೀಟು?’’

‘‘ಮೈಸೂರ್ ಪಾಕ್!’’

‘‘ನೀ ಏನೇ ಹೇಳು ಪ್ರಸಾದಿ, ಸಣ್ಣರವೆ, ಕಾಸಿದ ಒಳ್ಳೇ ತುಪ್ಪ, ದ್ರಾಕ್ಷಿ, ಉತ್ತುತ್ತೆ, ಗೋಡಂಬಿ, ಲವಂಗ, ಪಚ್ಚಕರ್ಪೂರ ಹಾಕಿ ಹದವಾಗಿ ಹುರಿದು ಮಾಡೋ ಕೇಸರಿಬಾತ್

ಮುಂದೆ ಬೇರೆ ಎಲ್ಲಾ ಸ್ವೀಟ್‌ನ್ನೂ ನಿವಾಳಿಸಿ ಎಸೆಯಬೇಕು. ಸ್ವೀಟ್‌ಗಳ ರಾಜರಲ್ಲಿ ಮಹಾರಾಜಾ ಅಂದ್ರೆ ಕೇಸರಿಬಾತ್! ಹೋಗ್ಲಿ ಮೈಸೂರು ಪಾಕ ಚೆನ್ನಾಗಿತ್ತಾ? ಎಷ್ಟು ಪೀಸ್ ಹೊಡ್ದೆ?''

''ನಾಲ್ಕು ಪೀಸ್ ಗುರುಗಳೇ, ಅದನ್ನ ತಿನ್ತಲೇ ನಿಮ್ಮ ನೆನಪು ಉಕ್ಕಿ ಬಂತು...''

''ಇಲ್ಲ ಪ್ರಸಾದಿ, ನನ್ನ ನೆನಪು ಆಗ್ದೇ ಇದಿದ್ರೆ ಚೆನ್ನಾಗಿತ್ತು..!''

''ಯಾಕೆ ಗುರುಗಳೇ?''

''ನಾನು ಸ್ವೀಟ್ ತಿನ್ನಾಂಗಿಲ್ಲ, ಗೊತ್ತಲ್ಲಾ ನಿಂಗೆ. ಡಯಾಬಿಟೀಸ್ ಅಲ್ವಾ? ತಿನ್ನಬೇಕೂಂತಾ ಆಸೆಯಾಗುತ್ತೆ. ಆದ್ರೆ ಇವ್ಳಿಗೆ ಗೊತ್ತಾದ್ರೆ ಬೈಯ್ತಾಳೆ!! ಹೋಗ್ಲಿ ಗೋಧಿ ಪಾಯಸ ವೈನಾಗಿತ್ತಾ?''

''ತುಂಬಾ ವೈನಾಗಿತ್ತು ಅಂತ ಹೇಳಿದರೆ ನಿಮ್ಮ ಹೊಟ್ಟೆ ಉರಿಸಿದ ಹಾಗೆ ಆಗುತ್ತೆ. ಎಷ್ಟೆಂದ್ರೂ ನೀವು ಡಯಾಬಿಟೀಸ್‌ನವರಲ್ವಾ?''

''ನಂಗೆ ಡಯಾಬಿಟೀಸ್ ಆದ್ರೇನು? ನೀ ತಿಂದು ಎಂಜಾಯಿ ಮಾಡಿದ್ರೆ, ನಾನೇ ತಿಂದ್ಹಾಂಗೆ ಅಲ್ವಾ ಪ್ರಸಾದಿ!?''

''ನಿಮ್ಮ ಹೃದಯ, ಅಭಿಮಾನ ದೊಡ್ಡದು. ಅದೇ ನಂಗೆ ಆಶೀರ್ವಾದ ಗುರುಗಳೇ!''

''ಹೋಗ್ಲಿ...ಖಾರ ಏನ್ ಮಾಡಿದ್ರು?''

''ಖಾರಬೂಂದಿ, ದಪ್ಪ ಮೆಣಸಿನಕಾಯಿ ಬೋಂಡಾ''

''ಅದರ ಪಾಡಿಗೆ ನೀನು ಹೋಗಲಿಲ್ಲಾ ತಾನೇ?''

''ಯಾಕೆ ಗುರುಗಳೇ?''

''ಬಡ್ಡಿಮಗಂದು ಬೋಂಡಾ ಬಹಳ ವಾಯುಕಣೋ, ಹೊಟ್ಟೆ ಗುಡುಗುಡು ಗುಮ್ಮಟ ಅಂತ ಶುರುವಾದರೆ ಎಡವಟ್ಟು ಆಗೋದು ಗ್ಯಾರಂಟಿ!''

''ಇಲ್ಲ ಕರಿದ ತಿಂಡಿ ಅಂದ್ರೆ ನಂಗೆ ಭಾರಿ ಆಸೆ ಅಲ್ವಾ? ಹಾಗಾಗಿ ಯಥಾನುಶಕ್ತಿ ಎಗರಿಸಿಯೇ ಬಿಟ್ಟೆ. ಯಾವ ಅನಾಹುತವೂ ಆಗಲಿಲ್ಲ, ದೇವರು ದೊಡ್ಡವನು! ಅಲ್ದೇ ಅಪ್ಪೆ ಮಿಡಿಸಾರು ಬೇರೇ ಇತ್ತು ಗುರುಗಳೇ, ಅದು ಒಳ್ಳೇ ಜೀರ್ಣಕಾರಿಯಂತೆ. ತುಂಬಾ ಪಸಂದಾಗಿತ್ತು!''

''ಹಾಗಾದ್ರೆ ಹವ್ಯಕರ ಮದುವೆ ಅನ್ನು. ಅಪ್ಪೆಮಿಡಿ ಸಾರು ಮಾಡೋದರಲ್ಲಿ ಅವರು ಎತ್ತಿದ ಕೈ. ಪಲ್ಯ, ಚಟ್ನಿ, ಗೊಜ್ಜು ಟೇಸ್ಟ್ ನೋಡಲಿಲ್ಲವೋ?

ನೋಡದೇ ಇರೋಕೆ ಆಗುತ್ತೆಯೇ? ಎಲ್ಲವನ್ನು ಬೆರಳು ತುದಿಯಲ್ಲಿ ನೆಂಚಿಕೊಂಡು ಚಪ್ಪರಿಸಿದೆ. ಮಾವಿನ ಕಾಯಿ ಚಿತ್ರಾನ್ನವಂತೂ ಫೊಗದಸ್ತಾಗಿತ್ತು!

ಹೋಗಲಿ ಮಜ್ಜಿಗೆ, ಮೊಸರು ಇತ್ತೋ?''

''ಅದಿಲ್ದೆ ಊಟ ಮಂಗಳ ಆಗುತ್ತೆಯೇ? ಗಟ್ಟಿ ಮೊಸರಿಗೆ ಮಾವಿನಮಿಡಿ ಉಪ್ಪಿನಕಾಯಿ ಜೋಡಿ ಹೇಳಿ ಮಾಡಿಸಿದ ಹಾಗಿತ್ತು, ಮಜ್ಜಿಗೆಯಂತೂ ಸೂಪರ್. ಇಂಗು ಕೊತ್ತಂಬರಿಸೊಪ್ಪು, ಶುಂಠಿ, ಮೆಣಸಿನಕಾಯಿ, ಕರಿಬೇವು, ನೀರುಳ್ಳಿ-ಬೆಳ್ಳುಳ್ಳಿ ಹಾಕಿ ಮಜಭೂತಾಗಿತ್ತು! ನಾಲ್ಕು ಲೋಟ ಕುಡಿದೇಬಿಟ್ಟೆ!''

''ನೀರುಳ್ಳಿ-ಬೆಳ್ಳುಳ್ಳಿ ಎಂದರೆ ಶಾಸ್ತ್ರಿಗಳಿಗೆ ವಾಕರಿಕೆ: ಈಗ ಎಲ್ಲೇ ಹೋದ್ರೂ, ನೀರುಳ್ಳಿ-ಬೆಳ್ಳುಳ್ಳಿ. ಆ ಶನಗಳಿಲ್ಲದೆ ಊಟದ ಮನೆ ಆಗೋದಿಲ್ವೇ?

''ನೀರುಳ್ಳಿ-ಬೆಳ್ಳುಳ್ಳಿ ಎರಡೂ ಆರೋಗ್ಯಕ್ಕೆ ಬಾರೀ ಒಳ್ಳೇಯದಂತೆ. ಹಾರ್ಟ್ ಪ್ರಾಬ್ಲಮ್ ಅವರಿಗೆ ದಿವ್ಯೌಷಧಿಯಂತೆ. ಡಾಕ್ಟರ್ ಅಡ್ವೈಸ್ ಮಾಡೋದು ಮಾತ್ರವಲ್ಲ; ಸೈಂಟಿಫಿಕ್ ಆಗಿ ಪ್ರೂವ್ ಆಗಿದೆಯಂತೆ ಗುರುಗಳೇ!

''ಏನೋ ಅಪ್ಪಾ, ಅವೆರಡರ ವಾಸನೆಯೆಂದರೆ ನನಗೆ ಅಲರ್ಜಿ ನೋಡು. ಹೋಗ್ಲಿ ತಾಂಬೂಲ ಇರ್ಲಿಲ್ವೇ?''

''ಮೃಷ್ಟಾನ್ನ ಭೋಜನ ಆದ ಮೇಲೆ ಅದಿಲ್ದೇಯಿರುತ್ತೆಯೇ?''

''ಪಂಕ್ತಿ ಮೇಲೆ ಬಂದು ಉಪಚಾರ ಹೇಳಿದ್ರೇ?''

''ಇಷ್ಟೆಲ್ಲಾ ಮಾಡಿದೋರು ಅದನ್ನ ಬಾಕಿ ಬಿಡ್ತಾರೆಯೇ?

ಮೃಷ್ಟಾನ್ನೋಪಖ್ಯಾನ ವರದಿಗೆ ತಾಂಬೂಲದೊಂದಿಗೆ ಪ್ರಸಾದಿ ಮಂಗಳ ಹಾಡುತ್ತಿದ್ದಂತೆ ವಾಸ್ತವ ಜಗತ್ತಿಗೆ ಮರಳಿ ಬರುವ ಶಾಸ್ತ್ರೀಜಿ, ಮೂಕಪ್ರೇಕ್ಷಕರಾಗಿ ಹಿಂಬಾಲಿಸುತ್ತಿದ್ದ ಅವರ ಅಭಿಮಾನಿ ದೇವರುಗಳಾದ ಬಡಪಾಯಿ ನಮ್ಮನ್ನು ಉದ್ದೇಶಿಸಿ ಹೇಳುತ್ತಾರೆ: ''ನೋಡಿ, ಊಟ-ತಿಂಡಿ ವಿಷಯದಲ್ಲಿ ನಮಗೊಂದು ಶಿಸ್ತು ಕಲಿಸಿದ ನಮ್ಮ ಹಿರಿಯರಿಗೆ, ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಅವರಿಗೆ ನಮ್ಮ ನಾಲಿಗೆಯ ರುಚಿ, ಜೀರ್ಣಾಂಗಗಳ ವ್ಯವಸ್ಥೆ, ಅವುಗಳ ಕಾರ್ಯವೈಖರಿಯ ಬಗ್ಗೆ ಹಾಗೂ ದೇಹಾರೋಗ್ಯದ ಬಗ್ಗೆ ಸ್ಪಷ್ಟ ಕಲ್ಪನೆ ಹಾಗೂ ಅರಿವು ಇತ್ತು. ಹಾಗಾಗಿ ನಮ್ಮ ಊಟೋಪಚಾರಗಳಲ್ಲಿ, ಬಳಸುವ ಪದ್ಧತಿಗಳಲ್ಲಿ ವೈಚಾರಿಕತೆಯಿತ್ತು. ಶಾಸ್ತ್ರೀಯವಾಗಿತ್ತು. ಆರೋಗ್ಯದಾಯಕವಾಗಿತ್ತು. ಆಧುನಿಕ ತಿಂಡಿ-ತಿನಿಸುಗಳು ಆರೋಗ್ಯಕ್ಕೆ ಎಷ್ಟು ಹಾನಿಕರವೆಂಬುದು ನಿಮಗೆಲ್ಲಾ ಅನುಭವವೇದ್ಯವಾಗಿರುವುದಲ್ಲಾ?'' ಎಂದು ಕೇಳುತ್ತಿರುವಾಗಲೇ ನಾವೆಲ್ಲ ''ಹೌದು...ಹೌದು...'' ಎನ್ನುತ್ತಾ ಅವಸರವಸರವಾಗಿ ವಿದಾಯ ಹೇಳಲೇಬೇಕು. ಯಾಕೆಂದರೆ ಶಾಸ್ತ್ರಿ-ಪ್ರಸಾದಿ ಅವರ ಮೃಷ್ಟಾನ್ನೋಪಾಖ್ಯಾನ ಕೇಳುತ್ತಾ ಕುಳಿತರೆ ನಮಗೆ ಆಫೀಸ್‌ಗೆ ಲೇಟಾಗುತ್ತದೆ! ಲೇಟಾದರೆ ಹೆಂಡತಿ-ಮಕ್ಕಳ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ!! ಅಷ್ಟೇಅಲ್ಲ; ಹೆಂಡತಿ ಬಾಯಲ್ಲಿ ಬಯ್ಗುಳದ ಮೃಷ್ಟಾನ್ನ ಬೇರೇ.. ಅಯ್ಯೋ... ರಾಮ... ರಾಮ!!

# Advertisement

# Advertisement

# ನಾನು ಮತ್ತು ಎನ್ವಿ

- ಆನಂದ

**ನಾ**ನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ (?) 'ಮಿಲರ್ ಆಫ್ ದಿ ಡೀ' ಎಂಬ ಪದ್ಯ ಪಠ್ಯದಲ್ಲಿತ್ತು. ಕವಿಯ ಹೆಸರು ನೆನಪಿಲ್ಲ ಆದರೆ ಅದರ ಮೊದಲೆರಡು ಸಾಲುಗಳು ಮಾತ್ರ ಈಗಲು ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ. ಅವು:

> **ನನ್ನ ಬಗ್ಗೆ ಯಾರಿಗೂ ಅಸೂಯೆ ಇಲ್ಲದಿರಬಹುದು ಆದರೆ ನನಗೆ ಅನೇಕರ ಬಗ್ಗೆ ಅಸೂಯೆ. ಅದಕ್ಕೆ ಕಾರಣ?**

*ಐ ಎನ್ವಿ ನೊಬಡಿ,*

*ನೊಬಡಿ ಎನ್ವೀಸ್ ಮಿ*

ಈ ಸರಳ ಸಾಲುಗಳಿಗೆ ವಿವರಣೆ ನಿಮಗೆ ಬೇಕಿಲ್ಲ, ಏಕೆಂದರೆ ಇವು ನನಗೇ ಅರ್ಥವಾದ ಮೇಲೆ ಬೇರೆ ಯಾರಿಗೆ ಬೇಕಾದರೂ ಅರ್ಥವಾಗುತ್ತದೆ ಎಂಬ ತರ್ಕ ನನ್ನದು.

ಈ ಎರಡು ಸಾಲುಗಳಲ್ಲಿ ನೊಬಡಿ ಎನ್ವೀಸ್ ಮಿ ಎಂಬುದು ನನ್ನ ಪಾಲಿಗೆ ಮಾತ್ರ ಸತ್ಯ. ಉಳಿದರ್ಧ - ಐ ಎನ್ವಿ ನೊಬಡಿ - ನನ್ನ ಮಟ್ಟಿಗೆ ನಿಜವಲ್ಲ. ಬದುಕಿದರೆ ಆ ಎರಡು ಸಾಲುಗಳಂತೆ ಬದುಕಬೇಕು ಎಂದು ಡೀ ನಗರದ ಮಿಲರ್ ಎಂಬಾತನ ಮೂಲಕ ಕವಿ ಹೇಳಿಸಿದರೂ ಐ ಎನ್ವಿ ನೊಬಡಿ ಎಂಬುದು ನನ್ನನ್ನು ಮೀರಿದ್ದಾಗಿದೆ.

ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಲ್ಲೆ.

ಒಮ್ಮೆ ನನ್ನ ಗೆಳೆಯನ ಮನೆಯಲ್ಲಿ ತಂಗಿದ್ದೆ. ಬೆಳಿಗ್ಗೆ ನನಗೆ ಮತ್ತು ತನ್ನ ಪತಿಗೆ ಕಾಫಿ ಮಾಡಿಕೊಟ್ಟ ಮನೆಯೊಡತಿ ತಾನು ಮಾತ್ರ ಏನೂ ಕುಡಿಯಲಿಲ್ಲ. ಏಕೆ? ಎಂದು ನಾನು ವಿಚಾರಿಸದಾಗ ಆಕೆ ''ನಾನು ಕಾಫಿ ಟೀ ಕುಡಿಯುವುದೇ ಇಲ್ಲ'' ಎಂದು ಸಂತೋಷದಿಂದ ಹೇಳಿಕೊಂಡರು. ಹೌ ಕೆನ್ ಈ ನಾಟ್ ಎನ್ವಿ ಹರ್? ಬೆಳಗಾಗೆದ್ದು ಕಾಫಿ ಕಾಸಬೇಕಾದ ತಾಪತ್ರಯವೇ ಇರದು.

ನನ್ನ ಪತ್ರಿಕೋದ್ಯಮ ಗುರುಗಳಾದ ಎಚ್ಚೆಸ್ಕೆ ಅವರೊಡನೆ ಶ್ರವಣಬೆಳಗೊಳದಲ್ಲಿ ಒಮ್ಮೆ ಎರಡು ದಿನ ತಂಗಿದ್ದಾಗ ಆ ಎರಡೂ ದಿನ ನಾನು ಸ್ನಾನಕ್ಕೆಂದು ಬಿಸಿ ನೀರಿಗಾಗಿ ಹುಡುಕಾಟ ನಡೆಸಿದ್ದರೆ ಅವರು ಲಕ್ಷಣವಾಗಿ ತಣ್ಣೀರು ಸ್ನಾನ ಮುಗಿಸುತ್ತಿದ್ದರು. ರಾತ್ರಿ ಊಟಕ್ಕೆ ಏನಿರಬಹುದು ಎಂದು ನನ್ನ ನಾಲಿಗೆ ಕುತೂಹಲ ವ್ಯಕ್ತಪಡಿಸುತ್ತಿದ್ದರೆ ಗುರುಗಳಿಗೆ ಊಟದ ಯೋಚನೆಯೇ ಇರುತ್ತಿರಲಿಲ್ಲ. ಪ್ರತಿದಿನ ಅವರಿಗೆ ಒಪ್ಪೊತ್ತು. ''ಹೀಗೇಕೆ ಸರ್?'' ಎಂದು ಕೇಳಿದಾಗ ಅವರು ''ತಣ್ಣೀರು ಅಭ್ಯಾಸ ಮಾಡಿಕೊಂಡರೆ ಎಲ್ಲಿ ಬೇಕಾದರೂ ಸ್ನಾನ ಮಾಡಬಹುದು. ರಾತ್ರಿ ಊಟ ಬೇಡ ಎಂದಾದರೆ ನಿರಾಳವಾಗಿರಬಹುದು'' ಎಂಬ ತಮ್ಮ ಸರಳ, ಶಿಸ್ತಿನ ಬದುಕಿನ ಸೂತ್ರವನ್ನು ಸರಳವಾಗಿಯೇ ನಿರೂಪಿಸಿದರು. ಸುಸೂತ್ರವಾಗಿ

ಪಾಲಿಸಿಕೊಂಡು ಬಂದರು. ಮತ್ತೆ ಈಗ ಹೇಳಿ ಅವರನ್ನು ನಾನು ಎನ್ವಿ ಮಾಡದೆ ಇರಲು ಸಾಧ್ಯವೆ?

ಊಟವಾದ ಮೇಲೆ ಏನಾದರು ಸಿಹಿಯನ್ನು ತಿನ್ನುವ ಚಟ ನನ್ನದು. ಸಿಹಿ ಇಲ್ಲದಿದ್ದರೆ ಪರದಾಡುತ್ತಿರುತ್ತೇನೆ. ಅದಿಲ್ಲದಿದ್ದರೆ ಊಟ ಅಪೂರ್ಣ ಎನಿಸತೊಡಗುತ್ತದೆ. ಅದಕ್ಕೆಂದೇ ಮನೆಯಲ್ಲಿ ಯಃಕಶ್ಚಿತ್ ಕ್ರೀಂ ಬಿಸ್ಕತ್ತನ್ನಾದರೂ ಇಟ್ಟಿರುತ್ತೇನೆ. ಆದರೆ ನನ್ನ ಹೆಂಡತಿ ಹಾಗಲ್ಲ. ಊಟ ಮುಗಿಸಿ ಕೈ ತೊಳೆದ ಮೇಲೆ ಆಕೆಗೆ ಅಂತಹ ಪರದಾಟವಿರದು. ಸಿಹಿ ನಿಷಿದ್ಧ. ನಾನು ತಿನ್ನುತ್ತಿದ್ದರೆ ಅವಳು ಸ್ಥಿತಪ್ರಜ್ಞಳಂತೆ ಕುಳಿತಿರುತ್ತಾಳೆ. ಅದಕ್ಕಾದರೂ ಅವಳನ್ನು ಎನ್ವಿ ಮಾಡದೆ ಇರಲು ಸಾಧ್ಯವೆ?

ನನ್ನ ಅಣ್ಣ ಸಂಗೀತ ಪ್ರೇಮಿ. ಶಾಲಾ ದಿನಗಳಲ್ಲಿ ಬಿನಾಕ ಗೀತಮಾಲ ಕದ್ದು ಮುಚ್ಚಿ ಕೇಳುತ್ತಿದ್ದ – ತಂದೆಯ ಹೆದರಿಕೆಯಿಂದ. ಸಂಗೀತ ಪ್ರೇಮ ಅವನ ಹೃದಯದ ಅಂತರಾಳದಲ್ಲಿ ಮನೆ ಮಾಡಿತ್ತು. ಆದರೆ ಸಂಸಾರ, ನೌಕರಿ, ಅಲೆದಾಟಗಳಲ್ಲಿ ಅದು ಅಭಿವ್ಯಕ್ತಗೊಳ್ಳಲು ಅವಕಾಶವೇ ಇರಲಿಲ್ಲ. ಆದರೆ ನಿವೃತ್ತಿಯ ನಂತರ ಮನೆಯಲ್ಲಿ ಕುಳಿತು ಸಂಗೀತ ಪುಸ್ತಕಗಳನ್ನು ತಾನೇ ಓದಿಕೊಂಡು ತಾನೇ ಗುರುವಾಗಿ ಕಲಿತು ಕೀ ಬೋರ್ಡ್‌ನಲ್ಲಿ ಸಂಗೀತ ನುಡಿಸುತ್ತಾ ತನ್ನ ಪ್ರೀತಿಯ ಹವ್ಯಾಸದಲ್ಲಿ ಕಾಲ ಕಳೆಯತೊಡಗಿದ. ಅದು ಎನ್ವಿ ಪಡಬಹುದಾದ ಸಂಗತಿ ಅಲ್ಲವೆ?

ಸಮಾರಂಭಗಳಿಗೆ ಸಮಯಕ್ಕೆ ಸರಿಯಾಗಿ ಹಾಜರಾಗುವುದು ನನ್ನ ದೌರ್ಬಲ್ಯಗಳಲ್ಲೊಂದು. ಅದು ನಾನು ಎಚ್ಚೆನ್ ಅವರಿಂದ ಕಲಿತ ಒಂದು ವೀಕ್‌ನೆಸ್. ಎದ್ದೋ ಬಿದ್ದೋ, ಕಷ್ಟವೋ ಸುಖವೋ, ಮಳೆಯೋ ಬಿಸಿಲೋ ಬಿಟಿಎಸ್ ಹಿಡಿದರೂ ಸಹ ನಾನು ನಿಗದಿತ ಜಾಗ ಆನ್ ದಿ ಡಾಟ್ ತಲುಪುತ್ತಿದ್ದೆ. ಆದರೆ ಆಹ್ವಾನಿತರಲ್ಲಿ ಅನೇಕರು 1–2 ತಾಸು ತಡವಾಗಿ ಬಂದರೂ ಅವರಿಗೆ ಏನೂ ಅನಿಸುತ್ತಿರಲಿಲ್ಲ. ಆರಾಮವಾಗಿ ಇರುತ್ತಿದ್ದರು. ನನ್ನನ್ನು ನೋಡಿ ಅವರು ನಗುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ನಾನೇಕೆ ಅವರಂತಿಲ್ಲ/ ಇರಬಾರದೇಕೆ? ಯಾಕೀ ಸಮಯಪಾಲನೆಯ ಧಾವಂತ? ಎಂದುಕೊಳ್ಳುವಾಗ ಆ ಲೇಟ್ ಲತೀಫರ ಬಗ್ಗೆ ಎನ್ವಿ ಸಹಜವಾಗಿ ಮೂಡುತ್ತದೆ.

ನಮ್ಮ ಮನೆಯ ಆವರಣದಲ್ಲಿ ಒಂದು ಪುಟ್ಟ ತೋಟವಿದೆ. ನನ್ನ ಹೆಂಡತಿಯ ಶ್ರಮದ ಫಲ. ನನ್ನ ತಾಯಿ ಅದಕ್ಕೆ ನೆರವಿನ ಹಸ್ತ ಚಾಚುತ್ತಿದ್ದರು. ಆದರೆ ನಾನು ಮಾತ್ರ ನಾನ್ – ಪ್ಲೇಯಿಂಗ್ ಕ್ಯಾಪ್ಟನ್. ದೂರದಿಂದಲೇ ನೋಡಿ ಖುಷಿ ಪಡುವ ಜಾಯಮಾನದವನು. ಆದರೆ ನನ್ನ ಭಾವ ಹಾಗಲ್ಲ. ಹವ್ಯಕ ಬ್ರಾಹ್ಮಣರು ತೋಟಗದ್ದೆಯಲ್ಲಿ ದುಡಿಯುವಂತೆ ಅವರೂ ಸಹ ತೋಟಗಾರಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಅವರ ಶ್ರಮಕ್ಕೆ ಸಾಕ್ಷಿ ಎನ್ನುವಂತಿರುವ ಅವರ ಸುಂದರವಾದ ಕೈತೋಟ ನೋಡಿದಾಗ ಅವರ ಬಗ್ಗೆ ನನಗೆ ಎನ್ವಿ ಉಂಟಾಗುತ್ತದೆ.

ಹೀಗೆ ಅನೇಕ ಉದಾಹರಣೆಗಳು ಕೊಡಬಲ್ಲೆ. ಐ ಎನ್ವಿ ಮೆನಿ ಬಟ್ ನೊಬಡಿ ಎನ್ವೀಸ್ ಮಿ ಎಂಬುದು ಮಾತ್ರ ಸತ್ಯ.

# ಮದ್ವೇಗೆ ಕರೀತೀರಾ?

**- ಕುಮುದಾ ಪುರುಷೋತ್ತಮ್**

ಈಚೆಗೆ ನಮ್ಮ ಮನೆಯಲ್ಲೊಂದು ಮದುವೆಯ ಸಮಾರಂಭವಿತ್ತು. ಮದುವೆ ಎಂದರೆ ಗುರುಹಿರಿಯರು, ಬಂಧುಬಳಗ, ಇಷ್ಟಮಿತ್ರರು, ಅಷ್ಟೇನೂ ಇಷ್ಟವಿಲ್ಲದವರು, ಪರಿಚಯಸ್ಥರು ಎಲ್ಲರೂ ಬಂದು ಪಾಲ್ಗೊಂಡು ಸಂಭ್ರಮಿಸುವುದು ಸಂಪ್ರದಾಯ. ಇಲ್ಲದಿದ್ದರೆ ಮದುವೆಯ ಸಮಾರಂಭ ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತೆ. ಹಾಗಾಗಿ ಈ ಸಮಾರಂಭದ ಬಲುದೊಡ್ಡ ಅಂಗ. ನಮಗೆ ಬೇಕಾದವರು, ಹಲವು ಕಾರಣಗಳಿಂದ ಬೇಡವಾದವರು ಎಲ್ಲರನ್ನೂ ಆದರದಿಂದ ಆಹ್ವಾನಪತ್ರಿಕೆಯೊಡನೆ ಅಕ್ಷತೆ ಕೊಟ್ಟು ಸಕಾಲಕ್ಕೆ ಸಕುಟುಂಬ ಸಪರಿವಾರ ಸಮೇತರಾಗಿ ಸಂಭ್ರಮಿಸಲು ಆಹ್ವಾನ ನೀಡುವುದು. ಮೊದಲೆಲ್ಲಾ ಇದಕ್ಕಾಗಿ ಕುಟುಂಬದ ಮೂರು ನಾಲ್ಕು ಮಂದಿ ಅಕ್ಷತೆ ಡಬ್ಬ ಹಿಡಿದು ಟ್ಯಾಕ್ಸಿಯಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ನಗರದ ಮೂಲೆಮೂಲೆ, ಗಲ್ಲಿಗಲ್ಲಿ ತಿರುಗಿ ಆಯಾ ಮನೆಗಳಲ್ಲಿ ಜುಲುಮೆ ಮಾಡಿಕೊಟ್ಟ ಕಾಫಿ, ಚಹಾ, ಹಾಲು, ಹಾರ್ಲಿಕ್ಸ್, ಜ್ಯೂಸು ಮಜ್ಜಿಗೆಗಳನ್ನು ದಾಕ್ಷಿಣ್ಯಕ್ಕಾಗಿ ಬೇಡವೆನ್ನಲಾಗದೆ ಸುರಿದುಕೊಂಡು ಹೊಟ್ಟೆ ತೊಳಿಸಿ ಸೋತು ಬಸವಳಿದು ಸೂರ್ಯಾಸ್ತಮದ ನಂತರ ಮನೆ ತಲಪುತ್ತಿದ್ದರು. ಮರುದಿನ ಮುಂಜಾನೆ ಮತ್ತದೇ ಪುನರಾವರ್ತನೆ. ಆಷ್ಟೂ ಅತಿಥಿಗಳನ್ನು ಆಹ್ವಾನಿಸುವವರೆಗೂ ಈ ಕಾಯಕ ಮುಂದುವರೆಯುತ್ತಿತ್ತು

**ಈಗ ಸಮಯಕ್ಕೆ ಮಹಾಬೆಲೆ. ಎಲ್ಲವನ್ನೂ ಚುಟುಕಾಗಿ ಮುಗಿಸಿಬಿಡುವುದತ್ತ ಒಲವು ಪ್ರಾರಂಭವಾಗಿದೆ. ಆದರೆ.......**

ಈಗ ಕಾಲ ಬದಲಾಗಿದೆ. ಸಮಯಕ್ಕೆ ಮಹಾ ಬೆಲೆ. ಎಲ್ಲವನ್ನೂ ಚುಟುಕಾಗಿಯೇ ಮುಗಿಸಿಬಿಡುವತ್ತ ಒಲವು ಪ್ರಾರಂಭವಾಗಿದೆ. ಎಲ್ಲಕ್ಕೂ ಮಿಗಿಲಾಗಿ ತಂತ್ರಜ್ಞಾನ ನಮ್ಮ ಅಂಗೈಯಲ್ಲೇ ಇದೆ ಅರ್ಥಾತ್ ಸೆಲ್‌ಫೋನಿನ ರೂಪದಲ್ಲಿ! ಈಗ ಮನೆಯಲ್ಲೇ ಆರಾಮಕುರ್ಚಿಯಲ್ಲಿ ಕುಳಿತು ಫೋನಿನ ಮೂಲಕ ಆಹ್ವಾನಿಸಿ ಅಂಚೆಯಲ್ಲಿ ಪತ್ರಿಕೆ ಕಳುಹಿಸಿದರೆ ಕರ್ತವ್ಯ ಮುಗಿದಂತೆ. ನಾನೂ ಇದೇ ಹಾದಿಯಲ್ಲಿ ನಡೆಯಲು ನಿರ್ಧರಿಸಿದೆ. ನಾಲ್ಕೈದು ದಿನ ಟ್ಯಾಕ್ಸಿಗಾಗಿ ವ್ಯಯಮಾಡಿದ ಹಣ, ಮನೆಮನೆ ಸುತ್ತುವ ಕಾಲಹರಣ, ಸಿಕ್ಕಾಪಟ್ಟೆ ತಿಂದು ಹೊಟ್ಟೆಕೆಟ್ಟು ಆಗುವ ಆರೋಗ್ಯಹರಣ ಇವೆಲ್ಲದರಿಂದ ಮುಕ್ತಿ ದೊರಕಿದರೆ ಯಾರಿಗೆ ಖುಶಿಯಾಗದು?

ಮೊದಲನೆಯದಾಗಿ ನೂರಕ್ಕೂ ಹೆಚ್ಚು ಆಹ್ವಾನಿತರ ಪಟ್ಟಿ ತಯಾರಾಯಿತು. ಒಬ್ಬರನ್ನು ಆಹ್ವಾನಿಸಲು ಐದು ನಿಮಿಷಗಳು ಸಾಕೆಂದು ನಿಗದಿ ಮಾಡಿದೆ. ದಿನಕ್ಕೆ ಎರಡು ಘಂಟೆ

ಫೋನ್ ಹಿಡಿದು ಕುಳಿತರೂ ಒಂದು ದಿನಕ್ಕೆ ಇಪ್ಪತ್ತನಾಲ್ಕು ಮಂದಿಗೆ ಆಹ್ವಾನ ನೀಡಬಹುದಿತ್ತು. ಹೆಚ್ಚುಕಮ್ಮಿ ನಾಲ್ಕು ದಿನಗಳಲ್ಲಿ ಅಷ್ಟೂ ಮಂದಿಯನ್ನು ಕರೆದುಬಿಡುವ ಭಾರಿ ಯೋಜನೆ ನನ್ನದಾಗಿತ್ತು. ಕುಡಿದ ನೀರು ಅಲ್ಲಾಡದಂತೆ ಆರಾಮ ಕುರ್ಚಿಯಲ್ಲಿ ಕುಳಿತೇ ಇಷ್ಟೊಂದು ಶ್ರಮದಾಯಕ ಕೆಲಸ ಮಾಡಲು ಅನುವು ಮಾಡಿಕೊಟ್ಟ ತಂತ್ರಜ್ಞಾನಕ್ಕೆ ಮನಸ್ಸಿನಲ್ಲಿಯೇ ನಮೋ ಎಂದೆ.

ಒಂದು ಶುಭದಿನದ ಶುಭ ಮುಹೂರ್ತದಲ್ಲಿ ಎಡಗೈನಲ್ಲಿ ಆಹ್ವಾನಿತರ ಪಟ್ಟಿ ಬಲಗೈನಲ್ಲಿ, ಕಾರ್ಡ್‌ಲೆಸ್ ಫೋನ್ ಮುಂದೆ ತೆರೆದಿಟ್ಟ ಡೈರಿ ಇವಿಷ್ಟನ್ನಿಟ್ಟುಕೊಂಡು ಕಾರ್ಯೋನ್ಮುಖಳಾದೆ. ವಿಘ್ನೇಶ್ವರನಿಗೆ ಪ್ರಥಮಪೂಜೆ ಆಗಲೇಬೇಕಲ್ಲಾ. ಅದಕ್ಕಾಗಿ ಪ್ರಪ್ರಥಮವಾಗಿ ಗಣೇಷಮಾಮನ ಮನೆಯ ನಂಬರ್ ಡಯಲ್ ಮಾಡಿದೆ.

''ನೀವು ಡಯಲ್ ಮಾಡಿದ ಸಂಖ್ಯೆ ಸರಿಯಾಗಿದೆಯೇ ಪರೀಕ್ಷಿಸಿ'' ಧ್ವನಿಮುದ್ರಿತ ಸ್ತ್ರೀಕಂಠ ಉಲಿಯಿತು. ವಿಘ್ನರಾಜ ಮುನಿಸಿದ್ದ! ಮತ್ತೊಮ್ಮೆ ನಂಬರ್ ಸರಿಯಿದೆಯೇ ಎಂದು ಖಾತ್ರಿ ಮಾಡಿಕೊಂಡು ಅದನ್ನೇ ಒತ್ತಿದೆ.

''ನೀವು ಡಯಲ್ ಮಾಡಿದ ಟೆಲಿಫೋನ್ ದುರಸ್ತಿಯಲ್ಲಿದೆ'' ಎಂದಿತು ಧ್ವನಿ. ಒಂದೊಂದು ಸಲ ಒಂದೊಂದು ಕಾರಣ ಹೇಳುವ ದೂರವಾಣಿ ಸುಳ್ಳು ಹೇಳುತ್ತಿರುವುದು ಖಾತ್ರಿಯಾಯಿತು. ಮೂರನೇ ಬಾರಿ ಪ್ರಯತ್ನಿಸಿದೆ. ''ನೀವು ಡಯಲ್ ಮಾಡಿದ ಸಂಖ್ಯೆ ಸಂಭಾಷಣೆಯಲ್ಲಿ ನಿರತವಾಗಿದೆ. ಸ್ವಲ್ಪ ಸಮಯದ ನಂತರ ಪ್ರಯತ್ನಿಸಿ'' ಎಂದಿತು! ನಾಲ್ಕನೆಯ ಬಾರಿ ನನ್ನ ಪ್ರಾರ್ಥನೆ ವಿಘ್ನನಿವಾರಕನಿಗೆ ಮುಟ್ಟಿರಬೇಕು.ಆ ಕಡೆಯಿಂದ ಗಣೇಷಮಾಮನ ಧ್ವನಿ ಕೇಳಿಸಿತು.

''ಹಲೋ, ಯಾರು?''

''ನಾನ್ಮಾವ, ನಿಮ್ಮ ಸೋದರ ಸೊಸೆ. ಬಹಳ ಸಲ ಪ್ರಯತ್ನಿಸಿದೆ. ನಿಮ್ಮ ಲೈನ್ ಬ್ಯುಸಿಯಾಗಿತ್ತು?''

ಮಾವ ನಕ್ಕರು. ''ಹಾಗಂತ ಯಾರು ಹೇಳಿದ್ದು? ಫೋನ್ ತಾನೇ? ಅದು ಮನಸ್ಸಿಗೆ ಬಂದಂತೆ ಬುರುಡೆ ಬಿಡುತ್ತೆ. ಕಳೆದ ಅರ್ಧ ಗಂಟೆಯಿಂದ ವರಾಂಡದಲ್ಲಿ ಬಿಸಿಲು ಕಾಯುತ್ತಾ ಕೂತಿದ್ದೀನಿ. ಫೋನ್ ಹತ್ತಿರಾನೂ ಸುಳಿದಿಲ್ಲಾ.''

ಈ ವೇಳೆಗೆ ನಾನು ನಿಗದಿ ಮಾಡಿದ್ದ ಐದು ನಿಮಿಷ ಮುಗಿದು ಮತ್ತೈದು ನಿಮಿಷವಾಗಿತ್ತು. ಸಂಕ್ಷಿಪ್ತವಾಗಿ ಮದುವೆಗೆ ಆಹ್ವಾನವಿತ್ತೆ.

''ಖಂಡಿತ ಬರ್ತೀನಮ್ಮ. ಹುಡುಗಿ ಯಾರ ಪೈಕಿ?'' ಮಾವಯ್ಯ ಸಂಭಾಷಣೆ ಮುಂದುವರೆಸುವತ್ತ ಒಲವು ತೋರಿಸಿದರು. ನಾನು ಹೇಳಬೇಕಾದ್ದನ್ನು ಸಂಕ್ಷಿಪ್ತವಾಗಿ ಹೇಳಿದೆ. ಮಾವ ಬಿಟ್ಟಿದ್ದರೆ!

''ಭಾರಿ ಕುಳವಾ? ಆಸ್ತಿ ಪಾಸ್ತಿ ಹೇಗೆ?''

''ಅದೆಲ್ಲ ಗೊತ್ತಿಲ್ಲ, ನಾವದ್ರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ.''

''ಹುಡುಗಿ ತಂದೆ ಯಾವ ಇಲಾಖೇಲಿ ಕೆಲಸ ಮಾಡ್ತಿದ್ರು ಹೇಳು. ನಾನು ಭಾರಿ ಹೌದೋ ಅಲ್ಲವೋ ಹೇಳ್ತೀನಿ.'' ಥೇಟ್ ಜ್ಯೋತಿಷಿಯ ಧಾಟಿಯಲ್ಲಿ ಹೇಳಿದರು. ನನಗೆ ಸಂಭಾಷಣೆ ಮುಗಿದರೆ ಸಾಕಿತ್ತು. ಯಾವ ಇಲಾಖೆ ಹೇಳಿದೆ.

''ತ್ಸು.ತ್ಸು. ಇದ್ರಲ್ಲಿ ಮೇಲು ಸಂಪಾದನೇಗೆ ಅಷ್ಟು ಮಾರ್ಗಗಳು ಇರೋಲ್ಲ. ಆದ್ರೂ ಜನ ಕದೀಮ್ರು. ಅವಕಾಶಗಳ್ನ ಸೃಷ್ಟಿ ಮಾಡ್ಕೊಂಡು ಹಣ ಮಾಡ್ಕೋತಾರೆ. ನಾನು ಸರ್ವೀಸಿನಲ್ಲಿ ಇದ್ದಾಗ ಏನಾಯ್ತೂಂತಂದ್ರೆ .... ಆರಂಭಿಸಿ ಮುಂದಿನ ಕಾಲು ಗಂಟೆ ತಮ್ಮ ಸರ್ವೀಸಿನ ದಿನಗಳಲ್ಲಿ ವಿಹರಿಸಿದರು. ಗಂಟಲು ಒಣಗಿ ಕೆಮ್ಮಲು ಮಾತು ನಿಲ್ಲಿಸಿದರು. ನನಗಷ್ಟು ಅವಕಾಶ ಸಾಕಿತ್ತು. ಮತ್ತೆ ಫೋನ್ ಮಾಡ್ತೀನಿ ಎಂದು ಫೋನ್ ಕೆಳಗಿಟ್ಟೆ. ಹೆಚ್ಚು ಕಮ್ಮಿ ಅರ್ಧ ಗಂಟೆಯಷ್ಟು ನನ್ನ ಸಮಯವನ್ನು ನುಂಗಿ ಹಾಕಿದ್ದರು!

★★★

ಗಿರಿಜತ್ತೆ ನನ್ನ ತಾತನ ತಂಗಿ. ನನ್ನ ತೌರಿನ ಕಡೆ ಈಗ ಅವರೇ ಹಿರಿಯರು. ಅವರಿಗೆ ಫೋನ್ ಮಾಡಿದೆ. ಪುಣ್ಯಕ್ಕೆ ಯಾವುದೇ ತಡೆ ಇಲ್ಲದೆ ಅವರೇ ಫೋನ್ ಎತ್ತಿದರು.

ಅವರ ಎಂದಿನ ಗತ್ತಿನ ಧ್ವನಿಯಲ್ಲಿ ''ಹಲೋ''

''ನಾನು ಗಿರಿಜತ್ತೆ, ನಿಮ್ಮ ಅಣ್ಣ ಗುಂಡಣ್ಣನ ಮೊಮ್ಮಗಳು''

ಮತ್ತೆ ಅದೇ ಗತ್ತಿನಲ್ಲಿ ''ಹಲೋ'' ಕೇಳಿಸಿತು. ಒಂದೆರಡು ಬಾರಿ ಹಲೋ ಹಲೋ ಹೇಳಿ ಲೈನ್ ಕಟ್ ಮಾಡಿದರು. ಗಿರಿಜತ್ತೆ ನನ್ನೊಡನೆ ಆಟವಾಡುತ್ತಿಲ್ಲವಷ್ಟೇ ಅಥವಾ ಅವರಿಗೆ ಕಿವಿ ಕೆಪ್ಪಾಯ್ತೇ? ಏನೇ ಇರಲಿ ಎಂದು ಮತ್ತೆ ಡಯಲ್ ಮಾಡಿದೆ. ಮತ್ತದೇ ಹಲೋ..ಹಲೋ..ಲೋ...ಲೋ. ಮೂರನೆಯ ಬಾರಿಗೆ ಡಯಲ್ ಮಾಡಿದಾಗ ಅತ್ತೆಯ ಸ್ವರ ಏರಿತ್ತು. ''ಯಾರೋ ಅದು ? ಸುಮ್ನೆ ಡಯಲ್ ಮಾಡೀ ಮಾಡೀ ಬಾಯ್ಮುಚ್ಚಿಕ್ಕೊಂಡಿರೋನು? ಇಡೋ ಕೆಳ್ಗೆ ಫೋನ್ನ.'' ಬೈದು ಲೈನು ಕಟ್ ಮಾಡಿದರು. ನನ್ನ ಮಾತುಗಳು ಆಕೆಗೆ ಕೇಳಿಸುತ್ತಿಲ್ಲದಿದ್ದುದು ಸ್ಪಷ್ಟವಾಯಿತು. ಫೋನ್ ಕಂಪನಿಯನ್ನು ಶಪಿಸುತ್ತಾ ಮತ್ತೆ ಡಯಲ್ ಮಾಡಿದೆ. ಮತ್ತದೇ ''ಹಲೋ ಲೋ  ಲೋ.'' ಜೊತೆಗೆ ಕೆಟ್ಟ ಬೈಗುಳ. ಸಾಲದೆಂಬಂತೆ ಪೋಲೀಸಿಗೆ ದೂರುಕೊಡುವ, ಕೈಕಾಲು ಕತ್ತರಿಸಿ ಒಲೆಗೆ ಹಾಕುವ ಭಯೋತ್ಪಾದಕ ಬೆದರಿಕೆಗಳು ಅತ್ತೆಯಿಂದ! ಜೊತೆಗೆ ನನಗೆ ಪೋಕರಿ ಎಂಬ ಪಟ್ಟ ಬೇರೆ! ಕಡೆಯ ಪ್ರಯತ್ನವಾಗಿ ಮತ್ತೊಮ್ಮೆ ಮಾಡಿದಾಗ ನನ್ನ ಮಾತು ಆಕೆಗೆ ಕೇಳಿಸಿತು.

''ಅಯ್ಯೋ, ನೀನಾ? ನಾನ್ಯಾರೊ ಘಟಿಂಗ ಅಂತ ಅಂದ್ಕೊಂಡು ಬೈದೆ. ತಪ್ಪು ತಿಳೀಬೇಡ ಕಣೆ. ಈ ಫೋನ್ ಕಂಪನಿಗ್ಳು ನಮ್ಮನ್ನೆಷ್ಟು ಮುಠ್ಠಾಳ್ರನ್ನಾಗಿ ಮಾಡತ್ವೆ ನೋಡು. ತಿಂಗಳಾಗುತ್ಲೂ ನಾಚಿಕೆ ಇಲ್ದೆ ಬಿಲ್ ರವಾನೆ ಮಾಡುತ್ತೆ. ಸೇವೆ ಮಾತ್ರ ಸೊನ್ನೆ.''

ನಾನು ವಿಷಯಕ್ಕೆ ಬಂದು ಮದುವೆಗೆ ಆಹ್ವಾನಿಸಿದೆ. ಅತ್ತೆಗೆ ಆಗ ಒಂದು ಹೊಸ ಪ್ರಪಂಚವೇ ತೆರೆದಂತಾಯ್ತು.

''ಯಾರೇ ಹುಡುಗಿ?'' ಹೇಳಿದೆ. ಅತ್ತೆಗೆ ಅಷ್ಟು ಸಾಕೇ?

ಯಾವೂರು? ಯಾರ ಮನೆಯೋಳು? ಅಪ್ಪ ಅಮ್ಮ ಅಜ್ಜಿ ತಾತಂದಿರು ಯಾರು? ಎಲ್ಲವನ್ನೂ ಗಡಿಯಾರ ನೋಡುತ್ತಾ ಹೇಳಿದೆ. ಅತ್ತೆ ಬಾದರಾಯಣ ಸಂಬಂಧದ ಚಕ್ರವ್ಯೂಹ ಒಳಹೊಕ್ಕು ವಿಜಯಿಯಾಗಿ ಹೊರಬಂದು ಜಯಘೋಷ ಮಾಡಿದರು.

''ಅವ್ರು ಯಾರೂಂತಿ? ವಾವೆಯಲ್ಲಿ ನಮಗೆ ದಾಯಾದಿಗಳಾಗಬೇಕು. ಆದ್ರೆ ನನಗೆ ತಿಳಿದಂತೆ ಅಷ್ಟೇನೂ ಅನುಕೂಲಸ್ತರಲ್ಲ. ಧ್ವನಿ ತಗ್ಗಿಸಿ ಗುಟ್ಟಿನಲ್ಲಿ ಕೇಳಿದರು.

''ಹುಡ್ಗೀಗೆ ಏನು ಹಾಕ್ತಾರೆ?''

''ಏನನ್ನು ಯಾರು ಹಾಕ್ತಾರೆ?'' ಅರ್ಥವಾದರೂ ಆಗದಂತೆ ಕೇಳಿದೆ.

''ಅಯ್ಯೋ ಪೆದ್ದಿ. ನಾಕೇಳಿದ್ದು ಎಷ್ಟು ಬಂಗಾರ ಹಾಕ್ತಾರೆ ಅಂತ.''

''ಗಿರಿಜತ್ತೆ ನಾ ಅದನ್ನೆಲ್ಲಾ ಕೇಳಲಿಲ್ಲ.''

''ಮತ್ತೇನು ಹೆಣ್ಣು ನೋಡೋಕ್ಕೆ ಹೋಗಿದ್ದು ನಿನ್ತಲೆ?. ಬಿಚ್ಕೋಲೆ ಗೌರೀನ ಮಗಂಗೆ ತಂದ್ಕೋತೀಯಾ? ಈಗ್ಲು ಕಾಲ ಮಿಂಚಿಲ್ಲ. ಹೋಗಿ ಕೇಳು.''

''ಬಂಗಾರದಂಥಾ ಸೊಸೆ ಬಂದ್ಮೇಲೆ ಬೇರೆ ಬಂಗಾರ ಯಾಕೆ ಬೇಕು ಅತ್ತೆ?''

''ಅದೆಲ್ಲಾ ಮೈಕಿನ ಮುಂದೆ ನಿಂತು ಭಾಷಣ ಮಾಡೋಕ್ಕೆ, ಕಥೆ ಕಾದಂಬರಿ ಬರಿಯೋರಿಗೆ ಸರಿ ಎಂದು ಮುಂದಿನ ಮುಕ್ಕಾಲು ಗಂಟೆ ನನಗೆ ಬುದ್ಧಿ ಹೇಳಿ ಆಪದ್ಧನವಾದ ಬಂಗಾರದ ಮಹತ್ವ ತಿಳಿಹೇಳಿದರು.ಗಡಿಯಾರದ ಮುಳ್ಳನ್ನೇ ನೋಡುತ್ತಾ ಕುಳಿತಿದ್ದ ನಾನು ಕೊನೆಗೆ ಏನೋ ಒಂದು ಸಬೂಬು ಹೇಳಿ ಮಾತು ಮುಗಿಸುವ ವೇಳೆಗೆ ಗಡಿಯಾರದ ಮುಳ್ಳು ಬಲು ಮುಂದೆ ಹೋಗಿಬಿಟ್ಟಿತ್ತು!

★★★

ಪಟ್ಟಿಯಲ್ಲಿದ್ದ ಮೂರನೆಯ ಹೆಸರು ಪಾರ್ವತಮ್ಮ ಮೇಡಮ್ಮನದು. ನನ್ನ ಶಾಲಾದಿನಗಳ ಶಿಕ್ಷಕಿ. ಪುಣ್ಯಕ್ಕೆ ಯಾವುದೇ ತಕರಾರಿಲ್ಲದೆ ಫೋನ್ ಸಂಪರ್ಕವೇರ್ಪಟ್ಟಿತು. ಹೆಚ್ಚು ಪೀಠಿಕೆ ಇಲ್ಲದೆ ಮದುವೆಗೆ ಆಹ್ವಾನಿಸಿದೆ.ಅವರು ಕೇಳುವ ಮುಂಚೆಯೇ ಹುಡುಗಿಯ ಬಗ್ಗೆ ಎಲ್ಲಾ ವಿವರ ಹೇಳಿ ಮುಗಿಸಿದೆ.

''ನಾನೀಗ ಹೆಚ್ಚು ಹೊರಗೆ ಹೋಗೋದಿಲ್ಲ. ಆರೋಗ್ಯ ಅಷ್ಟಕ್ಕಷ್ಟೇ. ಆದ್ರೆ ನಿನ್ನ ಮನೆ ಮದ್ವೇ ಅಂದ್ರೆ ನಾನು ಬರ್ಲೇಬೇಕು. ಬರ್ತೀನಿ. ಅದಕ್ಕೆ ಮುಂಚೆ ನೀನೊಂದು ಕೆಲ್ಸ ಮಾಡ್ಬೇಕು.''

''ಕಾರು ಕಳಿಸ್ಬೇಕಾ? ಆಗ್ಲೇಳಿ, ಕಳಿಸ್ತೀನಿ''

''ಛೆ ಛೆ.. ನೀನಷ್ಟೊಂದು ತೊಂದ್ರೆ ತೊಗೋಬೇಡಾ. ನನ್ನ ಮೈದುನನ ಮಗ ದಂಡಪಾಣಿ ಇದೇ ಹಿಂದಿನ ರಸ್ತೇಲಿದ್ದಾನೆ. ನಿವೃತ್ತಿಯಾದ್ಮೇಲೆ ಕಾಲ ತಳ್ಳೋದೆ ಕಷ್ಟಾಂತಾನೆ. ಅದಕ್ಕೇ ಕರೆದ ಯಾವ ನಾಮಕರಣ, ಹುಟ್ಟಿದಹಬ್ಬ,ಮುಂಜಿ,ಮದುವೆ,ಗೃಹಪ್ರವೇಶ,ಷಷ್ಠಿಪೂರ್ತಿ ಒಂದೂ ಬಿಡೋಲ್ಲ. ಅದಕ್ಕೇಂತಾನೇ ಒಂದು ಸೆಕೆಂಡ್ ಹ್ಯಾಂಡ್ ಕಾರ್ನೂ ತೊಗೊಂಡಿದ್ದಾನೆ. ನೀನು ಅವನ್ನೂ ಕರೆದುಬಿಡು. ಗಂಡ ಹೆಂಡ್ತೀ ಜೊತೆ ನಾನೂ ಬರೋಕ್ಕೆ ಸರಾಗವಾಗುತ್ತೆ. ''ಬರ್ಕೋ ಅವನ ಟೆಲಿಫೋನ್ ನಂಬರ್ನ'' ಎಂದು ಜಬರ್ದಸ್ತಿನಿಂದ ನಂಬರ್ ಕೊಟ್ಟು ದಂಡಪಾಣಿಯನ್ನು ಆಹ್ವಾನಿಸುವಂತೆ ಮಾಡಿಬಿಟ್ಟರು. ಅಪರಿಚಿತ ದಂಡಪಾಣಿಗೆ ನನ್ನ

ಪರಿಚಯ ಹೇಳಿಕೊಂಡು ಆಹ್ವಾನಿಸಿ ಮೇಡಮ್ನನ್ನು ಕರೆತರಲು ಹೇಳಿ ಮುಗಿಸುವ ವೇಳೆಗೆ ಅರ್ಧಗಂಟೆ ದಂಡವಾಗಿತ್ತು!

★★★

ಮುಂದೆ ಹೆಚ್ಚು ಮಾತಿನವರಲ್ಲದ ಭಾವನವರನ್ನು ಕರೆಮಾಡಲು ಮುಂದಾದೆ. ಅವರಾದರೂ ಐದೇ ನಿಮಿಷದಲ್ಲಿ ಮಾತು ಮುಗಿಸುವರೆಂಬ ದುರಾಸೆ. ಆದರೆ ಆದದ್ದೇ ಬೇರೆ. ಒಂದೇ ಪ್ರಯತ್ನಕ್ಕೆ ಭಾವನವರ ಧ್ವನಿ ಕೇಳಿಸಿತು.

''ಹಲೋ ಭಾವ, ನಾನು ನಿಮ್ಮ ನಾದಿನಿ. ನಿಮ್ಮ ತಮ್ಮ ವಿಷಯ ಹೇಳಿರ್ಬೇಕು. ಪತ್ರಿಕೆ ಅಂಚೆ ಮೂಲಕ ಕಳಿಸುತ್ತೇನೆ. ತಪ್ಪ ದೇ ಎಲ್ರೂ ಬನ್ನಿ'' ಎಂದು ಫೋನ್ ಕೆಳಗಿಡುವುದರಲ್ಲಿದ್ದೆ. ಭಾವ ತಡೆದರು.

''ರಾಮಣ್ಣನಿಗೂ ಸೋಮಣ್ಣನಿಗೂ ಆಹ್ವಾನ ಕೊಟ್ಟೆಯಾ?''

''ಯಾರು ರಾಮಣ್ಣ ಸೋಮಣ್ಣ? ನಮಗೆ ಪರಿಚಯವಿಲ್ಲ.''

''ನಿನಗೆ ಪರಿಚಯವಿಲ್ಲ ಅಂದ್ಮೂಕ್ಡೆ ಬಾಂಧವ್ಯ ತಪ್ಪಿ ಹೋಗುತ್ಯೆ? ನೀನು ನಮ್ಮ ಮನೇಗೆ ಸೇರಿ ಮೂವತ್ತೈದು ವರ್ಷಗಳಾದ್ರೂ ನಮ್ಮ ಬಳಗದ ಪರಿಚಯವೇ ಮಾಡ್ಕೊಂಡಿಲ್ಲ. ಈ ಸಂದರ್ಭದಲ್ಲಾದ್ರೂ ಪರಿಚಯ ಮಾಡ್ಕೋ. ಅವ್ರಿಬ್ರೂ ನಮ್ಮ ತಂದೆಯ ದೊಡ್ಡಪ್ಪನ ಮೊಮ್ಮಕ್ಳು. ಏನೇ ಆದ್ರೂ ರಕ್ತಸಂಬಂಧ ಬಿಡಬಾರ್ದು. ನಾನೂ ನಿನ್ನ ಗಂಡಾನೂ ಚಿಕ್ಕೋವ್ರಿದ್ದಾಗ ರಜ ಬಂದ್ರೆ ಅವರ ಹಳ್ಳೀಗೆ ಹೋಗ್ತಿದ್ವಿ. ದಿನಪೂರ್ತಿ ಆಟ್ವೇ ಆಟ. ಮರ ಹತ್ತೋದೇನು, ಹೊಳೇಲಿ ಈಜೋದೇನು, ಮಾವಿನ ಹೀಚು ಕದ್ದು ತಿನ್ನೋದೇನು?'' ಮಾತೇ ಆಡದ ಭಾವ ಭೂತಕಾಲದಲ್ಲಿ ತೇಲಿಹೋದರು. ನಾನು ಗಡಿಯಾರ ನೋಡುತ್ತಾ ಮೈಪರಚಿಕೊಂಡದ್ದೇ ಬಂತು. ಎಷ್ಟೋ ವೇಳೆಯ ನಂತರ ವರ್ತಮಾನಕ್ಕೆ ಹಿಂದಿರುಗಿದರು. ''ರಾಮಣ್ಣ ಸೋಮಣ್ಣನ ನಂಬರ್ ಬರ್ಕೊ. ನಾನು ಹೇಳ್ದೆ ಅಂತಾನೂ ಹೇಳು'' ಎಂದರು ಅಧಿ ಕಾರವಾಣಿಯಿಂದ. ಹೊಸದಾಗಿ ಸೇರ್ಪಡೆಯಾದವರಿಗೆ ಡಯಲ್ ಮಾಡಿದೆ. ರಾಮಣ್ಣ ತಮ್ಮ ಶೋಚನೀಯ ದೇಹಸ್ಥಿತಿ, ತಾವು ಅನುಭವಿಸುತ್ತಿರುವ ವೇದನೆಯ ಸಂಪೂರ್ಣ ವಿವರ, ಪಾಲಿಸುತ್ತಿರುವ ಪಥ್ಯ ಎಲ್ಲಾ ಮುಂದಿನ ಹದಿನೈದು ನಿಮಿಷ ಕೊರೆದರು.

ಸೋಮಣ್ಣ ಹೊರದೇಶದಲ್ಲಿದ್ದವರು ಈಚೆಗೆ ಊರಿಗೆ ಬಂದರಂತೆ. ಇಲ್ಲಿಯ ಜನಸಂಖ್ಯೆ, ವಾಹನ ದಟ್ಟಣೆ, ಹವಾ ಮಾಲಿನ್ಯ, ರಸ್ತೆ ಕಾನೂನನ್ನು ಉಲ್ಲಂಘಿಸಿ ಸಾಹಸ ಮಾಡಿದೆವೆಂದುಕೊಂಡು ವಿಜೃಂಭಿಸುವ ಜನ ಎಲ್ಲರ ಬಗ್ಗೆ ಕೊರೆದು ''ನಾನು ಹೊರಗೆಲ್ಲೂ ಊಟವಿರ್ಲಿ, ನೀರೂ ಬಾಯಿಗೆ ಹಾಕೋಲ್ಲಮ್ಮ. ಕ್ಷಮಿಸಿಬಿಡು. ಮದ್ವೇಗೆ ಬರೋಕ್ಕಾಗೋದಿಲ್ಲ.'' ಇಷ್ಟು ಹೇಳುವುದಕ್ಕೆ ನನ್ನಿಂದ ಇಪ್ಪತ್ತು ನಿಮಿಷ ಕಸಿದುಕೊಂಡರು!

ಹೀಗೆಯೇ ದಿನಗಳು ಉರುಳುತ್ತಾ ವಿವಾಹದ ದಿನ ಸಮೀಪಿಸಿತು. ಸಮಾರಂಭ ಮುಗಿದು ವಿರಾಮದಲ್ಲಿದ್ದೇನೆ. ಪಟ್ಟಿಯಲ್ಲಿ ಇನ್ನೂ ನಲವತ್ತು ಬಂಧುಗಳನ್ನು ಕರೆಯುವುದಿದೆ. ಈಗ ಕರೆಯಲು ಸಾಕಷ್ಟು ಸಮಯವಿದೆ. ಆದರೆ ಯಾವುದಕ್ಕೆ ಕರೆಯಲಿ?

# ಕಪ್ಪು ಶುಕ್ರವಾರ - ಒಂದು ಜ್ಞಾನ್!

**- ವಾಣೀ ಸುರೇಶ್**

ಅಲ್ಲ, ನೀವೇ ಹೇಳಿ ಇವರೇ. ಯಾರಾದ್ರೂ ''ಕಪ್ಪು ದಿನ' ಅಂದ್ರೆ, ನಿಮಗೆ, – ತೋಳಿಗೆ ಕರೀ ಬಟ್ಟೆ ಕಟ್ಕೊಂಡು ಮೆರವಣಿಗೆಯಲ್ಲಿ ಕತ್ತೆಗಳು ಅಥವಾ ದನಗಳನ್ನ ಮುಂದಿಟ್ಕೊಂಡು, ಮಾರುದ್ದ ಘೋಷಣೆಗಳನ್ನ ಗಂಟಲು ಹರ್ಯೋ ಹಾಗೆ ಕೂಗ್ತಾ, ಸಂದರ್ಭಕ್ಕೆ ತಕ್ಕಂತೆ ಆರಿಸೋ ಪ್ಲೆಕಾರ್ಡುಗಳು, ಮೇಣದ ಬತ್ತಿಗಳು, ಕಸಪೊರಕೆಗಳು, ವಿಕಾರಗೊಳಿಸಿದ ಪ್ರತಿ ಕೃತಿ – ಇತ್ಯಾದಿಗಳನ್ನು ಆವೇಶದಿಂದ ಝಳಪಿಸ್ತಾ ನಮ್ಮೂರಿನ ವಿಧಾನಸೌಧದ ಅಸೆಂಬ್ಲಿಯಲ್ಲಿರೋ ''ಭಾವಿಯ'' (well) ತಳದಲ್ಲೋ ಇಲ್ಲ ನಮ್ಮ ರಾಷ್ಟ್ರಪಿತನ ಪದತಳದಲ್ಲೋ ಧರಣಿ ಅಂತ ಕೂತ್ಕೊಳ್ಳೋರು..., ಹೀಗೆ ಅನೇಕ ಪ್ರಿಯ–ಅಪ್ರಿಯ ಕಾರಣಗಳಿಗಾಗಿ ನಮ್ಮೂರು ಅಷ್ಟೆಲ್ಲಾ ಮುತುವರ್ಜಿ ವಹಿಸಿ 'ಕರಾಳ ದಿನ' ಆಚರಿಸೋದು... ಇದೆಲ್ಲಾ ಜ್ಞಾಪಕಕ್ಕೆ ಬರುಲ್ವೇ? ಅದ್ಯಾಕೋ, ನಂಗೆ ಮಾತ್ರ ಬ್ಲ್ಯಾಕ್ ಫೈಡೇ ಅಂದ್ರೆ ಈ ಕಲ್ಪನೆಗಳೇ ಬಾಧಿಸೋದು! ತೆಪ್ಪಗಿರಲಾರದೆ ಹಾಗಂತ ಒಂದು ದಿನ ಮನೆಯಲ್ಲಿ ಜೋರಾಗಿ ಅಂದೂ ಬಿಟ್ಟೆ. ಹಿರಿಯ ಪ್ರಜೆಗಳ ಭ್ರಾಮಕ ಹೆಡ್ಡತನ ನಿವಾರಿಸಲು ಸದಾ ಹಣ ತೊಟ್ಟಿರುವಂತಿರುವ ನವ ಯುವಕರು ಮನೆಯಲ್ಲೇ ಇದ್ದರೆ ಅದಕ್ಕಿಂತಿನ್ನೇನು ಸೌಭಾಗ್ಯ ಬೇಕು ಹೇಳಿ! ಅದರಲ್ಲೂ ಇಲ್ಲಿರುವಾಗ, ಅವರು ಇವರ ಪೂರ್ವಾಗ್ರಹ ಪೀಡಿತ ಮನಸ್ಸನ್ನು ಅಮೆರಿಕೆಯ ವಸ್ತುನಿಷ್ಠತೆಯ ನವನಾಗರೀಕ ವೇವ್ ಲೆಂಗ್ತಿಗೆ ಹೊಂದಿಸಲೇಬೇಕೆನ್ನೋ ಮನಸ್ಸು ಮಾಡಿದರಂತೂ ಸರಿಯೇ ಸರಿ..., ತಕ್ಷಣ ನಮ್ಮ ಜನಪ್ರಿಯ ಕನ್ನಡ ಸೀರಿಯಲ್ಲಿನ ಲಾಯರುಗಳನ್ನೂ ನಾಚಿಸೋ ಹಾಗೆ ತಮ್ಮ ಪಾಯಿಂಟನ್ನು ಪ್ರೂವ್ ಮಾಡುಕ್ಕೆ ಕೈಕಟ್ಟಿ ನಿಂತು ಬಿಡುತ್ತಾರೆ. ಹೌದು ತಾನೇ? ಹೋಗ್ಲಿ ಬಿಡಿ.

**ಅಮೆರಿಕದಲ್ಲಿನ ಸಂಪತ್ ಶುಕ್ರವಾರದ ಸಡಗರದ ಒಂದು ನೋಟ**

ಅಂದ್ಹಾಗೆ ಯಾವುದೇ ಜ್ಞಾನ ಸಂಪಾದನೆ ಮಾಡಬೇಕಿದ್ದರೂ ಅದು ಹೇಗೆ ತಾನೇ ಸುಲಭ ಸಾಧ್ಯವಾಗುತ್ತೆ ಅಲ್ವೇ! ಹಾಗಾಗಿ ಇವೆಲ್ಲ ಕಾರಣಗಳಿಂದ ಬ್ಲ್ಯಾಕ್ ಫೈಡೆಯ ಜ್ಞಾನ್–ಗೋಸ್ಕರ ಕಳೆದ ಥ್ಯಾಂಕ್ಸ್‌ಗಿವಿಂಗಿನ ರಾತ್ರಿ (ಕಾಕತಾಳೀಯವಾಗಿ ಗುರುವಾರ ಬೇರೆ, ಎಂಥಾ ಪ್ರಶಸ್ತ ದಿನ! ಏನು ಕತೆ!) ಮನೇಲಿ ಬೆಚ್ಚಗೆ ಟೀವಿ ಮುಂದೆ ಕೂತಿರೋ ಬದಲು, ಹೊರಗೆ ಮೈ ನಡುಗಿಸೋ ಚಳೀಲಿ ಷಾಪಿಂಗ್ ಕಾಂಪ್ಲೆಕ್ಸ್‌ಗೆ ಸುತ್ತಕ್ಕೆ ಹೊರಟಿದ್ದಾಯ್ತು.

ಸರಳವಾಗಿ ಹೇಳ್ಬೇಕೂಂದ್ರೆ ಬ್ಲ್ಯಾಕ್ ಫ್ರೈಡೇ ಅನ್ನೋದು ಥ್ಯಾಂಕ್ಸ್‌ಗಿವಿಂಗ್ ಮಾರನೇ ದಿನದ ಶುಕ್ರವಾರ ಅಮೆರಿಕಾ ದೇಶದಾದ್ಯಂತ ಷಾಪಿಂಗ್ ಪ್ರಿಯರು ಅತ್ಯಂತ ಕಾತುರದಿಂದ ಕಾಯುವ ಒಂದು ಭಾರಿ ಡಿಸ್ಕೌಂಟ್ ಸೇಲ್ ಅಷ್ಟೇ. ಸಾಧಾರಣವಾಗಿ ಥ್ಯಾಂಕ್ಸ್‌ಗಿವಿಂಗಿಗೆ ಎಲ್ಲೆಲ್ಲೂ ರಜೆಯಿರೋದ್ರಿಂದ ಬ್ಲ್ಯಾಕ್ ಫ್ರೈಡೇ ದಿನ, ಕಾದಿರುವ ಗ್ರಾಹಕರಿಗಾಗಿ ಅಂಗಡಿಯ ಬಾಗಿಲು ತೆರೆಯೋ ಸಮಯ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತೆ. ಅಲ್ಲದೇ ಸಾಮಾನ್ಯವಾಗಿ ಅತಿ ಹೆಚ್ಚಿನ ರಿಯಾಯಿತಿ ಸಿಗೋದು ಆಯಾ ವಸ್ತುಗಳು ಬಡುಗಳ ಮೇಲೆ ಲಭ್ಯವಿರೋ ತನಕ ಮಾತ್ರವಾದ್ದರಿಂದ ಅದು ಗ್ರಾಹಕರ ನಿಟ್ಟಿನಿಂದ ಇನ್ನೂ ಹೆಚ್ಚಿನ ಅರ್ಥ ಮತ್ತು ಒತ್ತಡ ಭರಿತ ಪ್ರಾಮುಖ್ಯತೆ ಪಡೆದುಕೊಳ್ಳುತ್ತೆ! ಈಗ ಸದ್ಯದಲ್ಲಿ ಬಾಗಿಲು ತೆರೆಯೋ ಸಮಯ - ಗುರುವಾರ ಮಧ್ಯರಾತ್ರಿಯಿಂದ ಹಿಡಿದು ಶುಕ್ರವಾರ ಬೆಳಗಿನ ಝಾವದವರೆಗೂ ಒಂದೊಂದು ಅಂಗಡಿಗೆ ಒಂದೊಂದು ರೀತಿಯಲ್ಲಿರುತ್ತೆ. ಕೇವಲ ಇಪ್ಪತ್ತನೇ ಶತಮಾನದ ಆದಿಯಿಂದಷ್ಟೇ ಪ್ರಾರಂಭವಾಗಿರೋ ಈ ಹೊಸ ಅಭ್ಯಾಸದ ಪ್ರಾಬಲ್ಯತೆ, ಇಲ್ಲಿಯ ವರದಿಯ ಪ್ರಕಾರ ಕೆನಡಾ, ಯೂ.ಕೆಗಳಿಗಷ್ಟೇ ಸೀಮಿತವಾಗದೆ, ಇತ್ತೀಚೆಗೆ ಭಾರತದ ಎಲೆಕ್ಟ್ರಾನಿಕ್ ಸಾಮಾನುಗಳ ಆನ್‌ಲೈನ್ ಮಾರುಕಟ್ಟೆಯಲ್ಲೂ ಸಹ ನಿಧಾನವಾಗಿ ಕಾಲೂರ್ತಿದೆಯಂತೆ! ಮಾತೆತ್ತಿದರೆ ಹಿಡಿದು ಮುಟ್ಟಿದ್ದಕ್ಕೆಲ್ಲಾ ಮಾಲ್-ಗಳ ಕಡೆ ವಾಲೋ ನಮ್ಮ ಯುವ ಜನಾಂಗ ಪಾಶ್ಚಾತ್ಯೀಕರಣಗೊಳ್ಳುತ್ತಿರೋ ರಭಸ ನೋಡಿದಾಗ ನಮ್ಮ ಅಂಗಡಿಗಳ ಮಟ್ಟಗಳಲ್ಲೂ ಈ ಅಭ್ಯಾಸ ಸದ್ಯದಲ್ಲೇ ಪ್ರಾರಂಭವಾಗೋ ದಿನವೇನೂ ದೂರ ಇಲ್ಲ ಬಿಡಿ. ಅಂತೂ ಇಲ್ಲಿಯ ಮಾಧ್ಯಮಗಳಲ್ಲಿ ಅದರ ಬಗ್ಗೆ ಸಾಕಷ್ಟು ನೋಡಿ, ಓದಿ, ಅವರಿವರ ಅನುಭವ ಕೇಳಿ, ಇದರ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ರೂ ಸಹಾ, ನಾನೇ ಪ್ರತ್ಯಕ್ಷವಾಗಿ ಹೋಗಿ ಬಂದ ಮೇಲಷ್ಟೇ ಅದರ ತೀವ್ರತೆಯ ಅರಿವಾಗಿ ಇದುವರೆಗೂ ಕೇಳಿದ್ದ ಹುಚ್ಚಾಟಗಳ ಬಗ್ಗೆ ನಂಗೆ ನಂಬಿಕೆ ಬಂದಿದ್ದು.

ನವೆಂಬರ್ ಕೊನೇ ವಾರದ ಮಿಶಿಗನ್ನಿನ ಆ ಗದಗುಟ್ಟೋ ಆ ಚಳೀಲಿ ಅಲ್ಲಿದ್ದಿದ್ದು ಅದಿನ್ನೆಷ್ಟು ಉದ್ದದ ಕ್ಯೂಗಳು ಅಂತೀರಾ? ನಮ್ಮ ಬೆಂಗಳೂರಿನ ಹೆಸರುವಾಸಿ ಕಾನ್ವೆಂಟುಗಳಲ್ಲಿ, ಪ್ರೈವೇಟ್ ಸ್ಕೂಲ್ಗಳಲ್ಲಿ ಕೇಜೀ ಕ್ಲಾಸಿಗೆ ರೆಜಿಸ್ಟರ್ ಮಾಡಕ್ಕೆ ಇರೋ ಕ್ಯೂಗಳ ತಾತನ ಥರಾ ಇದ್ದ ಈ ಒಂದೆರಡು ಮೈಲುದ್ದದ ಕ್ಯೂಗಳನ್ನ ನೋಡಿದ ತಕ್ಷಣವೇ ಒಂದು ನಿಮಿಷ ಬೆಂಗಳೂರಿಗೇ ಬಂದು ಬಿಟ್ನೇನೊಂತನ್ನಿಸಿಬಿಡ್ತು! ದಿನಗಟ್ಟಲೇಲಿ ಅದೆಲ್ಲಿರ್ತಾರೋ ಈ ಪಾಟಿ ಜನ, ಗೊತ್ತಿಲ್ಲ! ಅಂಗಡಿಯಾಚೆ ಕಾರಿಡಾರ್

## ಪ್ಲಸ್ ಪಾಯಿಂಟ್

ಭಕ್ತಿ + ಆಹಾರ = ಪ್ರಸಾದ
ಭಕ್ತಿ + ಹಸಿವೆ = ಉಪವಾಸ
ಭಕ್ತಿ + ನೀರು = ತೀರ್ಥ
ಭಕ್ತಿ + ಪ್ರಯಾಣ = ತೀರ್ಥಯಾತ್ರೆ
ಭಕ್ತಿ + ಸಂಗೀತ = ಕೀರ್ತನೆ
ಭಕ್ತಿ + ಮನೆ = ದೇವಾಲಯ
ಭಕ್ತಿ + ಕೆಲಸ = ಸೇವೆ
ಭಕ್ತಿ + ಮನುಷ್ಯ = ಮಾನವ

ಗಳಿಂದ ಮೊದಲು ಮಾಡಿಕೊಂಡು ಒಬ್ಬೊಬ್ಬರೂ ದಪ್ಪನೆಯ ಮಣ ಭಾರದ ವಿಂಟರ್ ಜ್ಯಾಕೆಟ್ಟುಗಳು, ಟೋಪಿ, ಗ್ಲೋವ್ಸ್-ಉ, ಬೂಟುಗಳಿಂದ ಅಲಂಕೃತವಾಗಿ, - ಕೆಲವರಂತೂ ಸ್ಲೀಪಿಂಗ್ ಬ್ಯಾಗುಗಳು, ರಜಾಯಿಗಳ ಸಮೇತ - ಸಿದ್ಧರಾಗಿ ಬಂದು ಪಿಕ್ನಿಕ್ ಮಾಡೋರ ಥರಾ ಹರಟಿಕೊಂಡು ಕೂತಿದ್ರು. ಕ್ಯಾಂಪಿಂಗ್ ಚೇರ್ಸ್ ಅಂತೂ ಸರ್ವೇಸಾಮಾನ್ಯವಾಗಿದ್ರೂ, ಸಾಲಿನಲ್ಲಿ ತೀರಾ ಮುಂದೆ ಇದ್ದ ಇನ್ನು ಕೆಲವರಂತೂ ತೀರಾ ಟೆಂಟುಗಳನ್ನೇ ಹಾಕ್ಕೊಂಡು ಕೂತ್ಬಿಟ್ಟಿದ್ರು! (ಅಂಥೋರೆಲ್ಲಾ ಬುಧವಾರದಿಂದಲೇ ಅಂಗಡಿ ಮುಂದೆ ಠಿಕಾಣಿ ಹಾಕಿರ್ತಾರಂತೆ! ನಿಜವಾಗ್ಲೂ ಒಂದು ಚೂರು ಉತ್ಪ್ರೇಕ್ಷೆ ಮಾಡ್ತಿಲ್ಲಪ್ಪ. ಸದ್ಯ ಹಾಗೆಲ್ಲಾದರೂ ಅಂದ್ಕೊಂಡು ಬಿಟ್ಟೀರಾ!) ಇದೆಲ್ಲದರ ಜೊತೆಗೆ, ನಮ್ಮ ರೈಲ್ವೇ ..... ಬುಧವಾರದಿಂದಲೇ ಅಂಗಡಿ ಮುಂದೆ ಠಿಕಾಣಿ ಹಾಕಿರ್ತಾರಂತೆ! ನಿಜವಾಗ್ಲೂ ಒಂದು ಚೂರೂ ಉತ್ಪ್ರೇಕ್ಷೆ ಮಾಡ್ತಿಲ್ಲಪ್ಪ. ಸದ್ಯ ಹಾಗೆಲ್ಲಾದರೂ ಅಂದ್ಕೊಂಡು ಬಿಟ್ಟೀರಾ!) ಇದೆಲ್ಲದರ ಜೊತೆಗೆ, ನಮ್ಮ ರೈಲ್ವೇ ಸ್ಟೇಷನ್ನುಗಳನ್ನ ಜ್ಞಾಪಿಸೋ ಹಾಗೆ ರಾಕ್ಷಸ ಗಾತ್ರದ ಫ್ಲಾಸ್ಕುಗಳಲ್ಲಿ ಹಾಟ್ ಚಾಕಲೇಟು, ಟೀ ಅವನ್ನೆಲ್ಲಾ ಕ್ಯೂ ಪಕ್ಕಕ್ಕೇ ತಂದು ಹೊತ್ತು ಮಾರುತ್ತಿದ್ದಿದ್ದು ಬೇರೆ! ಕಾರ್ನ್ ಚಿಪ್ಸು, pretzel-ಸು ಇವೇ ಮುಂತಾದ ಕುರುಕಲು ತಿಂಡಿಗಳೊಂದಿಗೆ ಅವರವರ ಶಕ್ತ್ಯಾನುಸಾರ ಧಾರಾಳವಾಗಿ ಇವನ್ನೂ ಬಸಿದುಕೊಳ್ತಿದ್ದೋರೂ ಸಾಕಷ್ಟು ಮಂದಿ. ಮೈ ಬೆಚ್ಚಗಾಗೊಕ್ಕೆ ಬಹುಶಃ ಇದಕ್ಕಿಂತಾ ಉತ್ತಮವಾದ ಇಲ್ಲಿ ಸರ್ವೇಸಾಧಾರಣವಾಗಿ ಸಿಗೋ ''ವರ್ಣರಂಜಕ'' ಪೇಯಗಳ್ಯಾವುದೂ ಮೇಲ್ನೋಟಕ್ಕೇನೂ ಕಾಣಿಸ್ತಿರಲಿಲ್ಲ. ನವ ವಿವಾಹಿತರಂತೆ ಕಾಣುವ (?) ಹೊಸದಾಗಿ ಗೂಡು ಕಟ್ಟುವ ಸಂಭ್ರಮದಲ್ಲಿದ್ದಾರೇನೋ ಅಂತನ್ನಿಸೋ ಜೋಡಿಗಳೇ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಹಾಗಿತ್ತು. ಆದ್ರಿಂದ ಮೈ ಬೆಚ್ಚಗಾಗಿಸೋ ಬೇರೆ ಆಯ್ಕೆಗಳ ಬಗ್ಗೆ ತುಂಬಾ ತಲೆ ಕೆಡಿಸಿಕೊಳ್ಳಬೇಕಿಲ್ಲವೇನೋ ಅಂತನ್ನೋದೂ ನಿಜವೇ ಬಿಡಿ. ಮಾತ್ರ, ಯಾವುದು ಹೇಗೇ ಇದ್ರೂ, ಎಲ್ಲರದ್ದೂ - ಯಾವಾಗ ಅಂಗಡಿ ಬಾಗಿಲು ತೆರೆಯತ್ತೊಂತ ಚಾತಕ ಪಕ್ಷಿಗಳ ಹಾಗೆ ಕಾಯೋದೊಂದೇ ಅಜೆಂಡಾ. ನಾನೀಗ ಹೇಳಿದ ಈ ವಿದ್ಯಮಾನ ಎಲೆಕ್ಟ್ರಾನಿಕ್ಸ್ ಅಂಗಡಿ ''ಬೆಸ್ಟ್ ಬೈ'' ಎದುರಿನದ್ದು. ಥ್ಯಾಂಕ್ಸ್‌ಗಿವಿಂಗ್ ಪೆರೇಡ್ ಖ್ಯಾತಿಯ ಪ್ರಖ್ಯಾತ ''ಮೇಸೀಸ್''ನಿಂದ ಹಿಡಿದು ''ವಾಲ್ ಮಾರ್ಟ್'' ತನಕ, ಯಾವ ಮಾಲ್, ಯಾವ ಅಂಗಡಿ ಬೀದಿ ನೋಡಿದರೂ, ಎಲ್ಲೆಲ್ಲೂ ಇದೇ ದೃಶ್ಯದ ಪುನರಾವರ್ತನೆ! ಏಕತೆಯಲ್ಲಿ ಭಿನ್ನತೆ ಅಂದ್ರೆ ಇದೇ ಇರಬಹುದೂಂತ ಅನ್ಕೋಬಹುದೇನೋ!

ಬಟ್ಟೆ ಬರೆ, ಇತರ ಗೃಹೋಪಯೋಗಿ ವಸ್ತುಗಳು ಇವುಗಳಿಗೆ ಬೇಡಿಕೆ ಇದ್ದರೂ ಸಹಾ, ಲೇಟೆಸ್ಟ್ ಮಾಡೆಲ್ಲಿನ ಟೀ.ವಿ. ಕಂಪ್ಯೂಟರ್ಗಳು, ಸ್ಮಾರ್ಟ್ ಫೋನುಗಳು, ಮುಂತಾದ ಬೆಲೆ ಬಾಳೋ ಅತ್ಯಾಧುನಿಕ ಎಲೆಕ್ಟ್ರಾನಿಕ್ ವಸ್ತು ವಿಶೇಷಗಳಿಗೆ ಈ ಸೇಲಿನಲ್ಲಿ ಆದ್ಯತೆ ಹೆಚ್ಚು. ''ಸೈಬರ್ ಮಂಡೇ'' (Cyber Monday) ಅನ್ನೋ ಥ್ಯಾಂಕ್ಸ್ ಗಿವಿಂಗ್ ಆದ ತಕ್ಷಣ ಬರೋ ಸೋಮವಾರದ ಎಲೆಕ್ಟ್ರಾನಿಕ್ ವಸ್ತುಗಳ ಸೇಲ್-ಏನೋ ಇದ್ದರೂ ಸಹಾ ಅದಿನ್ನೂ ಈ

ಬ್ಲ್ಯಾಕ್ ಫ್ರೈ ಡೇ ಸೇಲಿನಷ್ಟು ಜನಪ್ರಿಯವಾಗಿಲ್ಲ. ಸಾಮಾನ್ಯವಾಗಿ ಅಂಗಡಿಯೊಳಗೆ ಮಾರ್ಪಾಡಾಗದ ಒಂದೇ ಬಗೆಯಲ್ಲಿರೋ ಸಾಮಾನುಗಳ ಜೋಡಣೆ ಈ ಬ್ಲ್ಯಾಕ್ ಫ್ರೈಡೇ ಸೇಲಿಗೋಸ್ಕರ ಆವತ್ತು ವಿಪರೀತ ಬದಲಾವಣೆಗೊಂಡಿರುತ್ತೆ. ಅಲ್ಲದೆ ಅಂಗಡಿಗಳ ಒಳಹೊಕ್ಕು ಹೊರಬರೋದು ಸಹಾ ಬಡುಗಳ ಮಧ್ಯದ isleಗಳಲ್ಲಿ ಏಕಮುಖ ಸಂಚಾರದ ಮೂಲಕ ಮಾತ್ರ. ಈ ನಾಡೀ ಜನಜಂಗುಳೀನ ಹದ್ದು ಬಸ್ತಿನಲ್ಲಿಡೋಕೆ ಅಷ್ಟೂ ಬೇಡವೇ ನೀವೇ ಹೇಳಿ! ಅಂಥದ್ರಲ್ಲೂ ಇಂಥಾ ಶಿಸ್ತುಬದ್ಧ ಜನಜಂಗುಳಿಯಂತೆ ತೋರುವವರ ನಡುವೆಯೂ ಅಹಿತಕರ ನೂಕುನುಗ್ಗಲು, ದಾಂಧಲೆ, ವಾಗ್ಯುದ್ಧಗಳು ಮುಂತಾದವುಗಳು ನಡೆಯೋ ಪ್ರಮೇಯ ಇಲ್ಲಾಂತನ್ಕೊಂಡುಬಿಡ್ಬೇಡಿ.

ಹಾಗಂದಾಗ ನಮ್ಮಕ್ಕನ ಮಗಳು ಶಿಲ್ಪಾ-ದಂಪತಿಗಳ ಅನುಭವ ಜ್ಞಾಪಕಕ್ಕೆ ಬರುತ್ತೆ. ಇದು ನಡೆದದ್ದು ನ್ಯೂ ಜೆರ್ಸಿಯಲ್ಲಿ ಮೈಲುದ್ದದ ಕ್ಯೂನಲ್ಲಿ ಯಾವ್ದೋ ಹೊಚ್ಚಹೊಸ ಮಾಡೆಲ್ಲಿನ ಜೀವಿಗೋಸ್ಕರ ಕಲ್ಲು ಕರಗೋ ಸಮಯದಲ್ಲಿ ಬಾಗಿಲು ತೆಗೆಯೋ ಬೆಸ್ಟ್ ಬೈ ಎದುರಿಗೆ, ಕಾಡಿಸುತ್ತಿದ್ದ ಚಳೀಗೂ ಕೇರ್ ಮಾಡದೆ ರಾತ್ರಿಂದ ರಾತ್ರಿ ಕಾಲು ನೋಯಿಸಿಕೊಂಡು ನಿಂತಿದ್ರಂತೆ ಇವರಿಬ್ರೂ. ಇದ್ದಕ್ಕಿದ್ದ ಹಾಗೆ ಸಾಲಿನ ಮುಂಭಾಗದಲ್ಲಿ ಏನೋ ಗಜಿಬಿಜಿ, ಗದ್ದಲ ಶುರುವಾಯ್ತಂತೆ. ಏನದೂಂತ ನಿದ್ದೆಗಣ್ಣಿನಲ್ಲಿದ್ದ ಎಷ್ಟೋ ಜನರಿಗೆ ಅರ್ಥವಾಗುವಷ್ಟರಲ್ಲಿ ಅಲ್ಲಿಯವರೆಗೂ ತಾಳ್ಮೆಯಿಂದ ಕಾದಿದ್ದವರ ಶಿಸ್ತು ಮಾಯವಾಗಿ, ಮುಂದಿದ್ದ ಸಾಲೆಲ್ಲ ರಾಬರಿಯಾಗಿ ಚೆದುರಿ ಚೆಲ್ಲಾಪಿಲ್ಲಿಯಾದ್ದರಿಂದ ಕ್ಷಣ ಮಾತ್ರದಲ್ಲಿ ಹಿಂದಿದ್ದ ಜನರ ಹೊಸ ಸಾಲೊಂದು ಹೇಗೋ ಅಸ್ತಿತ್ವಕ್ಕೆ ಬಂದುಬಿಟ್ಟಿತಂತೆ! ಹಾಗಾಗಿ ಕ್ಷಣ ಮಾತ್ರದಲ್ಲಿ ಹಿಂದೆಲ್ಲೋ ಇದ್ದ ಇವರಿಬ್ಬರೂ ಅನಾಮತ್ತಾಗಿ ಮೊದಲಿನ ಐವತ್ತರಲ್ಲಿ ಒಬ್ಬರಾಗಿ ತಳ್ಳಲ್ಪಟ್ಟಿದ್ದರಂತೆ! (ಆಫ್ ಕೋರ್ಸ್ ಇವೆಲ್ಲಾ ಉಪಾಯಗಳು ನಮಗೇನೂ ಹೊಸದೇನಲ್ಲ ಅಂತಿಟ್ಕೊಳ್ಳಿ). ಇದಕ್ಕಿಂತಾ ಘೋರವಾದದ್ದೂಂದ್ರೆ ಅಂದರೆ ಸುಮಾರು ಏಳು ವರ್ಷಗಳ ಹಿಂದೆ ವಾಲ್ ಮಾರ್ಟಿನಲ್ಲಿ ಕಾದೂ ಕಾದೂ ತಾಳ್ಮೆಗೆಟ್ಟ ಗ್ರಾಹಕರು ಅಂಗಡಿಯ ಬಾಗಿಲನ್ನು ಬಲಪ್ರಯೋಗಿಸಿ ಒಡೆದು, ಸರಿ ಸುಮಾರು ಎರಡು ಸಾವಿರ ಮಂದಿ ಉದ್ರಿಕ್ತರಾಗಿ ಒಮ್ಮೆಲೇ ಒಳನುಗ್ಗಿದ್ದರಿಂದಾದ ತುಳಿತದಲ್ಲಿ ಒಂದು ವ್ಯಕ್ತಿ ಸತ್ತು ಹಲವಾರು ಅಂಗಡಿಯ ಮತ್ತು ಪ್ಯಾರಾ ಮೆಡಿಕಲ್ ಕೇರಿನ ಸಿಬ್ಬಂದಿ ವರ್ಗ ತೀವ್ರವಾಗಿ ಘಾಸಿಗೊಂಡಿದ್ದು. ಈ ಮಟ್ಟದ ಅಮಾನವೀಯತೆಯ ಬಗ್ಗೆ ಏನು ಹೇಳಿದರೂ ಕಮ್ಮಿಯೇ ಬಿಡಿ. ಅದಿರಲಿ, ಒಟ್ಟಲ್ಲಿ ಈ ತರದ ಕಾರಣಗಳಿಂದ ನಮ್ಮಂಥವರಿಗೆ ಆ ಧಾಂಡಿಗರ ಮಧ್ಯೆ ಸಾಲಿನಲ್ಲಿ ಹೋಗಿ ರಾತ್ರಿಂದ ರಾತ್ರಿ ನಿಲ್ಲುಕ್ಕೆ ಹಿಂಜರಿಕೆ ಆಗೋದಂತೂ ನಿಜ.

ಸುಮಾರು ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಪೆನ್ಸಿಲ್ವೇನಿಯಾದಲ್ಲಿ ಈ ರಿಯಾಯಿತಿ ಮಾರಾಟದ ಭರದಲ್ಲಿ ಉಂಟಾಗುತ್ತಿದ್ದ ಬೃಹತ್ ಟ್ರಾಫಿಕ್ ಜಾಮ್‌ಗಳು, ಫುಟ್ ಪಾತಿನಲ್ಲಿ ಎಂದು ಕಾಣದಂಥಾ ಮಿತಿಮೀರಿದ ಜನಜಂಗುಳಿ, ಅದರಿಂದಾಗಿ ಕಾನೂನು ಪಾಲಿಕೆಗೆ ಆಗುತ್ತಿದ್ದ ಅತಿ ಶ್ರಮ ಇವುಗಳಿಂದ ಬೇಸತ್ತು ಹೋದ ಪಾಪದ ಪೋಲೀಸ್-ನೋರು ಆ ದಿನಕ್ಕೆ ಬ್ಲ್ಯಾಕ್ ಫ್ರೈಡೇ ಎಂದು ನಾಮಕರಣ ಮಾಡಿದ

ಮೊದಲಿಗರು ಎಂದು ಇಲ್ಲಿಯ ಇತಿಹಾಸ (ಅವರನ್ನು ನಮ್ಮ ಬೆಂಗಳೂರಿಗೆ ಸ್ವಲ್ಪ ದಿನ ಕಳಿಸಿದ್ದರೆ ಅವರ ದುಗುಡ ದುಮ್ಮಾನಗಳು ಸರಿಹೋಗ್ತಿತ್ತೇನೋ ಅಲ್ವೇ?) ಆದ್ರೆ ವಾಸ್ತವವಾಗಿ ವರ್ಷಗಳು ಕಳೀತಾ ಕಳೀತಾ ಆದದ್ದೇ ಇನ್ನು ಬೇರೆ!

ಈ ಬ್ಲ್ಯಾಕ್ ಅನ್ನೋ ಒಂದು ಚಿಕ್ಕ ಪದಕ್ಕೂ ನನ್ನ (ನಮ್ಮ) ಕಲ್ಪನೆಯ ಕರಾಳತೆಗೂ ಇಲ್ಲದೇ ಇರೋ ಸಂಬಂಧದೊಂದಿಗೆ ನಿಜವಾಗಲೂ ಇರೋ ಇನ್ನೊಂದು ಸ್ವಾರಸ್ಯಕರ ಅಂಶವೇ ಅದು! ಅದು-ಬ್ಲ್ಯಾಕ್ ಎಂಬ ಆ ವಿಶೇಷಣಕ್ಕೂ ಮತ್ತು ಈ ದೇಶದ ರೀಟೈಲ್ ಮಾರುಕಟ್ಟೆಯ ವಾಣಿಜ್ಯಕ್ಕೂ - ಇರೋ ಅವಿನಾಭಾವ ಸಂಬಂಧ! ಈ ವಿಷಯಾನ್ನ ನಂಬೋದಕ್ಕೆ ಸ್ವಲ್ಪ ಕಷ್ಟವೇ ಆದರೂ ಪರಮ ಸತ್ಯ! ವಿಷಯ ಏನಪ್ಪಾಂದ್ರೆ, ಇಲ್ಲಿಯ ರೀಟೈಲ್ ಮಾರಾಟಗಳು ಇವರ ಆರ್ಥಿಕ ವರ್ಷದ ಮೊದಲಿನಿಂದ ನವೆಂಬರ್ ಕೊನೇ ವಾರದ ಥ್ಯಾಂಕ್ಸ್‌ಗಿವಿಂಗ್-ವರೆಗೂ, ಯಾವಾಗಲೂ ನಷ್ಟದಲ್ಲೇ ನಡೆಯೋದಂತೆ! ಹಾಗಾಗಿ ಅವುಗಳ ವಿವರವನ್ನೆಲ್ಲಾ ತಮ್ಮ ಅಕೌಂಟ್ ಕಡತಗಳಲ್ಲಿ ನಮೂದಿಸಲು ಬಳಸುವುದು ರೆಡ್ಡಿಂಕ್ ಅರ್ಥಾತ್ ಕೆಂಪು ಬಣ್ಣವೇ ಅಂತೆ! ಈ ಬ್ಲ್ಯಾಕ್ ಫ್ರೈಡೇ-ದಿನದಿಂದಲೇ ಇವರ ಅತಿ ದೊಡ್ಡ ಗಳಿಕೆಗೆ ಕಾರಣವಾಗೋ ಕ್ರಿಸ್ಮಸ್ ಷಾಪಿಂಗ್ ಪ್ರಾರಂಭವಾಗುವುದು ಕೂಡಾ ಹಾಗಾಗಿ ರೀಟೈಲ್ ಮಾರಾಟಗಾರರು ಅಂದು ಕೊಡುವ ಅತೀ ಹೆಚ್ಚಿನ ರಿಯಾಯಿತಿ ದರದ ಸೇಲಿನಿಂದಾಗಿ, ಅಲ್ಲಿಯವರೆಗಿನ ನಷ್ಟ ಕಳೆದು ಅವರ ವರ್ಷದ ಲಾಭವನ್ನು ಕೇವಲ ಬ್ಲ್ಯಾಕ್ ಫ್ರೈಡೇ ಒಂದೇ ದಿನದಲ್ಲಿ ಗಳಿಸಿಬಿಡ್ತಾರಂತೆ! ಆದ್ದರಿಂದ, ಅಂದಿನಿಂದಲೇ ಅವರ ಅಕೌಂಟ್ ಕಡತಗಳಲ್ಲಿ ಅಂದಿನವರೆಗೂ ಇದ್ದ ರಕ್ತವರ್ಣಕ್ಕೆ ಬದಲಾಗಿ ಕಪ್ಪು ಬಣ್ಣದ ಉಪಯೋಗ ಶುರುವಾಗುತ್ತಂತೆ! ಅದಕ್ಕೇ ಆ ಶುಕ್ರವಾರಕ್ಕೆ ಕಾಡಿಗೆಯ ರಂಗು!

ಈ ದೇಶದಲ್ಲಿ ಶುಕ್ರವಾರದಂಥಾ ಕಪ್ಪು ಮೆತ್ತಿಸಿಕೊಳ್ಳುವ ಯೋಗ, ಪಾಪ! ಆದರೇನಂತೆ? 'ಕಪ್ಪು ಶುಕ್ರವಾರ'ವೂ ತನ್ನ ಹುಟ್ಟುಗುಣವನ್ನು ಕಳೆದುಕೊಳ್ಳದೇ ರೀಟೈಲ್ ಮಾರಾಟಗಾರರಿಗೆ ಸಂಪತ್‌ಶುಕ್ರವಾರವೇ ಆಗಿ ಪರಿಣಮಿಸುತ್ತಲ್ಲ, ಅದಲ್ವೇ ಶುಕ್ರವಾರಗಳ ಲಕ್ಷಣ ಅಂದ್ರೆ!

ಈ ಅಧಿಕ ಪ್ರಸಂಗತೆಯ ವಿಶ್ಲೇಷಣೆ ಕೇಳಿ ನಮ್ಮ ಮಹಾಲಕ್ಷ್ಮೀ ನಸುನಗ್ತಾಳೆ ಅಂತನ್ಕೊಂಡಿದ್ದೀನಿ!...

ಆಕೆ : ಮದುವೆ ಎನ್ನುವುದು ಒಂದು ಬಗೆಯ ಸ್ನಾತಕೋತ್ತರ ಶಿಕ್ಷಣ ಎಂಬುದನ್ನು ಒಪ್ಪುತ್ತೀರಲ್ಲವೆ?

ಆತ : ಆದರೆ ಅದು ಗಂಡಸರಿಗಲ್ಲ.

ಆಕೆ : ಏಕೆ?

ಆತ : ಏಕೆಂದರೆ ಗಂಡಸು ಮದುವೆಯಾದ ಮೇಲೆ ಬ್ಯಾಚ್ಯುರಲ್ ಡಿಗ್ರಿ ಕಳಕೊಳ್ಳುತ್ತಾನೆ. ಮಾಸ್ಟರ್ಸ್ ಡಿಗ್ರಿ ಬರುವುದಿಲ್ಲ.

– ಜಯಣ್ಣ


GIRIJA
SILKS & SAREES
Exclusive
SILK
Sarees
Phone : 23340466
No. 8 & 9, Maruthi Complex, 8th Cross,
Malleshwaram, Bangalore - 560 003.

– ದಂನಆ

- ರೋಟಿ ಕಪಡ ಔರ್ *4HBK.*
- ಈಗ ಕೈಲಾಸಂ ಇದ್ದಿದ್ದರೆ ಮಕ್ಕಳ (ಮೊದಲ) ಶಾಲೆ ಮೊಬೈಲಲ್ವೇ ಎನ್ನುತ್ತಿದ್ದರೇನೋ.
- ಬದುಕು ಮರುಭೂಮಿಯಾದೀತೆ ಪೂರ
ಚಿಂತೆಯಿಲ್ಲ ಅಲ್ಲಿಯೇ ಬೆಳೆಯುವುದಲ್ಲವೆ ಖರ್ಜೂರ?
- ಪ್ರತಿಯೊಬ್ಬನೂ ಸುಳ್ಳು ಹೇಳುವ ಹೊತ್ತಿನಲ್ಲಿ ಅದನ್ನು ನಿಜವೆಂದು ಸಾಧಿಸಲು ಸಾಧ್ಯ ಎಂದು ಭಾವಿಸುತ್ತಾ ಇರುತ್ತಾನೆ.
- ಹೆಣ್ಮಕ್ಕಳು ಈಗ ಯಾವುದಕ್ಕೂ ಕಡಿಮೆ ಇಲ್ಲ. ಆದ್ರ ಆ ಅಹಂ ಅವರನ್ನು ಆವರಿಸಬಾರದು. ಗಂಡಸರು ಯಾವುದ್ರೊಳಗೂ ಹೆಚ್ಚಲ್ಲ. ಆ ಅಹಂಕಾರ ಅವರನ್ನು ಕಳೆದುಹೋಗಬೇಕು.
- ಸಮ್‌ಒನ್ ಕೆನಾಟ್ ಡು ಎವೆರಿಥಿಂಗ್ ಬಟ್ ಎವೆರಿಒನ್ ಕೆನ್ ಡು ಸಂಥಿಂಗ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಸಾಧಕರು ಯಶಸ್ಸಿನ ತಂತ್ರಗಳನ್ನು ಕಲಿಸಬಹುದು ಆದರೆ ಯಶಸ್ಸಿನ ಎಳೆಯನ್ನು ಹುಡುಕುವುದು ಹೇಗೆ ಎಂಬುದನ್ನು ಕಲಿಸಲಾರರು.
- ಜನ ನಿಮ್ಮನ್ನು ನಿಮ್ಮ ಕಾರ್ಯಗಳಿಂದ ಅಳೆಯುತ್ತಾರೆ ನಿಮ್ಮ ಉದ್ದೇಶಗಳಿಂದ ಅಲ್ಲ.
- ಕ್ರೈಮ್ಸ್ ಕೆನ್ ಬಿ ಸಾಲ್ವಡ್ ಬಟ್ ಲೈಫ್ಸ್ ಮಿಸ್ಟ್ರೀಸ್ ಗೊ ಆನ್ ಫಾರೆವರ್.
- ನೋಕಿಯ 3210ಕ್ಕೇ ನಾವು ತೃಪ್ತಿ ಪಟ್ಟಿದ್ದರೆ ಆಪಲ್ ಬರೀ ಒಂದು ಹಣ್ಣಾಗಿಯೇ ಉಳಿದುಹೋಗುತ್ತಿತ್ತು.
- ಅಡಿಗಡಿಗೆ ಶ್ಲೋಕಗಳನ್ನು, ದೊಡ್ಡವರ ಮಾತುಗಳನ್ನು ಪುಂಖಾನುಪುಂಖವಾಗಿ ಉದುರಿಸಿದರೆ ಅವನನ್ನು ಉತ್ತಮ ವ್ಯಕ್ತಿ ಎನ್ನುತ್ತೇವೆ. ಇದು ಅವನ ಸ್ಮರಣಶಕ್ತಿಯೇ ಹೊರತು ಅವನ ವ್ಯಕ್ತಿತ್ವದ ಶಕ್ತಿಯಲ್ಲ.
- ನೀವು ಎಷ್ಟು ಚಿಕ್ಕವರಂತೆ ಕಾಣುತ್ತೀರಿ ಎಂದು ಜನ ಹೇಳಿದಾಗಲೇ ನಿಮಗೆ ವಯಸ್ಸಾಗಿದೆ ಎಂದು ತಿಳಿಯುವುದು.
- ನಿಮ್ಮ ಮುಂದೆ ಚಾಡಿ ಹೇಳುವ ವ್ಯಕ್ತಿ ನಿಮ್ಮ ಬಗ್ಗೆಯೂ ಚಾಡಿ ಹೇಳುತ್ತಾನೆ ಇತರರಿಗೆ.
- ನೀವು ಹೇಳಬೇಕಾಗಿದ್ದ ಕೆಟ್ಟ ಶಬ್ಧಗಳನ್ನು ಹೇಳದೆ ನುಂಗುವುದರಿಂದ ನಿಮ್ಮ ಹೊಟ್ಟೆಯೇನೂ ಕೆಡುವುದಿಲ್ಲ.
- ಜ್ಞಾನದ ಸಮಸ್ಯೆ ಎಂದರೆ ಅದು ಅದನ್ನು ಹೇಗೆ ಬಳಸಬೇಕು ಎಂದು ಬೋಧಿಸುವುದಿಲ್ಲ.

# ಓಡು.... ಓಟ ಓಡು.....

**- ರೇಖಾ ಹೆಗಡೆ ಬಾಳೇಸರ**

ತೀರ ಚಿಕ್ಕವಳಿದ್ದಾಗಿನಿಂದ ನನ್ನ ಕಿವಿಯ ಮೇಲೆ ಆಗಾಗ ಬೀಳುತ್ತಿದ್ದ, ನನ್ನನ್ನು 3'ಖ'ಳನ್ನಾಗಿ ಮಾಡಿದ... ಎಲ್ಲಕ್ಕಿಂತ ಹೆಚ್ಚಾಗಿ 'ಇದರಲ್ಯಾವ ವಿಶೇಷ ಇದೆ ಎಂದು ದೊಡ್ಡವರೆಲ್ಲ ಈ ಬಗ್ಗೆ ಮಾತಾಡ್ತಾರೆ' ಎಂಬ ಅತೀವ ಕುತೂಹಲ ಹುಟ್ಟಿಸಿದ್ದ ಎರಡು ಶಬ್ದಗಳೆಂದರೆ 'ಓಡಿ ಹೋಗುವುದು' ಹಾಗೂ 'ಅಕ್ಕಿಸುವುದು.'

ಮೊದಲನೆಯ ಶಬ್ದ ಹೆಚ್ಚು ಕಮ್ಮಿ ಎಲ್ಲರಿಗೂ ಗೊತ್ತಿರುವುದು... ಅದರ ವಿವರಕ್ಕೆ ಬರುವ ಮುನ್ನ ಎರಡನೆಯ ಶಬ್ದದ ಬಗ್ಗೆ ಕೊಂಚ ಹೇಳುತ್ತೇನೆ. ನಮ್ಮ (ಹವ್ಯಕ) ಭಾಷೆಯ ಸಾಮಾನ್ಯ ಬಳಕೆಯಲ್ಲಿ 'ಅಕ್ಕಿಸುವುದು' ಎಂದರೆ ಅಮುಕುವುದು, ಒತ್ತುವುದು. ನನಗೆ ತಿಳಿದಿದ್ದ ಅರ್ಥವೂ ಅದೇ! ದೊಡ್ಡವರ ಗುಸು ಗುಸು ಮಧ್ಯೆ 'ಬಂಗಾರ ಅಕ್ಕಿಸಿಗಿದ್ವಡ' (ಅಕ್ಕಿಸಿದ್ದಾರಂತೆ) ಎಂಬ ಮಾತು ಬರುತ್ತಿದ್ದಂತೆ ನನಗೆ ವಿಪರೀತ ಗೊಂದಲವಾಗುತ್ತಿತ್ತು. ಮೊದಲ ಸಮಸ್ಯೆಯೆಂದರೆ 'ಬಂಗಾರ ಲೋಹವಲ್ಲದೇ, ಗಟ್ಟಿಯಾದ ಅದನ್ನು ಅಕ್ಕಿಸುವುದು ಹೇಗೆ' ಎಂಬುದು. ಒಂದೊಮ್ಮೆ ಯಾರಾದರೂ ಬಲಶಾಲಿಗಳು ಅದನ್ನು ಅಕ್ಕಿಸಿದರೂ ಅದರಲ್ಲೇನು ತಪ್ಪು, ಎದುರು ಬದಿಯಿಂದ ವಾಪಸ್ ಅಕ್ಕಿಸಿ ಸರಿಪಡಿಸಿದರಾಯ್ತು. ಅದಕ್ಯಾಕೆ ಇವರೆಲ್ಲ 'ಏನೋ ಮೋಸ ನಡೆದಿದೆ' ಎಂಬಂತೆ ಮಾತನಾಡುತ್ತಿದ್ದಾರೆ ಎಂಬುದು.

> **ಓಡಿ ಹೋಗುವ ಬಹುತೇಕರ ಗುರಿ ಪ್ರೇಮ ಸಾಕಾರ, ಇನ್ನುಳಿದ ಕೆಲವರದ್ದು ಜಗದ ತಿರಸ್ಕಾರ.**

ವರುಷಗಳು ಕಳೆದ ಮೇಲೆ ಗೊತ್ತಾಯಿತು - ಬಂಗಾರ ಅಕ್ಕಿಸುವುದು ಎಂದರೆ ಒಳಗೆ ಹಾಕುವುದು, ಅದರ ನಿಜವಾದ ಒಡೆಯರಿಗೆ ಮೋಸ ಮಾಡುವುದು ಎಂದು. ಈಗಲೂ ಆ ಶಬ್ದ ಕೇಳಿದಾಗೆಲ್ಲ ನನ್ನ ಬಡ್ಡು ತಲೆಯನ್ನು ನೆನೆದು ನಗು ಬರುತ್ತದೆ. ಇನ್ನು ಓಡಿ ಹೋಗುವುದು... ಇದನ್ನೂ ಇಷ್ಟೇ ಶಬ್ದಶಃ ಅರ್ಥ ಮಾಡಿಕೊಂಡಿದ್ದೆ ನಾನು. ಯಾರೋ ಓಡಿ ಹೋಗಿದ್ದಾರೆ ಎಂಬ ಸುದ್ದಿ ಕೇಳುತ್ತಿದ್ದಂತೆ ಎಲ್ಲದಕ್ಕಿಂತ ಮೊದಲು ಯೋಚಿಸುತ್ತಿದ್ದುದು 'ಯಾಕೆ, ಇವರು ಬಸ್ಸಿಗೆ ಹೋಗಬಹುದಿತ್ತಲ್ಲ' ಎಂದು.

ನನ್ನ ಅರಿವಿಗೆ ಬಂದ ಮೊದಲ ಓಡಿ ಹೋದ ಪ್ರಕರಣ ನಮ್ಮೂರ ಸತ್ಯುವಿನದು. ಸುಮಾರು ಇಪ್ಪತ್ತೈದು ಮೂವತ್ತು ವರ್ಷದ ಹಿಂದಿನ ಸಂಗತಿ ಇದು. ಒಡೆಯರ ಹುಡುಗ ಸತ್ಯು, ಕೆಲಸದ ಹುಡುಗಿ ತುಂಗೆಯ ಪ್ರೇಮ ಪ್ರಕರಣ ಅವರು ಓಡಿ ಹೋದ ಮೇಲೆಯೇ ಬಯಲಾಗಿದ್ದು. ಜಾತಿ, ಅಂತಸ್ತು ಧಿಕ್ಕರಿಸಿದ ಈ ಪ್ರಕರಣ ನಮ್ಮೂರಲ್ಲಿ ಗಲಾಟೆಗಿಂತ ಗಾಳಿ

ಸುದ್ದಿಗೇ ಹೆಚ್ಚು ಗ್ರಾಸ ಒದಗಿಸಿತು... ನಗೆಚಾಟಿಕೆಗೆ ನೀರೆರೆಯಿತು. ಊರ ಜನರೆಲ್ಲ 'ಅದು ಹೇಗೆ ಇವರಿಬ್ರೂ ತಮ್ಮ ಪ್ರೇಮವನ್ನು ಎಲ್ಲರಿಂದ ಮುಚ್ಚಿಟ್ಟಿದ್ರು!!, ತೋಟದಲ್ಲಿ ಭೇಟಿ ಆಗ್ತಿದ್ರೋ... ಬೆಟ್ಟದಲ್ಲಿ ಬೇಟ ನಡೆಸಿದ್ರೋ...' ಎಂದು ಚರ್ಚೆ ನಡೆಸುತ್ತಿದ್ದರೆ, ನಾನು ಯಥಾಪ್ರಕಾರ 'ಒಹೋ... ರಾತ್ರಿ ಹೊತ್ತು ಬಸ್ ಇಲ್ವಲ್ಲ, ಹಂಗಾಗಿ ಇವರು ಓಡಿ ಹೋಗಿರಬೇಕು. ಪಾಪ, ಬ್ಯಾಟ್ರಿ ಬೆಳಕಲ್ಲಿ ಓಡುವಾಗ ಎಷ್ಟು ಕಷ್ಟವಾಯ್ತೋ!!! ಎಂದು ತಲೆ ಕೆಡಿಸಿಕೊಂಡಿದ್ದೆ. ಅದನ್ನು ಮನೆಯಲ್ಲಿ ದೊಡ್ಡವರ ಎದುರು ಹೇಳಿದ್ದಕ್ಕೆ, ''ಭೋಟುದ್ದದ ಕೂಸೇ, ನಿಂಗೆಂಥಕ್ಕೆ ಅಧಿಕ ಪ್ರಸಂಗ?!'' ಎಂದು ಉಗಿಸಿಯೂಕೊಂಡಿದ್ದೆ. ಪ್ರೇಮದ ಬಗ್ಗೆ ಮಾತಾಡುವುದೂ ಮರ್ಯಾದೆಗೇಡು ಅನ್ನುವಂತಿದ್ದ ಕಾಲ ಅದು, ನಾ ಬೇರೆ ಒಂದನೆತ್ತಿ ಹುಡುಗಿ!

**ಡಬಲ್ ಉತ್ತರ**

೩ನ್ನು ವಿಭಜಿಸಿದಾಗ
ಎಷ್ಟು ಬರುತ್ತದೆ?
ಉದ್ದುದ್ದಾಗೊ ಅಥವಾ
ಅಡ್ಡಡ್ಡವಾಗಿಯೊ?
ಏನು ಹಾಗೆಂದರೆ?
ಅಡ್ಡಡ್ಡ ಆದರೆ ೦
ಉದ್ದುದ್ದ ಆದರೆ ೩

ನಮ್ಮ ತಂದೆ ಜಮೀನು ಮಾಡಿದ್ದ ಬಯಲು ಸೀಮೆಯ ಹನುಮಾಪುರ ಊರಿನಲ್ಲಿ ನೂರಾರು ಜನ, ಐದಾರು ಕೇರಿಗಳು, ಅಲ್ಲೇ ಮ್ಯಾಗೇರಿಯ ಹುಡುಗನ ಜೊತೆ ಕಲ್ಲೊಡ್ಡರ ಕೇರಿಯ ಹುಡುಗಿಗೂ, ಭಂಡಿ ಒಡ್ಡರ ಹುಡುಗಿಯ ಜೊತೆ ಲಿಂಗಾಯಿತರ ಹುಡುಗನಿಗೂ.... ಹೀಗೆ ಕಾಂಪ್ಲಿಕೇಟೆಡ್ ಪ್ರೇಮ ಪ್ರಸಂಗಗಳು. ಹುಡುಗಿ ದೊಡ್ಡಾಕಿಯಾದ ವರ್ಷೊಪ್ಪತ್ತಿನಲ್ಲಿ... ಹುಡುಗನ ಹರೆಯ ಚಿಗುರಿ ಹುರಿಗಟ್ಟುವಷ್ಟರಲ್ಲಿ... ಭತ್ತರ ಕಳೆ ಕೀಳುವಾಗ, ಹತ್ತಿ ಬಿಡಿಸುವಾಗ, ಕೆರೆಯಲ್ಲಿ ಬಟ್ಟೆ ಒಗೆಯುವಾಗ, ಎತ್ತಿಗೆ ನೀರು ಕುಡಿಸುವಾಗ... ಅನಾಯಾಸವಾಗಿ ಅಲ್ಲೊಂದು ಪ್ರೇಮಕಥೆ ಕುಡಿಯೊಡೆಯುತ್ತಿತ್ತು. ಪ್ರೀತಿ ಸುಮ ಅರಳುತ್ತಿದ್ದಂತೆ ಜಾತಿಯ ಮುಳ್ಳುಗಳು ಮುತ್ತಿಕೊಳ್ಳುತ್ತಿದ್ದವು. ಮುಳ್ಳುಗಳಿಂದ ಬಿಡಿಸಿಕೊಳ್ಳಲು ಅವರಿಗಿದ್ದ ಏಕೈಕ ಮತ್ತು ಸುಲಭದ ಮಾರ್ಗ ಓಡಿ ಹೋಗುವುದು. ಹೀಗೆ ಓಡಿ ಹೋದ ಮುಕ್ಕಾಲು ಪಾಲು ಜೋಡಿಗಳು ದಿನೊಪ್ಪತ್ತಿನೊಳಗೆ ಮನೆಯವರ ಕೈಲಿ ಸಿಕ್ಕಿ ಬೀಳುತ್ತಿದ್ದರು. ಅವರನ್ನು ವಾಪಸ್ ಊರಿಗೆ ಕರೆಸಿ, ಅವರಿಬ್ಬರ ಮನೆಯವರ ನಡುವೆ 'ಹಮಾರಿತುಮ್ಹಾರಿ' ಆಗಿ ಪಂಚಾತ್ಗಿ (ಪಂಚಾಯಿತಿ) ಮಾಡಿಸಿ... ಮತ್ತೆ ಎರಡೂ ಕಡೆಯವರು ಎದುರಾಬದರು ತೋಳೇರಿಸಿ ನಿಂತು ಅಪ್ಪನ, ಅವ್ವನ, ಮಗನ ಪ್ರಿಫಿಕ್ಸ್/ಸಫಿಕ್ಸ್ ಹೊತ್ತ ಬೈಗುಳಗಳನ್ನೆಲ್ಲ ದಂಡಿಯಾಗಿ ವಿನಿಮಯ ಮಾಡಿಕೊಂಡು... ಪಂಚರು ಮಧ್ಯ ಪ್ರವೇಶಿಸಿ ಸರ್ವೇಭ್ಯ ಮಂಗಳಾರತಿ ಮಾಡಿ... ಅಬ್ಬಬ್ಬಾ!!! ಅಂತೂ ಇಂತೂ ಪರಿಸ್ಥಿತಿ ಸುಧಾರಿಸುವವರೆಗೆ ಊರಷ್ಟೇ ಏಕೆ, ಅದರ ಸುತ್ತ ಬೀಸುವ ಗಾಳಿಯಲ್ಲೂ ಇದೇ ಸುದ್ದಿ.

ಊರ ಹೊರಗಿದ್ದ ನಮ್ಮನೆಗೆ ಬೆಳಿಗ್ಗೆ ಕೆಲಸಕ್ಕೆ ಬರುತ್ತಿದ್ದಂತೆ ಆಳು ಹೆಣ್ಣುಮಕ್ಕಳು ಸುದ್ದಿ ತರುತ್ತಿದ್ದರು... ''ಅಮ್ಮಾರೇ... ಹೀಂಗಿಂಗೆ... ಇಂಥವ್ರ ಮನಿ ಇಕಿ ಮತ್ತ ಅಂಥವ್ರ ಮನಿ

ಅಂವಾ ನಿನ್ನಿ ಚಂಜೀ ಮುಂದ ಓಡಿ ಹೋಗ್ಯಾರ್ರೀ. ಊರಾಗ ದೊಡ್ಡ ಪಂಚಾತ್ಗಿ ಆಗೇತಿ...'' ಎಂದು. ಅಮ್ಮ ''ಹುಡ್ರ ಮುಂದೆ ಹಿಂಗಿದ್ದೆಲ್ಲಾ ಕೊಳಕು ಸುದ್ದಿ ಹೇಳಬ್ಯಾಡಿ ನೀವು'' ಎಂದು ಅವರಿಗೆ ಗದರಿ... ನಾವು ಮಕ್ಕಳನ್ನು ದೂರ ಕಳಿಸಿ, ಹಿಂದಾಗಡೆ ಅವರನ್ನು ಕರೆದು ''ಯಾರು ಯಾರ ಸಂತಿಗೆ ಓಡಿ ಹೋದ್ರಂತೆ'' ಎಂದು ವಿಸ್ತೃತವಾಗಿ ವಿಚಾರಿಸಿಕೊಳ್ಳುತ್ತಿದ್ದಳು. ಆಮೇಲೆ ಸಂಜೆ ಅಪ್ಪನ ಎದುರು ''ಅವೂ, ಇವೂ ಸೇರಿ ಹೀಂಗೆ ಮಾಡಿದ್ವಡ...'' ಎಂದು ಯಥಾವತ್ ವರದಿ ಒಪ್ಪಿಸುತ್ತಿದ್ದಳು, ಮತ್ತೆ ಮುದ್ದಾಂ ನಮ್ಮನ್ನು ಆಚೆ ಕಳಿಸಿ.

ಲೋಕಲ್ ಪ್ರಸಂಗಗಳ ಸುದ್ದಿಯೇನೋ ನಮ್ಮ ಮುಂದೆ ಸೆನ್ಸಾರ್ ಮಾಡುತ್ತಿದ್ದ ಮನೆ ಮಂದಿ, ಅದೇ ಪ್ರಸಿದ್ಧ ಪಲಾಯನಗಳ ಕಥೆಯಾದರೆ ರಸವತ್ತಾಗಿ ನಮ್ಮೆದುರು ಬಣ್ಣಿಸುತ್ತಿದ್ದರು. ಹೇಳಿ ಕೇಳಿ ಓಡಿ ಹೋಗುವುದು ಪುರಾತನ ವಿದ್ಯಮಾನ, ಪುರಾಣ, ಇತಿಹಾಸ, ಕಥೆ ಕಾವ್ಯಗಳ ರಸಪಾಕಕ್ಕೆ ಘಮ್ಮೆಂಬ ಒಗ್ಗರಣೆ ಈ ಪ್ರಣಯ ಪಲಾಯನ ಪ್ರಸಂಗಗಳು! ಒಬ್ಬ ಶೂರ, ವೀರ ರಾಜಕುಮಾರ ಸುತ್ತಲ ಹತ್ತು ರಾಜ್ಯಗಳನ್ನೆಲ್ಲಾ ಗೆದ್ದು ದಿಗ್ವಿಜಯಿಯಾಗುವುದು ಒಂದು ತೂಕವಾದರೆ, ಪರಮ ವೈರಿಯೊಬ್ಬನ ಮಗಳನ್ನೋ, ತಂಗಿಯನ್ನೋ ಪ್ರೇಮಿಸಿ... ವೈರಿಯ ಮೂಗಿನಡಿ ಅವಳನ್ನು ಓಡಿಸಿಕೊಂಡು ಹೋಗಿ ಮದುವೆಯಾಗುವುದು ಇನ್ನೊಂದು ತೂಕ. ಕೃಷ್ಣನ ಎಂಟು ಅಧಿಕೃತ ಮದುವೆಗಳ ಪೈಕಿ ಎಲ್ಲರಿಗೂ ಗೊತ್ತಿರುವ ಕಥೆ 'ರುಕ್ಮಿಣಿ ಕಲ್ಯಾಣ'ದ್ದು. ವಿದರ್ಭದ ರಾಜಕುಮಾರಿ ರುಕ್ಮಿಣಿ ತನ್ನಣ್ಣ ರುಕ್ಮಿಣಿಯ, ಮದುವೆಯಾಗಬೇಕಿದ್ದ ಶಿಶುಪಾಲ ಹಾಗೂ ಆತನ ಅಭಯವಾಗಿದ್ದ ಸಾಮ್ರಾಟ ಜರಾಸಂಧನ ಕಣ್ಣೆದುರೇ ಮನದಿನಿಯ ಕೃಷ್ಣನೊಂದಿಗೆ ಓಡಿ ಹೋಗಿ ವಿವಾಹವಾದ ಕಥೆ ಸರ್ವಜನಪ್ರಿಯ. ಈ ಪ್ರಸಂಗದಲ್ಲಿನ ಕಿಕ್, ತಪ್ಪುಗಾಣಿಕೆಯ ತರಹ ಬಂದ ಸತ್ಯಭಾಮೆಯ ಕಲ್ಯಾಣದಲ್ಲೆಲ್ಲಿ ಬರಬೇಕು? ಇಂಥ ರೋಚಕತೆಯ ಅನುಭವಿಸಲರಿಯದ ಜನ ಇಂದಿಗೂ ಓಡಿ ಹೋಗುವ ಭಗನಿ, ಬಂಧುಗಳಿಗೆ ತೊಡರುಗಾಲು ಹಾಕುತ್ತಾರೆ ರುಕ್ಮಿ, ಜರಾಸಂಧರಾಗಿ... ಧರ್ಮ, ಜಾತಿ ಖಾಪ್ ಪಂಚಾಯಿತಿಗಳಾಗಿ. ಮಹಾಭಾರತದ ಸುಭದ್ರಾ ಪರಿಣಯವಂತೂ ಕ್ಲಾಸಿಕ್ ಪರಾರಿ ಪ್ರಸಂಗ! ವೇಷ ಮರೆಸಿಕೊಂಡು ಬಂದು ಮನೆಯಲ್ಲೇ ಉಳಿದು, ಸುಂದರಿ ಸುಭದ್ರೆಯ ಒಲಿಸಿಕೊಂಡು, ಬಲರಾಮನಂಥ ಬಲವಾನನಿಗೇ ಮಂಕುಬೂದಿ ಎರಚಿ ಅವನ ತಂಗಿಯನ್ನು ಓಡಿಸಿಕೊಂಡು ಹೋದವ ಮಾರು ಲೋಕದ ಗಂಡ ಅರ್ಜುನ. ಆಫ್ ಕೋರ್ಸ್, ಆತನಿಗೆ ಎಲೋಪ್ಮೆಂಟ್ ಎಕ್ಸ್‌ಪರ್ಟ್ ಕೃಷ್ಣನ ಅಭಯ, ಮಾರ್ಗದರ್ಶನ ಇತ್ತು, ಅದು ಬೇರೆ ವಿಷಯ! ಇನ್ನು ಪರಮ ವೈರಿ ಜಯಚಂದ್ರನ ಮಗಳು ಸಂಯುಕ್ತೆಯನ್ನು ರಾಜಪೂತ ರಾಜ ಪೃಥ್ವಿರಾಜ ಚೌಹಾನ ಸ್ವಯಂವರ ಸಭೆಯಿಂದ ಓಡಿಸಿಕೊಂಡು ಹೋಗಿರದಿದ್ದರೆ ಅವರಿಬ್ಬರ ಪ್ರೇಮಕಥೆ ಎಂದೋ ರಾಜಸ್ಥಾನದ ಉಸುಕು ಸೇರಿ ಮಸುಕಾಗಿರುತ್ತಿತ್ತು. ಒಥೆಲೋನನ್ನು ಮೆಚ್ಚಿದ ಡೆಸ್ಡಿಮೋನ ಆತನ ಜೊತೆ ಓಡಿ ಹೋಗಿದ್ದರಿಂದಲೇ ಮುಂದೆ ಆವರ ಪ್ರೇಮ ದುರಂತ ಕಂಡಾಗ, ಅದಕ್ಕೊಂದು ಕ್ಲಾಸಿಕ್ ರೂಪ ಬಂದದ್ದು. 'ಓಡ್ ಟು ದ ವೆಸ್ಟ್ ವಿಂಡ್ ಬರೆದ ಖ್ಯಾತ ಆಂಗ್ಲ ಕವಿ ಪಿ.ಬಿ. ಶೆಲ್ಲಿ ಸಹ ಓಡಿ ಹೋಗಿ ಮದುವೆಯಾದವನೇ, ಅದೂ ಎರಡೆರಡು ಬಾರಿ!!

ಓಡಿ ಹೋಗುವ ಬಹುತೇಕರ ಗುರಿ ಪ್ರೇಮ ಸಾಕಾರ, ಇನ್ನುಳಿದ ಕೆಲವರದ್ದು ಜಗದ ತಿರಸ್ಕಾರ. ಇಲ್ಲಿ 'ಜಗ' ಶುರುವಾಗುವುದು ಮನೆಯ ಜಗಲಿಯಿಂದ. ಪರೀಕ್ಷೆಯಲ್ಲಿ ಢುಮ್ಕಿ ಹೊಡೆದದ್ದು. ಊರೊಳಗಿನ ಉಸಾಪರಿ, ಉಪದ್ವ್ಯಾಪ, ಕೈಕೊಟ್ಟ ಕೆಲಸ, ವಿಫಲ ಪ್ರೇಮ ಪ್ರಸಂಗ... ಹೀಗೆ ಯಾವುದೋ ಒಂದು ಕಿಡಿ ಸಾಕು ಅಸಹನೆಯ ಉರಿ ಹೊತ್ತಿಸಲು, ಊರು ಬಿಡಲು ಮುದ್ದಿನಿಂದ ಬೆಳೆದ ಮನೆಯ ಮಗನಿಗೆ ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕಿಂತ, ಅದನ್ನು ಖಂಡಿಸಿ ಅಪ್ಪ-ಅಮ್ಮ ಆಡಿದ ಒಂದು ಮಾತು ಸಾಕು ಟಿಕೆಟ್ ತೆಗೆಸಲು. ಎಲ್ಲೋ ಕಿತಾಪತಿ ಮಾಡಿಕೊಂಡು ಬಂದವನಿಗೆ ಮನೆಯಲ್ಲಿ ಬುದ್ಧಿ ಹೇಳಿದರೂ ಟಿಕೆಟ್ ತೆಗೆಸಿದ್ದೇ. 'ಓದು ಸಾಕು' ಎಂದು ಹೇಳಿಸಿಕೊಂಡವರಿದ್ದು, 'ಸರಿಯಾಗಿ ಓದು' ಎಂದು ತಾಕೀತಾದವರಿದ್ದು... ಎಲ್ಲರಿದ್ದೂ ಗೊತ್ತಿಲ್ಲ ದೂರಿಗೆ ಒಂದೊಂದು ಟಿಕೆಟ್!! ಒಟ್ಟಿನಲ್ಲಿ ಪಲಾಯನವಾದಿ ಗಳಿಗೊಂದು ಪಿಳ್ಳೆ ನೆವ! ಇಷ್ಟೆಲ್ಲಾ ಮಾಡಿ ಮನೆಯಲ್ಲಿ, ಊರಲ್ಲಿ ಅವಮಾನ ಆಯ್ತೆಂದು ಉಟ್ಟ ಬಟ್ಟೆಯಲ್ಲೋ, ಅಮ್ಮನ ಒಂದೆರಡು ಆಭರಣ ಕದ್ದೋ ಕತ್ತಲಲ್ಲಿ ಬಸ್ ಹತ್ತಿ ಹೊಂಟವರೆಲ್ಲರಿದ್ದೂ ಹೆಚ್ಚು ಕಮ್ಮಿ ಒಂದೇ ಗತಿ. ಮೊದಮೊದಲು ನಮ್ಮ ಕಡೆಯಿಂದ ಓಡಿಹೋಗುತ್ತಿದ್ದ ಉತ್ತರ ಕುಮಾರರೆಲ್ಲರ ಪಯಣ ಉತ್ತರದ ಕಡೆ, ಅಂದರೆ ಉತ್ತರದ, ಹತ್ತಿರದ ದೊಡ್ಡ ಊರು ಹುಬ್ಬಳ್ಳಿ. ಆಮೇಲಾ ಮೇಲೆ ಸ್ವಲ್ಪ ಅಪ್‌ಗ್ರೇಡ್ ಆದ ಜನ ಮತ್ತೊಂಚೂರು ಜಾಸ್ತಿಯೇ ದುಡ್ಡು ಕದ್ದುಕೊಂಡು ಓಡಿ ಬೆಂಗಳೂರಿಗೆ ಹೋಗತೊಡಗಿದರು. ಹುಬ್ಬಳ್ಳಿಯೋ, ಬೆಂಗಳೂರೋ... ಎಲ್ಲೇ ಹೋಗಲಿ, ಒಂದ್ನಾಲ್ಕು ದಿನ ಅಲ್ಲಿ, ಇಲ್ಲಿ ಅಡ್ನಾಡಿ ತಿರುಗಿದ ನಂತರ ಸೇರುತ್ತಿದ್ದುದು ಒಂದೇ ಜಾಗ - ಯಾವುದೋ ಹೋಟೇಲಿನ ಅಡುಗೆ ಮನೆ. ಅಲ್ಲಿ ಒಂದಾರು ತಿಂಗಳು ಬೆವರು ಸುರಿಸಿಕೊಂಡು ತಟ್ಟೆ ಲೋಟ ತೊಳೆದ ಮೇಲೆ, ಕಟ್ಟಿದ ಕೊಬ್ಬೆಲ್ಲ ಕರಗಿದ ಮೇಲೆ... ಅಲ್ಲಿಂದ ಓಡಿಬರುತ್ತಿದ್ದರು, ಈ ಬಾರಿಯದು ರಿವರ್ಸ್ ಓಟ. ಒಂದಿನ ಮೂರು ಸಂಜೆ ಹೊತ್ತಿನಲ್ಲಿ ಮುಖ ತಗ್ಗಿಸಿಕೊಂಡು ಮನೆಯ ಮುಂಬಾಗಿಲು ಹೊಕ್ಕರೆಂದರೆ, ಮತ್ತೊಂದು ವಾರಕ್ಕೆ ಚಿಗುರಿಕೊಂಡು ಏನೇನೂ ಆಗಿಲ್ಲದಂತೆ ಊರಲ್ಲಿ ಓಡಾಡಲು ರೆಡಿ. 'ಕಳೆದೇ ಹೋದ' ಎಂದು ಕಂಗಾಲಾಗಿದ್ದ ಮನೆ ಜನರೂ, 'ಬಂದಷ್ಟೇ ಬಂತು, ಬರಡೆಮ್ಮೆ ಹಾಲು' ಎಂಬಂತೆ ಬಾಯಿ ಮುಚ್ಚಿಕೊಂಡು ಇವರನ್ನು ಸ್ವೀಕರಿಸುತ್ತಿದ್ದರು. ಅಷ್ಟಾದರೂ ಇವರು ಅದೃಷ್ಟವಂತರು, ಮನೆಯ ಬಾಗಿಲು ಇವರಿಗೆ ತೆರೆದುಕೊಳ್ಳುತ್ತದೆ. ಅದಿಲ್ಲದವರು ಅಪರಾಧ ಜಗತ್ತಿನಲ್ಲಿ, ದಾಸ್ಯದಲ್ಲಿ, ಕತ್ತಲ ಕೂಪದಲ್ಲಿ, ಅಲ್ಲಿ ಇಲ್ಲಿ ಕಳೆದೇ ಹೋಗುತ್ತಾರೆ. ಸಿನೆಮಾ ಸ್ಟಾರ್ ಆಗಲು ಬಂದವರು ಸಿನೆಮಾ ಗೃಹದ ದ್ವಾರಪಾಲಕರಾಗುತ್ತಾರೆ, ಮನೆಯಲ್ಲಿ ''ಕೂತಲ್ಲಿ ಮಣೆ, ನಿಂತಲ್ಲಿ ನೀರು' ಎಂದು ಅಮ್ಮನ ಬಳಿ ಡಿಮ್ಯಾಂಡ್ ಮಾಡುತ್ತಿದ್ದವರು ಇನ್ಯಾರೋ ಅಪರಿಚಿತರಿಗೆ ಕುರ್ಚಿ ನೀಡುವ, ನೀರು ತಂದು ಕೊಡುವ ಮಾಣಿಗಳಾಗುತ್ತಾರೆ. ಇನ್ನೊಂದಿಷ್ಟು ಜನ ಇರುತ್ತಾರೆ, ಮನೆಯಲ್ಲಿ, ಊರಲ್ಲಿ ಯಾರಿಗೋ ಹೊಡೆದು, ಇಸ್ಪೀಟಾಡಿ ಸಿಕ್ಕಾಪಟ್ಟೆ ಸಾಲ ಮಾಡಿಕೊಂಡು ಅಥವಾ ಇನ್ಯಾವುದೋ ಘೋರ ಅಪರಾಧ ಮಾಡಿ... ತಲೆ ಮರೆಸಿಕೊಳ್ಳುವ ಏಕೈಕ ಉದ್ದೇಶದಿಂದ ಓಡಿ ಹೋಗುವವರು. ಇಂಥವರ ಪರಾರಿ ಪ್ರಸಂಗಗಳ ನೆನಪು ಒಣಗಿದ ಗಾಯವನ್ನು

ಕೆರೆದಂತಾಗುವುದರಿಂದ ಇಲ್ಲಿ ಅವುಗಳ ಉಲ್ಲೇಖ ಬೇಡ ಬಿಡಿ. ಹಾಗಂತ ಓಡಿ ಹೋಗುವವರೆಲ್ಲ ಆತುರಗಾರರು ಎಂದೇನಲ್ಲ. ಜಿದ್ದಿಗೆ ಬಿದ್ದು ಮನೆಯಿಂದ ಓಡಿ ಹೋಗಿ ಜೀವನದಲ್ಲೊಂದು ಉತ್ತಮ ಸಾಧನೆ ಮಾಡಿದವರೂ ಸಾಕಷ್ಟು ಜನ ಇದ್ದಾರೆ. ಮನೆಯೊಳಗೆ ಉಸಿರುಗಟ್ಟಿಸುವಂತಿದ್ದರೆ ಹೊರಗೆ ಹೋಗಿ ತಾನೇ ಗಾಳಿ ಸೇವಿಸಬೇಕು! ಬಂಧಮುಕ್ತ, ಸ್ವತಂತ್ರ ವಾತಾವರಣ ಅನೇಕರಿಗೆ ಆಮ್ಲಜನಕ ಒದಗಿಸಿದೆ. ಹಿಂದುಸ್ತಾನಿ ಸಂಗೀತಕಾರ ನೌಶಾದ್, ಯಶಸ್ವಿ ಉದ್ಯಮಿಯಾಗಿದ್ದ ಧೀರೂಭಾಯಿ ಅಂಬಾನಿ, ಲೇಖಕ ಎಸ್, ಎಲ್. ಭೈರಪ್ಪ, ಕನ್ನಡದ 'ಪ್ರಣಯ ರಾಜ' ಶ್ರೀನಾಥ್ ಎಲ್ಲ ಒಂದಿಲ್ಲೊಂದು ಕಾರಣಕ್ಕೆ ಮನೆಯಿಂದ ಓಡಿ ಹೋದವರೇ. ಆದರೆ ಸಾಧನೆಯ ಗೀಳು, ಸತತ ಪರಿಶ್ರಮದ ಬುದ್ಧಿ ಅವರಲ್ಲಿತ್ತು, ಅದೇ ಅವರ ಕೈ ಹಿಡಿದೆತ್ತಿತ್ತು. ಈಗೀಗ ಜಗತ್ತಿನ ಎಲ್ಲೆಡೆ ಓಟದ ಕುರಿತಾಗಿ ಜಾಗೃತಿ ಮಾಡುತ್ತಿದೆ. ನಾನೀಗ ವಾಸವಿರುವ ಸಿಂಗಪುರದಲ್ಲಂತೂ ಸಂಜೆ ಬೆಳಿಗ್ಗೆ ಎನ್ನದೇ, ಮಟ ಮಟ ಮಧ್ಯಾಹ್ನವೆನ್ನದೇ ಮಕ್ಕಳಿಂದ ಮುದುಕರವರೆಗೂ ಎಲ್ಲ ಓಡುತ್ತಿರುತ್ತಾರೆ. ಮಕ್ಕಳು ಆಡುತ್ತಾ ಓಡಿದರೆ, ಮುದುಕ/ಕಿಯರು ಕಾಲೆಳೆಯುತ್ತಲಾದರೂ ಓಡುತ್ತಾರೆ. 'ಉಫ್' ಎಂದರೆ ಹಾರಿ ಹೋಗುವಂತಿರುವವರು ತೇಲುತ್ತಾ ಓಡಿದರೆ, ಉರುಟು ಜನ ಉರುಳುರುಳಿದಂತೆ ಓಡುತ್ತಾರೆ. ಹೆಚ್ಚುಕಮ್ಮಿ ಎರಡು ತಿಂಗಳಿಗೊಮ್ಮೆ ಅದೂ ಇದೂ ಮ್ಯಾರಥಾನ್, ಅರ್ಧ-ಮುಕ್ಕಾಲು ಮ್ಯಾರಥಾನ್ ಅಂತೆಲ್ಲ ನಡೆಯುತ್ತದೆ. ಇಷ್ಟೆಲ್ಲ ಓಡುವವರಿದ್ದರೂ ಓಡಿ ಹೋಗಿ ಸುದ್ದಿ ಮಾಡುವವರು ಕಮ್ಮಿಯೇ. ಏಕೆಂದರೆ 'ಪ್ರೇಮ ಓಕೆ, ಕ್ರೈಮ್ ಯಾಕೆ' ಅನ್ನೋದು ಇಲ್ಲಿನ ಜಾಯಮಾನ! ದೇವರು ಈ ಬುದ್ಧಿ ಎಲ್ಲರಿಗೂ ಕೊಡಲಿ.

ಒಟ್ಟಿನಲ್ಲಿ ಓಡಿ ಹೋಗುವವರ ಬುದ್ಧಿ ತಲೆಯಲ್ಲಿದ್ದರೆ ಸಾಧನೆ ಸಾಧ್ಯ. ಅದು ಬಿಟ್ಟು ಮೆದುಳನ್ನು ಹೃದಯಕ್ಕೋ, ಮೂಗಿನ ತುದಿಗೋ ಅಂಟಿಸಿಕೊಂಡು ಓಟ ಕಿತ್ತರೆ 'ಹೋದ ಪುಟ್ಟ, ಬಂದ ಪುಟ್ಟ.. ಇಲ್ಲ ಅಂದರೆ ಪರಪುಟ್ಟ' ಪ್ರಸಂಗ ಗ್ಯಾರಂಟಿ!

## ನಾವು ವ್ಯಾಯಾಮ ಮಾಡುತ್ತಿಲ್ಲವೆಂದವರು ಯಾರು?

- ನಾವು ನಿರ್ಧಾರಕ್ಕೆ ದಿಢೀರೆಂದು 'ನೆಗೆ'ಯುವುದಿಲ್ಲವೆ?
- ನಾವು ಸಮಸ್ಯೆಗಳಿಂದ ದೂರ 'ಓಡು'ವುದಿಲ್ಲವೆ?
- ನಾವು ಸತ್ಯವನ್ನು 'ತಿರುಚು'ವುದಿಲ್ಲವೆ?
- ನಾವು ಅಸತ್ಯವನ್ನು 'ಎಳೆ'ಯುವುದಿಲ್ಲವೆ?
- ನಾವು ಕಾನೂನನ್ನು 'ಬಗ್ಗಿ'ಸುವುದಿಲ್ಲವೆ?

**ಆದುದರಿಂದಲೇ ನಾವು ಫಿಟ್ ಆಗಿರುವುದು...**

# ಶೋಕಿಲಾಲ ರಾಜು

- ಆರತಿ ಘಟಿಕಾರ

''**ಗು**ಡ್ ಮಾರ್ನಿಂಗ್ ಮೇಡಂ'' ಅನ್ನುತ್ತಾ ಹಲ್ಕಿರಿದು ಸರಸರ ಅಡುಗೆ ಮನೆಗೆ ಎಂಟ್ರಿ ಕೊಟ್ಟು ಪಾತ್ರೆ ತಿಕ್ಕಲು ಶುರುವಿಟ್ಟುಕೊಂಡವನು ನಮ್ಮ ಮನೆಯ ಕೆಲಸದವ ರಾಜು. ಅವನ ಮಾಮೂಲಿ ಟೈಮು ಹನ್ನೊಂದು ಗಂಟೆಗೆ ಬರದೆ. ಒಮ್ಮೊಮ್ಮೆ ಎರಡು ತಾಸು ಹೀಗೆ ತಡಮಾಡಿ ಮಧ್ಯಾನ್ಹದ ಒಂದು ಗಂಟೆಗೆ ಬಂದರೂ ಅವನ ಈ ಶುಭೋದಯ ಮಾತ್ರಾ ತಪ್ಪುವುದಿಲ್ಲ! ಆದರೂ ರಾಜು ಮುಂಜಾವಿನಂತೆಯೇ ಫ್ರೆಶ್ ಮುಖದಲ್ಲಿ ಲವಲವಿಕೆಯೇ ಲುಕ್ಕು! ಸುಮಾರು 25-26ರಿನ ಸಣ್ಣ ವಯಸ್ಸು. ಎಣ್ಣೆಗೆಂಪು ಮುಖ, ನೀಟಾಗಿ ಇಸ್ತ್ರಿ ಮಾಡಿದ ಬಟ್ಟೆ ತೊಟ್ಟು, ಮುಖಕ್ಕೆ ಒಂದು ರೌಂಡ್ ಹೆಚ್ಚು ಎನ್ನಿಸುವಷ್ಟು ಪೌಡರ್ ಬಳಿದು ಯಾವುದೋ ನವಿರಾದ ಸೆಂಟು ಪೂಸಿಕೊಂಡು ಬರುವ ಶೋಕಿಲಾಲ!

**ಮನೆ ಕೆಲಸದ ಹುಡುಗರು ಹೀಗೂ ಇರಲು ಸಾಧ್ಯ!**

ಅವನಿಗಾಗಿ ದಾರಿ ಕಾಯ್ದು ತಲೆ ಕೆಟ್ಟ ನಾನು ''ಯಾಕೋ ರಾಜು ಇಷ್ಟು ಲೇಟು, ನೋಡು ಆಗ್ಲೇ ಟೈಮು ಎಷ್ಟಾಗಿದೆ? ಪಾತ್ರೆ, ಕಸ ಇಟ್ಕೊಂಡು ಎಷ್ಟೊತ್ತು ಕಾಯಬೇಕು ನಾನು!'' ಸಿಟ್ಟಿನಿಂದ ಅವಾಜ್ ಹಾಕಿದೆ.

''ಅಯ್ಯೋ ಮೇಡಂ ನೋಡಿ ನಾನಾದರೂ ಒಂದೆರಡು ಗಂಟೆ ಹೀಗೆ ತಡ ಮಾಡಾದ್ರು ಕೆಲಸಕ್ಕೆ ಹಾಜರಾಗ್ತೀನಿ, ಆದರೆ ಹಾಳಾದ ನಮ್ಮ ಕೆಲಸದವನು, ಇವತ್ತೂ ಚಕ್ಕರ್! ಹೊರಗಡೆ ಡ್ಯುಟಿಗೆ ಹೋಗೋ ನಮಗೆ ಹೀಗೆ ಆಗಾಗ ಕೆಲ್ಸಕ್ಕೆ ಚಕ್ಕರ್ ಹಾಕಿ ಸತಾಯಸ್ತಾನೆ! ಅಯ್ಯೋ ನೀವು ಮನೇಲಿ ಇರೋರು ನಿಮಗೇನ್ ಗೊತ್ತು ನಮ್ಮ ಕಷ್ಟ ಬಿಡಿ! ಅದಕ್ಕೆ ಮೇಡಂ ನಮ್ಮ ಮನೆದೂ ಕಸ ಗುಡಿಸಿ, ಮಾಪ್ ಮಾಡಿ ಬರೋ ತನಕ ಇಷ್ಟು ಲೇಟ್ ಆಯಿತು.'' ಎಂದು ತನ್ನ ಕತ್ತೆ ಚಾಕಿರಿ ವೃತ್ತಾಂತವನ್ನು ಮನ ಕರಗುವಂತೆ ತೋಡಿಕೊಂಡ.

ಮನ ಕರಗುವುದಿರಲಿ, ಆಶ್ಚರ್ಯ ನಗು ಒಟ್ಟಿಗೆ ನನ್ನ ಮುಖದಲ್ಲಿ ಜಮಾಯಿಸಿತು! ಅಲ್ವೋ ರಾಜು! ನೀನು ನಿನ್ನ ರೂಂ ಪಾರ್ಟ್ನರ್ಸ್ ಎಲ್ಲರೂ ಇದೆ ಮನೆ ಕೆಲಸದ ಚಾಕರಿಯಲ್ಲಿ ತೊಡಗಿರೋರು. ನಿಮ್ಮನೆ ಕೆಲಸ ಮಾಡೋಕೆ ನಿಮಗ್ಯಾಕೆ ಇನ್ನೊಂದು ಆಳು ಬೇಕು? ನಾಲ್ಕು ಜನ ಇದ್ದೀರಾ ಎಲ್ಲರೂ ಒಂದೊಂದು ಕೆಲಸ ಮಾಡ್ಬಾರ್ದಾ? ನಗುತ್ತಲೇ ಕೇಳಿದೆ.

ಅವನು ತಡಮಾಡದೆ, ತಡವರಿಸದೆ ಥಟ್ ಎಂದು ಉತ್ತರಿಸಿದ ''ಹಾಗಲ್ಲ ಮೇಡಂ ಬೇರೆಯವರ ಮನೆಯಲ್ಲಿ ಡಸ್ಟಿಂಗ್ ವ್ಯಾಕ್ಯೂಮ್, ಮಾಪ್ಪಿಂಗ್ ಎಲ್ಲಾ ಮಾಡಿದ್ರೆ ಸಂಬಳ ಸಿಗತ್ತೆ! ಆದರೆ ನಮ್ಮ ಮನೆಯಲ್ಲಿ ನಾವು ಮಾಡ್ಕೊಂಡ್ರೆ ಯಾರು ನಮಗೆ ದುಡ್ಡು ಕೊಡ್ತಾರೆ?


ಎಂದು ಎಂದು ತನ್ನ ಇಂಗ್ಲಿಷ್ ಪದಗಳ ಹುಚ್ಚು ವ್ಯಾಮೋಹಕ್ಕೆ ಜೋತಾಡಿಕೊಂಡು ಬಹಳ ಲಾಜಿಕಲ್ ಆಗಿ ಸವಾಲ್ ಹಾಕಿದ! ಈ ಪ್ರಶ್ನೆಗೆ ಉತ್ತರಿಸಲಾಗದೆ ನಾನು ನಿಜಕ್ಕೂ ಮೂಕಳಾದೆ! ಅದನ್ನು ಕಂಡು ಕಂಡು ಹುರುಪಿನಿಂದ ಮುಂದುವರೆಸಿದ ''ಅಷ್ಟಕ್ಕೂ ನಮಗೆ ಇವೆಲ್ಲ ಮಾಡಕ್ಕೆ ಟೈಮೇ ಇಲ್ಲ ಮೇಡಂ. ನಾವು ಎಲ್ಲರೂ ಬೆಳಿಗ್ಗೆಯೇ ಒಬ್ಬೊಬ್ಬರೂ ಮನೆ ಕೆಲ್ಸಕ್ಕೆ ಹೊರಡಬೇಕು. ಅದಕ್ಕೆ ನಾವು ನಾಲ್ವರೂ ಸೇರಿ ಒಬ್ಬ ಬೆಂಗಾಲಿ ಹುಡಗನ್ನ ವಾರಕ್ಕೆ ಮೂರು ದಿನ ಮನೆ ಕೆಲ್ಸಕ್ಕೆ ಇಟ್ಕೊಂಡಿರೋದು.!'' ಎಂದು ತಮ್ಮ ನಿರ್ಣಯವನ್ನು ಸಮರ್ಥಿಸಿಕೊಂಡ. ಆಗ ನನಗಂತೂ ಅಯ್ಯೋ ರಾಮ! ಏನ್ ಕಾಲಾ ಬಂತಪ್ಪ ಅಂತ ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತಾಯಿತು!

ಈ ರಾಜು ಆಂಧ್ರದ (ತೆಲಂಗಾಣ) ಒಂದು ಸಣ್ಣ ಗ್ರಾಮದವನು. ಹತ್ತನೆ ತರಗತಿಯವರೆಗೂ ಶಿಕ್ಷಣ ಪೂರೈಸಿರುವುದಾಗಿ ಹೇಳಿದ್ದ. ಬಡತನ, ಅಪ್ಪನ ಅನಾರೋಗ್ಯದಿಂದಾಗಿ ಅವನ ಮುಂದಿನ ಓದಿಗೆ ಕತ್ರಿ ಬಿದ್ದು ಕಡ್ಡಾಯವಾಗಿ ದಿನಗೂಲಿಗೆ ಸೇರಿಕೊಂಡು ಮುಂದೆ ಸಾಲ ಸೋಲ ಮಾಡಿ ದೂರದ ಬೆಟ್ಟ ಅಲ್ಲ ದೂರದ ಮರುಭೂಮಿ ನುಣ್ಣಗೆ ಅಂತ ದುಬೈ ನಗರಿಗೆ ಬಂದು ಒಂದು ಕಟ್ಟಡ ನಿರ್ಮಾಣ ಕಂಪನಿಯಲ್ಲಿ ಹೆಲ್ಪರ್ ಆಗಿ ಸೇರಿಕೊಂಡವನು. ಏನೋ, ಇವನ ದುರಾದೃಷ್ಟಕ್ಕೆ ಅಲ್ಲಿ ಮೂರು ತಿಂಗಳಾದರೂ ಸಂಬಳ ಸರಿಯಾಗಿ ಸಿಗದಿದ್ದಾಗ ಆ ಕೆಲಸ ಬಿಟ್ಟು ತನ್ನ ಜೊತೆಯಲ್ಲಿದ್ದ ಕೆಲವು ಸ್ನೇಹಿತರು. ಮಾಡಿದ ಹಾಗೆ ತಾನೂ ಕೈಯಲ್ಲಿ ಕಸಬರಿಗೆ - ಮಾಪ್ ಹಿಡಿದು ಮನೆ ಕೆಲಸಕ್ಕೆ ಪಾದಾರ್ಪಣೆ ಮಾಡಿದ್ದ! ಈ ಕೆಲಸದಲ್ಲಿ ಒಳ್ಳೆಯ ಸಂಪಾದನೆ ಕೂಡ ಇತ್ತು. ಅವನ ಭಾಷೆ ತೆಲಗು, ನನ್ನದು ಕನ್ನಡ, ಹೀಗಾಗಿ ನಮ್ಮ ಸಂಭಾಷಣೆ ನಮ್ಮ ರಾಷ್ಟ್ರ ಭಾಷೆ ಭಾಷೆ ಹಿಂದಿಯಲ್ಲೆ ಸಾಗುತ್ತಿತ್ತು!. ಯಾವಾಗಲೂ ಏನಾದರೂ ತಮಾಷೆಯಾಗಿ ಮಾತಾಡಿಕೊಂಡಿರುತ್ತಿದ್ದ. ಕೆಲಸದಲ್ಲೂ ಅಚ್ಚುಕಟ್ಟು... ಒಟ್ಟಿನಲ್ಲಿ ಅವನ ಈ ಜೋಶ್ ಭರಿತ ವ್ಯಕ್ತಿತ್ವದಿಂದ ತನ್ನ ಕೆಲಸದ ಮನೆಗಳಲ್ಲಿ ಒಳ್ಳೆ ಹೆಸರು ಗಳಿಸಿದ್ದ.

ಸಣ್ಣ ವಯಸ್ಸಿನಲ್ಲೇ ಮದುವೆ ಮಾಡಿದ್ದರಿಂದ ಅವನಿಗಾಗಲೇ ಸಣ್ಣ ವಯಸ್ಸಿನ ಮಕ್ಕಳಿದ್ದರು. ತನ್ನ ಪರ್ಸಿನಲ್ಲಿದ್ದ ಅವರ ಫೋಟೋ ತೋರಿಸಿ ಅವರನ್ನು ಆಗಾಗ ನೆನಪಿಸಿಕೊಳ್ಳುತ್ತಿದ್ದ. ತನ್ನ ತಾಯಿಯ ಜವಾಬ್ದಾರಿಯಲ್ಲಿ ಅವರನ್ನಿರಿಸಿ ಇಲ್ಲಿ ಪ್ರಾಮಾಣಿಕವಾಗಿ ದುಡಿದು ಮನೆಗೆ ಇಂತಿಷ್ಟು ಹಣವನ್ನು ತಪ್ಪದೆ ಪ್ರತಿ ತಿಂಗಳೂ ಕಳಿಸುತ್ತಿದ್ದ. ಯಾವ ದುಶ್ಚಟಕ್ಕೂ ಇವನು ದಾಸನಾಗಿರದಿದ್ದರೂ ಅವನ ಹಣ ಪೋಲಾಗುತ್ತಿದ್ದದ್ದು ಅವನಿಗಿದ್ದ ಕೆಲವು

**ಗೋಯಿಂಗ್ ಆರ್ ಕಮಿಂಗ್?**

ಒಬ್ಬ ಮರೆಗುಳಿ ವಿದ್ಯಾರ್ಥಿ ರಸ್ತೆ ಮಧ್ಯದಲ್ಲಿ ತನ್ನ ಟಿಫಿನ್ ಬಾಕ್ಸ್ ತೆಗೆಯಲಾರಂಭಿಸಿದ. ಹೀಗೇಕೆ? ಎಂದು ಕೇಳಿದ್ದಕ್ಕೆ ಅವನು 'ನಾನು ಶಾಲೆಗೆ ಹೋಗುತ್ತಿದ್ದೇನೋ ಅಥವಾ ಅಲ್ಲಿಂದ ಬರುತ್ತಿದ್ದೇನೋ ಎಂಬುದನ್ನು ತಿಳಿಯಲು' ಎಂದು ಉತ್ತರಿಸಿದ.



ಆಧುನಿಕ ಶೋಕಿಗಳಿಗೆ...! ತಿಂಗಳಿಗೆರಡು ಬಾರಿ ತೆಲಗು, ಹಿಂದಿ ಯಾವುದೇ ಡಬ್ಬ ಸಿನಿಮಾಗಳಾಗಿದ್ರು ಸರಿ, ನೋಡಿಕೊಂಡು ಮನೆ ಕೆಲಸಕ್ಕೆ ರೀಚಾರ್ಜ್ ಆಗಿ ಬರುತ್ತಿದ್ದ! ಆದರ್ಶ ಗಂಡನಂತೆ ದಿನಕೊಮ್ಮೆ ಊರಿಗೆ ಫೋನಾಯಿಸಿ ಕೆಲವೊಮ್ಮೆ, ತನ್ನ ಹೆಂಡತಿ ಅಲ್ಲಿಂದಲೇ ವಟ ವಟ ಅನ್ನುವುದನ್ನು ಪಾಪ ಇವನ ಕರ್‍ನ್ಸಿ ಖಾಲಿ ಆಗುವವರೆಗೂ ಆಲಿಸುವ ಚಟ! ಕಷ್ಟ ಪಟ್ಟು ಮಗನನ್ನು ಆಂಗ್ಲಮಾಧ್ಯಮದ ಶಾಲೆಗೆ ಸೇರಿಸಿದ್ದ. ಅವನ ಇಂಗ್ಲಿಷ್ ವ್ಯಾಮೋಹ ಎಷ್ಟೆಂದರೆ ನನ್ನ ಮಗರಾಯನನ್ನು ಕಂಡೊಡನೆಯೇ ತನ್ನ ಹರಕು ಮುರುಕು ಇಂಗ್ಲಿಷ್‌ನಲ್ಲಿ ಅವನನ್ನು ಮಾತನಾಡಿಸುವ ಖಯಾಲಿಗೆ, ನಾವುಗಳು ನಕ್ಕು ನಕ್ಕು ಸುಸ್ತು! ಇನ್ನು ತನ್ನ ಮಕ್ಕಳ ಹುಟ್ಟು ಹಬ್ಬ, ಮದುವೆ ವಾರ್ಷಿಕೋತ್ಸವ ವ್ಯಾಲೆಂಟೈನ್ ದಿನ (ಈ ವಿಷಯದಲ್ಲಂತೂ ರಸಿಕರ ರಾಜನಾಗಿ ಮರೆದು)ಗಳಲ್ಲಿ ಮರೆಯದೆ ಸಂಭ್ರಮದಿಂದ ತನ್ನ ರೂಮಿನಲ್ಲಿ ಗೆಳೆಯರೊಂದಿಗೆ ಕೇಕ್ ಕತ್ತರಿಸಿ ಕೆಲಸದ ಮನೆಯವರಿಗೆಲ್ಲಾ ತಪ್ಪದೆ ಹಂಚಿದಾಗ ಅವನ ಈ ಹುರುಪಿಗೆ ನಾನು ಭೇಷ್ ಎನ್ನದೆ ವಿಧಿ ಇರಲಿಲ್ಲ! ಇಷ್ಟೇ ಅಲ್ಲದೆ ತಾನು ಕೆಲಸ ಮಾಡುವ ಮನೆಯ, ಪ್ರತಿಯೊಬ್ಬ ಸದಸ್ಯರ ಹುಟ್ಟು ಹಬ್ಬವನ್ನೂ ತಿಳಿದುಕೊಂಡು ಮರೆಯದೆ ಶುಭಾಶಯಗಳನ್ನು ತಿಳಿಸುತ್ತಿದ್ದ! ಅವನ ಇನ್ನಷ್ಟು ಹಣ ಖರ್ಚಾಗುತ್ತಿದದ್ದು ಸೆಂಟು, ಬಟ್ಟೆ ಹೀಗೆ ಅವನಿಗಿದ್ದ ಆಧುನಿಕ ಶೋಕಿಗಳಿಗೆ!

ಅಂದು ಕೆಲಸಕ್ಕೆ ಬಂದವನೇ ಪಾತ್ರೆ ತೊಳೆಯುವುದು ಬಿಟ್ಟು ಅವನು ಹೊಸದಾಗಿ ಕೊಂಡಿದ್ದ ಸ್ಮಾರ್ಟ್ ಮೊಬೈಲ್ ವೀಕ್ಷಣೆಗೆ ತೊಡಗಿದ. ಏನೋ ಪಟ ಪಟ ಟೈಪ್ ಮಾಡುವುದನ್ನು ಗಮನಿಸಿ. ನಾನು ''ಲೋ ರಾಜು ಬೇಗ ಪಾತ್ರೆ ತೊಳೆದು ಮುಗಿಸು. ಇನ್ನು ಮಿಕ್ಕ ಕೆಲಸ ರಾಶಿ ಇದೆ, ಆಮೇಲೆ ಏನ್ ಬೇಕಾದ್ರೂ ನೋಡ್ಕೋ'' ಎಂದವನ ಬೆನ್ನ ಹತ್ತಿದ್ದಾಗ ಅವನ ಮೊಬೈಲಿನ ಫೇಸ್‌ಬುಕ್‌ನಲ್ಲಿ ತನ್ನ ಮಕ್ಕಳ ಫೋಟೋ ತೋರಿಸಿ ''ನೋಡಿ ಮೇಡಂ ನನ್ನ ಮಕ್ಕಳು ಕೇಕ್ ಕಟ್ ಮಾಡ್ತಾ ಇರೋ ಫೋಟೋ ನಮ್ಮಣ್ಣ ಕಳಿಸಿದ್ದಾನೆ. ಅವನ ಜೊತೇನೆ ಚಾಟ್ ಮಾಡ್ತಾ ಇದ್ದೆ.'' ಎಂದು ಹಿಗ್ಗಿನಿಂದ ತೋರಿಸಿ, ಮೇಡಂ ನೀವೂ ಫೇಸ್‌ಬುಕ್‌ನಲ್ಲಿ ಇದ್ದೀರಾ? ಅನುಮಾನದಿಂದ ಕೇಳಿದಾಗ ನನಗೂ ರೇಗಿತ್ತು ''ಹೌದು ಕಣೋ ಇದ್ದೀನಿ! ನಾನು ಅಕೌಂಟ್ ಮಾಡಿ ಬಹಳ ವರ್ಷ ಆಯಿತು'' ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ಆಧುನಿಕ ತಂತ್ರಜ್ಞಾನದ ಬಳಕೆಯಲ್ಲಿ ನಾನು ಅವಿನಿಗಿಂತಲೂ ಮುಂದಿರುವುದನ್ನು ಅವನಿಗೆ ಮನದಟ್ಟು ಮಾಡಿದೆ! ಹಾಗಾದ್ರೆ ನಿಮಗೆ ಫ್ರೆಂಡ್ ರಿಕ್ವೆಸ್ಟ್ ಕಳಿಸಲಾ ಮೇಡಂ? ಎಂದು ತರ್ಲೆ ಪ್ರಶ್ನೆಯೊಂದನ್ನು ನನ್ನೆಡೆಗೆ ಎಸೆದಾಗ ನಾನು ಕೊಂಚ ಕಸಿವಿಸಿಗೊಂಡು ''ಏ ಹೋಗೋ ನಿನ್ನ ಮಾತ್ರ ನಾನು ಖಂಡಿತಾ ಆಡ್ ಮಾಡಿಕೊಳ್ಳಲ್ಲ'' (ಸದ್ಯ ಇವನು ನನ್ನ ವಾಲ್ ಮೇಲೂ ಮೇಡಂ ನಾನು ನಾಳೆ ಕೆಲ್ಸಕ್ಕೆ ಬರಲ್ಲಾ, ನನಗೆ ಮುಂದಿನ ತಿಂಗಳು ಸಂಬಳ ಜಾಸ್ತಿ ಮಾಡಿ ಎಂದೆಲ್ಲ ಬರೆದು ತಮಾಷೆ ಮಾಡಿದ್ರೆ ನನ್ನ ಫೇಸ್‌ಬುಕ್ ಸ್ನೇಹಿತರ ಮುಂದೆ ನನ್ನ ಪ್ರತಿಷ್ಠೆ ಏನಾಗಬೇಡ!''). ಹೇಗೆ ಅವನ ಮನವಿಯನ್ನು ನಿರ್ದಾಕ್ಷಿಣ್ಯವಾಗಿ ತಳ್ಳಿ ಹಾಕಿದ್ದು ಕಂಡು ''ಅಯ್ಯೋ ಹೋಗ್ಲಿ ಬಿಡಿ. ಸುಮ್ನೆ ನಿಮ್ಮ ಪ್ರೋಫೈಲು ಹೇಗಿದೆ ಅಂತ ನೋಡ್ತೀನಿ'' ಕೆಳಗೆ ಬಿದ್ದರೂ ಮೀಸೆ ಮಣ್ಣಾಗ್ಗದಂತೆ, ಅಲ್ಲ ಕೆಳಗೆ ಬಿದ್ದರೂ ಒಡೆಯದ ........ಪಾತ್ರೆಯಂತೆ. ಹಲ್ಕಿರಿಯುತ್ತಾ ಹಾಸ್ಯದ ಕಿಡಿ ಹಾರಿಸಿದ!

ಇಷ್ಟು ವರ್ಷಗಳಿಂದ ಫೇಸ್ಬುಕ್ ಬಳಸುತ್ತಿದ್ದ ನಾನು ಅವನಿಗೊಂದಿಷ್ಟು ಬಿಟ್ಟಿ ಉಪದೇಶ ...... ಖಾರದ ನುಡಿಗಳನ್ನು ಕೇಳಿಸಲು ಮುಂದಾದೆ ''ರಾಜು! ನಿನಗೆ ಅದೆಲ್ಲ ಸುಲಭವಾಗಿ ಸಿಗಲ್ಲ, ಅಷ್ಟಕ್ಕೂ ನನ್ನ ಪ್ರೊಫೈಲ್ ಕಟ್ಟಿಗೊಂಡು ನಿನಗೇನಾಗ್ಬೇಕಾಗಿದೆ? ಈ ಫೇಸ್ ಬುಕ್ನಿಂದ ಸುಮ್ನೆ ಸಮಯ ಹಾಳು. ನಿನಗೇನು ಮಾಡಕ್ಕೆ ಬೇರೆ ಕೆಲಸ ಇಲ್ವಾ? ಮೊದ್ಲು ಬೇಗ ಮನೆಕೆಲಸ ಮುಗ್ಸೋದು ನೋಡು.'' ನನ್ನ ಕಠಿಣ ಮುಖ ಭಾವವನ್ನು ಇನ್ನಷ್ಟು ವಕ್ರವಾಗಿಸಿ ರೇಗಿದಾಗ, ಮೇಡಂ ಇನ್ನು ಹೆಚ್ಚು ರಾಂಗ್ ಆಗುವ ಮುಂಚೆಯೇ ಎಚ್ಚೆತ್ತುಕೊಂಡು ''ಓಕೆ ಓಕೆ, ಆಯಿತು ಮೇಡಂ. ನಿಮ್ಮ ಪ್ರೋಫೈಲ್ ನೋಡಲ್ಲ ಬಿಡಿ, ಸುಮ್ನೆ ಕೇಳಿದೆ ಅಷ್ಟೇ'' ಎಂದು ನಕ್ಕು ''ಚಾಟಿಂಗು ಮನೆಗೊದ್ಮೇಲೆ ಮಾಡ್ತೀನಿ, ಹೆಂಗೂ ಇವತ್ತು ಎರಡು ಮನೆ ಕೆಲಸ ಇಲ್ಲ'' ಎನ್ನುತ್ತಾ ಲಗು ಬಗೆಯಿಂದ ಕೆಲಸಕ್ಕೆ ಕೈ ಹಚ್ಚಿದ.


''ನೋಡು ಮೊದಲೇ ನೀನಿವತ್ತು ಲೇಟು, ಅದರ ಮೇಲೆ ಇದೆಲ್ಲ ಕಾರು ಬಾರು ಬೇರೆ'' ಎಂದು ನನ್ನ ಕೊನೆಯ ಒಗ್ಗರಣೆ ಸಿಡಿಸಿ ಫೇಸ್ಬುಕ್‌ನಲ್ಲಿ ನನ್ನ ಸ್ಟೇಟಸ್ಸಿಗೆ ಬಂದ ಕಾಮೆಂಟುಗಳ ವೀಕ್ಷಣೆಗೆ ಸರ ಸರ ಹೊರ ನಡೆದೆ!

ಸ್ವಲ್ಪ ಸಮಯದ ನಂತರ ನನ್ನ ರೂಮಿನಿಂದಲೇ ಅವನ ಧ್ವನಿ ನನ್ನ ಕಿವಿಗೆ ಬಡಿಯಿತು ''ಮೇಡಂ ಇವತ್ತು ಭಗವಾನ್ ಕಾ ಕಚರಾ ನೂ ಕೊಟ್ಟು ಬಿಡಿ ನಾನು....... (ಸಮುದ್ರದ ದಂಡೆ) ಕಡೆಗೆ ಹೋಗ್ತಾ ಇದ್ದೀನಿ'' ಅಂದಾಗ ನಾನು ತಲೆ ಚಚ್ಚಿಕೊಳ್ಳುವುದೊಂದೆ ಬಾಕಿ ''ಅಯ್ಯೋ ರಾಜು! ಅದು ಭಗವಾನ್ ಕಾ ಕಚರಾ ಅಲ್ಲ ಮಾರಾಯ. (ಆಗಾಗ ಅವನಿಗೆ ಕಸದ ಡಬ್ಬಿಯ ಕಸ ಎತ್ತಿಕೊಳ್ಳುವಾಗ ಕಿಚನ್ ಕಾ ಕಚರಾ, ಬಾತ್‌ರೂಮ್ ಕಾ ಕಚರಾ ಅಂದು ರೂಢಿ ಆಗಿದ್ದರಿಂದ!) ಅದು ದೇವರ ಮೇಲಿನ ಬಾಡಿರುವ ಹೂವು ಅಷ್ಟೇ!... ಅದಕ್ಕೆ ನಾವು ನಿರ್ಮಾಲ್ಯ ಅಂತೀವಿ. ಅಲ್ಲ ಕಣೋ ನಮ್ಮೆಲ್ಲರ ಕ್ಲೇಶ ಕಲ್ಮಷಗಳನ್ನು ಕಳೆಯುವ ಆ ಭಗವಂತನಿಗೆ ಯಾವ ಕಚರಾ ಇರತ್ತೆ? ನಿಂದೊಳ್ಳೆ ಕಥೆ ಆಯಿತು.'' ಅವನು ಪಾಪ ನನ್ನ ಡೈಲಾಗು ಕೇಳಿಸ್ಕೊಂಡು ಎಷ್ಟು ನಗ್ತಾನೆ ಏನೋ ''ನನ್ನ ಜೋಕಿಗೆ, ರಾಜು ಹಲ್ಕಿರಿಯುತ್ತಾ'' ಸಾರಿ ಮೇಡಂ ''ಅನ್ನುತ್ತಾ, ಭಾಗವನ್ ಕಾ... ಅಲ್ಲ ನಿರ್ಮಾಲ್ಯ, ಹಾಕಿದ ಕವರನ್ನು ಹಿಡಿದು ''ಬೈ ಮೇಡಂ'' ಎಂದು ಹೊರ ನಡೆದ. ಹೀಗೆ ಅವನ ತರಲೆ ಮಾತುಗಳಿಗೆ ಆಗಾಗ ನನ್ನ ತಲೆ ಕೆಟ್ಟರೂ ಮುಗುಳ್ನಗೆ ತರಸುತ್ತಿದ್ದವು.

ಮಾರನೆಯ ದಿನ ನಮಗೆ ವಾರದ ರಜೆ. ಹಾಗಾಗಿ ನಾನು ಅಂದು ನನ್ನ ತಿಂಡಿ ಅಡುಗೆ ಎಲ್ಲದಕ್ಕೂ ರಜಾ ಘೋಷಿಸಿದ್ದೆ. ಮಕ್ಕಳೂ ಸ್ಕೂಲಿಗಾಗಿ ದಿನವೂ ಐದಕ್ಕೆ ಏಳುವ ಶಿಕ್ಷೆಗೆ ಅಂದು ಮಾತ್ರ ಹತ್ತು ಗಂಟೆಗೆ ಕಡಿಮೆ ಅಪ್ಪಿ ತಪ್ಪಿಯೂ ಏಳುತ್ತಿರಲಿಲ್ಲ. ಹಾಗಾಗಿ ನಮ್ಮ ದೇವರಿಗೂ ಅಂದು ನಾವೇ ತಡವಾಗಿ ಎಬ್ಬಿಸಿ ಪೂಜೆ ಮುಗಿಸಿ. ನಮ್ಮ ಹೊಟ್ಟೆ ಪೂಜೆ, ಶಾಪಿಂಗು, ಎಲ್ಲದರ ಕಾರ್ಯಕ್ರಮ ಹಾಕಿಕೊಂಡು ಹೊರ ನಡೆದೆವು. ಮಾರನೆಯ ದಿನ ಹೊಸ ವರ್ಷ, ಹಾಗಾಗಿ ನಮ್ಮ ರಜೆಯ ಮೂಡು ಮುಂದುವರೆದಿತ್ತು. ರಾಜು ಕೂಡಾ ಹೊಸ ವರ್ಷದ ಆಚರಣೆಗಾಗಿ ತನ್ನ ಗೆಳೆಯರೊಡನೆ ಬೀಚಿನಲ್ಲಿ ಕಳೆಯುವುದಾಗಿ ಹೇಳಿ ಮಾರನೆ ದಿನದ ಕೆಲ್ಸಕ್ಕೆ ರಜೆಯನ್ನು ತಾನೇ ಸ್ವಯಂ ಘೋಷಿಸಿಕೊಂಡಿದ್ದ! ನಮ್ಮ ಶಾಪಿಂಗ್‌ನಿಂದ ಮನೆಗೆ ಬಂದವಳೇ ನಾನು ನನ್ನ

....... ಸಂದೇಶಗಳನ್ನು ವೀಕ್ಷಿಸುತ್ತಿದ್ದಾಗ ''ಎರಡು ನವೀನ ಮಾದರಿ ನೆಲ ಒರೆಸುವ ಕೋಲುಗಳ ಫೋಟೋ ನನ್ನ ಸ್ಕ್ರೀನ್ ಮೇಲೆ ತೇಲಿ ಬಂದವು.'' ನಮ್ಮ ರಾಜುವಿನದೇ ಸಂದೇಶ! ನಾನು ತಂದ ನೆಲ ಒರೆಸೋ ಕೋಲುಗಳು ಸರಿಯಿಲ್ಲ ಎಂದು ಈ ಹಿಂದೆ ತಕರಾರು ತೆಗೆದಿದ್ದಾಗ, ನಿನಗೆ ಸರಿ ಹೊಂದುವ ಕೋಲು ನೀನೇ ತಂದು ಬಿಡು ಮಾರಾಯಾ ಎಂದಿದ್ದು ಆಗ ನೆನಪಾಯಿತು. ಹಾಗಾಗಿ ನನ್ನ ಕಣ್ಣಿಗೆ ಹಾಕಲು ಸೂಪರ್ ಮಾರುಕಟ್ಟೆಯಿಂದಲೇ ಅವುಗಳ ಫೋಟೋ ರವಾನಿಸಿ ಕೆಳಗೆ ''........'' ಎಂದು ಹೈಟೆಕ್ ಮಾದರಿಯಲ್ಲಿ ತನ್ನ ನಿರ್ಧಾರವನ್ನು ತಿಳಿಸಿದ್ದ! ''ಓಕೆ'' ಎಂದು ಮರು ಸಂದೇಶ ರವಾನಿಸಿದೆ. ಆಗ ಹಿಂದೊಮ್ಮೆ ಅವನು ತನ್ನ ಸ್ನೇಹಿತನನ್ನು ವಿಮಾನ ನಿಲ್ದಾಣಕ್ಕೆ ಬೀಳ್ಕೊಡುವ ಸಂದರ್ಭದಲ್ಲಿ ಅವನು ನನಗೆ ಕಳಸಿದ ಮೊಬೈಲ್ ಸಂದೇಶ ನೆನಪಾಯಿತು. ''.............'' ಹೀಗೆ ಕೆಲಸಕ್ಕೆ ಚಕ್ಕರ ಹಾಕುವುದಕ್ಕೆ ಮುನ್ನ ಮುನ್ನೆಚರಿಕೆಯ ಕ್ರಮಗಳನ್ನು ಕ್ರಮಬದ್ಧವಾಗಿ ತೆಗೆದುಕೊಳ್ಳುವುದು ಇವನು ಎಂದೂ ಮರೆಯುತ್ತಿರಲಿಲ್ಲ.

ಏನೇ ಅನ್ನಿ, ಅವನ ತಮಾಷೆ, ತರ್ಲೆ ಮಾತುಗಳು ಈಗ ನನಗೆ ಚೆನ್ನಾಗಿ ರೂಢಿ ಆಗಿದೆ. ಕೆಲವೊಮ್ಮೆ ಸಿಟ್ಟು ಬಂದು ಖಾರವಾಗಿ ರೇಗಿದರೂ ಅವನದನು ಸಕಾರಾತ್ಮವಾಗಿ ಸ್ವೀಕರಿಸಿ ನಗುತ್ತಲೇ ''ಮೇಡಂ ಯಾಕಿಷ್ಟು ರಾಂಗ್ ಆಗಿದ್ದೀರಾ? ನಿಮ್ಮ ಗ್ರೀನ್ ಟೀ ಮಾಡ್ಕೊಂಡು ಇನ್ನು ಕುಡಿದಿಲ್ಲ ಅನ್ಸತ್ತೆ, ಮೊದಲು ಕುಡೀರಿ'' ಎಂದು ನನ್ನ ಸಿಟ್ಟಿಳಿಸುವ ಕಲೆಯನ್ನು ಕರಗತ ಮಾಡಿಕೊಂಡಿರುವ ಇವನ ಕಾರ್ಯ ವೈಖರಿಗೆ ವೈ ವರಿ ಮಾಡಿ ಕೊಳ್ಳಬೇಕು ಎಂದು ನಕ್ಕು ಸುಮ್ಮನಾಗಿ ಬಿಡುತ್ತಾನೆ!



# ಹೊಟ್ಟೆಯೊಳಗಿನ ಗುಟ್ಟು

- ವಸುಮತಿ ಉಡುಪ

ಕನ್ನಡವೆನೆ ಕುಣಿದಾಡುವುದೆನ್ನೆದೆ
ಕನ್ನಡವೆನೆ ಕಿವಿ ನಿಮಿರುವುದು,
ಕಾಮನಬಿಲ್ಲನು ಕಾಣುವ ಕವಿವೊಲು
ತೆಕ್ಕನೆ ಮನ ಮೈ ಮರೆಯುವುದು.

ಎನ್ನುವ ಪದ್ಯ ಈ ತಲೆಮಾರಿನ ಆಂಗ್ಲಮಾಧ್ಯಮಗಳ ಕಂದಮ್ಮಗಳ ಕಿವಿದೆರೆಯನ್ನು ತಲುಪದಿದ್ದರೂ ಕನ್ನಡ ಮಾಧ್ಯಮದಲ್ಲಿ ಓದಿದ ಈಗಿನ ನಡುವಯಸ್ಕ ಪ್ರೌಢರಿಗೆ ಚಿರಪರಿಚಿತ. ಪಠ್ಯಪುಸ್ತಕದಲ್ಲಿದ್ದುದನ್ನು ಗಟ್ಟು ಹೊಡೆದಿದ್ದು ಈಗಲೂ ಅವರು ಮರೆತಿರಲಿಕ್ಕಿಲ್ಲ. ಆಗ ಕಲಿತ ಪದ್ಯಗಳೆಂದರೆ ಹೃದ್ಗತವಾಗಿರುತ್ತಿದ್ದು ಯಾವ ಸಮಯದಲ್ಲಿ ಬೇಕಾದರೂ ಸಕಾರಣವಾಗಿ, ವಿನಾಕಾರಣವಾಗಿ ನೆನಪಾಗಿಬಿಡಬಲ್ಲ ಚೋದ್ಯ ಬಹುಶಃ ನನ್ನಂತೆ ಇತರರದೂ ಆಗಿರಬಹುದು ಅಂದುಕೊಳ್ಳುತ್ತೇನೆ. ಇದೀಗ ನಾನು ತಮ್ಮೆದುರು ಅನಾವರಣಗೊಳಿಸಲಿರುವ ನನ್ನ ದೌರ್ಬಲ್ಯಕ್ಕೂ, ಈ ಪದ್ಯಕ್ಕೂ ಅರ್ಥಾತ್ ಸಂಬಂಧವಿಲ್ಲ. ಆದರೆ ಅಣಕುಗೀತೆಗಳು ಹಾಸ್ಯದ ಹೆಸರಲ್ಲಿ ರಾರಾಜಿಸುತ್ತಿರುವ ಈ ಕಾಲಮಾನದಲ್ಲಿ ನನ್ನ ಮೇಲೂ ಈ ಗಾಳಿ ಬೀಸಿದ್ದರೆ ಆಶ್ಚರ್ಯವಿಲ್ಲ. ಅಂದ ಹಾಗೆ ಮೇಲಿನ ಪದ್ಯ ವಿನಾಕಾರಣ ನೆನಪಾದದ್ದಲ್ಲ. ಒಂದು ಕಾರ್ಯಕ್ರಮದ ಅಧ್ಯಕ್ಷತೆಗೆ ನನಗೆ ಸವಿನಯಪೂರ್ವಕ ಆಮಂತ್ರಣ ಬಂತು. ಯಾರಿಗೇ ಆಗಲಿ, ತಮ್ಮ ದೌರ್ಬಲ್ಯವನ್ನು ಬೇರೆಯವರೆದುರು ತೆರೆದಿಡುವುದೆಂದರೆ ಹಿತವಾಗುವುದಿಲ್ಲ. ಅದು ಮುಖವಾಡ ಹಾಕಿಕೊಂಡೇ ಬದುಕುವ ಮನುಷ್ಯಮಾತ್ರರ ಸಹಜ ನಡವಳಿಕೆ. ಒಂದು ಪರಿಮಿತ ವಲಯದಲ್ಲಿ ನಾನೊಬ್ಬ ಲೇಖಕಿ ಎಂದು ಗುರ್ತಿಸಲ್ಪಟ್ಟಿದ್ದು ಗಂಡಾಂತರಕ್ಕೆ ಕಾರಣವಾಗಿತ್ತು. ಏನೇನೋ ನೆಪ ಹೇಳಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ನೋಡಿದೆ. 'ಅವತ್ತು ಊರಲ್ಲಿರೋದು ಅನುಮಾನ. ನೆಂಟರ ಮನೆಯ ಸಮಾರಂಭವೊಂದಕ್ಕೆ ಹಾಜರಿ ಹಾಕಲೇಬೇಕಾಗಿದೆ' ಎಂದು ಬುರುಡೆ ಉರುಳಿಸಿದೆ. ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು, ಮರ್ಯಾದೆ ಉಳಿಸಿಕೊಳ್ಳಲು, ಇಂತಾ ಬಿಳಿಸುಳ್ಳುಗಳನ್ನು ಸಭ್ಯರೆನಿಸಿಕೊಂಡವರೂ ಚಲಾವಣೆ ಮಾಡುತ್ತಾರೆ ಎನ್ನುತ್ತಾ ನನ್ನನ್ನು ನಾನೇ ಸಭ್ಯರ ಪಟ್ಟಿಯಲ್ಲಿ ದಾಖಲಿಸಿಕೊಳ್ಳಲು ಮುಜುಗರವೆನಿಸುತ್ತಿದ್ದರೂ ಈ ಸಂದರ್ಭದಲ್ಲಿ ಅನಿವಾರ್ಯವಾಗಿದೆ. ಅಧ್ಯಕ್ಷತೆಗೆ ನನ್ನನ್ನು ಆಹ್ವಾನಿಸಿದವರಿಗೆ ಶತಾಯಗತಾಯ ನನ್ನನ್ನು ಒಪ್ಪಿಸಬೇಕೆಂಬ ಹುರುಪು.

**ಅಭಿಮಾನ ತೋರಿಸಿ ಕರೆಯುತ್ತಿರುವಾಗ ಹೋಗದಿರಲು ಆದೀತೆ?**

ಊರುಮನೆಯ ಜನ. ಪೇಪರಿನಲ್ಲಿ ಆಗೀಗ ಹೆಸರು ಕಾಣಿಸಿಕೊಳ್ಳುವ ಪ್ರಾಣಿ. ಕರೆದು ಒಂದು ಕುರ್ಚಿ ಕೊಟ್ಟು ವಿಶ್ವಾಸ ತೋರಿಸಿಬಿಡೋಣ ಎನ್ನುವ ಚಪಲ. ನನ್ನ ಸುಳ್ಳು ಪ್ರಯೋಜನಕ್ಕೆ ಬರಲಿಲ್ಲ. ಕಾರ್ಯಕ್ರಮವನ್ನು ಎರಡು ದಿನ ಹಿಂದಕ್ಕೋ, ಮುಂದಕ್ಕೋ, ನನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಲು ಅವರು ತಯಾರಾದರು. ಇನ್ನೇನು ಕಾರಣ ಕೊಡುವುದು? ಮುಂದೊಂದು ತಿಂಗಳ ನಂತರ ನನಗೆ ಹುಷಾರಿರುವುದಿಲ್ಲ ಎಂದು ಈಗಲೇ ಭವಿಷ್ಯ ಹೇಳಿ ನಗೆಪಾಟಲಾಗಲೇ? 'ಕರೆದು ಹೆಣ್ಣು ಕೊಟ್ರೆ ಅಳಿಯನಿಗೆ ಮಲರೋಗ' ಎನ್ನುವ ಗಾದೆ ತಮಗೆಲ್ಲಾ ನೆನಪಾಗುತ್ತಿರಬಹುದು. ಅಭಿಮಾನ ತೋರಿಸಿ ಕರೆಯುತ್ತಿರುವಾಗ ಹೋಗಿ ಎರಡು ಮಾತಾಡಿ ಬರಲು ಇವಳಿಗೇನು ಗುನುಗು ಎಂದು ಅಚ್ಚರಿಯೂ ಆಗಬಹುದು. ಕಾರಣ ಇದೆ ಮಾರಾಯ್ರೇ, ಇಲ್ಲದಿದ್ದರೆ ವೇದಿಕೆಯನ್ನಲಂಕರಿಸುವ ಗೌರವ ಹುಡುಕಿಕೊಂಡು ಮನೆಬಾಗಿಲಿಗೆ ಬಂದರೆ ಅದನ್ನು ನಿರಾಕರಿಸುವ ವೈರಾಗ್ಯ ಯಾರಿಗಿರುತ್ತದೆ? ಯಾಕಿರಬೇಕು? 'ಮರದ ಬಾಯಿ ಆಗಿದ್ದರೆ ಯಾವತ್ತೋ ಒಡೆದು ಹೋಗುತ್ತಿತ್ತು' ಅನಿಸಿಕೊಳ್ಳುವಷ್ಟು ಮಾತಾಡುವ ಪೈಕಿ ನಾನು, ಮನೆಯೊಳಗಿದ್ದರೆ. 'ಅದೆಷ್ಟು ಮಾತಾಡ್ತಿ?' ಎಂದು ಯಜಮಾನರ ಪುಕಾರು. ಅವರು ಪುಸ್ತಕವೋ, ಪೇಪರೋ ಹಿಡಿದು ಕೂತಿದ್ದರೆ ಒಂದಕ್ಷರ ತಲೆಗೆ ಹೋಗದಷ್ಟು ನಾನು ಮಾತಾಡುತ್ತೇನಂತೆ. ನನ್ನದೂ ಒಂದು ಪುಕಾರು ಇದೆ. 'ನಾ ಹೇಳಿದ್ದೊಂದೂ ಅವರ ತಲೆಯೊಳಗೆ ಹೋಗಿರುವುದಿಲ್ಲ. ಕೇಳಿಸಿಕೊಳ್ಳುತ್ತಿದ್ದಾರೆ ಎನ್ನುವುದೆಲ್ಲಾ ನನ್ನ ಭ್ರಮೆ.' ಈ ವಿಷಯ ಎಷ್ಟೋ ಸಲ ಸಾಬೀತಾಗಿದೆ. ಹಾಗಿದ್ದರೂ ನನ್ನ ಮೇಲೆ ಗೂಬೆ ಕೂರಿಸುವ ಪ್ರಸಂಗ ಬಂದರೆ ಅವರು ಅದನ್ನು ಸದು(ರು)ಪಯೋಗ ಪಡಿಸಿಕೊಳ್ಳದೆ ಬಿಡುವುದಿಲ್ಲ. ಹೀಗೆ ಮನೆಯೆಂಬೋ ಮನೆಯೊಳಗೆ 'ಬಾಯೀಂದ್ರೆ ಬೊಂಬಾಯಿ' ಎನ್ನುವ ಅಪವಾದಕ್ಕೆ ಒಳಗಾಗಿರುವ ನಾನು ಹೊರಗಿನ ನನ್ನ ಪರಿಚಿತರೊಡನೆ ಅತೀಅತೀ ಅಲ್ಲದಿದ್ದರೂ ಸೌಜನ್ಯಕ್ಕೆ ಅಪಚಾರವಾಗದಷ್ಟು ಮಾತಾಡಬಲ್ಲೆ ಎಂಬುದು ನನಗೆ ಗೊತ್ತಿದೆ. ಆದರೆ ವೇದಿಕೆಯ ಮೇಲೆ? ಎಲ್ಲರ ಗಮನದ ಕೇಂದ್ರಬಿಂದುವಾಗಿ ಮೈಕಿನ ಎದುರು ನಿಂತು ನೆರೆದ ಸಮಸ್ತ ಜನರನ್ನುದ್ದೇಶಿಸಿ ಮಾತಾಡುವ ಪ್ರಸಂಗ ನೆನೆದರೆ ಮೈ ಬೆವರುತ್ತದೆ. ಗಂಟಲು ಒಣಗುತ್ತದೆ. ಕಾಲು ನಡುಗುತ್ತದೆ. ಆಡಬೇಕೆಂದುಕೊಂಡಿದ್ದ ಪದಗಳೆಲ್ಲಾ ತಲೆಮರೆಸಿಕೊಂಡು ಪೆಪ್ಪೆಪ್ಪೇ.. ಬೆಬ್ಬೆಬ್ಬೇ.. ಆಗಿ, ಬೇಕಾದಷ್ಟು ಸಲ ಮನೆಯವರ ಹತ್ತಿರ ಬೈಸಿಕೊಂಡಿದೀನಿ ಕಣ್ರೀ. ಸ್ಟೇಜ್ ಹತ್ತಿದರೆ ನನ್ನ ದನಿಯೇ ಬದಲಾಗಿ ಅದೊಂಥರಾ ಅಳುಬುರುಕು ಸ್ವರವಾಗಿ ಕೇಳಿಸುತ್ತದೆಯಂತೆ.

**ನೀನು ಯಾರು?**

ನೀನೇನು ಪೆದ್ದನೋ? ಅಥವಾ ಕೇರ್‌ಲೆಸ್ಸೊ? ಎಂದು ತಂದೆ ಗದರಿದಾಗ ಮಗ ಕೂಲಾಗಿ "ಗೊತ್ತಿಲ್ಲ, ತಿಳಿದುಕೊಳ್ಳುವ ಆಸಕ್ತಿಯೂ ಇಲ್ಲ" ಎಂದ.

‘ಮಾತಾಡೋಕೆ ಬರಲ್ಲ ಅಂದ್ರೆ ಬರಲ್ಲ, ಅದನ್ನ ಒಪ್ಕೊಂಡ್ಬಿಡ್ಬೇಕು’ ಅನ್ನುತ್ತಾರೆ ರಾಯರು. ಮೊದಲೇ ಹೇಳಿದೆನಲ್ಲ, ನಮ್ಮ ದೌರ್ಬಲ್ಯವನ್ನು ಬೇರೆಯವರೆದುರು ಹೇಳಿಕೊಳ್ಳಲು ಒಣ ಸ್ವಾಭಿಮಾನ. ಹೇಳಿಕೊಂಡರೂ ಉಪಯೋಗವಿಲ್ಲ ಎನ್ನುವುದು ಅನುಭವ. ಪೇಪರು ಗೀಪರಲ್ಲಿ ಬರೆಯೋರಿಗೆ ನಾಲ್ಕು ಮಾತಾಡಲು ಬರುವುದಿಲ್ಲವಾ? ಸುಳ್ಳೇ ಬಿಂಕ ಎಂದು ಅವರಿಗನಿಸಿದರೆ ಅದರಲ್ಲಿ ನನ್ನ ತಪ್ಪು ಏನಿಲ್ಲ. ‘ದಾಕ್ಷಿಣ್ಯಕ್ಕೆ ಬಸುರಾಗುವುದು’ ಅಂತಾರಲ್ಲ, ಮುಲಾಜಿಗೆ ಬಿದ್ದು ಒಪ್ಪಿಕೊಂಡ ಮೇಲೆ ದಿಂಬು ಮೂಸುತ್ತಿದ್ದಂತೆ ನಿದ್ದೆ ಎಳೆದುಕೊಂಡು ಹೋಗುತ್ತಿದ್ದವಳ ಸುಖನಿದ್ದೆಗೆ ಸಂಚಕಾರ. ಒಂದೊಮ್ಮೆ ಮಂಪರು ಬಂದು ಎಚ್ಚರಾದಾಗಲೂ ಒಪ್ಪಿಕೊಂಡ ಕಾರ್ಯಕ್ರಮದ ಕುರಿತು ಧುತ್ತನೆ ನೆನಪಾಗಿ ಮಂಪರು ಪರಾರಿ. ಆ ದಿನಗಳಲ್ಲಿ ನನ್ನ ಬಿ.ಪಿ.ಚೆಕ್ ಮಾಡಿಸಿದರೆ ಅದು ಏರಿರುತ್ತದೆ ಅನ್ನುವುದರಲ್ಲಿ ತಿಲಮಾತ್ರ ಸಂಶಯವಿಲ್ಲ. ಆಯ್ತು, ಕಾರ್ಯಕ್ರಮಕ್ಕೆ ಬರುವುದಾಗಿ ಒಪ್ಪಿಕೊಂಡ ಮೇಲೆ ಅದಕ್ಕೆ ತಕ್ಕ ಸಿದ್ಧತೆ ಮಾಡಿಕೊಳ್ಳದಿದ್ದರೆ ಹೇಗೆ? ಶಾಲಾ ವಾರ್ಷಿಕೋತ್ಸವವೋ, ಕನ್ನಡ ರಾಜ್ಯೋತ್ಸವವೋ, ಸ್ವಾತಂತ್ರ್ಯ ದಿನಾಚರಣೆಯೋ, ಮತ್ತೊಂದೋ, ದೇವ್ರಾಣೆ ಹೇಳ್ತೀನಿ ಕಣ್ರೀ, ವಿದ್ಯಾರ್ಥಿ ದೆಸೆಯಲ್ಲೂ ಈ ಪರಿ ಅಭ್ಯಾಸ ಮಾಡಿಕೊಂಡಿದ್ದಿಲ್ಲ. ಸಂದರ್ಭಕ್ಕೆ ತಕ್ಕ ಭಾಷಣವನ್ನು ಬರೆದುಕೊಂಡು, ರಾಯರು ಆಚೆಗೆಲ್ಲಾದರೂ ಹೋದಾಗ ‘ಭಾಷಣ ರೆಡಿಯಾಯ್ತಾ?’ ಎಂದು ಆಗೀಗ ಕೀಟಲೆ ಮಾತಾಡಿದರೆ ಪಿತ್ಥ ಕೆರಳದೆ ಇರಲು ಸಾಧ್ಯವೇ? ‘ಹೈಸ್ಕೂಲಿನ ದಿನಗಳಲ್ಲಿ ನಾನು ಉತ್ತಮ ಭಾಷಣಗಾರ್ತಿ ಆಗಿದ್ದೆ’ ಎಂದು ರಾಯರಿಗೆ ಮನವರಿಕೆ ಮಾಡಿಕೊಡಲು ಹೋಗಿ ಸೋಲೊಪ್ಪಿಕೊಂಡಿದ್ದೇನೆ. ನಾನು ವೇದಿಕೆಯ ಮೇಲೆ ನಿಂತು ಹರಳು ಹುರಿದಂತೆ, ಕ್ಷಮಿಸಿ, ಅರಳು ಹುರಿದಂತೆ ಮಾತಾಡುವುದನ್ನು ಕಲ್ಪಿಸಿಕೊಳ್ಳಲು ಅವರು ಬಿಲ್‌ಕುಲ್ ತಯಾರಿಲ್ಲ. ‘ನಿಮ್ಮಿಂದಲೇ ನಾನು ಹೀಗಾಗಿದ್ದು. ಹೆದ್ರಿಸಿ ಹೆದ್ರಿಸಿ ನನ್ನ ಹೀಗೆ ಮಾಡಿಟ್ಟು ಈಗ ಚಂದ ನೋಡ್ತಿದೀರಿ. ಒಂದಿನವಾದರೂ ನನ್ನ ಆತ್ಮವಿಶ್ವಾಸ ಹೆಚ್ಚುವಂತಾ ಮಾತು ನೀವು ಆಡಿದ್ದಿದೆಯಾ? ಸಪೋರ್ಟ್ ಮಾಡಿದ್ದಿದೆಯಾ?’ ನನ್ನ ಉದ್ವಿಗ್ನ ಮನೋಸ್ಥಿತಿ ಕಾಲು ಕೆರೆದು ಜಗಳ ಆಡಲು ನನ್ನನ್ನು ಪ್ರೇರೇಪಿಸುತ್ತದೆ. ಆ ಮೂಲಕ ಆಂತರ್ಯದ ಒತ್ತಡವನ್ನು ಹೊರಹಾಕಲು ಪ್ರಚೋದಿಸುತ್ತದೆ. ‘ನಾನೇನಂತಾ ತಪ್ಪು ಮಾತಾಡಿದ್ದು?’ ಎನ್ನುವಂತೆ ರಾಯರು ಚಕಿತರಾಗುತ್ತಾರೆ.

‘ನಾನು ಏನಂತ ಹೆದರಿಸಿದೆ? ನಾನು ಹೆದರಿಸಿದರೆ ನೀನು ಯಾಕೆ ಹೆದರಬೇಕು? ಮತ್ತು ನನಗೆ, ನನ್ನ ಮಾತಿಗೆ, ನೀನು ಹೆದರುತ್ತೀ ಅನ್ನುವುದಕ್ಕಿಂತಾ ಆಶ್ಚರ್ಯದ ಸುದ್ದಿ ಇನ್ಯಾವುದಿದೆ?’ ಇಂತಾ ಸ್ವಗತಗಳನ್ನು ಮಾತಿಲ್ಲದೆ ನನಗೆ ತಲುಪಿಸುವುದರಲ್ಲಿ ಅವರು ಪಾರಂಗತರು ಎಂದು ನನ್ನ ತಿಳುವಳಿಕೆ. ಅಂತೂ ಕಾರ್ಯಕ್ರಮದ ದಿನದವರೆಗೆ ನಾನು ನನ್ನ ಭಾಷಣವನ್ನು ಡಾಕ್ಟರು ಅನುಪಾನ ಹೇಳುವಂತೆ ದಿನಕ್ಕೆ ಮೂರು ಸಲ, ಸಲಕ್ಕೆ ಎರಡು ಬಾರಿಯಂತೆ, ಓದಿ ಓದಿ ಓದಿ ‘ಈ ಕರ್ಮ ಯಾರಿಗೆ ಬೇಕು, ಸ್ಕೂಲಿಗೆ ಹೋಗುವ ಮಕ್ಕಳಂತೆ..’ ಎನ್ನುವ ದಯನೀಯಾವಸ್ಥೆಗೆ ತಲುಪಿರುತ್ತೇನೆ. ಮನದ ಆತಂಕದಿಂದ ಸರಿಯಾಗಿ ಊಟ ಸೇರದೆ, ನಿದ್ದೆ ಬಾರದೆ, ಮುಖದ ಕಳೆಯೇ ಇಳಿದುಹೋಗಿ, ಹಾಗೆ

ಇಳಿದು ಹೋಗಿದೆ ಎಂದು ನಾನು ಅಂದುಕೊಂಡು, ಅಂತೂ ಒಮ್ಮೆ ಒಪ್ಪಿಕೊಂಡ ಕರ್ತವ್ಯ ಮುಗಿಸಿದೆ ಅಂದರೆ ಜಗತ್ತು ಅದಿನ್ನೆಂತಾ ಸುಂದರವಾಗಿ ಕಾಣುತ್ತದೆ ಅಂತ? ಎತ್ತ ನೋಡಿದರತ್ತ ಸುಖವೇ ಸುಖ. ನೆಮ್ಮದಿಯೇ ನೆಮ್ಮದಿ. 'ಇನ್ನ್ಯಾವತ್ತೂ ಇಂತಾ ಗೋಜಲಿಗೆ ಸಿಕ್ಕಿ ಬೀಳಬಾರದು. ನನ್ನಿಂದ ಆಗುವುದಿಲ್ಲ ಅಂದರೆ ಆಗುವುದಿಲ್ಲ. ಒಂದು ಪೆಟ್ಟು, ಎರಡು ತುಂಡು.' ಹೀಗೆಲ್ಲಾ ಪ್ರತಿಜ್ಞೆ ಮಾಡಿದ್ದು ಹತ್ತಾರು ಸಲ. ಆದರೆ ಅಂದುಕೊಂಡಿದ್ದನ್ನು ಖಡಕ್ಕಾಗಿ ಪಾಲಿಸಲಾಗದೆ, ಈ ಮೊದಲು ಹೇಳಿದಂತೆ ಯಾವುದೋ ಮುಲಾಜಿಗೆ ಸಿಕ್ಕಿಕೊಂಡು, ನೀವು ಬುದ್ಧಿವಂತರಾಗಿದ್ದರೆ ಈಗಾಗಲೇ ನನ್ನ ಮನಸ್ಸು ಯಾವ ರೀತಿ ಕೆಲಸ ಮಾಡುತ್ತಿದೆ ಅನ್ನುವುದನ್ನು ಲೆಕ್ಕ ಹಾಕಿಬಿಟ್ಟಿರುತ್ತೀರಿ. ಹೌದು ಕಣ್ರೀ, ಅದು ಹಾಗೇನೇ. ಸಭಾಕಂಪನ ಅನ್ನುವುದು ಎಷ್ಟೇ ಇದ್ದರೂ ವೇದಿಕೆಯ ಕುರಿತು ಅದೇನೋ ಅದಮ್ಯ ಆಕರ್ಷಣೆ. ಎಲ್ಲವನ್ನೂ ಸರಿಯಾಗಿ ನಿಭಾಯಿಸಬೇಕು, ನಿಭಾಯಿಸುತ್ತೇನೆ ಎನ್ನುವ ಸುಳ್ಳು ಆಶ್ವಾಸನೆಯನ್ನು ನನಗೆ ನಾನೇ ಕೊಟ್ಟುಕೊಂಡು, ಮುಳ್ಳನ್ನು ಮುಳ್ಳಿನಿಂದ ತೆಗೆಯಬೇಕು ಎನ್ನುವಂತೆ ಭಯಕ್ಕೆ ಕಾರಣವಾಗುವಂತಾದ್ದನ್ನು ಎದುರಿಸಿಯೇ ಗೆಲ್ಲಬೇಕು ಎನ್ನುವ ಛಲದಲ್ಲಿ ಬಂದ ಆಹ್ವಾನವನ್ನು ಅಳುಕಿನಲ್ಲೇ ಒಪ್ಪಿಕೊಂಡು, ನನ್ನ ನಿರಾಕರಣೆ ಅನ್ನುವುದು ತುದಿನಾಲಿಗೆಯ ಮಾತು ಆಗಿರುತ್ತಿತ್ತಾ? ನನ್ನನ್ನು ಆಹ್ವಾನಿಸಿದವರು ನನ್ನ ನಾಡಿಮಿಡಿತವನ್ನು ಸರಿಯಾಗಿ ಗ್ರಹಿಸಿಬಿಡುತ್ತಿದ್ದರಾ? ಅಥವಾ ನಾನು ನಿರಾಕರಿಸುವ ಕ್ರಮದಲ್ಲೇ ಅದರ ಒಳಾರ್ಥ ಗೋಚರಿಸಿಬಿಡುತ್ತಿತ್ತಾ? ಬಿಟ್ಹಾಕಿ, ಎಂತದೋ ಒಂದು. ಅಯ್ಯಬ್ಬಾ, ಏನೆಲ್ಲಾ ತಯಾರಿ. ವೇದಿಕೆಯ ಮೇಲಿರುವ ಆ ಅವರೇ, ಈ ಇವರೇ, ಎಲ್ಲಾ ಗಣ್ಯರೇ, ಸಭೆಯಲ್ಲಿ ಉಪಸ್ಥಿತರಿರುವ ಆಸಕ್ತರೇ.. ಎನ್ನುವಲ್ಲಿಂದ ತೊಡಗಿ ಬರೆದಿಟ್ಟುಕೊಂಡ ಭಾಷಣದ ಹಾಳೆಯನ್ನು ಪರ್ಸಿನಲ್ಲಿ ಸರಿಯಾಗಿ ಇಟ್ಟುಕೊಂಡಿದ್ದೇನೆಯೇ, ಕನ್ನಡಕ ಜೊತೆಯಲ್ಲಿದೆಯೇ, ಎನ್ನುವುದನ್ನು ಹೊರಡುವ ಕೊನೆಗಳಿಗೆಯಲ್ಲಿ ಮತ್ತೊಮ್ಮೆ ಮನವರಿಕೆ ಮಾಡಿಕೊಂಡು, ಯಜಮಾನರು ಅಪ್ಪಿತಪ್ಪಿ ಕೂಡಾ ನಾನು ಭಾಷಣ ಬಿಗಿಯುವ ಫರ್ಲಾಂಗು ದೂರದ ಸುತ್ತಳತೆಯಲ್ಲಿ ಸುಳಿಯಬಾರದು ಎನ್ನುವ ನಿಬಂಧನೆ ಹಾಕಿ, ದೇವರೇ, ಮರ್ಯಾದೆ ಕಾಪಾಡು.. ಎಂದು ನಂಬಿದ ದೇವರಿಗೆ ಮನದಲ್ಲೇ ಒಂದು ಅರ್ಜಿ ಗುಜರಾಯಿಸಿ, ಮುಖದ ಮೇಲೆ ಸುಳ್ಳೇ ಒಂದು ನಿರಾತಂಕದ ನಗುವಿನ ತೋರಿಕೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಅಷ್ಟೆಲ್ಲಾ ಗಟ್ಟು ಹೊಡೆದಿದ್ದರೂ ವೇದಿಕೆಯ ಮೇಲೆ ಪ್ರತಿಷ್ಠಾಪನೆಯಾದೊಡನೆ ಒಂದು ಪದ ಕೂಡಾ ನೆನಪಿಗೆ ಬರದಂತೆ ತಲೆ ಖಾಲಿ ಮಡಕೆಯಂತಾಗಿಬಿಡುತ್ತದೆ. ಅದಕ್ಕೂ ಮುನ್ನ ಏನೆಲ್ಲಾ ಚಿಂತೆಗಳು, ಅಥವಾ ದುಶ್ಚಿಂತೆಗಳು ಅಂತೀರಿ? ವೈರಿನ ತುದಿಯಲ್ಲಿರುವ ಧ್ವನಿವರ್ಧಕವನ್ನು ಕೈಗೇ ಹಿಡಿಸಿ ಮಾತಾಡುವಂತಾ ವ್ಯವಸ್ಥೆಯಾಗಿದ್ದರೆ? ಬಲಗೈಲಿ ಮೈಕ್ ಹಿಡಿದು, ಎಡಗೈಲಿ ಹಾಳೆ ಹಿಡಿದು, ಪುಟ ತಿರುಗಿಸುವುದು ಹೇಗೆ? ಲಕ್ಷಣವಾಗಿ ವೇದಿಕೆಯ ಒಂದು ಬದಿಯಲ್ಲಿ ಕೈಲಿದ್ದ ಪೇಪರನ್ನು ಡೆಸ್ಕಿನ ಮೇಲಿಟ್ಟುಕೊಂಡು, ಘನಗಾಂಭೀರ್ಯದಿಂದ ಮೈಕನ್ನು ತಮ್ಮ ಎತ್ತರಕ್ಕೆ ತಕ್ಕಂತೆ ಸರಿಪಡಿಸಿಕೊಂಡು, ಮಾತಾಡುವ ವ್ಯವಸ್ಥೆ ಇದ್ದರೆ ನಾನು ಬಚಾವು. ಉಸಿರಿನ ಗತಿ ಕೊಂಚ ಮಟ್ಟಿಗಾದರೂ ತಹಬಂದಿಗೆ ಬರುತ್ತದೆ. ಈವರೆಗೆ

ಮೊದಲಿಗೆ ಉಲ್ಲೇಖಿಸಿದ ಮೈಕು ಕೈಲಿ ಹಿಡಿದು ಮಾತಾಡುವ ಸಂದರ್ಭಕ್ಕೆ ನಾನು ಪಕ್ಕಾಗಿಲ್ಲ. ದೇವರು ಅಷ್ಟರಮಟ್ಟಿಗೆ ನನ್ನ ಪಾಲಿಗೆ ಕರುಣಾಮಯಿಯಾಗಿದ್ದಾನೆ. ನನ್ನ ಮೊದಲ ಭಾಷಣದ ಅಸಡ್ಡಾಳ ವರ್ತನೆ ಇನ್ನೂ ನನ್ನ ನೆನಪಿನಲ್ಲಿದ್ದು ಆಗೀಗ ನನ್ನನ್ನು ನಾಚಿಕೆಸಾವು ಅನ್ನುವಂತಾದ್ದಕ್ಕೆ ದೂಕುವುದಿದೆ. ಅದು ಒಂದು ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಸಮಾರಂಭ. ನೆರೆದ ಮಹಾಜನಗಳು ತಂತಮ್ಮ ಮಕ್ಕಳು ಬಹುಮಾನ ಸ್ವೀಕರಿಸುವುದನ್ನು, ವೇದಿಕೆಯ ಮೇಲೆ ಹಾಡುವುದನ್ನು, ನರ್ತಿಸುವುದನ್ನು, ನಟಿಸುವುದನ್ನು, ನೋಡಲು ಕಾತರರಾಗಿರುತ್ತಾರೆಯೇ ಹೊರತು ಅಧ್ಯಕ್ಷ ಭಾಷಣ ಕೇಳುವುದಕ್ಕೇನಲ್ಲ ಎನ್ನುವ ಸತ್ಯ ನನಗೆ ಗೊತ್ತಿಲ್ಲದ್ದೇನಲ್ಲ. ಭಾಷಣವನ್ನು ಬರೀ ಐದು ನಿಮಿಷಕ್ಕೆ ಸೀಮಿತಗೊಳಿಸಿ ಅಕ್ಷರರೂಪಕ್ಕಿಳಿಸಿದ್ದೆ. ಅದೂ ಹೆಚ್ಚೆಚ್ಚು ಅನ್ನಿ. ಸಭಾಮರ್ಯಾದೆಗೆ ಧಕ್ಕೆ ಬರದಂತೆ ಎರಡು ಮಾತಾಡಿದ್ದರೆ ಸಾಕಿತ್ತು. ಆದರೆ ಈ ಭಾಷಣವನ್ನೂ ಗಟ್ಟು ಹೊಡೆದುಕೊಂಡು, ಮೊದಲನೆಯ ಭಾಷಣವಾಗಿದ್ದು ನನ್ನ ಇತಿಮಿತಿಗಳ ಅರಿವಿಲ್ಲದ್ದರಿಂದ ಮಡಿಸಿದ ಹಾಳೆಯನ್ನು ಪರ್ಸಿನೊಳಗಡೆಯೇ ಇರಗೊಟ್ಟು, ಮೈಕಿನ ಮುಂದೆ ನಿಂತಿದ್ದೆ. ಎರಡು ಸಾಲು ಮಾತಾಡುವುದರೊಳಗೆ ಮೂರನೆಯದು ಮರೆತು ಹೋಗಿ, ಬಾಯಿಪಾಠವಾಗಿದ್ದ ಮೂರನೆಯದು ನೆನಪಾಗದೆ ಅದರ ಮುಂದಿನ ಲೈನುಗಳು ನೆನಪಾಗುವುದು ಅಸಂಭವವಾಗಿ, ಈ ಗಡಿಬಿಡಿಯಲ್ಲಿ ಪರ್ಸಿನ ಜಿಪ್ಪು ಎಳೆದು ಅದರೊಳಗಿದ್ದ ಭಾಷಣದ ಹಾಳೆ ಹೊರತೆಗೆದು ಬಿಡಿಸಿ, ತುಂಡುಗಡಿದಿದ್ದ ಮಾತಿನ ಎಳೆ ಜೋಡಿಸಿಕೊಂಡು, ನಗ್ತಿದೀರೇನ್ರೀ? ನಗಿ, ನಗಿ. ನನ್ನ ಅವಸ್ಥೆ ನಿಮಗೇನು ಗೊತ್ತಾಗುತ್ತೆ? ಅವತ್ತು ನನ್ನ ಮರ್ಯಾದೆ ಹೋಯ್ತಾ ಅಥವಾ ಅಂತಾದ್ದೇನೂ ಆಗಲಿಲ್ಲವಾ? ಗಂಡ, ಮಕ್ಕಳೊಡನೆ ಈ ಬಗ್ಗೆ ಕೇಳಿದರೆ, 'ಏನಾಗ್ಲಿಲ್ಲ ಬಿಡಮ್ಮಾ..' ಅನ್ನುತ್ತಾ ಮಕ್ಕಳು ನನ್ನ ಪರ ವಹಿಸಿದರೆ ಗಂಡಯ್ಯ ಹೇಳುವುದೇ ಬೇರೆ. 'ಲೋಕಾರೂಢಿಯ ಎರಡು ಮಾತಾಡೋಕೆ ಬರದೆ ಬರೆದಿಟ್ಕೊಳ್ಳೋದು ಅಂದ್ರೆ? ಥೇಥೇ, ತೆಗೆದಿ ಮರ್ಯಾದೆ..'

ದಶಕಗಳ ನಂತರವೂ ಮೊದಲ ಭಾಷಣದ ಈ ಕಟು ಅನುಭವ ನನ್ನ ನೆನಪಲ್ಲಿ ಉಳಿದುಕೊಂಡಿದೆ ಅಂದರೆ ಅದರಿಂದ ನನ್ನ ಸೂಕ್ಷ್ಮ ಮನಸ್ಸಿಗೆ ಆದ ಘಾಸಿ ಎಷ್ಟೆಂಬುದನ್ನು ಸಹೃದಯರಾದ ನೀವೇ ಊಹಿಸಿಕೊಳ್ಳಿ. ಅಂದಹಾಗೆ ನಿಮ್ಮನ್ನೂ ಒಂದು ಮಾತು ಕೇಳ್ಬಿಡ್ತೀನಿ, ಅವತ್ತು ನನ್ನ ಮರ್ಯಾದೆ ಹೋಯ್ತಾ ಅಥವಾ ಅಂತಾದ್ದೇನಾಗಲಿಲ್ವಾ?

ಈ ಘಟನೆಯ ನಂತರ ನಾನು ಬುದ್ಧಿವಂತಳಾದೆ. ಮೈಕಿನ ಮುಂದೆ ನಿಲ್ಲುವಾಗ ಭಾಷಣದ ಹಾಳೆ ಕೈಲಿ ಹಿಡಿದೇ ನಿಲ್ಲುವುದನ್ನು ರೂಢಿಸಿಕೊಂಡೆ. ಮೊದಲ ಭಾಷಣದ ಆಭಾಸಕ್ಕಿಂತಾ ಇದು ವಾಸಿ, ಅಲ್ಲವಾ? ಆದರೂ ಮನಸ್ಸಲ್ಲೊಂದು ಕೊರಗು ಉಳಿದುಕೊಂಡಿದೆ. ಬರೆದಿದ್ದನ್ನು ಓದುವುದು ಅದೆಂತಾ ಭಾಷಣವಾಗುತ್ತೆ? ಎಷ್ಟು ಬೆಲೆ ಬರುತ್ತೆ? ಮೈಕಿನ ಎದುರು ನಿಲ್ಲುತ್ತಿದ್ದಂತೆ ಸಮಯದ ಪರಿವೆಯೇ ಮರೆತು ಹೋಗಿ ನಿರರ್ಗಳವಾಗಿ, ಪುಂಖಾನುಪುಂಖವಾಗಿ, ಪದಪುಂಜಗಳನ್ನು ಮಾಲೆಯಂತೆ ಜೋಡಿಸಿ

ವಾಕ್ಯಗಳನ್ನಾಗಿಸುತ್ತಾ ಸಭಿಕರನ್ನು ಮಂತ್ರಮುಗ್ಧರನ್ನಾಗಿಸುವವರ ಕುರಿತು ನನ್ನಲ್ಲಿ ಭಯಂಕರ ಹೊಟ್ಟೆಕಿಚ್ಚಿದೆ. ಮೈಕಿನ ಮುಂದೆ ನಿಲ್ಲುತ್ತಿದ್ದಂತೆ ಬತ್ತಳಿಕೆಯ ಬಾಣಗಳಂತೆ ಸಮಯಕ್ಕೆ ಒದಗಿ ಬರುವ ಅವರ ವಾಕ್ಪಾಂಡಿತ್ಯ ಎಲ್ಲಿ, ಉರು ಹೊಡೆದಿದ್ದೂ ಮರೆತುಹೋಗುವ ನನ್ನ ದಯನೀಯ ಸ್ಥಿತಿ ಎಲ್ಲಿ? ಅವರೇಕೆ ಹಾಗೆ? ಮತ್ತು ನಾನ್ಯಾಕೆ ಹೀಗೆ? ತಮಾಷಿಗೆ ಹೇಳ್ತಿಲ್ಲ ಮಾರಾಯ್ರೇ, ಈಗಿನ ಕಾಲವೇ ಮಾತು ಬಲ್ಲವರ ಕಾಲ. ಮಾತಾಡಲು ಬರದವರು, ಅಂದರೆ ತಮ್ಮ ಅನಿಸಿಕೆಗಳಿಗೆ ಮಾತಿನ ರೂಪ ಕೊಡಲು ಬರದವರು, ಎಷ್ಟೇ ಬುದ್ಧಿವಂತರು ಅಂದುಕೊಂಡು ಬೀಗುತ್ತಿದ್ದರೂ ಮಿಕ್ಕುಳಿದವರ ದೃಷ್ಟಿಯಲ್ಲಿ ಬರೀ ಬುರ್ನಾಸು. ಮಾಧ್ಯಮಗಳು ವಿಜೃಂಭಿಸುತ್ತಿರುವ ಈ ಕಾಲದಲ್ಲಿ ಮಾತಾಡಬಲ್ಲವನೇ ಮಹಾಶೂರ. ರೇಡಿಯೋದಲ್ಲಿ, ಟೀವಿಯಲ್ಲಿ ನಿರೂಪಕರು ಫುಲ್‌ಸ್ಟಾಪೇ ಇಲ್ಲದೆ ಮಾತಾಡುವುದನ್ನು ಕೇಳಿದರೆ, ನೋಡಿದರೆ ನನಗೆ ಬೆಟ್ಟು ಕಚ್ಚಿಕೊಳ್ಳುವಷ್ಟು ಆಶ್ಚರ್ಯ. ಅಭ್ಯಾಸಬಲದಿಂದ ಅವರು ಇದರಲ್ಲಿ ಪಾರಂಗತರಾಗಿರುತ್ತಾರೆ ಅಂತಿಟ್ಟುಕೊಂಡರೂ ಎಲ್ಲೋ ಗದ್ದೆಯಲ್ಲಿ ಕೆಲಸ ಮಾಡುತ್ತಿರುವ ರೈತ, ಎಲ್ಲೋ ಮಾರುಕಟ್ಟೆಯಲ್ಲಿ ತರಕಾರಿ ವ್ಯಾಪಾರಕ್ಕೆ ಕೂತ ಮಹಿಳೆ, ಯಾವುದೋ ಸ್ಕೂಲಿನ ಮುಂದೆ ನಿಂತ ಯೂನಿಫಾರಂ ಹುಡುಗ, ಟೀವಿಯವರು ಮುಖದೆದುರು ಮೈಕ್ ಹಿಡಿದರೆ ಸಾಕು, ತಂತಮ್ಮ ಸಮಸ್ಯೆಗಳ ಕುರಿತಾಗಿ ಹೇಗೆ ನಿಸ್ಸಂಕೋಚವಾಗಿ, ಯಾವ ಹಿಂಜರಿಕೆಯೂ ಇಲ್ಲದೆ ಮಾತಾಡಬಲ್ಲರು ಎಂಬುದನ್ನು ನೋಡಿದಾಗ ನನ್ನ ಬಗ್ಗೆ ನನಗೇ ಅಯ್ಯೋ ಅನಿಸದಿರಲು ಸಾಧ್ಯವೇ? ಘಟನಾಸ್ಥಳದಲ್ಲಿ ಗಸ್ತು ಹೊಡೆಯುತ್ತಿರುವ ದೂರದರ್ಶನದ ವರದಿಗಾರರು ವಾರ್ತೆಗಳನ್ನು ಪ್ರಸ್ತುತಪಡಿಸುತ್ತಿರುವವರ ಪ್ರಶ್ನಾವಳಿಗಳಿಗೆ ಹೇಗೆ ಚಿನಕುರುಳಿಯಂತೆ ಉತ್ತರಿಸುತ್ತಾರೆ ಎನ್ನುವುದು ದೂರದರ್ಶನದ ವೀಕ್ಷಕರಿಗೆ ಗೊತ್ತೇ ಇರುತ್ತದೆ. ನಿಮ್ಮನ್ನು ಮತ್ತೆ ಸಂಪರ್ಕಿಸುತ್ತೇನೆ ಎಂದು ವಾರ್ತಾವಾಚಕ(ಕಿ) ಹೇಳುವವರೆಗೆ ಅವರಿಗೆ ಮಾತಾಡುವ ವಿಷಯ ಇರುತ್ತದೆ ಮತ್ತು ಅವರು ನೀರು ಕುಡಿದಷ್ಟು ಸರಾಗವಾಗಿ ಮಾತಾಡುತ್ತಾ, ಪರಿಸ್ಥಿತಿಯನ್ನು ವೀಕ್ಷಕರೆದುರು ತೆರೆದಿಡುತ್ತಾ, ಈ ವಾಗ್ವೈಖರಿ ಯಾರಿಗೆ ಮೆಚ್ಚುಗೆ ಆಗದಿರಲು ಸಾಧ್ಯ? ಇನ್ನು ರಾಜಕಾರಣಿಗಳಿಗೆ ಮಾತಾಡಲು ಬರಲೇಬೇಕು ಅನ್ನುವುದು ಒಂದು ಅಲಿಖಿತ ನಿಯಮ. ಕೊನೇಪಕ್ಷ ಮಾಧ್ಯಮದವರು ತರುಬಿದಾಗ ಅವರ ಪ್ರಶ್ನೆಗಳಿಗೆ ಉತ್ತರಿಸುವಷ್ಟಾದರೂ ಮಾತಾಳಿಗಳಾಗಿರಬೇಕಲ್ಲ? ವಿವಿಧ ರಾಜಕೀಯ ಪಕ್ಷಗಳವರು ಅವರ ಪಕ್ಷದ ಟ್ರೇಡ್ ಮಾರ್ಕ್ ಎನ್ನುವಂತೆ ಹಲವಾರು ಪದಗಳನ್ನು ಕಂಠಸ್ಥಗೊಳಿಸಿಕೊಂಡು ಸಂದರ್ಭಾನುಸಾರ ಅನ್ನುವುದಕ್ಕಿಂತಾ ಪ್ರತಿಯೊಂದು ಸಂದರ್ಭಗಳಲ್ಲೂ ಅವುಗಳ ನೆರವಿನಿಂದ ಸಂದರ್ಭ ನಿಭಾಯಿಸುತ್ತಾರೆನ್ನುವುದು ನನ್ನ ಅಜ್ಞಾನದ ತಪ್ಪು ತಿಳುವಳಿಕೆಯಿಂದಾದ ಹೇಳಿಕೆಯಾಗಿದ್ದರೆ ಸಂಬಂಧಿಸಿದವರು ದಯಮಾಡಿ ಕ್ಷಮಿಸಿ. ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ನನ್ನ ಉದ್ದೇಶವಲ್ಲ, ಅದು ಸಾಧುವೂ ಅಲ್ಲ. ಎಂತವರೂ ಮೆಚ್ಚಿ ಅಹುದಹುದೆಂದು ತಲೆದೂಗುವಂತೆ ಮಾತಾಡಬಲ್ಲ, ವಿಷಯದ ಕುರಿತು ತಳಸ್ಪರ್ಶಿ ಮಾಹಿತಿಯುಳ್ಳ, ರಾಜಕಾರಣಿಗಳು ಬೇಕಾದಷ್ಟು ಜನ ಇದ್ದಾರೆ.

ನನ್ನಲ್ಲಿನ ಸಭಾಕಂಪನದ ಕುರಿತು ನಿವೇದಿಸಿಕೊಳ್ಳಲು ಹೊರಟು ಎಲ್ಲಿಂದ ಎಲ್ಲಿಗೋ ಜಿಗಿದೆ, ಮತ್ತೊಮ್ಮೆ ಕ್ಷಮಿಸಿ. ಭಯಭೀತಿಗಳ ನಡುವೆಯೂ ಸೆಳೆತದ ಆಕರ್ಷಣೆಗೆ ಸಿಲುಕಿ ಕದ್ದುಮುಚ್ಚಿ ಸಾನ್ನಿಧ್ಯ ಸುಖಿಸುವ ಪ್ರೇಮಿಗಳಂತೆ ವೇದಿಕೆಯ ಈ ಆಕರ್ಷಣೆ ಕೂಡಾ ಅನ್ನಲೇ? ನನ್ನಂತವರ ಮಟ್ಟಿಗೆ ಈ ಹೋಲಿಕೆ ಸರಿಯಾಗುತ್ತಾ? ಈಗೆಲ್ಲಾ ಇಂತಾ ಭಯವನ್ನು ಹೋಗಲಾಡಿಸಲು, ನಮ್ಮ ವ್ಯಕ್ತಿತ್ವದ ದುರ್ಬಲತೆಯನ್ನು ತೆಗೆದು ಹಾಕಿ ತಿದ್ದಿ ತೀಡಲು, ತಜ್ಞರು ಮಾರ್ಗದರ್ಶನ ಮಾಡುವ ಅನೇಕ ಶಿಬಿರಗಳು ನಡೆಯುತ್ತಿರುತ್ತವೆಯೆಂಬ ವಿಷಯ ಕೇಳಿ ಗೊತ್ತಿದೆ. ನಿರ್ಭಯದಿಂದ ವೇದಿಕೆ ಏರಿ, ನೆರೆದ ಸಭಾಸದರು ದಂಗು ಬಡಿಯುವಂತೆ ನಿರರ್ಗಳವಾಗಿ ಭಾಷಣ ಕುಟ್ಟಬೇಕೆಂಬ ನನ್ನ ದಶಕಗಳ ಹಂಬಲ ಇಂತಹಾ ಮಾರ್ಗದರ್ಶನದಿಂದ ಈಡೇರಬಹುದಾ ಅಥವಾ ನಾನು ಭಾಷಣ ಬಿಗಿಯಲು ಕಲಿಯದಿದ್ದರೆ ಯಾವ ಸಾಮ್ರಾಜ್ಯವೂ ಸೂರೆ ಹೋಗುವುದಿಲ್ಲ ಎನ್ನುವ ಕಟು ಸತ್ಯವನ್ನು ಮನಸಾ ಒಪ್ಪಿಕೊಂಡು ನಾನು ಈಗ ಹೇಗಿದ್ದೇನೋ ಮುಂದೆಯೂ ಹಾಗೆಯೇ ಇರುವುದು ಒಳ್ಳೆಯದಾ ಎನ್ನುವ ದ್ವಂದ್ವದಿಂದ ನಾನಿನ್ನೂ ಹೊರಬಂದಿಲ್ಲ ಎನ್ನುವುದನ್ನು ತಮ್ಮ ಅವಗಾಹನೆಗೆ ತಂದು ಲೇಖನ ಮುಗಿಸುವ ಮುನ್ನ ಆರಂಭದಲ್ಲಿ ನೆನಪಿಗೆ ಬಂತೆಂದು ಪೀಠಿಕೆ ಹಾಕಿದ 'ಕನ್ನಡವೆನೆ ಕುಣಿದಾಡುವುದೆನ್ನೆದೆ'ಗೂ, ನನ್ನ ಸಭಾಕಂಪನದ ಕೊರೆತಕ್ಕೂ ಎಲ್ಲಿಂದೆಲ್ಲಿಯ ಸಂಬಂಧ ಎಂದು ಹೇಳಿಬಿಡುತ್ತೇನೆ. ಎಲ್ಲಿಂದಾದರೂ ವೇದಿಕೆಯನ್ನಲಂಕರಿಸಬೇಕೆಂಬ ಕರೆ ಬಂದರೆ ಆ ಪದ್ಯ ನನ್ನ ನೆನಪಿನಾಳದಿಂದ ಮೇಲಕ್ಕೆ ಚಿಮ್ಮಿ ಬರುತ್ತೆ ಮತ್ತು ಅಣಕುಗೀತೆಗಳಿಂದ ಪ್ರೇರಿತಗೊಂಡ ನನ್ನ ಮನಸ್ಸು ಅದಕ್ಕೆ ಪ್ರತಿಸ್ಪಂದಿಯಾಗಿ ಈ ಕೆಳಗಿನ ಪದ್ಯವನ್ನು ಹೊಸೆದಿಟ್ಟಿದೆ.

*ವೇದಿಕೆಯೆನೆ ಢವಗುಟ್ಟುವುದೆನ್ನೆದೆ*
*ವೇದಿಕೆಯೆನೆ ಮೈ ನಡುಗುವುದು,*
*ಕಾಣದ ಗುಮ್ಮನ ಕಾಣುವ ಮಗುವೊಲು*
*ಬೆಚ್ಚುತ ಮನ, ಮೈ ಬೆವರುವುದು..*

## ಆರೋಗ್ಯದ ಗುಟ್ಟು

ಪತ್ರಕರ್ತ: ನಿಮ್ಮ ಆರೋಗ್ಯದ ಗುಟ್ಟೇನು?
ಶತಾಯುಷಿ ಅಜ್ಜಿ : ಆಹಾರ ಜೀರ್ಣಿಸಿಕೊಳ್ಳಲು ಬೀರ್ ಕುಡಿಯುತ್ತೇನೆ. ನಾಲಗೆ ಕೆಟ್ಟಿದ್ದರೆ ವೈಟ್ ವೈನ್ ಸೇವಿಸುವೆ. ಬಿಪಿ ಇಳಿದರೆ ರೆಡ್ ವೈನ್. ಬಿಪಿ ಹೆಚ್ಚಾದರೆ ಸ್ಕಾಚ್. ನೆಗಡಿ ಆದರೆ ರಮ್.
ಪ : ನೀರು?
ಶ.ಅ : ಆರೋಗ್ಯ ಇದುವರೆಗೂ ಅಷ್ಟು ಕೆಟ್ಟಿಲ್ಲ.

# ನಾನೂ ಮತ್ತು ನನ್ನ ಇಷ್ಟಾನಿಷ್ಟಗಳು

- ಶ್ರೀನಾಥ್ ಭಲ್ಲೆ

ಭಾರತಕ್ಕೆ ಹೋಗಿದ್ದಾಗ ಹೀಗೇ ಯಾವುದೋ ಮಾತಿಗೆ ಯಾರೋ ಕೇಳಿದರು ''ಮಗನಿಗೆ ಚಿತ್ರಾನ್ನ ಅಂದ್ರೆ ಬಹಳ ಇಷ್ಟ ಅಲ್ವೇ?''... ನಾನೆಂದೆ ''ಹಾಗೇನಿಲ್ಲ, ಚಿಕ್ಕವನಾಗಿದ್ದಾಗ ಇಷ್ಟವಾಗಿತ್ತು. ಈಗ ಅದೇನೂ ಮೊದಲಿಷ್ಟ ಅನ್ನೋ ಹಾಗಿಲ್ಲ''... ಆಗ ಬಂದಿದ್ದು ನನ್ನ ಇಷ್ಟಾನಿಷ್ಟಗಳ ಬಗ್ಗೆ ಯೋಚನೆ.

**ಆಗ ಇಷ್ಟವಾಗಿದ್ದು ಈಗ ಇಷ್ಟವಾಗದು, ಹೀಗೇಕೆ?**

ಅಂದಿನ ದಿನಗಳಲ್ಲಿ ಎಷ್ಟೋ ವಿಚಾರಗಳು ಬಹಳ ಇಷ್ಟವಾಗುತ್ತಿತ್ತು. ಈಗ ಅವು ಸಹ್ಯವಾಗುತ್ತಿಲ್ಲ. ಹಾಗೇ, ಎಷ್ಟೋ ವಿಚಾರಗಳು ಆಗ ಇಷ್ಟವೇ ಆಗುತ್ತಿರಲಿಲ್ಲ, ಈಗ ಅವು ಚೆನ್ನಾಗಿವೆ ಅನ್ನಿಸುತ್ತಿದೆ. ಯಾಕಿರಬಹುದು?

ಬಹುಶಃ ನನಗೆ ಈಗ ಬುದ್ದಿ ಬಂದಿರಬಹುದು. ತುಲನೆ ಮಾಡಿ ನೋಡುವಷ್ಟು ಬುದ್ದಿಮಟ್ಟ ಏರಿರಬಹುದು. ಆದರೆ ಗ್ಯಾರಂಟಿ ಇಲ್ಲ!

ಮೊನ್ನೆ ನಡೆದ ಘಟನೆ ಹೇಳುತ್ತೇನೆ ಕೇಳಿ. ಒಂದು ಸಂಜೆ ಮಲ್ಲೇಶ್ವರದಲ್ಲಿ ಅಡ್ಡಾಡುತ್ತಿದ್ದೆ. ಇದ್ದಕ್ಕಿದ್ದ ಹಾಗೆ ಧುತ್ತೆಂದು ನನ್ನ ಹಳೆಯ ಕೊಲೀಗ್ ಸಿಗಬೇಕೇ? ''ಏನ್ರೀ ಇಲ್ಲಿ? ಎಲ್ ಹೊರಟು ಹೋಗಿದ್ರಿ ಇಷ್ಟು ದಿನ? ಆಸಾಮಿ ಅಡ್ರಸ್'ಗೇ ಇಲ್ಲ?''... ಪ್ರಶ್ನೆಗಳ ಸುರಿಮಳೆ! ಆಯ್ತು ಅಂತ ನನ್ನ ಬಗ್ಗೆ ಹೇಳಿದೆ. ನಾನು ಭವ್ಯ ಭಾರತ ದೇಶದಲ್ಲೇ ಇಲ್ಲ ಅನ್ನೋ ವಿಚಾರ ಅವರಿಗೆ ನಂಬುಗೆ ಆಗಲಿಲ್ಲ, ಯಾಕೆ ಅಂತ ನನಗೂ ಗೊತ್ತಾಗಲಿಲ್ಲ, ಇರಲಿ. ''ರ್ರೀ, ವಿಷಯಾ ಗೊತ್ತಾ? ಸುಮಾ'ಗೆ ಎರಡನೇ ಮಗು ಆಯ್ತು'' ಅಂದರು. ಸುಮಾ ಅನ್ನೋವ್ರು ಕೂಡ ನಮ್ಮ ಜೊತೆ ಕೆಲಸ ಮಾಡುತ್ತಿದ್ದವರು. ಈ ವಿಷಯ ಕೇಳಿದ್ದೇ ತಡ, ನಾನು ಅವರನ್ನು ''ಹೌದಾ? ಗುಡ್ ನ್ಯೂಸ್ ಕಣ್ರೀ... ಅಂದ ಹಾಗೆ ಮೊದಲನೇ ಮಗೂನೂ ಆಯ್ತಾ?'' ಅಂದೆ!

ನನ್ನನ್ನೇ ಕೆಕ್ಕರಿಸಿ ನೋಡಿದ ಅವರು ''ನಿಮಗೆ ಯಾವ ದೇಶದಲ್ಲಿದ್ದರೂ ಬುದ್ದಿ ಬರೋಲ್ಲ. ಹೋಗ್ರೀ'' ಅಂತ ನುಡಿದು ತಾವು ಹೊರಟೇ ಹೋದರು. ನಾನಿನ್ನೂ ಅಲ್ಲೇ ಇದ್ದೆ!!

ಈ ಘಟನೆಯಿಂದ ಸಾಬೀತಾಗಿದ್ದು ಏನೆಂದರೆ 'ನನಗೆ ಬುದ್ದಿ ಬಂದಿಲ್ಲ' ಅಂತ. ಹೋಗಲಿ 'ಅರಿವು' ಮೂಡಿರಬಹುದೇ?

ಅಲ್ಲಾ, ಬುದ್ಧಿನೇ ಬಂದಿಲ್ಲ ಅಂದ ಮೇಲೆ ಅರಿವು ಹೇಗೆ ಮೂಡೀತು. ಅದು ಸರಿ, ಬುದ್ಧಿಗೂ ಅರಿವಿಗೂ ಏನು ವ್ಯತ್ಯಾಸ? ವಿಜ್ಞಾನಿ ಐನ್‌ಸ್ಟೀನ್ ಬುದ್ಧಿವಂತ. ಭಗವಾನ್ ಬುದ್ಧ

**ಬುಕ್ಕು**

ಹಾಸ್ಯಪ್ರಿಯರಿಗೆ ಇಷ್ಟ
ಕಾಮಿಡಿ ಬುಕ್ಕು

ಕುದುರೆ ಪ್ರಿಯರಿಗೆ ಇಷ್ಟ
ರೇಸ್ ಬುಕ್ಕು

ಅಡಿಗೆ ಪ್ರಿಯರಿಗೆ ಇಷ್ಟ
ರೆಸಿಪಿ ಬುಕ್ಕು

ರಸಿಕರಿಗೆ ಇಷ್ಟ
ಪೋಲಿ ಬುಕ್ಕು

ಮನೆಯವಳಿಗೆ ಇಷ್ಟ
ಗಂಡನ ಚೆಕ್ ಬುಕ್ಕು

ಜ್ಞಾನಿ, ಅರಿವು ಗಳಿಸಿದಾತ. ಆದರೆ ಬುದ್ಧನನ್ನು ಬುದ್ಧಿವಂತ ಅಂತ ಎಲ್ಲೂ ಉಲ್ಲೇಖಿಸಿಲ್ಲ. ಅಂದರೇ, ಬುದ್ಧಿಯೇ ಬೇರೆ, ಅರಿವೇ ಬೇರೆ ಅಂತಾಯ್ತು ತಾನೇ? ಬಹುಶಃ ಒಂದು 'ಇಹ'ದ ವಿಚಾರ ಇನ್ನೊಂದು 'ಪರ'ದ ವಿಚಾರ ಇರಬಹುದು.

'ಇಹಪರ' ಅಂತ ಯೋಚನೆ ಬಂದು ಪರಪರ ಅಂತ ತಲೆ ಕೆರೆದುಕೊಳ್ಳೋಣ ಅನ್ನಿಸುತ್ತಿದೆ. ಬುದ್ಧಿ ಮತ್ತು ಅರಿವಿನ ನಡುವೆ ವ್ಯತ್ಯಾಸವೇ ಅರಿಯದವನಿಗೆ ಎರಡೂ ಮೂಡಿಲ್ಲ ಅನ್ನೋದು ಖರೆ. ಹಾಗಿದ್ದರೆ ನನಗೇನಾಗಿದೆ? ಯಾರನ್ನಾದರೂ ಕೇಳಬೇಕು... ಇರಲಿ..

ಆಗಲೇ ಇಷ್ಟಾನಿಷ್ಟಗಳ ಬಗ್ಗೆ ಹೇಳ್ತಿದ್ನಲ್ಲಾ, ಮೊದಲಿಗೆ ಅದರ ವಿಚಾರ ಬಗ್ಗೆ ಒಳ ಹೊಕ್ಕು ನೋಡೋಣವೇ?

ಮೊದಲು ಊಟದ ವಿಚಾರ. ಇದೇ ಒಂದು ಕಾದಂಬರಿಯಷ್ಟಾದರೆ ಬೈದುಕೊಳ್ಬೇಡಿ!

ಒಂದಾನೊಂದು ಕಾಲದಲ್ಲಿ... ಹೋಗ್ಲಿ ಬಿಡಿ... ಅಂದು ಅನ್ನ-ತಿಳಿ ಸಾರು ಬಿಟ್ಟರೆ ಬೇರೇನೂ ಇಷ್ಟವಾಗ್ತಿರಲಿಲ್ಲ. ಗೊಡ್ಡು ಸಾರು ನಿಜಕ್ಕೂ ಗೊಡ್ಡು ಅನ್ನಿಸುತ್ತಿತ್ತು. ಮೆಂತ್ಯ ಬೇಳೇ ಹುಳಿಯಲ್ಲಿ ಮೆಂತ್ಯ ಹುಡುಕಿ ಪಕ್ಕಕ್ಕೆ ಇಡೋದೇ ಒಂದು ದೊಡ್ಡ ಕೆಲಸ. ಅಪ್ಪಿತಪ್ಪಿ ಬಾಯಿಗೆ ಒಂದು ಸಿಕ್ಕಿತೋ, ಆ ಕಹಿಗೆ, ಹೊಟ್ಟೆಯಲ್ಲಿರೋದೆಲ್ಲ ಆಚೆ ಬರುತ್ತೇನೋ ಎಂಬ ಅನುಭವ. ಗೋರಿಕಾಯಿ ಹೆಸರು ಕೇಳಿದರೇ ಏನೋ ಒಂಥರಾ. ಬದನೇಕಾಯಿ, ಹೀರೇಕಾಯಿ ಪಿಚಪಿಚ. ಬೆಂಡೆಕಾಯಿ ಲೋಳೆ (ಹುರಿದಿದ್ದರೂ!) ಪಡವಲಕಾಯಿ ಏನೋ ಒಂಥರಾ ಟೇಸ್ಟು, ಇನ್ನು ಕೂಟು, ಅಯ್ಯಪ್ಪ! ಎಲೆಗೆ ಹಾಕಿದ್ರೆ, ಸಿಮೆಂಟ್ ಕಲಿಸಿ ಹಾಕಿದ್ರೇನೋ ಅನ್ನಿಸುತ್ತಿತ್ತು!

ಆಗೆಲ್ಲ ''ತರಕಾರೀ ಇಲ್ಲದೇ ಹುಳಿ ಮಾಡಬಾರದಾ?'' ಅನ್ನಿಸುತ್ತಿತ್ತು. ''ತಿಳಿ ಮಾತ್ರ ಸಾಕು'' ಅಂತ ಕೇಳಿ ಅಮ್ಮನ ಕೈಲಿ ಬೈಸಿ ಕೊಳ್ಳುತ್ತಿದ್ದೆ. ಒಂದು ವೇಳೆ ಅಪ್ಪಿತಪ್ಪಿ ಯಾವುದಾದರೂ ತರಕಾರಿ ಸೌಟು ದಾಟಿ ನನ್ನ ತಟ್ಟೆಗೆ ಬಂತೋ, ಅದನ್ನು ಹೆಕ್ಕಿ ಬದಿಗಿರಿಸುತ್ತಿದ್ದೆ. ಆಗ ''ಅದಕ್ಕೆ ದುಡ್ಡು ಕೊಟ್ಟಿದ್ದೀವಿ. ಸಂಪಾದನೆ ಮಾಡೋವ್ರಿಗೆ ಗೊತ್ತು ಆ ಕಷ್ಟ'' ಅಂತ ಬೈಗುಳ. ದುರದೃಷ್ಟವಶಾತ್, ಆ ಬೈಗುಳಗಳು ಅಂದು ಅರ್ಥವೇ ಆಗುತ್ತಿರಲಿಲ್ಲ! ನೋಡಿ, ಇಂದಿಗೂ ಅವು ಬೈಗುಳ ಅಲ್ಲ ಬುದ್ಧಿಗೆ ಹೇಳಿದ್ದು ಅನ್ನೋದೇ ಅರ್ಥವಾಗಿಲ್ಲ!!

ಸಾಕಾಯ್ತು... ಇನ್ನು ಮುಂದೆ ಹೀಗಾಗಲು ಬಿಡೋಲ್ಲ ಅಂತ ವಿಜಯದಶಮಿ ದಿನ ಮಹಾಸಂಕಲ್ಪ ಮಾಡುತ್ತಿದ್ದೆ. 'ಇಂದಿನಿಂದ ತರಕಾರಿ' ತಿನ್ನುತ್ತೇನೆ ಅಂತ. ಹಬ್ಬದಂದು

ಬೂದಗುಂಬಳದ ಹುಳಿಯೋ ಪಳಿದ್ಯವೋ ಚೆನ್ನಾಗಿ ಉಂಡು, ಏಕಾದಶಿಯ ತಿಂಡಿ ಮೆದ್ದು, ದ್ವಾದಶಿಯ ಸೊಪ್ಪಿನ ಹುಳಿ ತಿಂದಾದ ಮೇಲೆ ತ್ರಯೋದಶಿಯಿಂದ ಮತ್ತದೇ ಗೋಳು. ಯಾವ ತರಕಾರಿಯೂ ಸೇರವಲ್ದು. ಮುಂದಿನ ವಿಜಯದಶಮಿಗೆ ಮತ್ತದೇ ರೆಸಲ್ಯೂಶನ್!

ಇಂದಿನ ಪರಿಯೇ ಬೇರೆ. ಬೆರಳೆಣಿಕೆಯಷ್ಟು ತರಕಾರಿ ಬಿಟ್ಟರೆ ಮಿಕ್ಕೆಲ್ಲವೂ ಪ್ರಿಯ! ಕೆಲವು ತರಕಾರಿ ಅಂದರೆ ಮಹಾಪ್ರಾಣ, ಮತ್ತೆ ಕೆಲವು ಅಲ್ಪ ಪ್ರಾಣ.

ಇನ್ನು ತಿಂಡಿಯ ವಿಚಾರಕ್ಕೆ ಬಂದರೆ ನನ್ನೊಂದಿಗೆ ಬಹಳ ಮಂದಿ ಇದ್ದಾರೆ. ನನ್ನಂತೆಯೇ ಹಲವಾರು ಮಂದಿಗೆ 'ಉಪ್ಪಿಟ್ಟು' ಎಂದರೆ ದ್ವೇಷ ಅನ್ನೋದನ್ನು ನಾನು ಬಲ್ಲೆ. ಆದರೆ ಅದು ಅಂದು, ಇಂದಿನ ಕಥೆ ಅಲ್ಲ!

ಅಂದು ಗಟ್ಟಿ ಅವಲಕ್ಕಿಗೆ ತುರಿದ ಕೊಬ್ಬರಿ-ಎಣ್ಣೆ-ಚಟ್ನಿಪುಡಿ ಕಲಿಸಿ ನ್ಯೂಸ್ ಪೇಪರ್ ಹರಿದು ಅದರ ಮೇಲೆ ಹಾಕಿ ಕೊಟ್ಟರೆ ಸಾಕಿತ್ತು. ಆದರೆ ಇಂದು? ಅದು ಒಣ ಅನ್ನಿಸುತ್ತೆ, ಗಟ್ಟಿ ಅನ್ನಿಸುತ್ತೆ. ಯಾಕೋ?

ಊಟ ತಿಂಡಿ ವಿಚಾರ ಅದರೆ ಸಾಕೇ?ಕಾಫಿ ವಿಚಾರ ಬೇಡವೇ?

ಬೆಳಿಗ್ಗೆ ಆರರಿಂದ ರಾತ್ರಿ ಘಂಟೆ ಹತ್ತಾದರೂ ಸರಿ, ಕಾಫಿ ಯಾವ ಹೊತ್ತಲ್ಲೂ ಜೈ!! ಯಾರ ಮನೆಗೆ ಹೋದರೂ, ಮಾತನಾಡಿಸದೇ ಹೋದರೂ ಓಕೆ, ಆದರೆ ಕಾಫಿ ಸಮಾರಾಧನೆ ಆಗಲೇಬೇಕು. ಬೆಳಿಗ್ಗೆ ಕಾಫಿ, ಹೊಟ್ಟೆಗೆ ಬೀಳದೇ ಹೋದರೆ ತಲೆನೋವು ಬರುತ್ತಿತ್ತು. ಬೆಳಿಗ್ಗೆ ಆರಕ್ಕೆ ಒಮ್ಮೊಮ್ಮೆ 'ನೆನ್ನೆ ಕಾಫಿಪುಡಿ ತರೋದು ಮರೆತು ಹೋಯ್ತು'' ಅಂತೇನಾದ್ರೂ ಅಡುಗೆ ಮನೆಯಿಂದ ವಿಷಯ ಹೊರಬಂತೋ, ಅಷ್ಟೇ. ಬೆಳಿಗ್ಗೇ ಬೆಳಿಗ್ಗೇನೇ ಮೂಡ್ ಔಟು! ಕಂಡ ಕಂಡ ಅಂಗಡಿ ಸುತ್ತೋದು. ಎಲ್ಲೆಲ್ಲೂ ಬಡಿದ ಬಾಗಿಲುಗಳು. 'ಅದೇನು ಅಂಗಡಿ ಬಾಗಿಲು ಬಡ್ಕೊಂಡಿರ್ತಾರೋ ಏನೋ? ಇಪ್ಪತ್ತನಾಲ್ಕು ಘಂಟೆ ತೆರೆದಿರೋ ಅಂಗಡಿ ಇರಬಾರದಿತ್ತೇ?' ಅಂತ ಹುಡುಕೊಂಡು ಹೋಗಿ, ಯಾವುದೋ ಮೂಲೆಯಲ್ಲಿ ನಿದ್ದೆಗಣ್ಣಿನ ಕಾಕನ ಅಂಗಡಿಯಲ್ಲಿ ಅವನದೇ ಹೆಸರಿಲ್ಲದ ಬ್ರ್ಯಾಂಡ್ ಕಾಫಿ ಪುಡಿಕೊಳ್ಳೋದು. 'ಚಿಲ್ಲರೆ ಇಲ್ಲ' ಅಂತ ಮೊದಲೇ ಸೊಟ್ಟದ ಮೂತಿ ಇನ್ನೂ ಸೊಟ್ಟ ಮಾಡುತ್ತಿದ್ದ. ಹಾಗೂ ಹೀಗೂ ಪುಡಿ ತಂದು ಕಾಫಿ ಸಮಾರಾಧನೆ ಆಗುವಷ್ಟರಲ್ಲಿ ಘಂಟೆ ಏಳಾಗುತ್ತಿತ್ತು! ಅಂದಿನ ದಿನವೆಲ್ಲ ಭಯಂಕರ ತಳಮಳ. ಎಷ್ಟರ ಮಟ್ಟಿಗೆ ಅಂದರೆ ಒಂದು ಕಾಫಿ ಪುಡಿ ಅಂಗಡಿ ತೆರೆಯಬೇಕು ಎನ್ನುವಷ್ಟು!!

ಇಂದು? ಸದಾ ಪುಡಿ ಇರುತ್ತೆ. ಇಪ್ಪತ್ತನಾಲ್ಕು ಘಂಟೆ ತೆರೆದಿರೋ ಅಂಗಡಿಗಳು ಇವೆ. ಆದರೆ ಬೇಕಿಲ್ಲ. ಸಾಮಾನ್ಯವಾಗಿ, ಬೆಳಿಗ್ಗೆ ಒಂದು ಕಪ್ ಕಾಫಿ ಕುಡಿದರೆ ಮುಗೀತು. ಮತ್ತೆ ಮರುದಿನ ಬೆಳಗಿನವರೆಗೆ ಆ ದಿಕ್ಕಲ್ಲೂ ತಲೆ ಇಡೋಲ್ಲ!

ಊಟ ತಿಂಡಿಯ ಬಗ್ಗೆ ಮಾತು ಆಯ್ತು... ಮಾತೇನು? ದೊಡ್ಡ ಕಥೆಯೇ ಆಯ್ತು.

ಇನ್ನು ಮನರಂಜನೆಯತ್ತ ದೃಷ್ಟಿ ಹರಿಸೋಣ... ಹಾಡುಗಳು... ''ಮಲೆನಾಡ ಕಣಿವೆಯಲಿ ಹಸಿರು ಬನದಿಂದ ನಿನಗಾಗಿ ಗಿಳಿಯೊಂದ ನಾ ತರಲಾರೆ'' ಎಂಬ ಹಾಡು ನಂದನ ಕಾರ್ಯಕ್ರಮದಲ್ಲಿ ಮೂಡಿ ಬರುವಾಗ 'ಏನ್ ಹೀರೋ ಗುರೂ ನೀನು? ಹಾಡು

ಪೂರ ಅದಾಗಲ್ಲಾ, ಇದಾಗಲ್ಲಾ ಅಂದ್ರೆ ಇನ್ನು ಹೀರೋಯಿನ್'ಗೆ ಕೊಡೋದೇನು?'' ಅಂತ ನಗು ಬರುತ್ತಿತ್ತು. ನಿಜವಾಗಲೂ... ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ಹಾಡು ಕೇಳ್ತಿದ್ರೆ ಕೇಳ್ತಾ ಇರೋಣ ಅನ್ನಿಸುತ್ತೆ. ಎಂಥ ಅದ್ಭುತ ಕಲ್ಪನೆ, ಒಬ್ಬ ಶ್ರೀ ಸಾಮಾನ್ಯನ ಮಿತಿಯನ್ನ ಎಷ್ಟು ಚೆನ್ನಾಗಿ ಹೇಳಿದ್ದಾರೆ? ನಾನೂ ಒಂದು ಹಾಡು ಬರೆಯಬೇಕು ಎನ್ನಿಸುವಷ್ಟು ತಲ್ಲೀನನಾಗಿ ಹೋಗುತ್ತೇನೆ.

ಅಂದು ''ಹಮ್ಮುಬಿಮ್ಮು ಒಂದೂ ಇಲ್ಲ, ಹಾಡು ಹೃದಯ ತೆರೆದಿದೇ... ಹಾಡಿನಲ್ಲಿ ಲೀನವಾಗಲೆನ್ನ ಮನವು ಕಾದಿದೆ'' ಎಂದು ಕೇಳುವಾಗ, ಅಲ್ಲಾ, ಮಾನಸ ಸರೋವರ'ದಲ್ಲಿ ಇನ್ನೂ ಎಂತೆಂಥಾ ಹಾಡುಗಳಿವೆ, ಈ ಹಾಡನ್ನ ಯಾಕೆ ಮೆಚ್ಚುತ್ತಾರೆ ಅನ್ನೋದೇ ಅರ್ಥವಾಗ್ತಿರಲಿಲ್ಲ, ಈಚೆಗೆ ಹಲವು ವರ್ಷಗಳಿಂದ, ಅಂದರೆ, ಈ ಹಾಡಿನ ಆಳ ಅರಿತಾಗಿನಿಂದ, ಸಾಹಿತ್ಯಕ್ಕೆ ಮನಸೋತಿದ್ದೇನೆ.

ಈ ಮುಂಚೆ ಅರ್ಥಾತ್ ಬಾಲ್ಯದಲ್ಲಿ ಹೊಡೆದಾಟ, ಬಡಿದಾಟ, ರಿವೆಂಜ್ ಸಿನಿಮಾಗಳು ಅಂದರೆ ಬಲು ಇಷ್ಟ ನನಗೆ. ಬೆಟ್ಟ ತುದಿಯಿಂದ ಜಾರಿಕೊಂಡು ಬಂದ ಹೀರೋ, ಬೆಟ್ಟದ ಬುಡ ತಲುಪಿ, ವಿಲನ್'ನ ಜೀಪು ಜಿಗಿದು ಅವನಿಗೆ ಹೊಡೆದಾ ಅಂದರೆ... ಆಹಾ, ಮಜ!

ಅದೇ ಈಗಿನ ಸಿನಿಮಾಗಳಲ್ಲಿ ಅವನ್ನು ಕಂಡಾಗ ಎದ್ದು ಓಡಿ ಹೋಗೋಣ ಎನ್ನಿಸುತ್ತೆ. ಬಹುಶಃ ಅಂದಿನ ಚಾಕು-ಚೂರಿ ಈಗ ಉದ್ದವಾಗಿ ಲಾಂಗ್ ಆಗಿರುವುದಕ್ಕೆ ಇರಬೇಕು. ಹಾಗೇನೂ ಇಲ್ಲ... ಬಾಬು ಅವರ 'ಅಂತ' ಸಿನಿಮಾ ಇಷ್ಟಪಟ್ಟು ನೋಡಿದ್ದೆ. ಕ್ರೌರ್ಯ ಅನ್ನಿಸಲೇ ಇಲ್ಲ ಅಂದು. ಈಗಿನ ತೆರೆಯ ಮೇಲೆ ಕ್ರೂರತನವನ್ನು ಅತೀ ವೈಭವೀಕರಿಸಿ ತೋರುವುದರಿಂದ ಹಾಗೆ ಅನ್ನಿಸುತ್ತೋ, ಗೊತ್ತಿಲ್ಲ. ಒಟ್ಟಿನಲ್ಲಿ ರಕ್ತಪಾತ ತೋರುವ ಸಿನಿಮಾಗಳು ಸಲ್ಲದು.

ಇಷ್ಟೆಲ್ಲ ಹೇಳಿದೆ ಅಂದ ಮಾತ್ರಕ್ಕೆ ನನ್ನ ಇಡೀ ಜೀವನ ಉಲ್ಟ-ಪಲ್ಟಾ ಆಗಿದೆ ಅಂತಲ್ರೀ. ಅಂದಿಗೂ ಇಂದಿಗೂ ಹಾಸ್ಯ ಎಂದರೆ ಅಷ್ಟೇ ಇಷ್ಟ, ಪತ್ತೇದಾರಿ ಸಿನಿಮಾಗಳು, ಕಥೆಗಳು ಅಂದರೆ ಪ್ರಾಣ. ಸಂಸಾರ ಒಡೆಯುವ ಸಿನಿಮಾಗಳು ಎಂದಿಗೂ ಸಲ್ಲದು. ಸೊಪ್ಪಿನ ತೊವ್ವೆ, ಅಂಬಲಿ, ಮೆಣಸಿನ ಸಾರು ಹೀಗೆ ಎಲ್ಲವೂ ಅಂದಿಗೂ ಇಂದಿಗೂ ಪ್ರಿಯ. ಹಾಗೇನೇ ಶರಟು ಗರಿಗರಿಯಾಗಿ ಇಸ್ತ್ರಿಯಾಗಿರಬೇಕು, 'ಇನ್ ಆಗಿರಬೇಕು. ಮತ್ತು ಓದಿನ ವಿಚಾರ... ಹೋಗ್ಲಿ ಬಿಡಿ...

ಆಗ ಇಷ್ಟವಾಗದೇ ಇದ್ದದ್ದು ಈಗ ಹೇಗೆ ಸಲ್ಲುತ್ತಿದೆ? ಬುದ್ಧಿ ಬಂದಿಲ್ಲ! ಅರಿವು ಮೂಡಿಲ್ಲ!! ಬಹುಶಃ ಜವಾಬ್ದಾರಿ ಬಂದಿರಬೇಕು. ಅಮ್ಮ ಅಂದೆಂದೋ ಹೇಳಿದ ಮಾತು ಇತ್ತೀಚೆಗೆ ನೆನಪಾಯ್ತು ''ನಮ್ಮ ಮಕ್ಕಳು ಅಂತ ನಾವು ಹೇಳ್ತೀವಿ. ನೀವುಗಳು ತಿದ್ದಿಕೊಳ್ಳೋಲ್ಲ. ನಿಮ್ದೇ ಮಕ್ಕಳು ಅಂತ ಆದ ಮೇಲೆ ಎಲ್ಲ ಅರಿವಾಗುತ್ತೆ. ಅಷ್ಟು ಹೊತ್ತಿಗೆ ನಾವಿರೋಲ್ಲ'' ಅಂತ. ಓ! ಎಷ್ಟೆಷ್ಟೋ ವಿಚಾರಗಳು ಈಗ ಅರಿವಾಗ್ತಿದೆ.


ಒಂದಂತೂ ನಿಜ... ಇಲ್ಲಿ 'ನಾನು' ಬರೀ ನಾನೇ ಅಲ್ಲ, ಇಲ್ಲಿ ಹಲವಾರು ಮಂದಿ ನನ್ನಂತೆಯೇ ಇದ್ದೀರಿ.

ಜೀವನದಲ್ಲಿ ಕೆಲವೊಂದು ಸಾರಿ ಆಧ್ಯಾತ್ಮಿಕ ಆಲೋಚನೆಗಳು, ವಿವೇಚನಾಭರಿತ ಕುತೂಹಲಗಳು, ಪ್ರಕೃತಿಯ ನಿಗೂಢತೆಗಳು ಸುಮ್ಮನೆ ಹಾಗೇ ಪುಟಿದೆದ್ದು ನಿಂತು, ಹೂವು ಬಿರಿವಂತೆ, ಅನಾವರಣಗೊಳ್ಳುತ್ತದೆ. ಎಲ್ಲರಿಗೂ ಈ ಭಾಗ್ಯ ಬಾರದೇ ಎಲ್ಲೋ ನನ್ನಂತಹ ಆಯ್ದ ಮಂದಿಗೆ ಮಾತ್ರ ಬರಬಹುದು ಎಂದೂ ಅನ್ನಿಸಿದೆ.

'ಅಂದು ಸಲ್ಲದ್ದು ಇಂದು ಸಲ್ಲುತ್ತಿಹುದು. ಅಂದು ಇಷ್ಟವಾಗಿದ್ದು ಇಂದೇಕೋ ಸಹ್ಯವಾಗುತ್ತಿಲ್ಲ' ಎಂಬ ವಿಚಾರ ಧಾರೆಯನ್ನೇ ಒಬ್ಬ ಆತ್ಮೀಯರ ಮುಂದೆ ಸುರುವಿದೆ.

ಅವ ನಕ್ಕು ನುಡಿದ ''ಇದಕ್ಕೆ middle age crisis ಅಥವಾ ಮಧ್ಯವಯಸ್ಕರ ಮನೋವೇದನೆ'' ಅಂತಾರೆ ಅಂದ!

ಹೌದೇ????



# ಹೋಳಿರೆ ಹೋಳಿ...

**- ಭೂಮಿತಾಯಿ**

ಶಿವರಾತ್ರಿ ಅಮಾಸಿ ಕಳದ್ರ ಸಾಕು, ನಮ್ ಕಡೆ ಎಲ್ಲ, ಮನೀ ಕಾಯಾಕ ಹಿರಿಯರು ಸುರು ಮಾಡ್ತಾರ. ಅವರ ಕಣ್ಣಂಚಿನ ಅಡಿಯಿಂದನೇ ಸಣ್ಣೋರು ತುಡುಗ ಮಾಡಾಕ ಹೋಗ್ತಾರ. ತುಡುಗ ಮಾಡಾಕ ಹೋಗೋರು ಯಾರೂ ಕಳುವಿಲೆ ಹೋಗುದಿಲ್ಲ, ಹೇಳಿನೇ ಹೋಗ್ತಾರ. ತಮ್ಮ ಮನಿ ಮಕ್ಕಳು ಹೋಗೂದು ಸಂಪ್ರದಾಯ. ತಮ್ಮನಿಯಿಂದ ಕಳುವಾಗಬಾರದು ಅನ್ನೂದು ಎಚ್ಚರಿಕೆ. ಹೋಳಿ ಹುಣ್ಣಿವಿಗೆ ಕಾಮಣ್ಣನ ಸುಡಾಕ ಮನಿ ಗೇಟು, ಬಾಗಲಿಗೆ ಹಾಕೂ ಕದ, ಹೋಟೆಲ್ ಮುಂದಿನ ಬೆಂಚು, ಸಾಲಿ ಕೀಲಿ ಇರಲಿಲ್ಲಂದ್ರ ಮಾಸ್ತರ ಕುರ್ಚಿ, ಮೇಜು ಎಲ್ಲಾ ಕಾಮಣ್ಣನ ದಹನದೊಳಗ ಮುಕ್ತಿ ಕಾಣ್ತಾವ.

**ಹೋಳಿ ಎಂದರೆ ಅಗ್ನಿ ದಿವ್ಯವಾದ ಜ್ಯೋತಿ ಎಂಬ ನಂಬಿಕೆ ಇದೆ**

ಹೊರಿ ಸೌದಿ ತರಾಕ ರೊಕ್ಕ ಜಮಾಯಿಸುವ ಸಣ್ಣ ಮಕ್ಕಳ ಟೋಲಿ ಒಂದಕಡೆ ಆದ್ರ, ಮನಿ ಮನಿಗೆ ಬಂದು ಬಾಯಿಗೆ ಕೈ ಬಡ್ಕೊಂಡು, ಹೊಯ್ಕೊಂಡು ರೊಕ್ಕಾ ಕೇಳೂದು ಹದಿಹರೆಯದ ಗುಂಪು. ಅಣ್ಣಾರ, ವೈನೀರಿ ಅಂತ ಮಾತಾಡ್ಕೊಂತ ಚಂದಾ ಚೀಟಿ ಹರಿಯೋರು ದೊಡ್ಡೋರು. ಇಷ್ಟೆಲ್ಲ ಮಾಡಿನೂ ಕದೀದೆ ಕಟಗಿ ತಂದ್ರ ಪಾಪ ಕಳಿಯೂದಿಲ್ಲ ಅಂತ ಒಂದಷ್ಟು ಕದಿಯೂ ಕೆಲಸಾನೂ ಮಾಡ್ತಾರ.

ಬೀದರ್, ಗುಲ್ಬರ್ಗ ಕಡೆಯಂತೂ ಹೋಳಿಹುಣ್ಣಿವಿ ಇಡೀ ಮನಿಮಂದಿ ಆಚರಸೂ ಹಬ್ಬ, ಜಾತಿ? ಗೀತಿ, ಅಂತಸ್ತು ಎಲ್ಲಾ ಬಣ್ಣದಾಗ ಒಂದಾಗತಾವ.

ಒಂದೊಂದು ಓಣಿಯೊಳಗ ಒಬ್ಬೊಬ್ಬ ಕಾಮಣ್ಣನ್ನ ಕಾಮನ್ ಆಗಿ ಸುಡ್ತಾರ. ಅಲ್ಲಿ ಸುಡಾಕಂತ ಒಟ್ಟಿರುವ ಕಟಗಿಯೊಳಗ ಯಾರ ಮನಿ ಕುರ್ಚಿ, ಮೇಜು ಅದಾವ ಅನ್ನೂದು ನೋಡಿ, ಹೆಣ್ಮಕ್ಕಳು ಬಯ್ಕೊಂತ ಕುಂತ್ರ, ನೀವು ಬಯ್ದಿದ್ದು ನಮಗ ಕೇಳೇ ಇಲ್ಲ ಅನ್ನೂವಷ್ಟು ಜೋರೆ ಹುಡುಗೂರು ಹೊಯ್ಕಾತಾರ. ಅವತ್ತ ಬೈಯ್ಯಾಕ ಮಾತ್ರ ಯಾರ ಬಾಯಿಗೂ ಬೀಗ ಹಾಕೂಹಂಗಿಲ್ಲ, ಹಂಗಾಗಿ ಭಾಡ್ಯಾ, ಕಳ್ಳ, ಬದಮಾಸ... ನಿನ್ನ ಬಾಯಾಗ ಕಟಗಿ, ಮಣ್ಣು ಹಿಂಗ ಹೆಚ್ಚೆಚ್ಚು ಬೈಯ್ಗಳು ಹರದಾಡ್ತಾವ.

ಸಂಗ್ರಹಿಸಿದ್ದ ಪಟ್ಟಿಯೊಳಗ ಅವತ್ತು ಕಾಮನ ಸುಡೂ ಖುಷಿಯೊಳಗ ಬಿಸಿ ಸಮೋಸ, ಜೂಸು, ಹಣ್ಣುಗ್ಗಳ ವಿತರಣೆ ಆಗ್ತದ. ಧಗಧಗ ದಹಿಸುವ ಕಾಮಣ್ಣನ ಮುಂದ ಅಗಸರ ಕತ್ತಿ ತರ್ತಾರ. ಕತ್ತಿ ಮ್ಯಾಲೆ ಕುಂತ ಸವಾರಿ ಮಾಡ್ತಾಂವ ಅಗ್ದಿ ಶಾಣೆ ಆಗ್ತಾನ ಅನ್ನೂದೊಂದು ನಂಬಿಕಿ. ಹಿಂಗಾಗಿ ಅಗಸರ ಕತ್ತಿಗೆ ಅವೊತ್ತು ಡಿಮ್ಯಾಂಡ ಅಂದ್ರ ಅಷ್ಟಿಷ್ಟಲ್ಲ, ಎಲ್ಲರೂ ಬೆನ್ನು ಹತ್ತೋರ. ರಾತ್ರಿ ಹತ್ತು ಹತ್ತೂವರಿ ಸುಮಾರು ಸುರು ಆಗುವ ದಹನ ಕ್ರಿಯೆ, ಒಂದು ಹಂತಕ್ಕ

ಬರೂದ್ರೊಳಗ ರಾತ್ರಿ ಬಾರಾ ಕಳದಿರ್ತದ. ಬಂದೋರು ಹೆಣ್ಮಕ್ಕಳು ಸೌಕಾಶ ಮನೀಗೆ ಹೋಗಿ ರೊಟ್ಟಿ ಹಂಚು, ಹಂಚಿನಾಗೊಂದಿಷ್ಟು ಕಡ್ಲಿ ಕಾಳು, ಬಳ್ಳೊಳ್ಳಿ ಇಟ್ಗೊಂಡು ಬರ್ತಾರ. ಆ ನಿಗಿನಿಗಿ ಕೆಂಡದ ಮ್ಯಾಲೆ ಸುಡುವ ಕಡ್ಲಿ ತಿಂದ್ರ ಕಫಾ ಆಗೂದಿಲ್ಲ, ಬಳ್ಳೊಳ್ಳಿ ತಿಂದ್ರ ಕೆಮ್ಮಾಗೂದಿಲ್ಲ. ಚಳಿಗಾಲ ಕಳದು, ಬ್ಯಾಸಗಿ ಹೊಸ್ತಲ ದಾಟಿದ ಸಂಧಿಕಾಲದ ವ್ಯಾದಿ ಕಳಿಯೂ ಔಷಧಿ ಇವು ಅನ್ನೂದು ಅಲ್ಲಿಯವರ ನಂಬಿಕಿ.

ಕಡಲಿ ಹುರದು, ಕೊಬ್ಬರಿ ಸುಟ್ಟು, ಬಳ್ಳೊಳ್ಳಿ ತಿನ್ನೂ ಸಂಭ್ರಮ ಮುಗಿಯೂದ್ರೊಳಗ ಬೆಂಕಿ ತಣ್ಣಗಾಗಿರ್ತದ. ಸಣ್ಣ ಆಗಿರ್ತದ. ಹೊಗಿ ಮುಚ್ಚಿದ ನಿಗಿನಿಗಿ ಕೆಂಡಾನ ಅದೇ ಹಂಚಿನಾಗ ಹಾಕ್ಕೊಂಡು ಮನಿಗೆ ಬಂದ್ರ ಲೋಬಾನು ಹಾಕಿ ಮನಿಯೆಲ್ಲ ಘಮ್ ಅನ್ನಸ್ತಾರ. ಸುಟ್ಟ ಕಾಮನ ಹೊಗಿ ಮನಿಯೊಳಗ ಬರಬಾರದು. ಅಂಜಿ ಹೋಗಲಿ ಅನ್ನೂದು ಈ ಆಚರಣೆಯ ಹಿಂದಿರುವ ವಿಚಾರ. ಜೊತಿಗೆ ಸೊಳ್ಳಿ, ಜೊಂಡಗ್ಯಾನೂ ಕಡಿಮಿ ಆಗ್ತಾವ ಅನ್ನೂದು ಅವರ ನಂಬಿಕಿ. ಬೆಳಗಿನ ಜಾವ ನಿದ್ದಿಗೆ ಎಳಿಯೂ ಮೊದಲು ಯಾರ ಮನಿಯಿಂದ ಏನೇನು ಕಳುವಾದವು ಎಲ್ಲಾ ಮಾತುಕತೀನು ಈ ಕಟ್ಟಿಮ್ಯಾಲೆ ಬಂದಿರ್ತಾವ. ಮುಂಜೇನೆ ಕಾಮ ದಹನ ಮಾಡಿದೋರು ಬಣ್ಣಕ್ಕ ಹಳೀ ಅಂಗಿ ಚೊಣ್ಣ ಹಾಕ್ಕೊಂಡು ಹೊಂಟ್ರ, ಮನ್ಯಾಗಿನ ಹಳೀ ಬಕೀಟಿನ ತುಂಬಾ ಗುಲಾಲ್ ನೀರು ಮಾಡಿ ಗೇಟಿನ ಹಿಂದ ಕುಂದರ್ತಾವ ಮಕ್ಕಳು. ಪಿಚ್ಕಾರಿ ತುಂಬ ಬಣ್ಣದ ನೀರು ತುಂಬ್ಕೊಂಡು ಹೋಗೋರಿಗೆ ಬರೋರಿಗೆ ಹೋಳಿ ಹೈ... ಅಂತ ಚೀರ್? ಯಾಡಿ ಬಣ್ಣಸಿಡಸೂ ಖುಷಿನೇ ಬ್ಯಾರೆ. ಇವರ ಸಂತೋಷಕ್ಕ ಬೀದಿಗೆ ಹೋಗೋರು, ಕೈಯ್ಯಾಗ ಒಂದಷ್ಟು ಬಣ್ಣ ಹಾಕ್ಕೊಂಡು ಮಾರೀಗೆಲ್ಲ ಬಳದು ಹೋದ್ರ ಇವಕೂ ಖುಷಿ, ಅವರಿಗೂ ಹುಮ್ಮಸ್ಸು.

ಹೆಣ್ಮಕ್ಕಳು ಹೊಯ್ಕೊಂಡು ಬಾಯಿಗೆ ಹೋಳಿಗಿ ಅಂತ ಹೋಳಗಿ ತಯಾರಿ ಮಾಡ್ತಾರ. ಭಜಿ ಕರೀತಾರ. ದಣಿವಾದೋರು ಬಂದ್ರ ತಿನ್ನಾಕಂತ ದ್ರಾಕ್ಷಿ ತೊಳದು, ಕರಬೂಜು ಹೆಚ್ಚಿ ಇಡ್ತಾರ. ಭಾಂಗ್ ಮಾಡೋರು, ಥಂಡಾಯ್ ಮಾಡೋರು, ಲಸ್ಸಿ ಮಾರೋರು, ಮಜ್ಜಿಗಿ ಕುಡಸೋರು ಒಟ್ನಾಗ ಮೈಮನಸಿನ ದಣಿವು ಕಳ್ಕೊಂತು ಒಂದು ಭರ್ಜರಿ ನಿದ್ದಿಗೆ ಸಜ್ಜಾಗತಾರ. ಮದ್ಯಾಹ್ನ ಅಡುಗಿ ಮಾಡಿಟ್ಟ ಮ್ಯಾಲೆ ಓಣ್ಯಾನ ಹೆಣ್ಮಕ್ಕಳು ಸೈತ ಬಣ್ಣಾ ಆಡೂದ್ರಿಂದ ಹಿಂದುಳಿಯೂದಿಲ್ಲ, ಬಕೀಟ್‌ಗಟ್ಲೆ ನೀರು ಸುರಕೊಂಡು, ಬಣ್ಣದೊಳಗ ತಮ್ಮ ಬಣ್ಣಾನ ಮರೆತು ಬೊಬ್ಬಿ ಹಾಕ್ತಾರ. ಸಣ್ಣಗೆ ಮಾತಾಡಬೇಕು. ಸವಕಾಶ ಮಾತಾಡಬೇಕು ಅವೆಲ್ಲ ಅವತ್ತ ಬಣ್ಣಕ್ಕ ತೂರಿ ಬಿಂದಾಸ್ ಇರ್ತಾರ.


ಅವೊತ್ತು ಯಾರು ಏನು ಮಾಡಿದ್ರೂ ಮಾಫ್. ಹುಡುಗೂರು ಉಡಾಳತನಾ ಮಾಡಿದ್ರೂ... ಯಾಕಲೆ ಮಗನ, ಹುಚ್ ಭಾಡ್ಯಾ... ಮಷ್ಕಿರಿ ಮಾಡ್ತಿ ಅನ್ಕೊಂತ ಕಣ್ಣು ಹಿಗ್ಗಿಸಿ, ಹುಬ್ಬು ಹಾರಿಸಿ ಸಲಗೀಲೆ ಬೈದಾಗ ಹುಡುಗನ ಕಾಮ ಅಲ್ಲೇ ಆರಿರ್ತದ.

ಮುಸ್ಲಿಂ ಬಾಂಧವರು ಮಾತ್ರ ಅವೊತ್ತು ಬಿಳೀ ಅರವಿ ಹಾಕ್ಕೊಂಡಿರ್ತಾರ. ಅವರಿಗೆ ನೋಡನ, ಬಣ್ಣದ ಕೈ ಹಿಂದಕ ಸರೀತದ. ಆದ್ರ ಅವರು ಮುಂದ ಬಂದು 'ಹೋಳಿ

ಮುಬಾರಕ್' ಹೇಳಿನ ಹೆಜ್ಜಿ ಹಾಕ್ತಾರ. ಈ ಗೌರವ, ಸೌಹಾರ್ದದ ಬಣ್ಣ ಮಾತ್ರ ಹೋಳಿ ಇರಲಿ ಬಿಡಲಿ ಬಾಳ ವರ್ಷಗಳಿಂದ ಅಲ್ಲಿ ಕಾಪಾಡ್ಕೊಂಡು ಬಂದಾರ.

ಕಾಮನನ್ನ ದಹಿಸೂದು ಅಂದ್ರ ಬರೇ ಕದ್ದ ಕಟಗಿ ಸುಡೂದಲ್ಲ. ನಮ್ಮೊಳಗಿನ ಕಳುವಿನ ಆಶಾ ಸುಡೂದು. ನಮ್ಮದಲ್ಲದ ವಸ್ತುವನ್ನು ಬಯಸಬಾರದು ಅನ್ನೂದೊಂದು ಎಚ್ಚರದ ಬೆಂಕಿ ನಮ್ಮೊಳಗ ಹಚ್ಕೊಳ್ಳೂದು. ಕೆಟ್ಟ ಕೆಟ್ಟ ಬೈಯ್ಗಳ ಬೈದು, ಮನಸಿನೊಳಗ ಹೊಗಿಕಟ್ಟಿದ ಸಿಟ್ಟು, ಅದುಮಿಟ್ಟ ಅಸಹ್ಯತನ, ಬಚ್ಚಿಟ್ಟ ರೋಷ ಎಲ್ಲವೂ ಆ ಬೆಂಕಿಯೊಳಗ ಸುಡ್ಲಿ ಅಂತನ ಇರುವ ಆಚರಣೆಗಳು. ನಮ್ಮೊಳಗಿನ ಎಲ್ಲ ಒಳಗುದಿನೂ ಹೊರಹೋಗಲಿ ಅನ್ನೂದು ಆಶಯ.

ಥಂಡಾಯ್ ಹೆಸರನಾಗ ಮಾಡುವ ಪಾನಕದೊಳಗ ಒಂದೀಟ ಮಾದಕ ದ್ರವ್ಯ ಹಾಕಿರ್ತಾರ. ಅದನ್ನ ಕುಡದು ಮಲಗೂ ಮುನ್ನ ದೇವರಿಗೆ ನಮಸ್ಕಾರ ಮಾಡಸೂದು ಪದ್ಧತಿ. ದೇವರ ಗುಂಗು ನಮ್ಮ ಒಳಹೊರಗೂ ಇರಲಿ ಅನ್ನೂದು ಆಚರಣೆ. ಮಜಾ ಅಂದ್ರ ಅವೊತ್ತು ಮೋಜಿಗೆ ಕುಡಿಯೋರು ಮುಂದ ಅದನ್ನೇ ಚಟಾ ಮಾಡ್ಕೊಂತಾರ. ಥಂಡಾಯ್ ಹೋಗಿ ಹಾಟ್ ಡ್ರಿಂಕ್ಸ್ ಆಗ್ತಾವ. ಕಾಮನ ಸುಡುವ ಬದಲು ತಮ್ಮನ್ನೇ ಸುಟ್ಕೊಂತಾರ. ಬೈಗಳ ದಿನಾಲೂ ಬಳಸ್ತಾರ. ಮನಸಿನೊಳಗಣ ತಮ, ಹೋಳಿ ಬೆಂಕಿಯೊಳಗ ಸುಟ್ಟು ಬೂದಿಯಾಗಲಿ. ಆ ಬೂದಿ ಲವಲೇಶವೂ ಇರದಹಂಗ ತೂರಿ ಹೋಗಲಿ. ಮನಿಗೆ ಬರೂದಾದ್ರ ಆ ಬೆಂಕಿಯೊಳಗ ಸುಟ್ಟು ಅಗ್ನಿದಿವ್ಯವಾದ ಜ್ಯೋತಿ ಬರಲಿ ಅನ್ನೂದೇ ಹೋಳಿ.



# ಚೌಕಿನ ಪ್ರತಿಮೆಗಳೊಂದಿಗೆ..

**- ಗುಂಡುರಾವ್ ದೇಸಾಯಿ**

ತಡರಾತ್ರಿಯಲ್ಲಿ ಊರಿಗೆ ಕಾಲಿಟ್ಟಾಗ ನಿಶಬ್ದ ಮೌನ ಎಲ್ಲೆಲ್ಲೂ ಆವರಿಸಿತ್ತು. ಅಂದು ವಿಚಿತ್ರಭಾವ ನನ್ನನ್ನು ಕೆರಳಿಸಿತ್ತು, ಅಪಶಕುನದ ಲಕ್ಷಣಗಳು ಕಾಡತೊಡಗಿತು. ಏನೋ ಘಟಿಸಬಹುದಾದ ವಿದ್ಯಮಾನಗಳು ಜರುಗತ್ತಿರಬಹುದೆಂಬ ಆತಂಕ ಕಾಡತೊಡಗಿತು. ನಾನು ಅವಸರದಲ್ಲಿ ಬೇಗ ಮನೆ ಸೇರಿದರಾಯಿತು ಎಂದು ಮುನ್ನಡೆದಾಗ ನಾಯಿ ಬೊಗಳಿದತ್ತ ದೃಷ್ಟಿ ಹರಿಸಲಾಗಿ ಅಲ್ಲಿಯ ಪ್ರತಿಮೆಯೊಂದು ಮಾಯವಾಗಿತ್ತು, ಇತ್ತಿಚಿಗೆ ಎಲ್ಲೆಡೆ ಸಿಸಿ ಕ್ಯಾಮರಗಳನ್ನು ಅಳವಡಿಸಿರುವುದರಿಂದ ಯಾವುದೋ ದುಷ್ಕರ್ಮಿಗಳು ಮಾಡಿದ ಕೃತ್ಯಕ್ಕೆ ನಾನು ಬಲಿಯಾಗಬಹುದೆಂದು ಮುಖ ಮುಚ್ಚಿಕೊಂಡು ಕಾಲ್ಕಿತ್ತೆ. ಮುಂದಿನ ಚೌಕಿನಲ್ಲೂ ಇದೆ ಸ್ಥಿತಿ! ಅಲ್ಲಿಯ ಸಮಾಜೋದ್ಧಾರಕರ ಪ್ರತಿಮೆಯೂ ಅನಾಮತ್ತಾಗಿ ಮಾಯವಾಗಿತ್ತು, ನನ್ನ ದುಗುಡ ಹೆಚ್ಚುತ್ತಾ ಹೋಯಿತೇ ಹೊರತು ಕಡಿಮೆಯಾಗಲಿಲ್ಲ, ಮುಂದೆ ಎರಡು ಮೂರು ಚೌಕುಗಳನ್ನು ದಾಟಿದಾಗಲು ಇದೆ ಸ್ಥಿತಿ! ಅಲ್ಲಿಯ ಪ್ರತಿಮೆಗಳು ಎತ್ತಂಗಡಿಯಾಗಿವೆ? ಕೈಕಾಲು ನಡುಗುತ್ತ ಮುಂದೆ ಚಲಿಸದಾದವು. ಸಂದಿಗ್ಧ ಸ್ಥಿತಿಯಲ್ಲಿ ತೊಳಲಾಡುತ್ತಿದ್ದ ನನಗೆ ಸ್ವಲ್ಪ ವಿಶ್ರಾಂತಿ ಬಯಸಿ ಗಾರ್ಡನ್ ಪಕ್ಕದಲ್ಲಿದ್ದ ಬೆಂಚಿನಲ್ಲಿ ಆಸೀನನಾಗಿ ನಾಳೆ ದಿನ ಘಟಿಸಬಹುದಾದ ಘಟನೆಗಳ ಬಗ್ಗೆ ಆಲೋಚಿಸತೊಡಗಿದೆ. ಅಷ್ಟರಲ್ಲಿ ಉದ್ಯಾನವನದ ಕಂಪೌಂಡ್ ಆಚೆಯಿಂದ ಯಾರೋ ಮಾತಾಡುತ್ತಿರುವ ಸದ್ದು ಕೇಳಿ ಬಂತು. ಕುತೂಹಲದಿಂದ ಅತ್ತ ಚಿತ್ತೈಸಿದೆ. ಆಶ್ಚರ್ಯ ಊರಿನ ಚೌಕದಲ್ಲಿನ ಪ್ರತಿಮೆಗಳು ಒಂದೆಡೆ ಸೇರಿವೆ? ಯಾರೋ ಎತ್ತಿ ಹಾಕಿಕೊಂಡು ಬಂದು ಇಲ್ಲಿ ಜಮಾಯಿಸಿರಬೇಕೆಂದು ತಿಳಿದು ಹತ್ತಿರಕ್ಕೆ ಹೋದೆ "ಬನ್ನಿ ದೇಸಾಯಿಜಿ ಬನ್ನಿ" ಅಂದ್ವು. ನಾನು ಮತ್ತಷ್ಟು ಆದಿರಿದೆ, ಆ ಕಂಚಿನ, ಕಲ್ಲಿನ ಮೂರ್ತಿಗಳು ಮಾತಾಡಿದ್ದನ್ನು ನೋಡಿ ಪ್ರಾಣ ಹಾರೋದಷ್ಟ ಬಾಕಿ ಉಳದಿತ್ತು. 'ಹಾಗೆಲ್ಲ ಗಾಬರಿಗೊಳ್ಳಬೇಡಿ; ಒಂದ ಕಡೆ ನಿಂತು, ಕುಳಿತು ಬ್ಯಾಸರ ಬಂದಿತ್ತು, ಹಾಂಗ ವಾಕಿಂಗ್ ಬಂದಿದ್ದೀವಿ' ಅಂತು ಅದರಲ್ಲಿ ಒಂದು ಪ್ರತಿಮೆ. 'ಜೊತಿಗೆ ನಿಮ್ಮ ಮಂದಿ ಮಾಡೋ ಲಫಂಗತನ ನೋಡಿ ಬೇಜಾರಾಗಿ ಒಂದು ನಿರ್ಧಾರ ತೆಗೆದುಕೊಳ್ಳೋಣ ಅಂತ ಚರ್ಚೆ ಮಾಡಕ ಕೂತಿವಿ, ನೀನು ಬಂದದ್ದು ಚಲೋ ಆತು ಬನ್ನಿ' ಅಂತು ಮತ್ತೊಂದು, ಇದು ವಾಸ್ತವನ ಕನಸಾ ಅಂತ ನನ್ನ ಕಪಾಳಕ್ಕ ಹೊಡಕೊಂಡು ಖಾತ್ರಿಪಡಿಸಿಕೊಂಡೆ. 'ಅಯ್ಯೋ ಯಾಕ ಹಾಂಗ ಕಪಾಳಕ್ಕ ಬಡಕೊಂಡು ಹಿಂಸಿಸಿಕೊಂತಿರಿ, ಕನಸಲ್ಲ ನಿಜನ ಬನ್ನಿ' ಎಂದು

**ಊರಿನ ಚೌಕದಲ್ಲಿರುವ ಪ್ರತಿಮೆಗಳು ಒಂದೆಡೆ ಚರ್ಚೆಗೆ ತೊಡಗಿದರೆ ಹೇಗಿರಬಹುದು?**

ಮಗದೊಂದು. ನಾನು ಸುಧಾರಿಸಿಕೊಂಡು 'ಇದು ಸಾಧ್ಯನ!' ಎಂದು ದಿಗಿಲು ಗೊಂಡವನಾಗಿ ಕುಳಿತೆ.

''ನಿಜಕ್ಕೂ ನಮಗ ದುಃಖ ಆಗಾಕತಾದ ದೇಶದ ಪರಿಸ್ಥಿತಿ ಕಂಡು. ಏನೆಗ್ಯಾದ ಈ ಮಂದಿಗೆ. ನಾವು ಕಂಡ ಕನಸು ಎಂತಹದು? ಆಗುತ್ತಿರುವುದೇನು? ಸ್ವಾಂತಂತ್ರ ಸಿಕ್ಕಿದ್ದು ಈ ಸ್ವೇಚ್ಛಾಚಾರಕ್ಕೆ ಕಾರಣವಾಯಿತೇನೋ? ನಮ್ಮ ವ್ಯರ್ಥ ಪ್ರಯತ್ನ ನೋಡಿದ್ರೆ, ದೇಶ ಪಾರತಂತ್ರ್ಯದಲ್ಲಿ ಇದ್ದಿದ್ದರೆ ಚೆನ್ನಾಗಿರತಿತ್ತು ಅನಸ್ತಿದೆ''

**ಬದಲಾವಣೆ**

ಮೊದಲು ಸರಳವಾಗಿದ್ದರೂ
ಬದಲಾಗುವರು ಕೆಲವರು
ಮದುವೆಯಾದ ನಂತರ
ಪ್ರೀತಿಸುವಾಗ ಬರೀ
ಮುತ್ತು ಸಾಕೆಂದವರು
ಆಮೇಲೆ ಕೇಳುವರು ಬಂಗಾರ!



– ಎಚ್. ಡುಂಡಿರಾಜ್

''ನಾವು ನೀಡಿದ ಸಂದೇಶವೇನು? ಇಲ್ಲಿ ಅವುಗಳೆಲ್ಲ ಬುಡಮೇಲಾಗುತಿರುವುದೇನು! ಏನಾಗಿದೆ ಈ ಜನಗಳಿಗೆ, ಎಲ್ಲಿ ಹೋಯಿತು ನಮ್ಮ ತತ್ವಾದರ್ಶ ಪಾಲಿಸುವ ಆ ಮಂದಿ......?''

''ಜಾತ್ಯಾತೀತ ರಾಷ್ಟ್ರ ಕನಸು ಕಂಡ ನನಗೆ ಇವತ್ತು ಅದರ ಅರ್ಥವೇ ಬುಡಮೇಲಾಗುತ್ತಿರುವಂತೆ ತೋರುತ್ತದೆ. ಇದೆಂತ ಅನ್ಯಾಯ, ಮಾನವ ಜಾತಿ ತಾನೊಂದೆ ಕುಲಂ ಅಂತ ಹೇಳಿದ ಮಾತೇನಾತು''

''ದೇಶದ ಬಗ್ಗೆ ಮಾತನಾಡುವುದೆ ಕೋಮುವಾದಿ ಭಾವನೆಯೆಂದು ಬಗೆಯುತ್ತಾ, ತಿಳುವಳಿ ಹೇಳಬೇಕಾದವರು, ಭದ್ರತೆಗೆ ದಕ್ಕೆ ಬಂದಾಗ ಧ್ವನಿ ಎತ್ತಬೇಕಾದವರು ತುಚ್ಛೀಕರಣದಲ್ಲಿ ತೊಡಗಿದ್ದಾರಲ್ಲ ಏನಾಗಿದೆ ಇವರ ಬುದ್ಧಿಗೆ!''

''ಹೆಣ್ಣಿನ ಮೇಲೆ ಇಷ್ಟೆಲ್ಲ ದೌರ್ಜನ್ಯ ಅತ್ಯಾಚಾರ ನಡಿಯುತ್ತಿದ್ದರೂ ಸರಕಾರ ಅವರಿಗೆ ರಕ್ಷಣೆ ನೀಡುತ್ತಿಲ್ಲವಲ್ಲ, ಮಾಧ್ಯಮಗಳೂ ಅಶ್ಲೀಲತೆ, ಅನೈತಿಕತೆಯ ಪ್ರದರ್ಶನವನ್ನೆ ಬಂಡವಾಳ ಮಾಡಿಕೊಂಡಿದ್ದರೂ ಕಾನೂನು ರೂಪಿಸಬೇಕಾದವರು ಧೃತರಾಷ್ಟ್ರನಂತೆ ಕಣ್ಮುಚ್ಚಿ ಕುಳಿತಿರುವರಲ್ಲ, ನನಗೆ ಶಕ್ತಿ ಇದ್ದರೆ........ ''

''ಹೆಣ್ಣು, ಹೊನ್ನು, ಮಣ್ಣು ಮಾಯೆ ಬೆಂಬತ್ತದಿರಿ, ಕೆರೆಯ ನೀರನು ಕೆರೆಗೆ ಚೆಲ್ಲಿ, ಆಸೆಯನ್ನು ಧಿಕ್ಕರಿಸಿ, ಸಮಾನತೆಯಿಂದ ಪ್ರಾಮಾಣಿಕ ಬದುಕು ಸಾಗಿಸಿ ಎಂದು ಹೇಳಿದ್ದೆಲ್ಲ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದ ಹಾಗಾಯಿತು?''

ಹೀಗೆ ಒಂದೊಂದು ಪ್ರತಿಮೆ ಅವಲತ್ತುಕೊಂಡವು.

''ಮಹನೀಯರೇ ನೀವು ಹೇಳಿದ ಎಲ್ಲಾ ವಿಚಾರಗಳು ಅಕ್ಷರಶಃ ಸತ್ಯ, ಜನರಲ್ಲಿ ಸ್ವಾರ್ಥಪರತೆ ಹೆಚ್ಚುತ್ತಿದೆ, ರಾಜಕಾರಣ ಎಂಬುದು ಉದ್ಯಮವಾಗಿ ಬಿಟ್ಟಿದೆ. ಒಂದು ಸಾರಿ ಜನಪ್ರತಿನಿಯಾದರೆ ಐದಾರು ತಲೆಮಾರು ತಿನ್ನುವಷ್ಟು ಆಸ್ತಿ ಸಂಪಾದಿಸಬಹುದಾಗಿದೆ.

ಹಾಗಾಗಿ ಆಡಳಿತದಲ್ಲೂ ನಿಯಂತ್ರಣ ಸಾಧ್ಯವಾಗದೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಜನರು ಅವನು ಭ್ರಷ್ಟ ಹಾಗೆ ಹೀಗೆ ಎಂದು ಏನೆಲ್ಲ ಮಾತಾಡಿಕೊಂಡರೂ ಎದುರಿಗೆ ಬಂದರೆ ಹಲ್ಲುಕ್ಕಿರಿಯುತ್ತ ಸಲಾಮ ಹೊಡೆದು ಸನ್ಮಾನ ಮಾಡಿ ಕಳುಹಿಸುತ್ತಾರೆ. ಪ್ರತಿಭಟನಾ ಗುಣ ನಿಂತು ಹೋಗಿದೆ. ಸಂಘಟನೆಗಳು ಇವೆಯಾದರೂ ಅವುಗಳ ಹೋರಾಟದ ಸ್ವರೂಪ ಜನರಲ್ಲಿ ಕ್ರಾಂತಿಯನ್ನು ಹೊತ್ತಿಸುವಂತಿಲ್ಲ. ಬುದ್ಧಿಜೀವಿಗಳಂತೂ ಮುತ್ಸದ್ದಿಗಳಾಗದೇ ಜಲಸಿಜೀವಿಗಳಾಗಿದ್ದಾರೆ. ರಾಜಕಾರಣಿಗಳು ಓಟ್ಯೆಕೆಗಾಗಿ ಧರ್ಮ ಧರ್ಮಗಳ ಮಧ್ಯೆ ದ್ವೇಷ ಬಿತ್ತುತ್ತಿದ್ದಾರೆ. ಶಾಂತಿ–ಸ್ನೇಹದಿಂದ ಪ್ರಜೆಗಳಿದ್ದರೆ ತಲೆಗಳಲ್ಲಿ ದೂರಾಲೋಚನೆಗಳು ಹುಟ್ಟುತ್ತವೆ ಎಂಬುದು ಅವರಲ್ಲಿಯ ಚಿಂತೆ. ಹಾಗಾಗಿ ಸುಮ್ಮನಿರರು. ಇನ್ನೂ ಹೆಣ್ಣಿನ ಶೋಷಣೆಗೆ ಕೊನೆ ಇಲ್ಲ. ಲೈಂಗಿಕ ದೌರ್ಜನ್ಯ ಮೀತಿ ಮೀರುತ್ತಿದೆ. ಇವಕ್ಕೆಲ್ಲ ಕಾರಣವಾಗುವ ವೆಬ್ಗಳನ್ನ, ಮಾಧ್ಯಮಗಳನ್ನು ಮುಂದುವರೆದ ದೇಶಗಳು ನಿಷೇಧಿಸಿದ್ದರೂ ನಮ್ಮವರು ಮನಸ್ಸು ಮಾಡುತ್ತಿಲ್ಲ'' ಎಂದು ಮುಂತಾಗಿ ಒದರಿದೆ

''ನಿಜ ನೀನು ಹೇಳಿದ್ದು ಖರೆ, ನೀವು ಏಕೆ ಇದರ ವಿರುದ್ಧ ಹೋರಾಡಬಾರದು ದೇಸಾಯಿ''

''ನಾನು ಹುಲುಮಾನವ, ಗಂಗಾನದಿ ಕೊಳಕಾಗುತ್ತಿದೆ ಎಂದು ಉಪವಾಸ ಕುಳಿತಿದ್ದ ಸಂತನೊಬ್ಬನ ಕೂಗ ಕೇಳದೆ ಹಾಗೆ ಬಿಟ್ಟರು, ಉಪವಾಸದಿಂದ ಗಂಗೆ ಪಾದ ಸೇರಿದ ಹೊರತು ವ್ಯವಸ್ಥೆ ಮಾತಾಡಿಸಲಿಲ್ಲ, ನಿಮ್ಮಾಂಶ ಸಂಭೂತರಾದ ಅಣ್ಣಾ ಹಜಾರೆಯವರು ಏನೆಲ್ಲ ಎಕ್ರಲಾಡಿದರು, ಅವರ ಹೋರಾಟವು ಠುಸ್ಸಾಯಿತು, ಅಂದ ಮೇಲೆ ಯಾರು ಕೇಳ್ತಾರ ಸ್ವಾಮಿ ಬೀದಿ ಹೆಣ ಮಾಡ್ತಾರೆ. ಗಾಳಿ ಬಂದಾಗ ತೂರಿಕೋಬೇಕು, ಎದುರು ಈಜಬಾರದು ಅಂತ ತಾವೇ ಹೇಳಿಲ್ಲವೆ?''

''ಏನಯ್ಯಾ ಇದು ಹಿಂಗಾದ್ರೆ, ನಿಜಕ್ಕೂ ಇದು ಅಸಹನೀಯ, ಮೊನ್ನೆ ಯಾವುನೋ ಕೋಟಿಗಟ್ಟಲೇ ಹಗರಣ ಮಾಡಿದ ಖದಿಮ ನನ್ನ ಜನ್ಮ ದಿನದಂದು ಬಂದು ಹಾರ ಹಾಕಿ ಪ್ರಾಮಾಣಿಕತೆ ಬಗ್ಗೆ ಮಾತನಾಡಿದ''

''ಜಾತಿ ಮಧ್ಯ ಬೆಂಕಿ ಹಚ್ಚಿ ಕಾರ್ಯ ಸಾಧಿಸುವ ಮಹನೀಯ ಬಂದು ಅಡ್ಡಬಿದ್ದು ಜಾತ್ಯಾತೀತದ ಬಗ್ಗೆ ಮಾತಾಡಿದ''

''ವೇಶ್ಯಾವಾಟಿಕೆ ಪ್ರೋತ್ಸಾಹಿಸುವ ಮಹಿಳಾ ಪ್ರತಿನಿಧಿ ಮಹಿಳಾ ರಕ್ಷಣೆ ಬಗ್ಗೆ ಮಾತಾಡಿದ್ಲು''

''ಸಾಮಾನ್ಯ ಭಕ್ತರ ಪಾದಮುಟ್ಟಸಿಕೊಳ್ಳದ ಮಠಾಧೀಶ ಕಾಂಟೇಸಾ ಕಾರಲ್ಲಿ ಬಂದು ನನ್ನ ಮೂರ್ತಿ ಅನಾವರಣ ಮಾಡಿ ಸಮಾನತೆ ದಯೆ ಬಗ್ಗೆ ಮಾತನಾಡಿದ''

''ಅದೇ ನಮ್ಮ ದೇಶದ ದೊಡ್ಡ ದುರಂತ. ಇಲ್ಲಿ ರೊಕ್ಕ ರಾಜಕೀಯ, ಜಾತಿ ಬಲ ಇದ್ದರ ಮುಗುದು ಹೋತು. ಎಲ್ಲಾ ಸಲೀಸು. ಹೆಂಗ ಬೇಕಾದ್ರೂ ಹಿಂಡಬಹುದು. ಏನಾದ್ರೂ ಮಾಡಬಹುದು. ಅಪರಾಧಿ ಎಂಬುದು ಲೋಕಕ್ಕ ಗೊತ್ತಿದ್ದರೂ ಅವನ ರಕ್ಷಣೆಗಾಗಿ

ಕೋಟಿಗಟ್ಟಲೇ ಖರ್ಚು ಮಾಡ್ತಾರೆ. ಬಿಲಿಯನ್ನ ಗಟ್ಟಲೇ ಗಳಸಿದ್ರು ಅವನಿಗೆ ಬಿ.ಪಿಎಲ್ ಕಾರ್ಡ್ ಇರುತ್ತೆ, ಬೇರೆ ಕಡೆ ಇಂತಹ ಉದಾರತೆ ಸಾಧ್ಯನ !''

''ಇದನ್ನು ತಪ್ಪಸಾಕ ಆಗಲ್ವಾ''

''ಈ ದೇಶಕ್ಕೆ ಇಂತವರಿಂದ ಮುಕ್ತಿ ಯಾವಾಗ''

''ನಮ್ಮ ತತ್ವಗಳು ಪಾಲನೆಯಾಗುವುದು ಯಾವಾಗ''

''ಪ್ರಳಯ ಆದಾಗ''

''ಅಂದ್ರ''

''ಪ್ರಾಮಾಣಿಕತೆ, ಸಹೃದಯತೆ ಅನ್ನೋದು ಡಿಕ್ಷನರಿಯ ಮಾತಾಗಿಯೇ ಉಳದಾದ. ತಮ್ಮಂತವರು ಮತ್ತೊಮ್ಮೆ ಹುಟ್ಟಿ ಬರಬೇಕು ಇಲ್ಲ ಪಾಪ ಹೆಚ್ಚಾಗಿ ಇದಾ ಬ್ಲಾಸ್ಟ ಆಗಬೇಕು''

''ಇಲ್ಲ, ಇದಕ್ಕ ಏನಾದ್ರೂ ಉಪಾಯ ಮಾಡಲೇಬೇಕು. ಈಗಲೇ ಇವರಿಗೆ ಬುದ್ಧಿ ಕಲಿಸಲೇಬೇಕು. ಇಲ್ಲದಿದ್ದರೆ ದೇಶಕ್ಕೆ ಉಳಿಗಾಲವೇ ಇಲ್ಲ

''ಇವರ ಮೇಲೆ ಆಕ್ರಮಣ ಮಾಡಿಬಿಡೋಣವೇ?''

''ಇಲ್ಲ ಇಲ್ಲ ಖಡ್ಗ ಝಳಪಿಸಲೇ ಬೇಕು?''

''ಸಂಧಾನ ನಡೆಸಲೇಬೇಕು?''

''ಬೇಡ, ಅಹಿಂಸಾ ಪರಮೋಧರ್ಮ, ಅಹಿಂಸೆಯಿಂದಲೇ ಅವರ ಮನವನ್ನು ಗೆಲ್ಲಬೇಕು''

''ಇಲ್ಲ ಈ ಕಾಲಕ್ಕೆ ಆಗದು''

''ನಿಮ್ಮ ಮಾತು ಒಪ್ಪಲಾಗದು''

''ಶಾಂತಿ, ಶಾಂತಿ, ನೀವೆ ಹೀಗೆ ಜಗಳಾಡುತ್ತ ನಡೆದರೆ ಹೇಗೆ. ಈಗ ನಿಮ್ಮಲ್ಲಿ ನಡೆಯುತ್ತಿರುವಂತೆ ದೇಶದಲ್ಲಿ ನಡೆಯುತ್ತಿದೆ, ಇದರ ಮಧ್ಯೆಯೆ ಎಲ್ಲಾ ವಿಷ ಚಿಂತನೆಗಳು ನಡೆದಿವೆ''

''ಈಗ ಏನು ಮಾಡಬೇಕೆಂತಿ ದೇಸಾಯಿ?''

''ಬೆಳಕು ಹರಿತಾ ಬಂತು. ಬೇಗ ನಿಮ್ಮ ಸ್ವಸ್ಥಾನದಲ್ಲಿ ನಿಂತು ಬಿಡಿ. ಇಲ್ಲಾಂದ್ರ ನಾಳೆ ಇದರಲ್ಲೂ ಆ ಪಕ್ಷ, ಈ ಪಕ್ಷದವರ, ಆ ಧರ್ಮ ಈ ಧರ್ಮದವರ ಪಿತೂರಿ ಅಂತ ರಕ್ತ ಓಕಳಿನೇ ನಡೆಯುತ್ತೆ. ಇದರಲ್ಲಿ ಎಲ್ಲಾರು ಚಳಿ ಕಾಯಿಸಿ. ಬೇಳೆ ಬೇಯಿಸಿಕೊಂಡು ತಿಂದು ಸಂಭ್ರಮಿಸ್ತಾರೆ. ತೊಂದರೆಗೀಡಾಗುವವರು ಸಾಮಾನ್ಯರು. ದಯವಿಟ್ಟು ಅವಕಾಶ ಕೊಡದಿರಿ. ಅದಕ್ಕಾಗಿ ಅಲ್ಲೆ ನಿಂತು ಯೋಚನೆ ಮಾಡಿ ನಿಮ್ಮ ಶಕ್ತಿ ಕ್ರೋಢೀಕರಿಸಿ''

''ಹೇ ಸಾಧ್ಯವಿಲ್ಲ ಈಗಲೇ ಅವರ ವಿರುದ್ಧ ನಿಲ್ಲತಿವಿ''

''ಹಾಂಗೆ ನಿಂತ್ರಿ ಅನಕೊಳ್ರಿ. ಯಾವುದೊ ನಾಟಕ ಕಂಪನಿಯವರು ಅಂದಕೊಂಡು ಭಿಕ್ಷೆ

ಹಾಕಿ ಹೋಗ್ತಾರೆ, ಹೆಚ್ಚಿಗೆ ಏನನೇನೋ ಮಾತಾಡಕೊದ್ರೆ ಎಲ್ಲೋ ಭ್ರಾಂತು ಅಂತ ಹುಚ್ಚಾಸ್ಪತ್ರೆ ಸೇರಸ್ತಾರೆ''

''ದೇಸಾಯಿ ಹೇಳೊದು ಸರಿಯಿದೆ, ಯೋಚಿಸೋಣ, ನಡೀರಿ, ಬಾಯ್ ಬಾಯ್ ದೇಸಾಯಿ'' ಅಂತ ಹೊರಟು ನಿಂತವು.

ನಾನು ''ಬಾಯ್ ಬಾಯ್, ಹಾಗೆ ಕಲ್ಲಾಗಬೇಡಿ, ಯೋಚನೆ ಮಾಡಿ, ದುರ್ಜನರಿಗೆ ಬುದ್ಧಿ ಕಲಿಸಲು ಸಿದ್ಧರಾಗಿ ಟಾಟಾ'' ಎಂದೆ.

''ಏನ್ರೀ ಅದು ಬಾಯ್ ಬಾಯ್, ಟಾಟಾ ಅನಕತೀರ, ಯಾವುಳು ನನ್ನನ್ನು ಬಿಟ್ಟು ಕನಸಿನ್ಯಾಗ ಬರುವಾಕಿ'' ಎಂದು ಧ್ವನಿ ಬಂತು ಅಡುಗೆ ಮನೆಯಿಂದ.

''ಥಟ್ಟನೆ ಎಚ್ಚರಾಗಿ ಅಯ್ಯೊ ಇದುವರೆಗೂ ಕಂಡದ್ದು ಕನಸಾ?'' ಅಂತ ನಕ್ಕು, ಎದ್ದು ಪರೀಕ್ಷಿಸಲು ಚೌಕದಲ್ಲಿ ನೋಡಾಕ ಹೋದೆ.

ಪುಣ್ಯಕ್ಕ ಪ್ರತಿಮೆಗಳು ಇರೋ ಜಾಗಕ್ಕನ ಇದ್ವು. ಅವತ್ತು ಗಾಂಧಿ ಜಯಂತಿ ಅಂತ ಕಾಣುತ್ತೆ. ದುಂಬಾಲು ಬಿದ್ದು ಹಾರದ ಭಾರ ಹಾಕತಿದ್ರು. ಗಾಂಧಿ ಪ್ರತಿಮೆಯತ್ತ ಮುಖ ಮಾಡಿದೆ. ಅಂದೇಕೋ ಪ್ರತಿಮೆಯಲ್ಲಿ ಎಂದಿನಂತೆ ಇದ್ದ ಲವಲವಿಕೆ ಇಲ್ಲವೇನೊ ಅನಿಸಿತು.




'ವಾಸ್ತುದೋಷ' ಅಂತ ದಕ್ಷಿಣಕ್ಕೆ ನಾವೇ ಕೆಡವಿದೆವು..
'ರಸ್ತೆ ಅಗಲೀಕರಣ' ಅಂತ ಉತ್ತರಕ್ಕೆ ಸರ್ಕಾರದವರೇ ಕೆಡವಿದರು....


With Best Compliments From
SRI
BHAGYALAKSHMI
SINCE
1972
SRI BHAGYALAKSHMI
TRADING CORPORATION
Manufacturers of :
Friedgram • Gramflour
• Cleaned Rice • Bansi Sooji • Idli Sooji
• Maize Flakes • Avalakki & Wheat Products
• TRISHUL BRAND : Bakers Maida
#28 2nd Main Road, New Tharagupet, Bangalore
Ph : 41223436, 26702536, 26702559
Website: www.sblfoods.com |email : bysaniravi@sblfoods.com

# ಹಾಸ್ಯ ಬ್ರಹ್ಮನಿಗೆ ನಮನ

- ನಯನ ಶ್ರೀ



**ಕ**ರ್ನಾಟಕದಲಿ ಕನ್ನಡಿಗರ ಕನ್ನಡ ಭಾಷೆಯೇ ''ಕಸ್ತೂರಿ''
ಇಂತಹ ಕಸ್ತೂರಿಯ ಪರಿಮಳ ಪಸರಿಸಿದ ಹಾಸ್ಯಬ್ರಹ್ಮ ನಾ. ಕಸ್ತೂರಿ

ವಿಡಂಬನಾತ್ಮಕ ಲೇಖನಗಳು ತಿಳಿನೀರಿನಂತೆ ಹರಿದು ಬಂದು
ಮನೋಲ್ಲಾಸ ಹಾಸ್ಯ ಪ್ರಹಸನಗಳು ನಗೆಬುಗ್ಗೆಯನು ಚಿಮ್ಮುತ ನಿಂದು.

ಮಾತೃಭಾಷೆ ಮಲೆಯಾಳಂ
ಆದರೂ ಮಾಡದೆ ಕನ್ನಡ ಭಾಷೆಯ ಅಧ್ವಾನಂ.

ಇಂಗ್ಲಿಷ್ ಭಾಷೆಯ ಮಮತೆಯೆ ಹೆಚ್ಚು
ಆದರೂ ಬಿಡಲಿಲ್ಲ ಕಲಿತ ಕನ್ನಡದ ಹುಚ್ಚು

ಮೈಸೂರು ವಿಶ್ವವಿದ್ಯಾನಿಲಯದಿ ಉಪಾಧ್ಯಾಯ ವೃತ್ತಿ
ಕನ್ನಡವ ಕಲಿತ ಶ್ರೀಮಂತಿಕೆಯೇ ಬರವಣಿಗೆಗಳ ಆವೃತ್ತಿ.

ಹಾಸ್ಯಮಯ ನಾಟಕಗಳ ಹಾಸ್ಯರಸ ರಸಾಯನವ ಉಣಬಡಿಸಿ
ಪ್ರೊ. ಕೃಷ್ಣಶಾಸ್ತ್ರಿಗಳು 'ನಾಟಕದ ಕಸ್ತೂರಿ' ಎಂದೇ ವ್ಯಾಖ್ಯಾನಿಸಿ.

ಶ್ರೇಷ್ಠ ಶುದ್ಧ ಹಾಸ್ಯ ಕುಹಕಗಳ ಬರವಣಿಗೆ 'ಕೊರವಂಜಿ'ಯ ಹೊಟ್ಟೆಗೆ
ರಾ.ಶಿ. ಯವರ ಜೊತೆಗೂಡಿ ಕೊರವಂಜಿಯ ಸಿಂಗರಿಸಿ ಪಡೆದರು ಎಲ್ಲರ ಮೆಚ್ಚುಗೆ.

ಕನ್ನಡಿಗರ ಹಾಸ್ಯ ಪ್ರಜ್ಞೆಯನು ಜಾಗೃತಗೊಳಿಸಿದ ಹಾಸ್ಯ ಸಾಮ್ರಾಟ
'ಆಕಾಶವಾಣಿ'ಯ ಮುನ್ನಡೆಸಿ ಕನ್ನಡಿಗರ ಹೃದಯಗಳ ಮೀಟಿ ತಾವಾದರು ವಿರಾಟ.

''ಆಡು ಮುಟ್ಟದ ಸೊಪ್ಪಿಲ್ಲ'' ಯಾರಿಗೆ ತಿಳಿಯದು ನಾಣ್ಣುಡಿ?
ಹಾಸ್ಯ ಬರಹ ಬಗೆಬಗೆಯ ಪ್ರಕಾರದಿ ಕೈಯಾಡಿಸಿ ದಿಟಗೊಳಿಸಿದರೀ ಜಾಣ್ಣುಡಿ.

ಮೇರು ಗಿರಿಗೆ ಮೇರು ಪರ್ವತವೇ ಸಾಟಿ
ಕಸ್ತೂರಿ ಕನ್ನಡದ ಹಾಸ್ಯ ಸಾಹಿತ್ಯಕೆ 'ನಾ ಕಸ್ತೂರಿ'ಯೆ ಸಾಟಿ.

ಕನ್ನಡ ಸಾರಸ್ವತ ಲೋಕದಲಿ ಮೂಡಿಸಿಹರು 'ಕಸ್ತೂರಿ'ಯ ಛಾಪು
ಇವರ ಸಾಹಿತ್ಯದಿಂದ ದೊರೆತಿದೆ ಕನ್ನಡಕೊಂದು ಪೆಂಪಿನ ನುಣುಪು.

ಇಂತಹ ಬರೆಹಗಳು ಎಲ್ಲರ ಬಾಳಿಗೆ ಎಂದೆಂದಿಗೂ ಪ್ರಸ್ತುತ
ಕನ್ನಡ ಜನತೆಯ ಮನದೊಳು ನಿಂತು ಆದರು ದಿಗ್ಗಜ ಜನಜನಿತ.

ಸಾಗರಕೆ ಭೋರ್ಗರೆವ ಅಲೆಗಳೇ ಭೂಷಣ
ಕಸ್ತೂರಿಯವರ ಹಾಸ್ಯ ಸಾಹಿತ್ಯಕ್ಕೆ ಪುಟಿದೇಳುವ ನಗೆಬುಗ್ಗೆಗಳೇ ಆ ಭೂಷಣ.

ಆಧ್ಯಾತ್ಮಿಕ ಕ್ಷೇತ್ರದಿ ''ಸತ್ಯಂ ಶಿವಂ ಸುಂದರಂ'' ರಚಿಸಿ ಸತ್ಯ - ಸಾಯಿಶನ ಪದ ತಳದೆಡೆಗೆ
ಕೊನೆಗೊಮ್ಮೆ 'ದೇವನೊಲಿದ ಜೀವ' ಸತ್ಯ ಸಾಯಿಯ ಕೃಪೆಯಿಂದ ಮುಕ್ತಿಯೆಡೆಗೆ.

ಮೇರು ಪರ್ವತದ ತಪ್ಪಲಿನೊಳು ಈ ತೊದಲನುಡಿಗಳ
ರಸಕವಿ ಪಾದಕೆ ಅರ್ಪಿಸುತಿಹೆ 'ನಯನ ಶ್ರೀ' ಈ ನುಡಿ ಗುಚ್ಛವನು

ಆನಂದತುಂದಿಲನಾಗಿ
....ಆನಂದತುಂದಿಲನಾಗಿ
....ಆನಂದತುಂದಿಲನಾಗಿ

# ಫಟಾಫಟ್ ಅಂತ ಹೇಳಿ

**- ಗೌತಮ**

“ನಿನ್ನ ಕೈಲಿ ಈ ಕೆಲಸ ಆಗಲ್ಲ” ಅಂತ ಯಾರಾದರೂ ನನಗೆ ಹೇಳಿಬಿಟ್ಟರೆ, ನನ್ನ ಮೈಯೆಲ್ಲಾ ಉರಿದುಹೋಗತ್ತೆ. ತಲೆಗಳು ಚಂಡಾಡಿಹೋಗಲಿ, ಮೋಡಗಳು ನೆಲಕ್ಕೆ ಬಿದ್ದು ಜಲವಾಗಿ ಹರಿದುಹೋಗಲಿ, ಜ್ವಾಲಾಮುಖಿಗಳಿಂದ ಇಡೀ ವಿಶ್ವ ಕೊತಕೊತ ಕುದ್ದುಹೋಗಲಿ, ಯಾರು ಯಾವ ಪಾರ್ಟಿಗೆ ಬೇಕಾದರೂ ಸೇರಲಿ, ಯಾರು ಬೇಕಾದರೂ ಪ್ರಧಾನಿಯಾಗಿ ಹೋಗಲಿ, ನಾನಂತೂ ಆ ‘ಆಗಲ್ಲ’ ಅಂದ ಕೆಲಸವನ್ನು ಮಾಡದೇ ಬಿಡುವವನಲ್ಲ, ಅಂತಹ ಮಹಾ ಛಲಗಾರ ನಾನು! ಅದಕ್ಕೆ ನಿದರ್ಶನ ಬೇಕೇ?

**ಜನಪ್ರಿಯ ಫಟಾಫಟ್ ಕಾರ್ಯಕ್ರಮದಿಂದ ನೇರ ಪ್ರಸಾರ**

ಇಗೋ! ಓದಿ ನೋಡಿ!!

ಹೀಗೇ ಒಂದು ದಿನ ‘ಸರ್ವದರ್ಶಿನಿ’ಯಲ್ಲಿ ಗೆಳೆಯರೊಂದಿಗೆ ಕಾಫಿ ಹೀರುತ್ತ ಕೂತಿದ್ದಾಗ, ನನ್ನ ಮನದಲ್ಲಿ ಅನೇಕ ದಿನದಿಂದ ಅಂಡಲೆಯುತ್ತಿದ್ದ ಮಹದಾಸೆಯೊಂದನ್ನು ‘ನಾನೊಂದು ಕಾದಂಬರಿ ಬರೀಬೇಕೂಂತ ಇದ್ದೀನ್ರಯ್ಯ’ ಅಂತ ಅವರ ಮುಂದೆ ಬಹಿರಂಗಪಡಿಸಿದೆ. ನನ್ನ ಆಪ್ತಮಿತ್ರನೆನಿಸಿಕೊಂಡ ಆ ಪಾಂಡು, ನನ್ನಾ ಮಾತನ್ನು ಕೇಳಿದವನೇ ಕೂತಿದ್ದವನು ಎರಡಡಿ ಮೇಲಕ್ಕೆ ಹಾರಿ, ವಜ್ರಮುನಿಯಂತೆ ಗಹಗಹಿಸಿ ನಗುತ್ತ ‘ಏನೂ? ನೀನು?? ಕಾದಂಬರಿ??? ಬರೀತೀಯಾ????’ ಅಂತ ಜೋರಾಗಿ ಕೇಳಿದ. ರಸದಾಳೆ ಕಬ್ಬನ್ನು ಸಿಗಿದುಹಾಕಿಬಿಡುವಂತೆ ಅವನನ್ನು ಸಿಗಿದುಹಾಕುವಷ್ಟು ಕೋಪ ನನ್ನ ಉದರದ ಬುಡದಿಂದ ಉಕ್ಕಿಬಂದಿತಾದರೂ ಸಾಹಸದಿಂದ ಸಂಯಮವನ್ನು ಸಾಧಿಸಿ, ನೆತ್ತರು ಒಸರುವಂತೆ ಕೆಳತುಟಿಯನ್ನು ಕಚ್ಚಿಕೊಂಡು ಆ ನನ್ನ ಕ್ರೋಧವನ್ನು ಹತೋಟಿಗೆ ತಂದುಕೊಂಡೆ. ಆ ಕ್ಷಣದಲ್ಲಿ ನನ್ನ ಸ್ವಂತ ಮನಸ್ಸಿನಲ್ಲಿ ಭೀಷ್ಮಪ್ರತಿಜ್ಞೆಯೊಂದನ್ನು ಕೈಗೊಂಡೆ : ‘ಇವತ್ತು ಮಾರ್ಚಿ ಒಂದು. ಇನ್ನು ಆರು ತಿಂಗಳಲ್ಲಿ, ಅಂದರೆ, ಆಗಸ್ಟ್ 31ನೇ ತಾರೀಖು, ಶತಾಯ ಗತಾಯ ನನ್ನ ಕಾದಂಬರಿಯ ಬಿಡುಗಡೆ ಮಾಡುತ್ತೇನೆ!’

ಆಗಸ್ಟ್ 31ನೇ ತಾರೀಖು ನನ್ನ ವಿನೂತನ ಕಾದಂಬರಿ ‘ಚೊಂಬು’ವಿನ ಲೋಕಾರ್ಪಣೆಯ ಸಮಯದಲ್ಲಿ ಗ್ರಂಥಕರ್ತನಾಗಿ ಮಾತನಾಡುತ್ತಾ, ‘ಬಗಲ್ ಮೇ ದುಷ್ಮನ್’ನ ಹೆಸರು ಹೇಳದೆಯೇ ‘ನನ್ನ ಸನ್ಮಿತ್ರರೊಬ್ಬರು ಕಿಚಾಯಿಸಿದ್ದರಿಂದ, ಬರೆಯುವ ಉತ್ಕಟ ಪ್ರೇರಣೆ ಸಿಕ್ಕಿ, ಹಠ ಹಿಡಿದು, ಈ ಕಾದಂಬರಿಯನ್ನು ಬರೆದು ಇಂದು ಲೋಕಾರ್ಪಣೆ ಮಾಡುತ್ತಿದ್ದೇನೆ. ಆ ನನ್ನ ಸನ್ಮಿತ್ರನಿಗೆ ಇದೋ, ಅನಂತಾನಂತ ವಂದನೆಗಳು’ ಅಂದೆ ಪ್ರೇಕ್ಷಕ ವೃಂದದತ್ತ ತಿರುಗಿ. ಲೋಕಾರ್ಪಣೆಯ ನಂತರ, ವೇದಿಕೆಯ ಮೇಲೆ ಉಪಸ್ಥಿತರಿದ್ದ

ಮೂವರಿಗೂ (ನಾನೂ ಸೇರಿದಂತೆ) ಒಂದೊಂದು ಪುಸ್ತಕವನ್ನು ನೀಡಲಾಯಿತು. ಅಂದು, 120 ರುಪಾಯಿ ಮುಖಬೆಲೆಯ ಪುಸ್ತಕವನ್ನು ವಿಶೇಷ ಬೆಲೆಯಾದ 50 ರುಪಾಯಿಗೆ ಮಾರಾಟಕ್ಕಿಟ್ಟೆ (ಸಾವಿರ ಇಂಟು ಐವತ್ತು, ಐವತ್ತು ಸಾವಿರ. ಮೈನಸ್ ನೂರೈವತ್ತು ಮೂರು ಪುಸ್ತಕದ್ದು... ಅಂತೆಲ್ಲ ಲೆಕ್ಕ ಹಾಕಿದ್ದೆ) ಮಾರಾಟವಾಗಿ ಉಳಿದ ಪುಸ್ತಕಗಳ ಸಂಖ್ಯೆ ಕೇವಲ ಒಂಬೈನೂರ ತೊಂಬತ್ತೇಳು! ಉಳಿದ ಅಷ್ಟೂ 'ಚೊಂಬು'ಗಳು, ತದನಂತರ, ನನ್ನ ಮನೆಯ ಅಟ್ಟದಲ್ಲಿ, ಮದುವೆಗೆ ಬಂದಿದ್ದ ಸ್ಟೀಲ್ ತಟ್ಟೆ-ಲೋಟಗಳೊಡನೆ ಸಖ್ಯ ಬೆಳೆಸಿ ಅನಂತಕಾಲದವರೆಗೆ ಸುಖ-ಸಹ-ಜೀವನ ನಡೆಸುವ ಮನಸ್ಸು ಮಾಡಿದವು.

ಸತತ ಮೂರು ವರ್ಷದ ತಟ್ಟೆ-ಲೋಟ-ಚೊಂಬುಗಳ ಬದುಕಿನಲ್ಲಿ ಯಾವ ಬದಲಾವಣೆ, ಛೇದನ, ವಿಚ್ಛೇದನಗಳೂ ಸಂಭವಿಸಲಿಲ್ಲ.

ಈ ಕಾಲಘಟ್ಟದಲ್ಲಿ ಇನ್ನೊಂದು ಪ್ರತಿಜ್ಞೆ ಮಾಡುವ ಅವಕಾಶ ತಾನಾಗಿಯೇ ನನಗೊದಗಿ ಬಂತು.

ಅಂದೂ ಕೂಡ. ಅದೇ ಸರ್ವದರ್ಶಿನಿ ಅಡ್ಡ. ಅದೇ ಗೆಳೆಯರ ಗುಂಪು. ಅದೇ ಕಾಫ಼ಿ. ಅಂತಹುದೇ ಸಂದರ್ಭ. ಅದೇ ಪಾಂಡು, ಅದೇ ವಜ್ರಮುನಿಯ ಗಹಗಹಿಕೆಯಿಂದ ಮೂರು ಲೋಕಕ್ಕೂ ಕೇಳುವಂತೆ ಬೊಬ್ಬಿರಿದ 'ಇವತ್ತಿಗೆ ಇವನ 'ಚೊಂಬು' ಬಿಡುಗಡೆಯಾಗಿ ಸರಿಯಾಗಿ ಮೂರು ವರ್ಷ ಆಯಿತು. ಆದರೆ, ಪಾಪ, ಇದುವರೆವಿಗೂ ಒಂದು 'ಚೊಂಬೂ' ಮಾರಾಟವಾಗಿಲ್ಲ, ಹಾಗಾಗಿ ಅವೆಲ್ಲ ಇವನ ಮನೆಯ ಅಟ್ಟವನ್ನು ಅಲಂಕರಿಸಿರುವುದು ನಿಮಗೆಲ್ಲಾ ತಿಳಿದಿರುವ ವಿಷಯವೇ. ದೇರ್‌ಫ಼ೋರ್, ಇದೊಂದು ಶಾಶ್ವತ ಸಾಹಿತ್ಯ. ಇದು ಬಹುಶಃ ಗಿನ್ನೆಸ್ ದಾಖಲೆ ಸೇರಲು ಅರ್ಹವೋ ಏನೋ ನನಗೆ ಗೊತ್ತಿಲ್ಲ, ಅದರ ವಿಷಯ ಆಮೇಲೆ ನೋಡೋಣ. ಆದರೆ, ಸದ್ಯಕ್ಕೆ ಇವನಿಗೆ ನಾವೆಲ್ಲಾ ಸೇರಿ 'ಶಾಶ್ವತ ಸಾಹಿತಿ' ಅಂತ ಬಿರುದು ಕೊಡೋಣ' ಅಂದ. ಆಗಲೂ ಕೂಡ, ನನ್ನೆಲ್ಲ ಪೂರ್ವಿಕರ ಸಂಯಮವನ್ನೆಲ್ಲ ಏಕಾಗ್ರತೆಯಿಂದ ಸಂಚಯಿಸಿ, ನನ್ನಲ್ಲಿ ಆವಾಹಿಸಿಕೊಂಡು ನನ್ನ ಮನದಾಳದಲ್ಲಿ ಪ್ರತಿಜ್ಞೆಯಂ ಕೈಗೊಂಡೆ : 'ಅಟ್ಟದ ಮೇಲಿರುವ ಒಂಬೈನೂರ ತೊಂಬತ್ತೇಳು ಚೊಂಬುಗಳನ್ನೂ ಮುಂದಿನ ವರ್ಷದ ಒಳಗೆ, ಅಂದರೆ ಡಿಸೆಂಬರ್ 31ರ ಒಳಗೆ, ಒಂದು 'ಚೊಂಬೂ' ಇರದಂತೆ, ಸಹಸ್ರಾಯ ಗತಾಯ, ಖಾಲಿ ಮಾಡುತ್ತೇನೆ!'

ಆ ನನ್ನ ಭೀಷ್ಮಪ್ರತಿಜ್ಞೆಯ ಫಲಶೃತಿಯೇ ಈ 'ಫಟಾಫಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ಒಬ್ಬ ಸ್ಪರ್ಧಿಯಾಗಿ ನನ್ನ ಪ್ರವೇಶ. ಮುಂದಿನದೆಲ್ಲ ಅಲ್ಲಿಂದ ನೇರ ಪ್ರಸಾರ.

**ಡಾ. ಗೊಂದಲೇಶ್ವರ್ :** ವೀಕ್ಷಕರಿಗೆಲ್ಲ ಅತ್ಯಂತ ಜನಪ್ರಿಯವಾಗಿರುವ 'ಫಟಾಫಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ಸ್ವಾಗತ, ಸುಸ್ವಾಗತ. ಇದರ ನಿಯಮಗಳೆಲ್ಲ ನಿಮಗೀಗಾಗಲೇ ತಿಳಿದಿದ್ದರೂ ಸಹ, ಸ್ಪರ್ಧಿಗಳಿಗೆ ಹಾಗೂ ವೀಕ್ಷಕರಿಗೆ ಗೊಂದಲವಾಗಬಾರದು ಎಂಬ ಏಕೈಕ ಉದ್ದೇಶದಿಂದ ನಿಯಮಗಳನ್ನು ಒಂದು ಸರ್ತಿ ಹೇಳಿಬಿಡುತ್ತೇನೆ. ಒಟ್ಟು ಹನ್ನೆರಡು ಪ್ರಶ್ನೆಗಳು ಇರುತ್ತವೆ.

ಪ್ರತಿಯೊಂದು ಪ್ರಶ್ನೆಗೂ ಮೂರು ಉತ್ತರಗಳನ್ನು ನೀಡಲಾಗುತ್ತದೆ. ಉತ್ತರಗಳನ್ನು ನೀಡಿದ ಮೇಲೆ ಯಾರು ಮೊದಲು ಗುಂಡಿಯನ್ನು ಒತ್ತುತ್ತಾರೋ ಅವರಿಗೆ ಉತ್ತರ ನೀಡುವ ಮೊದಲ ಅವಕಾಶ. ಆಮೇಲೆ ಗುಂಡಿಯನ್ನು ಒತ್ತುವವರಿಗೆ ಎರಡನೆಯ ಅವಕಾಶ. ಉಳಿದವರಿಗೆ ಅಥವಾ, ಮೂರನೆಯವರಾಗಿ ಗುಂಡಿ ಒತ್ತುವವರಿಗೆ ಮೂರನೆಯ ಅವಕಾಶ. ಸರಿಯಾದ ಉತ್ತರ ಹೇಳಿದವರಿಗೆ ಪುಸ್ತಕ ಬಹುಮಾನ. ಈ ಸರ್ತಿಯ ವಿಶೇಷವೆಂದರೆ, ಒಬ್ಬ ಸ್ಪರ್ಧಿಯ ಮೊದಲ ಸರಿಯುತ್ತರಕ್ಕೆ ಒಂದು ಪುಸ್ತಕ ಬಹುಮಾನವಾದರೆ, ಎರಡನೆಯ ಸರಿಯುತ್ತರಕ್ಕೆ ಅದರ ಎರಡರಷ್ಟು, ಅಂದರೆ ಎರಡು ಪುಸ್ತಕ, ಮೂರನೆಯ ಸರಿಯುತ್ತರಕ್ಕೆ ಅದರ ಎರಡರಷ್ಟು, ಅಂದರೆ ನಾಲ್ಕು ಪುಸ್ತಕ, ನಾಲ್ಕನೆಯ ಸರಿಯುತ್ತರಕ್ಕೆ ಅದರ ಎರಡರಷ್ಟು, ಅಂದರೆ ಎಂಟು ಪುಸ್ತಕ. ಒಟ್ಟಿನಲ್ಲಿ ಒಂದು, ಎರಡು, ನಾಲ್ಕು, ಎಂಟು, ಹದಿನಾರು, ಮುವ್ವತ್ತೆರಡು, ಅರವತ್ನಾಲ್ಕು ಹೀಗೆ ಪ್ರತಿಯೊಂದು ಸರಿಯುತ್ತರಕ್ಕೂ ಬಹುಮಾನದ ಪುಸ್ತಕಗಳ ಸಂಖ್ಯೆ ದ್ವಿಗುಣವಾಗುತ್ತಾ ಹೋಗುತ್ತದೆ. ಇನ್ನು, ಗುಂಡಿಯನ್ನು ಒತ್ತಿ ತಪ್ಪು ಉತ್ತರ ಹೇಳಿದರೆ ಅಂತಹವರಿಗೆ ನಾವು ಪುಸ್ತಕವನ್ನು ಬಹುಮಾನವಾಗಿ ನೀಡುವುದಿಲ್ಲ. ಬದಲಿಗೆ ಅವರೇ ನಮಗೆ ಪುಸ್ತಕವನ್ನು ಕೊಡಬೇಕಾಗುತ್ತದೆ. ಇಲ್ಲೂ ಕೂಡ ಒಂದು ವಿಶೇಷವಿದೆ. ಮೊದಲ ತಪ್ಪಿಗೆ ಒಂದು ಪುಸ್ತಕ ನಮಗೆ ಕೊಟ್ಟರೆ, ಎರಡನೆಯ ತಪ್ಪು ಉತ್ತರಕ್ಕೆ ಎರಡರ ವರ್ಗ, ಅಂದರೆ ಟು ಸ್ಕ್ವೇರ್, ಅಂದರೆ, ನಾಲ್ಕು ಪುಸ್ತಕ ಕೊಡಬೇಕು, ಮೂರನೆಯ ತಪ್ಪಿಗೆ ಮೂರರ ವರ್ಗ, ಅಂದರೆ ಒಂಬತ್ತು ಪುಸ್ತಕ ಕೊಡಬೇಕು, ಅಂದರೇ, ಪ್ರತಿಯೊಂದು ತಪ್ಪು ಉತ್ತರಕ್ಕೂ ಕೊಡಬೇಕಾದ ಪುಸ್ತಕಗಳ ಸಂಖ್ಯೆ ಅಷ್ಟನೆಯ ಪ್ರಶ್ನೆಯ ವರ್ಗದಷ್ಟು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕೊಡಬೇಕಾದ ಪುಸ್ತಕಗಳ ಸಂಖ್ಯೆ ಒಂದು, ನಾಲ್ಕು, ಒಂಬತ್ತು, ಹದಿನಾರು, ಇಪ್ಪತ್ತೈದು ಹೀಗೆ ವರ್ಗವಾಗುತ್ತಾ ಹೋಗುತ್ತದೆ. ಸ್ಪರ್ಧಿಗಳಿಗೆ ಯಾವ ಗೊಂದಲವೂ ಇಲ್ಲದೆ ಸ್ಪಷ್ಟವಾಗಿ

ಹುಡುಗಿಯ ತಂದೆ – ನೀನು ಕುಡಿಯುತ್ತೀಯಾ?

ಹುಡುಗ – ಇದು ಪ್ರಶ್ನೇನಾ, ಆಮಂತ್ರಣವೋ?



– ಜಯಣ್ಣ

ಅರ್ಥ ಆಗಿದೆ ಎಂದು ನಂಬಿದ್ದೇನೆ. (ಡಾ. ಗೊಂದಲೇಶ್ವರ್ ನಮ್ಮ ಕಡೆ ತಿರುಗಿ ನೋಡಿದರು. ನಾವೆಲ್ಲ ಗೊಂದಲವಿಲ್ಲ ಅನ್ನೋ ರೀತಿ ಕೈಗಳನ್ನಾಡಿಸಿದೆವು. ಅವರಿಗೆ ಗೊಂದಲವಾಗಿರಬೇಕು. ಅನುಮಾನದಿಂದಲೇ). ಹಾಗಾದರೆ ಸ್ಪರ್ಧೆಯನ್ನು ಪ್ರಾರಂಭಿಸೋಣ. ಎಲ್ಲರೂ ಸಿದ್ಧವೇ?

**ಮೂರೂ ಸ್ಪರ್ಧಿಗಳು** : (ಎಲ್ಲರೂ ಥಮ್ಸ್ ಅಪ್ ರೀತಿ ಕೈಗಳನ್ನು ಎತ್ತುತ್ತಾ) ನಾವೆಲ್ಲ ಸಿದ್ಧ.

**ಡಾ. ಗೊಂದಲೇಶ್ವರ್** : ಮೊದಲನೆ ಪ್ರಶ್ನೆ ನೋಡಿ. ಕೇಳಿ. ಆದಿಪುರಾಣ ಕೃತಿಯನ್ನು ರಚಿಸಿದವರು ಯಾರು? ನಿಮ್ಮ ಆಯ್ಕೆಗಳು.

1. ರವೀಂದ್ರನಾಥ ಟ್ಯಾಗೋರ್
2. ಷೇಕ್ಸ್‌ಪಿಯರ್
3. ಪಂಪ

(ನಾನು ಗುಂಡಿ ಒತ್ತಿದೆ. ಇದನ್ನು ಮತ್ತೆ ಮತ್ತೆ ಹೇಳುವುದಿಲ್ಲ, ಪ್ರತಿಯೊಂದು ಪ್ರಶ್ನೆ ಕೇಳುತ್ತಿದ್ದಂತೆ ನಾನೇ ಮೊದಲು ಗುಂಡಿ ಒತ್ತುವುದೆಂದು ನಿರ್ಧರಿಸಿಬಿಟ್ಟಿದ್ದೇನೆ)

**ನಾನು** : ಷೇಕ್ಸ್‌ಪಿಯರ್

**2ನೇ ಸ್ಪರ್ಧಿ** : ರವೀಂದ್ರನಾಥ ಟ್ಯಾಗೋರ್

**3ನೇ ಸ್ಪರ್ಧಿ** : ಪಂಪ

**ಡಾ. ಗೊಂದಲೇಶ್ವರ್** : ಪಂಪ ಸರಿಯಾದ ಉತ್ತರ. ಆದರೆ ಮೂರನೆಯವರಾಗಿ ಉತ್ತರಿಸಿದ್ದರಿಂದ ನಿಮಗೆ ಪುಸ್ತಕವನ್ನು ಕೊಡಲಾಗುವುದಿಲ್ಲ. (ನನ್ನ ಕಡೆ ತಿರುಗಿ) ಕ್ಷಮಿಸಿ. ನಿಮ್ಮ ಉತ್ತರ ತಪ್ಪು. ಹಾಗಾಗಿ ನೀವು ಒಂದು ಪುಸ್ತಕವನ್ನು ನಮಗೆ ಕೊಡಬೇಕಾಗುತ್ತದೆ.

**ನಾನು** : (ಮೊದಲ ಪ್ರಯತ್ನದಲ್ಲಿಯೇ ಯಶಸ್ಸನ್ನು ಕಂಡದ್ದರಿಂದ, ಎರಡೂ ಕೈಗಳನ್ನು, ಮೇಲಿರುವ ಏನನ್ನೋ ಕೀಳುವಂತೆ ಮೇಲಕ್ಕೆತ್ತಿ, ಕೆಳಕ್ಕೆ ಜಗ್ಗಿದಂತೆ ಅಭಿನಯಿಸಿ) 'ಯಹ್' (ಒಂದು 'ಚೊಂಬು'ನ್ನು ಕಾಗದದ ಕವರಿನಲ್ಲಿಟ್ಟು, ಪುಸ್ತಕದ ಶೀರ್ಷಿಕೆ ಅವರಿಗೆ ಕಾಣದಂತೆ ಕೊಟ್ಟೆ)

**ಡಾ. ಗೊಂದಲೇಶ್ವರ್** : ಎರಡನೆಯ ಪ್ರಶ್ನೆ. ಪ್ರಾಚೀನ ಒಲಂಪಿಕ್ಸ್‌ನ ರನ್ನಿಂಗ್ ರೇಸ್‌ನಲ್ಲಿ ಗೆದ್ದ ಮೊದಲಿಗರಾರು?

1. ಜೂಲಿಯಸ್

2. ವೆರೋನಿಕಾ

3. ಪಿಟಿ ಉಷಾ

**ನಾನು** : ಪಿಟಿ ಉಷಾ

(ಇನ್ನು ಮುಂದೆ ಸರಿಯಾದ ಉತ್ತರವನ್ನೂ ಇಲ್ಲಿ ನಮೂದಿಸುವುದಿಲ್ಲ, ಯಾರು ಹೇಳಿದರು ಎನ್ನುವುದನ್ನೂ ಇಲ್ಲಿ ಬರೆಯುವ ಗೋಜಿಗೆ ಹೋಗುವುದಿಲ್ಲ. ಯಾಕೆಂದರೆ ಇಲ್ಲಿ ಅವೆರಡೂ ಅಪ್ರಸ್ತುತ. ಅದು ವಾಚಕರಿಗೇ ನಂತರದಲ್ಲಿ ಗೋಚರವಾಗುತ್ತದೆ.)

**ಡಾ. ಗೊಂದಲೇಶ್ವರ್** : ...... ಕ್ಷಮಿಸಿ. ಅದು ತಪ್ಪು ಉತ್ತರ. ಹಾಗಾಗಿ ನೀವು ನಾಲ್ಕು ಪುಸ್ತಕಗಳನ್ನು ನಮಗೆ ಕೊಡಬೇಕು.

**ನಾನು** : (ಹಿಂದಿನಂತೆಯೇ ನಾಲ್ಕು ಪುಸ್ತಕಗಳನ್ನು ಮುಚ್ಚಿ ಕೊಟ್ಟೆ – ಅತ್ಯಂತ ಸಂತೋಷದಿಂದ)

**ಡಾ. ಗೊಂದಲೇಶ್ವರ್** : ಮೂರನೆಯ ಪ್ರಶ್ನೆ. ಈ ಅಪೂರ್ಣ ಲೆಕ್ಕವನ್ನು ಪೂರ್ಣಗೊಳಿಸಿ. 50 – 25 – 25. ಇದಕ್ಕೆ ಆಯ್ಕೆಗಳಿಲ್ಲ.

**ನಾನು** : ಐವತ್ತು ಡ್ಯಾಷ್ ಇಪ್ಪತ್ತೈದು ಡ್ಯಾಷ್ ಇಪ್ಪತ್ತೈದು. ಸರಿಯಾಗಿ ನೂರು.

**ಡಾ. ಗೊಂದಲೇಶ್ವರ್** : ...... ಒಂಬತ್ತು ಪುಸ್ತಕಗಳನ್ನು ನಮಗೆ ಕೊಡಬೇಕು. ಯಾಕೋ ನಿಮಗೆ ಗೊಂದಲವಾಗುತ್ತಿರುವಂತೆ ನನಗೆ ತೋರುತ್ತಿದೆ. ಹಾಗಾಗಿ ಸ್ವಲ್ಪ ನಿಧಾನಕ್ಕೆ ಯೋಚಿಸಿ ಉತ್ತರ ಕೊಡೋಕೆ ಪ್ರಯತ್ನ ಮಾಡಿ.

**ನಾನು** : ನಾನು ಯೋಚಿಸುತ್ತಾ ಕೂತರೆ ಬೇರೆಯವರು ಗುಂಡಿ ಒತ್ತಿಬಿಡ್ತಾರೆ. ಅದಕ್ಕೇ ನಾನು ಕಣ್ಣು ಮುಚ್ಚಿಕೊಂಡು ಗುಂಡಿಯನ್ನ ಒತ್ತೋದು.

**ಡಾ. ಗೊಂದಲೇಶ್ವರ್** : ನಾಲ್ಕನೇ ಪ್ರಶ್ನೆ. ಈ ಗಾದೆಯನ್ನು ಪೂರ್ತಿ ಮಾಡಿ. 'ಹೊಟ್ಟೆಗೆ ಹಿಟ್ಟಿಲ್ಲ. . .' ನಿಮ್ಮ ಆಯ್ಕೆಗಳು :

1. ಮೊಟ್ಟೆಗೆ ಪಟ್ಟೆ ಇಲ್ಲ

2. ಜುಟ್ಟಿಗೆ ಮಲ್ಲಿಗೆ

3. ಕಾಲಿಗೆ ಪಾದರಕ್ಷೆ

**ನಾನು** : ಮೊಟ್ಟೆಗೆ ಪಟ್ಟೆ ಇಲ್ಲ.

**ಡಾ. ಗೊಂದಲೇಶ್ವರ್** : ಕ್ಷಮಿಸಿ. ಅದೂ ತಪ್ಪು ಉತ್ತರ. ನೀವು ಹದಿನಾರು ಪುಸ್ತಕಗಳನ್ನು ನಮಗೆ ಕೊಡಬೇಕು. ಕ್ಷಮಿಸಿ. ನನಗೇನೇ ತುಂಬಾ ಗೊಂದಲ ಆಗ್ತಾ ಇದೆ. ನೀವು ಯಾಕೆ ಮೊದಲು ಗುಂಡಿ ಒತ್ತಿ ತಪ್ಪು

ಉತ್ತರ ಹೇಳುತ್ತಿದ್ದೀರೋ ನನಗೆ ಅರ್ಥ ಆಗ್ತಾ ಇಲ್ಲ. ಬೇರೆಯವರಿಗೂ ಅವಕಾಶ ಕೊಡದೆ ನೀವೇ ಮೊದಲು ಗುಂಡಿಯನ್ನು ಒತ್ತುತ್ತಿದ್ದೀರಿ. ಆದರೆ ನೀವು ಮೊದಲು ಗುಂಡಿಯನ್ನು ಒತ್ತುವ ಹಾಗಿಲ್ಲ ಅಂತ ನಾನು ಹೇಳುವ ಹಾಗೂ ಇಲ್ಲ. ಯಾಕೆಂದರೆ ಹಾಗೆಂದು ನಿಯಮದಲ್ಲಿಲ್ಲ.

**ನಾನು** : (ಇಪ್ಪತ್ತೈದು ಪುಸ್ತಕಗಳನ್ನು ಕೊಟ್ಟೆ)

**ಡಾ. ಗೊಂದಲೇಶ್ವರ್** : ಈಗ ಐದನೇ ಪ್ರಶ್ನೆಗೆ ಹೋಗೋಣ. ಈ ಸಲವಾದರೂ ಸರಿಯಾದ ಉತ್ತರ ನೀಡುವಿರೇನೋ ನೋಡೋಣ. ತೆರೆಯ ಮೇಲಿರುವವರ ಚಿತ್ರವನ್ನು ನೋಡಿ. ಈ ಪ್ರಸಿದ್ಧ ನಟ ಯಾರು. ನಿಮ್ಮ ಆಯ್ಕೆಗಳು:

1. ಉಜ್ವಲ್
2. ಪ್ರಾಣ್ ಕುಮಾರ್
3. ನುಗ್ಗೇಶ್

**ನಾನು** : ಮಾಸ್ತಿ ವೆಂಕಟೇಶ ಅಯಂಗಾರ್.

**ಡಾ. ಗೊಂದಲೇಶ್ವರ್** : ಅವರು ಒಬ್ಬ ಸಾಹಿತಿಗಳು, ನಟರಲ್ಲ, ಹಾಗಾಗಿ ನಿಮ್ಮ ಉತ್ತರ ತಪ್ಪು. ನೀವು ಇಪ್ಪತ್ತೈದು ಪುಸ್ತಕಗಳನ್ನು ನಮಗೆ ಕೊಡಬೇಕು.

**ನಾನು** : (ಅತೀವ ಆನಂದದಿಂದ ಇಪ್ಪತ್ತೈದು ಪುಸ್ತಕಗಳನ್ನು ಕೊಟ್ಟು ಸಂತೋಷದ ನಿಟ್ಟುಸಿರನ್ನಿಟ್ಟೆ)

**ಡಾ. ಗೊಂದಲೇಶ್ವರ್** : ಮುಂದಿನ ಪ್ರಶ್ನೆಗೆ, ಅಂದರೆ, ಆರನೇ ಪ್ರಶ್ನೆಗೆ ಹೋಗೋಣ. ಈ ಅಕ್ಷರಗಳನ್ನು ಸರಿಯಾಗಿ ಜೋಡಿಸಿ.

ತಿ ಕೇ ಅ ಡು ಸೆ ಆ ಗ

**ನಾನು** : ಅ ಆ ಕೇ ಗ ಡು ತಿ ಸೆ

**ಡಾ. ಗೊಂದಲೇಶ್ವರ್** : ಒಂದು ಅರ್ಥ ಬರುವಂತೆ ಅಕ್ಷರಗಳನ್ನು ಜೋಡಿಸಬೇಕಾಗಿತ್ತು. ಆದರೆ ನೀವು ವರ್ಣಮಾಲೆಯಲ್ಲಿನ ಕ್ರಮದಲ್ಲಿ ಜೋಡಿಸಿಬಿಟ್ಟಿರಿ. ಗೊಂದಲವಾಯಿತು ಅಂತ ಕಾಣತ್ತೆ. ಈಗ ನೀವು ಮುವ್ವತ್ತಾರು ಪುಸ್ತಕಗಳನ್ನು ನಮಗೆ ಕೊಡಬೇಕಾಗುತ್ತದೆ.

**ನಾನು** : ನೋ ಪ್ರಾಬ್ಲಂ ಅಟಾಲ್ (ಮುವ್ವತ್ತಾರರ ವರ್ಗದಷ್ಟು ಸಂತೋಷದಿಂದ ಕೊಡುತ್ತಾ).

**ಡಾ. ಗೊಂದಲೇಶ್ವರ್** : ಈ ಚಲನಚಿತ್ರದ ತುಣುಕನ್ನು ನೋಡಿ ಜಾನಪದ ಕಲೆಯನ್ನು ಗುರುತಿಸಿ. ನಿಮ್ಮ ಆಯ್ಕೆಗಳು

1. ತೊಗಲು ಗೊಂಬೆಯಾಟ
2. ವೀರಗಾಸೆ
3. ಡೊಳ್ಳುಕುಣಿತ

**ನಾನು** : ದೊಂಬರಾಟ.

**ಡಾ. ಗೊಂದಲೇಶ್ವರ್** : ಆಯ್ಕೆಗಳಲ್ಲಿ ಇಲ್ಲದಿರುವುದನ್ನು ಹೇಳಿದಿರಲ್ಲಾ. ಸರಿಯಾಗಿದ್ದಿದ್ದರೆ ಸರಿಯಾಗಿರುತ್ತಿತ್ತೇನೋ. ಆದರೆ ತಪ್ಪಾದ್ದರಿಂದ ಈ ಸಲ ನೀವು ನಲವತ್ತೊಂಬತ್ತು ಪುಸ್ತಕಗಳನ್ನು ಕೊಡಬೇಕಾಗತ್ತೆ. ನಿಮ್ಮನ್ನ ನೋಡಿದರೆ ನನಗೆ ಒಂದು ರೀತಿಯ ಸಂಕಟವಾಗತ್ತೆ, ಅನವಶ್ಯಕವಾಗಿ ಪುಸ್ತಕಗಳನ್ನು ಕಳೆದುಕೊಳ್ಳುತ್ತೀದ್ದಿರಲ್ಲಾ ಅಂತ.

**ನಾನು** : ಅಯ್ಯೋ, ನೀವು ಇದಕ್ಕೆಲ್ಲ ಬೇಸರಪಟ್ಟುಕೊಳ್ಳುವ ಅವಶ್ಯಕತೆಯೇ ಇಲ್ಲ. ಸೋಲುಗಳು ಗೆಲುವಿನ ಚಪ್ಪರ ಅಂತ ನಮ್ಮ ಹಿರಿಯರು ಹೇಳಿಕೊಟ್ಟಿದ್ದಾರೆ.

**ಡಾ. ಗೊಂದಲೇಶ್ವರ್** : ಸಂತೋಷ. ಎಂಟನೇ ಪ್ರಶ್ನೆ. ಈ ಮಾತುಗಳನ್ನು ಹೇಳಿದವರು ಯಾರು? 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ.'

(ಇನ್ನು ಮುಂದೆ ಆಯ್ಕೆಗಳನ್ನೂ ಇಲ್ಲಿ ಬರೆಯುವುದಿಲ್ಲ. ಯಾಕೆಂದರೆ ಅದೂ ಅಪ್ರಸ್ತುತ. ನಾನು ಆಯ್ಕೆಗಳನ್ನು ನೋಡಿಕೊಂಡು ಉತ್ತರ ಕೊಡುವ ಆಸಾಮಿಯೇ?)

**ನಾನು** : ಸಾಧು ಕೋಕಿಲ.

**ಡಾ. ಗೊಂದಲೇಶ್ವರ್** : ಛೆ, ನಿಮ್ಮಿಂದ ಇದಕ್ಕಾದರೂ ಸರಿಯಾದ ಉತ್ತರವನ್ನು ನಿರೀಕ್ಷಿಸಿದ್ದೆ. ನಿಮ್ಮ ಉತ್ತರ ತಪ್ಪು. ಈ ತಪ್ಪು ಉತ್ತರಕ್ಕೆ ನೀವು ಅರವತ್ನಾಲ್ಕು ಪುಸ್ತಕಗಳನ್ನು ನಮಗೆ ಕೊಡಬೇಕಾಗುತ್ತದೆ. ನಿಮ್ಮಲ್ಲಿ ಒಂದು ಮನವಿ. ನಿಮ್ಮ ಬುದ್ಧಿಯನ್ನು ನಿಮ್ಮ ಕೈಯಲ್ಲಿಟ್ಟುಕೊಂಡು ಉತ್ತರ ನೀಡಿದರೆ ಇನ್ನುಳಿದ ಪ್ರಶ್ನೆಗಳಿಗಾದರೂ ಸರಿಯಾದ ಉತ್ತರವನ್ನು ನೀವು ನೀಡಬಹುದೋ ಏನೋ. ದಯವಿಟ್ಟು ಪ್ರಯತ್ನಿಸಿ.

**ನಾನು** : (ಅರವತ್ನಾಲ್ಕರ ಬದಲು ಎಂಭತ್ತು ಪುಸ್ತಕಗಳನ್ನು ಮಾಮೂಲು ರೀತಿಯಲ್ಲಿ ಅವರಿಗೆ ಹಸ್ತಾಂತರಿಸುತ್ತಾ) ತಲೆಯಲ್ಲಿ ಬುದ್ಧಿಯನ್ನಿಟ್ಟುಕೊಂಡೇ ಸರಿಯಾದ ಉತ್ತರಗಳನ್ನು

| | | |
|---|---|---|
| | | ಕೊಡಲಾಗುತ್ತಿಲ್ಲ. ಇನ್ನು ಕೈಯ್ಯಲ್ಲಿ ಬುದ್ಧಿಯನ್ನಿಟ್ಟುಕೊಂಡರೆ ದೇವರೇ ಗತಿ. |
| **ಡಾ. ಗೊಂದಲೇಶ್ವರ್** | : | ಸರಿ. ನಿಮ್ಮ ಹಣೇಬರಹ. |
| **ನಾನು** | : | (ಡಾ. ಗೊಂದಲೇಶ್ವರರನ್ನು ನೋಡುತ್ತಾ ಮನಸ್ಸಿನಲ್ಲೇ 'ನನ್ನ ಹಣೆ ಬರಹವಲ್ಲ, ನಿಮ್ಮ ಹಣೆ ಬರಹ ' ಎಂದುಕೊಂಡೆ) |
| **ಡಾ. ಗೊಂದಲೇಶ್ವರ್** | : | ಒಂಬತ್ತನೇ ಪ್ರಶ್ನೆ. ಶಿಕ್ಷಕರ ದಿನವನ್ನು ಯಾರ ಜನ್ಮದಿನವನ್ನಾಗಿ ಆಚರಿಸಲಾಗುತ್ತದೆ? |
| **ನಾನು** | : | ಆಯಾ ಶಾಲೆಯ ಯಾ ಕಾಲೇಜಿನ ಪ್ರಾಂಶುಪಾಲರ ಜನ್ಮದಿನವನ್ನಾಗಿ ಆಚರಿಸಲಾಗುತ್ತದೆ (ಎಂಬತ್ತೊಂದಕ್ಕೆ ಇನ್ನೊಂದಷ್ಟು ಸೇರಿಸಿ ಪುಸ್ತಕದ ಒಂದು ದೊಡ್ಡ ಬಂಡಲನ್ನು ಅವರ ಪಕ್ಕ ಇರಿಸಿದೆ) |
| **ಡಾ. ಗೊಂದಲೇಶ್ವರ್** | : | (ಮುಖದ ತುಂಬಾ ಕಾರಂಜಿಯಂತೆ ಜಿನುಗುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತಾ) ಹತ್ತನೇ ಪ್ರಶ್ನೆ. ರಾಜಾ ವೀರಸಿಂಗ್ ಸತ್ತಿದ್ದು ಯಾವ ಯುದ್ಧದಲ್ಲಿ? |
| **ನಾನು** | : | ರಾಜಾ ವೀರಸಿಂಗ್ ಸತ್ತಿದ್ದು ಅವನು ಹೋರಾಡಿದ ಅಂತಿಮ ಯುದ್ಧದಲ್ಲಿ. (ನೂರು ಪ್ಲಸ್ ಗಂಟನ್ನು ಅವರ ಪಕ್ಕಕ್ಕಿಟ್ಟೆ) |
| **ಡಾ. ಗೊಂದಲೇಶ್ವರ್** | : | (ಬಾಯಿ ಒಣಗಿತ್ತೇನೋ. ಅರ್ಧ ಲೀಟರ್ ಬಾಟಲನ್ನೆತ್ತಿ, ಅದರಲ್ಲಿದ್ದ ಅಷ್ಟೂ ನೀರನ್ನು ಖಾಲಿ ಮಾಡಿದರು – ಒಂದೇ ಏಟಿಗೆ) ಈಗ ಹನ್ನೊಂದನೇ ಪ್ರಶ್ನೆ. ಕುಮಾರ ವ್ಯಾಸ ಭಾರತಕ್ಕಿರುವ ಇನ್ನೊಂದು ಹೆಸರು ಏನು? |
| **ನಾನು** | : | ಮುದ್ದಣ ಭಾರತ (ಹನ್ನೊಂದು ಹನ್ನೊಂದಲ ನೂರಾ ಇಪ್ಪತ್ತೊಂದಕ್ಕೆ ಇನ್ನೊಂದೈವತ್ತೊಂದನ್ನು ಸೇರಿಸಿ ಅವರ ಮುಂದಿಟ್ಟೆ) |
| **ಡಾ. ಗೊಂದಲೇಶ್ವರ್** | : | ಕೊನೆಯ, ಅಂದರೆ ಹನ್ನೆರಡನೆಯ ಪ್ರಶ್ನೆಗೆ ಬಂದಿದ್ದೇವೆ. ಅದನ್ನೂ ಕೇಳಿಬಿಡುತ್ತೇನೆ. ಸಾಮಾನ್ಯವಾಗಿ ಕೊನೆಯ ಪ್ರಶ್ನೆ ತುಂಬಾ ಕ್ಲಿಷ್ಟವಾಗಿರುವುದು ಸಹಜ. ಆದರೆ, ಇವತ್ತು ಅತ್ಯಂತ ಸರಳವಾದ ಪ್ರಶ್ನೆಯನ್ನು ಕೇಳುತ್ತೇನೆ. ಯಾಕೆ ಎನ್ನುವುದು ನಿಮಗೆಲ್ಲಾ ತಿಳಿದಿದೆ ಎಂದು ಭಾವಿಸುತ್ತೇನೆ. ಇದೋ ಪ್ರಶ್ನೆ. 'ಕನ್ನಡ ವರ್ಣಮಾಲೆ'ಯ ಮೊದಲ ಅಕ್ಷರ ಯಾವುದು? |
| **ನಾನು** | : | 'ಕನ್ನಡ ವರ್ಣಮಾಲೆ'ಯ ಮೊದಲ ಅಕ್ಷರ ನಿಸ್ಸಂಶಯವಾಗಿ 'ಕ.' (ಉಳಿದಿದ್ದ ಅಷ್ಟೂ ಪುಸ್ತಕಗಳನ್ನು ಅವರಿಗರ್ಪಿಸಿ, |

ವಿಜಯೋತ್ಸಾಹದಿಂದ, ಡಾ. ಗೊಂದಲೇಶ್ವರರತ್ತ ನೋಡುತ್ತಾ) ಧನ್ಯವಾದಗಳು (ಕೈ ಮುಗಿದೆ)

**ಡಾ. ಗೊಂದಲೇಶ್ವರ್ :** ವೀಕ್ಷಕರೇ, ಇವತ್ತು ನಿಜವಾಗಿಯೂ ವಿಶೇಷವಾದ ದಿನ. 'ಫಟಾಫಟ್ ಅಂತ ಹೇಳಿ'ಯ ಇತಿಹಾಸದಲ್ಲೇ ನಡೆದಿರದಂತಹ ವಿಶೇಷ ಇಂದು ನಡೆದಿದೆ. 'ನ ಭೂತೋ ನ ಭವಿಷ್ಯತಿ' ಅಂತಾರಲ್ಲ, ಅಂತಹ ದಿನ ಇವತ್ತಿನ ದಿನ. ಬಹುಶಃ, ಇನ್ನೂ ನೂರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ವಿಜೇತ ರಾಗುವವರಿಗೆ ಬಹುಮಾನವಾಗಿ ಕೊಡಬಹುದಾದಷ್ಟು ಪುಸ್ತಕಗಳನ್ನು ಈ ಮಹನೀಯರೊಬ್ಬರೇ ನಮಗೆ ನೀಡಿದ್ದಾರೆ. ಹಾಗಾಗಿ ಈ ಮಹಾನುಭಾವರಿಗೆ ನಿಮ್ಮೆಲ್ಲರ ಪರವಾಗಿ ಧನ್ಯವಾದಗಳು. ಇಲ್ಲಿಗೆ ಇಂದಿನ ಫಟಾಫಟ್ ಅಂತ ಹೇಳಿ ಕಾರ್ಯಕ್ರಮ ಮುಗೀತು. ನಮ್ಮ ನಿಮ್ಮ ಭೇಟಿ ಮುಂದಿನ ವಾರ ಇದೇ ಸಮಯಕ್ಕೆ. ನಮಸ್ಕಾರ.

(ವಿಸೂ: ಕುರುಕ್ಷೇತ್ರದಲ್ಲಿ ಲಕ್ಷಾಂತರ ಸೈನಿಕರಿಗೆ ಊಟ, ವಸತಿ, ನಿತ್ಯಕರ್ಮ ಇತ್ಯಾದಿಗಳನ್ನು ಹೇಗೆ ನಿಭಾಯಿಸಿದರು ಅನ್ನೋ ಪ್ರಶ್ನೆಯಂತೆ ಇಲ್ಲಿಯೂ ನೀವೊಂದು ಪ್ರಶ್ನೆಯನ್ನು ಕೇಳಬಹುದು. ಅಷ್ಟೊಂದು ಪುಸ್ತಕಗಳನ್ನು ಹೇಗೆ ನಾನು ಕೊಟ್ಟೆ? ಅಂತ. ಎಲ್ಲವೂ ಪೂರ್ವನಿಯೋಜಿತ. ಅಂದುಕೊಂಡದ್ದನ್ನು ಸಾಧಿಸುವ ಛಲಗಾರನಲ್ಲವೇ ನಾನು? ಜೊತೆಯಲ್ಲಿ ನನ್ನ ಸಹಧರ್ಮಿಣಿ ಪದ್ದಿಯನ್ನೂ ಕರೆದೊಯ್ದಿದ್ದೆ. ನನ್ನೆಲ್ಲ ಯಶಸ್ಸಿನ ಹಿಂದೆಯೂ ನನ್ನ ಪದ್ದಿ ಇದ್ದೇ ಇರ್ತಾಳೆ).

## ಭಾಗ್ಯವಂತ

ಮಡದಿ ಗಟ್ಟಿಗಳಾಗಿ ಮೈಬಂದು ಮೆರೆವಾಗ
ಕೈಹಿಡಿದ ಗಂಡನೆ ಅದೃಷ್ಟಶಾಲಿ
ಹಸ್ತಬಲದಿಂದಾಕೆ ಬಂಡಿಯನು ಎಳೆವಾಗ
ಎಮ್ಮೆಗಳು ಬೇಕೆ ಹೇಳಿ?
ಮಡದಿಯೆ ಸೂರಿನೆತ್ತರ ಬೆಳೆದು ನಿಂತಿರಲು
ಕಂಬಗಳು ಬೇಕೆ ಮನೆಗೆ?
ಕಣ್ತೆರೆಯಲಾಕೆ ಮಿಂಚಿನ ಬೆಳಕು ಬರುತಿರಲು
ಮನೆಗೆ ಆ ದೀಪವೇ ಸಾಕು
ಚೆಲುವು ಹದಗೆಟ್ಟು ಉರಿಸಿಂಗಿಯಾಗಿರಲವಳು
ಆಹಾ! ನಿನಗಿನ್ನೇನುಬೇಕು

– ಜಯಣ್ಣ

# ನನ್ನ ಗಡ್ಡದ ಪುರಾಣ

**- ಎಚ್.ಜಿ. ಸೋಮಶೇಖರ ರಾವ್**

**60**ರ ದಶಕದಲ್ಲಿ ನಾನು ಬ್ಯಾಂಕ್ ನೌಕರಿ ಸೇರಿದಾಗ ನನಗೆ 28 ವರ್ಷ. ಆಗ ಧಾರವಾಡ ಜಿಲ್ಲೆಯಲ್ಲಿದ್ದ ನರಗುಂದ ಎಂಬ ಸಣ್ಣ ಊರಿನಲ್ಲಿದ್ದ ಹತ್ತಿ ಗಿರಣಿಯಲ್ಲಿ ಲೇಬರ್ ಆಫೀಸರ್ ಆಗಿದ್ದು 350/-ರೂ.ಗಳ ಪಗಾರ ಪಡೆಯುತ್ತಿದ್ದೆ. ನನಗೆ ಲಗ್ನವಾಗಿ 6 ತಿಂಗಳಾಗಿತ್ತು. ಕೆ.ಜಿ.ಎಫ್.ನ 'ಬಂಗಾರದ ಗಣಿ'ಯಲ್ಲಿ ದೊಡ್ಡ ಹುದ್ದೆಯಲ್ಲಿದ್ದವರ ಮಗಳನ್ನು ಮದುವೆಯಾಗಿದ್ದೆ. ಹೆಣ್ಣು ಕೊಟ್ಟ ಮಾವನ ಮನೆ ದೊಡ್ಡ ಬಂಗಲೆ. ನಾನೋ ನರಗುಂದದಂಥ ಸಣ್ಣ ಊರಿನಲ್ಲಿ ಶೀಟ್ ಹೊಚ್ಚಿದ್ದ ಪುಟ್ಟಮನೆಯಲ್ಲಿದ್ದೆ. ಊರ ಹೊರಗೆ ಗಿರಣಿಯ ಹತ್ತಿರದ ಈ ಮನೆಗೆ ಹೆಂಡತಿಯನ್ನು ಕರೆದುಕೊಂಡು ಬರಲು ನನಗೆ ಹಿಂಜರಿಕೆ ದೊಡ್ಡ ಬಂಗಲೆಯಲ್ಲಿದ್ದ ಹೆಂಡತಿಯನ್ನು ಇಲ್ಲಿಗೆ ಕರೆದುಕೊಂಡು ಬರುವುದು ಹೇಗೆ? ಅಲ್ಲಿ ಅರಳಿದ್ದ ಬಂಗಲೆಯ ಶೌಚಗೃಹ ವಿದೇಶಿ ಮಾದರಿಯದ್ದು. ಇಲ್ಲಿ ಬೆಳಗಾದರೆ ಮನೆಯಿಂದ ಸ್ವಲ್ಪ ದೂರದಲ್ಲಿರುವ ಸಂಡಾಸು; ಆರು ಮನೆಯವರಿಗೂ ಒಂದೇ ಸಾಮಾನ್ಯವಾದ ಸಂಡಾಸಿಗೆ ಬೆಳಗಾದರೆ ಸರದಿ ಪ್ರಕಾರ ನಿಲ್ಲಬೇಕು. ಮನೆ ಹಿಂದೆ-ಮುಂದೆ ಗದ್ದೆ. ಇಲಿ-ಹೆಗ್ಗಣ-ಹಾವುಗಳ ಕಾಟ. ಇಂತಹ ಕಡೆ ಬಂಗಲೆರಾಸಿ ಹೆಣ್ಣನ್ನು ತರಲಾಗದೆ, ನಗರಪ್ರದೇಶದ ಯಾವುದಾದರೂ ಕಂಪನಿಯ ಕೆಲಸ ಹಿಡಿಯಬೇಕೆಂದು ನಿರ್ಧರಿಸಿ ಹತ್ತಾರು ಅರ್ಜಿಗಳನ್ನು ಗುಜರಾಯಿಸಿದೆ. 3-4 ಕಡೆಯಿಂದ ಕರೆಬಂತು. ನಾನು ನಾಡಿನ ದೊಡ್ಡ ಬ್ಯಾಂಕ್ ಹಾಗೂ ಪ್ರಧಾನ ಕಚೇರಿ ಬೆಂಗಳೂರಿನಲ್ಲಿರುವ ಕೆನರಾ ಬ್ಯಾಂಕ್‌ನ ಸಂದರ್ಶನಕ್ಕೆ ಹೋಗಿ ಅಲ್ಲಿ ಆಯ್ಕೆಯಾದೆ - ಕಾಂಟ್ರಾಕ್ಟ್ ಮೇಲೆ ಒಂದು ವರ್ಷಕ್ಕೆ - 400/-ರೂ. ಸಂಬಳ ತಿಂಗಳಿಗೆ! ಒಂದು ವರ್ಷಾ ನಂತರ ಬ್ಯಾಂಕಿಗೆ ನನ್ನ ಕೆಲಸ ಸಮರ್ಪಕ ಅನ್ನಿಸಿದರೆ ಕೆಲಸ ಮುಂದುವರಿಕೆ - ಇಲ್ಲವೇ ಮನೆಗೆ ವಾಪಸ್!! ನಾನು ಧೈರ್ಯಮಾಡಿ ಬ್ಯಾಂಕ್ ಸೇರಿದೆ.

**ಗಡ್ಡದ ಆರೈಕೆ ಪೋಷಣೆಯ ಕಷ್ಟ ದಾಡಿವಾಲನಿಗೆ ಮಾತ್ರ ಗೊತ್ತು**

ಮೊದಲ ದಿನವೇ ಪ್ರಧಾನ ಕಚೇರಿಯ ಪ್ರವೇಶ. ಹೋಗುವ ಮುನ್ನ ಎಚ್ಚರದಿಂದ ಮುಖಕ್ಷೌರ ಮಾಡಿಕೊಂಡೆ. ಲಗ್ನದಲ್ಲಿ ಮಾವ ಕೊಟ್ಟಿದ್ದ ಎರಡು ಸೂಟ್‌ಗಳಲ್ಲಿ ಒಂದನ್ನು ಆಯ್ಕೆ ಮಾಡಿದೆ; ಅದಕ್ಕೆ ಹೊಂದುವ ಟೈಯನ್ನು ಬಂಧುಗಳೊಬ್ಬರ ಸಹಾಯದಿಂದ ಕಟ್ಟಿಸಿಕೊಂಡೆ. ಸೂಟು-ಬೂಟು-ಟೈ ಧರಿಸಿ ಕನ್ನಡಿಯಲ್ಲಿ ಹತ್ತಾರು ರೀತಿಯ ಭಂಗಿಗಳಲ್ಲಿ ನೋಡಿಕೊಂಡು ಮತ್ತೊಮ್ಮೆ ಕ್ರಾಪು ತೀಡಿಕೊಂಡು ಹೊರಟೆ, ಆಗಿನ ನನ್ನ ಮುಜುಗರ

ಹೇಳುವುದು ಕಷ್ಟ, ಇರಲಿ ಕಚೇರಿ ತಲುಪಿದೆ. ನನಗೆ ಧೈರ್ಯ ಹೇಳಿ ಶುಭಾಶಯ ಹೇಳಲು ನನ್ನ ಮಾವನವರು ಬಂದಿದ್ದರು...

ಆ ದಿನದಿಂದ ನಾನು ನಿವೃತ್ತನಾಗುವ ತನಕ ರಜಾದಿನವೂ ಸೇರಿದಂತೆ ನಿತ್ಯ ಮುಖಕ್ಷೌರ ಮಾಡಿಕೊಳ್ಳುತ್ತಿದ್ದೆ. ನಾನು ಸೇರಿದ ಬ್ಯಾಂಕ್‌ನ ಇಲಾಖೆ ಬಹಳ ಪ್ರಮುಖವಾದದ್ದು - Recruitment ನಿಂದ Retirementನ ತನಕ. (ಅದನ್ನೇ ಸಹೋದ್ಯೋಗಿಗಳು Cradle to crematorium ಎಂದು ತಮಾಷೆ ಮಾಡುತ್ತಿದ್ದರು). ನನ್ನ ಪ್ರಾರಂಭಿಕ ಬ್ಯಾಂಕಿನ ನೌಕರಿ ದಿನಗಳಲ್ಲಿ ಸೂಟು-ಬೂಟು-ಟೈ ಇಲ್ಲದೆ ಕಚೇರಿಗೆ ಹೋಗಿದ್ದಿಲ್ಲ. Trim and Tidy. ಹೀಗಿರುವಾಗ ನಿತ್ಯ Shave ಮಾಡಿಕೊಳ್ಳದೆ ಹೇಗಿರೋದು? ಬೆಳಿಗ್ಗೆ ಅರೆ ಎಚ್ಚರದಲ್ಲೆ ಮುಖಕ್ಷೌರ ನಡೆಯುತ್ತಿತ್ತು ಮೀಸೆಯದೊಂದೇ ಸಮಸ್ಯೆ; ಕತ್ತಲಲ್ಲಿ ನಿಂತು ಕತ್ತರಿಸಿಕೊಂಡರೆ ಎಡವಟ್ಟು ಖಂಡಿತ.... ಒಮ್ಮೊಮ್ಮೆ ಬಲಕ್ಕೆ ಕಟ್ ಜಾಸ್ತಿ ಅಂತ ಎಡಕ್ಕೆ ಬೋಳಿಸಿದರೆ ಅಲ್ಲಿ ಅಗಲ ಕಡಿಮೆಯಾಗಿ ಬಲದಲ್ಲಿ ಸರಿಪಡಿಸಿಕೊಳ್ಳಬೇಕು. ಉದ್ದನೆಯ ಚೂಪು ಮೀಸೆ ಗಿಡ್ಡನೆಯ ಅಡ್ಡಮೀಸೆಯಾಗುತ್ತಿತ್ತು... ಅಲ್ಲಿಷ್ಟು ಇಲ್ಲಿಷ್ಟು ಕೆರೆಯುತ್ತಾ ಕೊನೆಗೆ ಮೀಸೆ ಮಾಯವಾಗುತ್ತಿದ್ದುದ್ದೂ ಉಂಟು! ಇರಲಿ... ಈ ಮಧ್ಯೆ ನನ್ನಪ್ಪ ತೀರಿಕೊಂಡರು. ಶಾಸ್ತ್ರರೀತ್ಯ ಮತ್ತು ಹಿರಿಯರ ಬಲವಂತಕ್ಕೆ ಕ್ಷೌರಿಕನಿಗೆ ನನ್ನ ತಲೆಕೊಟ್ಟೆ... ತಲೆ ಮೇಲೆ ಬೆಳೆಸಿ-ಬಣ್ಣ ಹಾಕುತ್ತ ಒಪ್ಪವಾಗಿಟ್ಟಿದ್ದ ಕ್ರಾಪು, ನಿತ್ಯವೂ ಜಾಗರೂಕತೆಯಿಂದ ಕಟ್‌ಮಾಡಿ ಇಟ್ಟುಕೊಂಡಿದ್ದ ಮೀಸೆ ಎಲ್ಲಾ ಪೂರ್ವನಿರ್ಧಾರದಂತೆ ನುಣ್ಣಗೆ ಬೋಳಿಸಾಯಿತು. ವೈಕುಂಠ ಸಮಾರಾಧನೆಯ ತನಕ ಹೇಗೋ ನಿಭಾಯಿಸಿ ಬಿಟ್ಟೆ. ಮುಂದೆ ಆಫೀಸಿಗೆ ಹೋಗುವ ಕಾಲ ಬಂದಾಗ - ಸೂಟು-ಬೂಟು ಸರಿ ಹೋಗಲ್ಲ ಅಂತ ತಲೆಗೆ ಒಂದು ಬಣ್ಣದ ಟೋಪಿ ಹುಡುಕಿ ಹಾಕಿಕೊಂಡು, ಸಫಾರಿ ಧರಿಸಿ, ಚಪ್ಪಲಿ ಧರಿಸಿ ಆಫೀಸಿಗೆ ಹೋದಾಗ ಸಹೋದ್ಯೋಗಿಗಳಲ್ಲಿ ಕಂಡ ವಿಚಿತ್ರವಾದ ಮುಸುಮುಸು ನಗು ನನಗೆ ಮುಜುಗರವನ್ನುಂಟು ಮಾಡಿತು. ಎಲ್ಲರಿಗೂ ನಾನೊಂದು Caricature - ವ್ಯಂಗ್ಯ ಚಿತ್ರದ ಹಾಗೆ ಕಾಣುತ್ತಿದ್ದೆ. ಬೇಗ ಬೇಗ ಕೂದಲು ಬೆಳಸಿ ಮೊದಲಿನ ಹಾಗೆ ಕಾಣುವ ಕಲೆ ನನಗಿರಲಿ, ಯಾರಿಗೂ ಗೊತ್ತಿಲ್ಲ. ಕಾಯಬೇಕು! ಈಗತಾನೆ ನಾಟಿ ಮಾಡಿದ್ದ ಹೊಲದ ಬೆಳೆಯ ಹಾಗೆ ಕುರಚಲು ಶುರುವಾಯಿತು.

## ಕುರಚಲು ಗಡ್ಡ - ದರವೇಶಿ:

ಈ ಹಂತ ಕಷ್ಟಕರ; ಕಾಯಿಲೆಯ ಕಳೆ, 'ಏನ್ ಸ್ವಾಮಿ, ಮೈಲಿ ಹುಶಾರಿಲ್ಲವೇ?' ಎಂಬ ಪ್ರಶ್ನೆ. 'ಚೆನ್ನಾಗಿದ್ದೇನೆ' ಅಂದರೂ ಅನುಮಾನ. ಮತ್ತೆ ಕೆಲವು ಹತ್ತಿರದ ಸ್ನೇಹಿತರು - ಕಿಲಾಡಿಗಳು - ''ಏನು? ಎಷ್ಟು ತಿಂಗಳು ಹೆಂಡತಿಗೆ? ಎಷ್ಟನೇದು ಈಗ?'' ಎಂದು ಕಿಚಾಯಿಸುವುದು: ''ಅಯ್ಯಾ, ಆ ವಯಸ್ಸು ಮೀರಿ ಹೋಗಿದೆ'' ಅಂತ ಪೆಚ್ಚು ಪೆಚ್ಚಾಗಿ ಹೇಳಿ ಕೃತಕ ನಗೆ ನಕ್ಕು ಸುಮ್ಮನಾಗಬೇಕು. ದಾಡಿ ಬೆಳೆಸುವವರಿಗೆ ಕುರಚಲು ಗಡ್ಡದ ಹಂತ (stage) ಅನಿವಾರ್ಯ. ಅಂತಹ ಸ್ಥಿತಿಯಲ್ಲಿ ಕುರಚಲು ಗಡ್ಡಧಾರಿ ಅಪರಿಚಿತ ವ್ಯಾಪ್ತಿಯ ಯಾವುದಾದರೂ ಮೂಲೆಯಲ್ಲಿ ನಿಲ್ಲುವುದು ಅಪಾಯಕಾರಿ! ಏಕೆಂದರೆ ನಿಮ್ಮಂಥಹವರು

ಕರುಣೆಯಿಂದ ಕಾಸು ಕೊಡಲೂಬಹುದು. ಅದು ಅಂತಹ 'ದರವೇಶಿ' ಸ್ಥಿತಿ: ಏನೋ ಪಾಪ! ದಿಕ್ಕಿಲ್ಲದ ಅನಾಥ ಭಿಕ್ಷುಕನಿರಬಹುದು! ಅಂತ.

### ವಿದಾಯ

ಬಹಳ ಹೊತ್ತು ಮನೇಲಿ
ಕುಳಿತಿದ್ದ ಸೊಸೆ
ಸ್ನೇಹಿತೇನ ಸಾಗ ಹಾಕೋಕೆ
ಅತ್ತೆ ಒಂದು ಉಪಾಯ ಮಾಡಿ
ಸೊಸೆಗೆ
ಅವಳಿಗೆ ಕುಂಕುಮ ಕೊಡಮ್ಮ
ಹೊತ್ತಾಗುತ್ತೆ ಅಂದರೆ
ಅದಕ್ಕೆ ಸೊಸೆ ಹೇಳಿದಳು
ಅಯ್ಯೋ ಅತ್ತೆ ಅವಳು
ಕುಂಕುಮ ಹಚ್ಕೊಳೋದೇ ಇಲ್ಲ

## ದಾಡಿಗೆ ಗೊಬ್ಬರ:

ಗಡ್ಡ ಬೆಳೆಸುವುದು ಸುಲಭವಲ್ಲ – ನಿಜ, ಸ್ವಾಭಾವಿಕವಾಗಿ ಬೆಳೆಯುತ್ತಾ ಹೋಗುತ್ತದೆ. ಆದರೆ ಬೆಳೆದು ವಿವಿಧ ಹಂತಗಳಲ್ಲಿ ಅದರ ಪೋಷಣೆ–ಆರೈಕೆಯ ಕಷ್ಟ ದಾಡಿವಾಲರಿಗೇ ಗೊತ್ತು! ಎಷ್ಟು ಕಷ್ಟ ಗೊತ್ತುಂಟಾ? ಕುರಚಲು ಹಂತದ ಕೆರತ ಯಾರಿಗೆಬೇಕು? ಹಗಲೂ ರಾತ್ರಿ ಪರಪರ ಕೆರೆತ: ಸಾಮಾಜಿಕ ಬದುಕಿನಲ್ಲಿ ಮುಜುಗರ: ಆ ಕಷ್ಟ ಬಲ್ಲವರೇ ಬಲ್ಲರು. ಕೆಲವರಿಗೆ ಕೆರತದ ಫಲಿತಾಂಶವಾಗಿ ಬೊಕ್ಕೆ ಏಳುವುದುಂಟು. ಅದರ ನಿವಾರಣಾರ್ಥವಾಗಿ ಕೆಲವು ಬಗೆಯ ತೈಲಗಳನ್ನು ಉಪಯೋಗಿಸಿದುಂಟು. ಏನು ಫಜೀತಿಗಳಪ್ಪ – ಪ್ರಕೃತಿದತ್ತವಾದದ್ದರ ಬಳಕೆ ಎಷ್ಟು ಕಷ್ಟ! ಕೆಲವು ಸಾಧಾರಣ ತೈಲ, ಮತ್ತೆ ಕೆಲವು ಸುಗಂಧ ತೈಲ. ದಾಡಿಯ ಒಳಗೆ ಅವಿತುಕುಳಿತು ನವೆ–ನೋವನ್ನುಣಿಸುವುದನ್ನ ತಡೆಯಲು ಕೆಲವು ಬಾರಿ ಹೊಟ್ಟೆಗೆ ಮಾತ್ರೆಯನ್ನೋ ಘನರೂಪದ ದ್ರಾವಣ (Gel) ಉಪಯೋಗಿಸಬೇಕಾಗುತ್ತದೆ. ಹಡೆದ ತಾಯಿ ತನ್ನ ಮಗುವಿನ ಆರೈಕೆ ಮಾಡುವ ಹಾಗೆ ಗಡ್ಡದ ಆರೈಕೆ ಮಾಡುತ್ತಾ ಬೆಳೆಸಬೇಕು. ಇದೆಲ್ಲಾ ಇಪ್ಪತ್ತು ವರ್ಷಗಳಿಂದ ಗಡ್ಡ ಬೆಳೆಸುತ್ತಾ–ಬೋಳಿಸುತ್ತಾ ಇರುವ ನನ್ನ ಸ್ವಾನುಭವದ ಮಾತು!

## ಗಡ್ಡದ ಗಡದ್ದು ನಂಟು:

ಇಷ್ಟಾದರೂ ಗಡ್ಡದ ಹುಚ್ಚು ಕೆಲವರನ್ನು ಬಿಟ್ಟುಹೋಗುವುದಿಲ್ಲ. ಒಬ್ಬೊಬ್ಬರಿಗೂ ಒಂದೊಂದು ಕಾರಣಕ್ಕಾಗಿ ಗಡ್ಡಬೇಕು – 'ನನ್ನ ಮುಸುಡಿಗೆ ಮುದ್ದಾಗಿರುತ್ತದೆ,' 'ಆಧುನಿಕತೆಗೊಂದು ಕುರುಹು,' 'ಬುದ್ಧಿಜೀವಿ ಎಂಬ ಚಿಹ್ನೆ,' 'ಮುಖದ ಕೆಲವು ಅವಗುಣಗಳನ್ನು ಮುಚ್ಚಿಡುವ ಸಾಧನ,' 'ಪುರಾತನ ಪುಣ್ಯ ಪುರುಷರ ಋಷಿಸಿದೃಡ ಕಳೆ ಇರುತ್ತದೆ,' 'ಜಗತ್ತಿನ ಗಡ್ಡದಾರಿ ಮಹಾನ್ ಪುರುಷರ ಒಂದು ರೀತಿಯ ಅನುಕರಣೆ,' 'ಎಂದಿಗೂ ಸರಿಪಡಿಸಲಾಗದ ಸಮಸ್ಯೆಗಳ ಕುರುಹಾಗಿ' – ಹೀಗೆ ಗಡ್ಡಧಾರಿಗಳ ಹಿನ್ನೆಲೆ ಹುಡುಕುವ ವಿಷಯದಲ್ಲಿ ಯಾರಾದರೂ ಮತ್ತಷ್ಟು ಸಂಶೋಧನೆ ನಡೆಸಿ ಮಹಾಪ್ರಬಂಧ ಬರೆದು ಪಿ.ಎಚ್.ಡಿ. ಪಡೆಯಬಹುದು!! ಆದರೆ ಗಡ್ಡಧಾರಿಯಾದ ನಾನು ಈ ಯಾವ ಕೆಟಗರಿಯಲ್ಲಿ ಇಲ್ಲ. ನನ್ನದು ನೌಕರಿಯಲ್ಲಿ 36 ವರ್ಷ ಕಾಲಾವಧಿಯಲ್ಲಿ ನಿತ್ಯವೂ ಗಡ್ಡ ಬೋಳಿಸುವುದರ ಬಗ್ಗೆ ನನ್ನ 'ಪ್ರತೀಕಾರ'ದ ಜೊತೆಗೆ ತಾಮಸ ಸ್ವಭಾವ...

## ಗಡ್ಡದ ಗಮ್ಮತ್ತು:

ಗಡ್ಡಧಾರಿಗಳಿಗೊಂದು ವಿಶೇಷ-ವಿಚಿತ್ರ ಗಾಂಭೀರ್ಯವಿದೆ. ಹಾಗಾಗಿ ಹೋದ ಕಡೆಗಳಲ್ಲೆಲ್ಲಾ ಮಾನ-ಮರ್ಯಾದೆ! ಅದರಲ್ಲೂ ಕೇಸರಿಬಣ್ಣದ ಬಟ್ಟೆ ಧರಿಸಿಬಿಟ್ಟರೆ ಸಾಕು ಪಾದಗಳು ಊದಿಕೊಳ್ಳುವಷ್ಟು 'ಕಾಲು ನಮಸ್ಕಾರ' ಸಿಗುತ್ತದೆ. ಹೀಗೆ ಗಡ್ಡಕ್ಕೆ ಏನೇನೋ ಉಪಯೋಗವಿದೆ!


ಗಡ್ಡ ಬೆಳೆಯಲು ಯಾವ ಗೊಬ್ಬರದ ಅವಶ್ಯಕತೆ ಇಲ್ಲ.... ಸ್ವಾಭಾವಿಕವಾಗಿ ತನ್ನ ಪಾಡಿಗೆ ತಾನು ಬೆಳೆಯುವ ''ಕಾಂಗ್ರೆಸ್ ಹುಲ್ಲಿನ ಹಾಗೆ!'' ಬಯಸುವವರಿಗೆಲ್ಲಾ ಗಡ್ಡ ಬೆಳೆಯುವುದಿಲ್ಲ; ಸೊಂಪಾಗಿ ಬೆಳೆಯುವ ಸೌಭಾಗ್ಯ ಎಲ್ಲರಿಗಿಲ್ಲ. ಏನೋ ಮುಖದ ಮೇಲೆ ಅಲ್ಲಿಷ್ಟು ಇಲ್ಲಿಷ್ಟು ಕೂದಲು ಬರುತ್ತದೆ – ಆದರೂ ಅದನ್ನೇ ಕತ್ತರಿಸಿ ವಿಚಿತ್ರ ಶೈಲಿಯಲ್ಲಿ – 'ಗಡ್ಡ' ಬಿಡುತ್ತಾರೆ. ಅದರಲ್ಲೂ ಎಷ್ಟೊಂದು ವೈವಿಧ್ಯ ಗೊತ್ತಾ! ಮೀಸೆ ಇಲ್ಲ, ಗಡ್ಡ ಮಾತ್ರ; ಗಲ್ಲದ ಕೆಳಗೆ ಮಾತ್ರ ಗಡ್ಡ; ಅಲೆ ಅಲೆಯಾಗಿ ಇಳಿಬೀಳುವ ಗಡ್ಡ; ಕಂಡರೂ ಕಾಣದಂಥ ಗಡ್ಡ ಹೀಗೆ ವಿಸ್ಕರ್ ಎಂಬ ಕೆನ್ನೆ ಕೂದಲಿನ ಮಾದರಿಯೂ ಇದೆ. ಇತ್ತೀಚಿಗಂತೂ ಅನೇಕ ರೀತಿಯ ದಾಡಿ ಬಂದಿದೆ...

## ಗಡ್ಡದ ಗಿರವಿ ಮತ್ತು ಬೆಲೆ:

ನನ್ನ ಸ್ವಂತ ಅನುಭವ ಮನೆಯಲ್ಲಾದ ಸಾವಿನಿಂದಾಗಿ ಬೇಸರದಿಂದ ಗಡ್ಡಬಿಟ್ಟು, ರಜೆಯಲ್ಲಿದ್ದಾಗ ಧಿಡೀರನೆ ನನ್ನ ಮನೆಗೆ ನಾಲ್ಕಾರು ಜನ ಕೆಮಾರ ಸಹೇತ ಬಂದು ನನ್ನನ್ನು ಮಾತಾಡಿಸುತ್ತಾ ಹತ್ತಾರು ಫೋಟೋ ತೆಗೆದರು. 'ಸಾರ್, ಗಡ್ಡ ತೆಗೆಯಬೇಡಿ. ನಮಗೆ ನೀವು ಹೀಗಿರುವುದೇ ಬೇಕು – ನಾವು ಜಾಹೀರಾತು ಸಂಸ್ಥೆಯವರು' ಅಂತ ಹೇಳಿ ನನ್ನನ್ನು ಜಾಹೀರಾತಿಗಾಗಿ ಕರೆದೊಯ್ದು ಹತ್ತಾರು ಫೋಟೋ ತೆಗೆದುಕೊಂಡರು. ಒಂದು ವಾರದ ನಂತರ ಊರಿನಲ್ಲಿ ಮುಖ್ಯ ಸ್ಥಳಗಳಲ್ಲಿ ನನ್ನ ಛಾಯಾಚಿತ್ರವಿರುವ ಜಾಹೀರಾತುಗಳು ಬಂದವು. ಅದರಿಂದಾಗಿ ನಮಗೆ ಅಷ್ಟಿಷ್ಟು ಸಂಭಾವನೆಯೂ ದೊರಕಿತು. ಬ್ಯಾಂಕಿನ ಕೆಲಸದ ಮೇಲೆ ಹೋಗಬೇಕಾಗಿದ್ದು ಗಡ್ಡ ಬೋಳಿಸುವ ಕಾಲಕ್ಕೆ ಸಿನಿಮಾ ನಿರ್ದೇಶಕರೊಬ್ಬರು ಬಂದು... 'ಗಡ್ಡ ಹಾಗೇ ಇರಲಿ... ನಿಮಗೊಂದು ಪಾತ್ರವಿದೆ' ಎಂದು ಹೇಳಿ ತಮ್ಮ ಚಲನಚಿತ್ರದಲ್ಲಿ ಮುಖ್ಯ ಪಾತ್ರದಲ್ಲಿ ನನ್ನಿಂದ ಅಭಿನಯ ಮಾಡಿಸಿದರು. ಅದೇ ಚಿತ್ರ!! ಹೀಗೆ ಗಡ್ಡಕ್ಕೂ ಬೆಲೆಯಿದೆ!

ನಾನು ನೀಳಗಡ್ಡ ಬಿಟ್ಟಿದ್ದಾಗ ಅದರ ಆರೈಕೆಯನ್ನು ಕಾಳಜಿಯಿಂದ ಮಾಡುತ್ತಿದ್ದೆ. ರವೀಂದ್ರನಾಥ ಟಾಗೂರರು ತಮ್ಮ ದಾಡಿಗೆ ಸುಗಂಧ ದ್ರವ್ಯಗಳ ಲೇಪನ ಮಾಡುತ್ತಿದ್ದರೆಂಬುದನ್ನು ಓದಿ ನಾನೂ ಸುಗಂಧ ದ್ರವ್ಯ ಲೇಪನವನ್ನು ಮಾಡುತ್ತಿದ್ದೆ, ಅದನ್ನು ನೀಟಾಗಿ ತಿದ್ದಿ ತೀಡುತ್ತಿದ್ದೆ, ಹಾಗಿರುತ್ತಿದ್ದ ನನ್ನನ್ನು ಕಂಡ ಕೆಲವು ಹಿರಿಯರು – 'ಹಾ! ವಿಶ್ವಾಮಿತ್ರರಿದ್ದ ಹಾಗಿದ್ದೀರಿ' ಅಂದರೆ ಮತ್ತೆ ಕೆಲವರು 'ದ್ರೋಣಾಚಾರ್ಯರು' ಅಂದರು. ಕೆಲವು ಕಾಲ ಗೆಳೆಯರ ಗುಂಪಿನಲ್ಲಿ ನನ್ನನ್ನು ''ಋಷಿ''ಗಳೆಂದೇ ಸಂಭೋಧಿಸುತ್ತಿದ್ದರು... ಅದರೊಡನೆ ನೆಮ್ಮದಿಯಿಂದ ನಾನು ಇನ್ನೊಂದು ಚಲನಚಿತ್ರಕ್ಕಾಗಿ ಬೋಳಿಸಬೇಕಾದಾಗ

ಪಟ್ಟಸಂಕಟ ಅಷ್ಟಿಷ್ಟಲ್ಲ.... ಆ ಸಂಕಟ ಅನುಭವಿಸುತ್ತಿದ್ದಾಗಲೇ ಮತ್ತೆ ಮೆಲ್ಲಮೆಲ್ಲನೆ ಮೂಡಿಬಂತು ಗಡ್ಡ...!! ಓ... ಗಡ್ಡನೆ ನಿನ್ನೊಡಗಿನ ''ದಾಂಪತ್ಯ'' ಎಷ್ಟೊಂದು ಸುಖಮಯ!!! 'ಜೈವಿಕ' ಕಾರಣಗಳಿಂದಾಗಿ ಹೆಣ್ಣಿಗೆ ಗಡ್ಡಬರುವುದಿಲ್ಲವಂತೆ ಹಾಗಿದ್ದರೂ ನಮ್ಮಲ್ಲಿ ಹೆಣ್ಣುಮಕ್ಕಳು ತಮ್ಮ ಕೆನ್ನೆಗೆ ಅರಿಶಿನ ಹಚ್ಚುವ ಪದ್ಧತಿಯಿದ್ದು, 'ಅರಿಶಿನ'ಕ್ಕೆ ಕೂದಲು ಬಾರದ ಹಾಗೆ ತಡೆಹಿಡಿಯುವ ಔಷಧೀಯ ಗುಣವಿದೆ. ಹಾಗಾಗಿ ಇವತ್ತಿಗೂ ನಮ್ಮ ಹಬ್ಬ-ಹರಿದಿನಗಳಲ್ಲಿ ಹೆಣ್ಣುಮಕ್ಕಳಿಗೆ ಅರಿಶಿನ-ಕುಂಕುಮ ಕೊಡುವ ಪದ್ಧತಿಯಿದೆ. ಈಗ ಕೂದಲು ಬಾರದ ಹಾಗೆ ಅನೇಕ ರೀತಿಯ Hair-removerನ ಜಾಹೀರಾತುಗಳು ಬರುತ್ತಿದ್ದು ನವನಾಗರೀಕ ಹೆಣ್ಣುಗಳು ಅವನ್ನು ಉಪಯೋಗಿಸುತ್ತಿದ್ದಾರೆ. ಹೆಣ್ಣುಗಳಿಗೂ ಗಡ್ಡ ಬೆಳೆಯುವುದಾದರೆ... ಛೇ... ಕವಿಗಳ ಗತಿಯೇನು? ಆ ಮುಖಾರವಿಂದವನ್ನು ಬಣ್ಣಿಸುವ ಬಗೆ ಹೇಗೆ? ಹೆಣ್ಣುಗಳಿಗೂ ಗಡ್ಡ ಗಂಟುಬಿದ್ದಿದ್ದರೆ ಕೆನ್ನೆಯ ಮೇಲೆ ಮುತ್ತಿಕ್ಕುವ ರಸಿಕರ ಗತಿಯೇನು? ಗಡ್ಡಬಿಟ್ಟ ಗಂಡಂದಿರ ಬಗ್ಗೆ ಅವರ ಹೆಂಡರು ಏನನ್ನುತ್ತಾರೋ ಗೊತ್ತಿಲ್ಲ. ಯಾಕೆಂದರೆ ಅಷ್ಟು ಸುಲಭದಲ್ಲಿ ಗುಟ್ಟು ಬಿಟ್ಟುಕೊಂಡುವವರಲ್ಲ ಹೆಣ್ಣು ಮಕ್ಕಳು! ಅದು ಸಂಶೋಧನಾರ್ಹ ವಿಷಯ. ಹೀಗೆ ಗಡ್ಡದ ಬಗ್ಗೆ ಹೇಳಲು ಎಷ್ಟೊಂದಿದೆ! ಅದೊಂದು ಮಹಾಪುರಾಣ!!



# ಕೊಬ್ಬಿದ್ರೆ ಕೈಲಾಸ

- ಎಂ.ಎಸ್. ನರಸಿಂಹಮೂರ್ತಿ

ವಿಶ್ವ ಮತ್ತು ವಿಶಾಲು 'ದೇಹ ಸೌಂದರ್ಯ'ದ ಮೀಟಿಂಗ್ ಮುಗಿಸಿಕೊಂಡು ಮಹಿಳಾ ಸಂಘದಿಂದ ಮನೆಗೆ ಬಂದರು.

ವಿಶಾಲು ಮುಖದಲ್ಲಿ ಬಹಳ ಸಿಟ್ಟಿತ್ತು.

''ಹೋಗಲಿ ಬಿಡು ವಿಶಾಲೂ... ಯಾರು ಸಣ್ಣಗಿದ್ರೆ ನಮಗೇನಾಗಬೇಕು?''

''ನಾನೇನು ಅಷ್ಟು ದಪ್ಪ ಇದ್ದೀನೇನ್ರೀ...? ಆ ಮಿಟುಕಲಾಡಿ ಮೀನಾಕ್ಷಿ ನನ್ನ ದಪ್ಪ ಅಂತಾಳಲ್ಲ?''

ವಿಶಾಲು ತೂಕ ನೂರರ ಗಡಿಯನ್ನು ದಾಟಿತ್ತು.

ಸೆಂಚುರಿ ಹೊಡಿಯೋದ್ರಲ್ಲಿ ಸಚಿನ್ ತೆಂಡೂಲ್ಕರ್ರೇ ಗ್ರೇಟು ಅಂತ ಜನ ತಿಳಿದಿದ್ರು... ಆದರೆ ನಿಮ್ಮಂಥ ಲೇಡೀಸ್ ಸಾಕಷ್ಟು ಸೆಂಚುರಿಗಳ್ನ ಕೇಜಿ ಲೆಕ್ಕದಲ್ಲಿ ಹೊಡೆದಿದ್ದಾರೆ... ಅದರಲ್ಲಿ ನೀನೂ ಒಬ್ಬಳು ವಿಶಾಲೂ, ಸಂತೋಷ ಪಡು...''

**ಬುದ್ಧಿವಂತಿಕೆಗೂ ಬೊಜ್ಜಿಗೂ ಸಂಬಂಧ ಇದೆ ಎಂದು ಸಂಶೋಧನೆ ಹೇಳಿದೆ**

ವಿಶಾಲುಗೆ ಸಿಟ್ಟು ಹೆಚ್ಚಿತ್ತು...

''ನೋಡಿ ನೋಡಿ, ನೀವು ಕೂಡಾ ತಮಾಷೆ ಮಾಡ್ತಿದ್ದೀರ... ನಾನು ದಪ್ಪ ಅಂತ ತಾನೇ ನೀವು ಹೇಳ್ತಾ ಇರೋದು...?''

''ಇಲ್ಲಮ್ಮಾ... ಹಾಗೇನಿಲ್ಲ... ಹಾಗೆ ನೋಡೋಕೆ ಹೋದ್ರೆ ನಿಮ್ಮಕ್ಕನಿಗಿಂತ ನೀನು ಸಣ್ಣ ಇದ್ದೀಯ... ನಿಮ್ಮಕ್ಕ ನೂರೈವತ್ತು ಕೇಜಿ, ನೀನು ಬರೀ ನೂರು... ಸಂತೋಷ ಪಡು...''

ವಿಶಾಲುಗೆ ಯೋಚನೆಯಾಯಿತು.

''ನಮ್ಮ ಮಹಿಳಾ ಸಂಘದಲ್ಲಿ ಕಾರ್ಯದರ್ಶಿ ಕಾತ್ಯಾಯಿನಿ ಏನು ಹೇಳಿದ್ಲು ಗೊತ್ತಾ? ಹೆಂಗ್ಸು ಸಪೂರವಾಗಿ ಚೆನ್ನಾಗಿದ್ರೆ ಗಂಡ ಅವಳ್ನ ಎತ್ಕೊಂಡು ಡ್ಯೂಯೆಟ್ ಹಾಡ್ತಾನೆ ಅಂತ!...''

ವಿಶ್ವನಿಗೆ ಮೂರ್ಛೆ ಬಂದಂತೆ ಆಯ್ತು.

''ನೂರು ಕೇಜಿ ಭತ್ತದ ಪಲ್ಲಾ ಮೂಟೇನ ಎತ್ಕೊಂಡು ಕುಣಿಯೋದು ಅಂದ್ರೆ ತಮಾಷೆ ವಿಷಯ ಅಲ್ಲ... ಇತ್ತೀಚೆಗೆ ಸಿಟಿ ಮಾರ್ಕೆಟ್ಟು, ತರಗುಪೇಟೆಯಲ್ಲಿ ಕೂಡಾ ಐವತ್ತು ಕೇಜಿ ಚೀಲಗಳು ಮಾತ್ರ ಇವೆ. ನೂರು ಕೇಜಿಯ ಪಲ್ಲಾ ಚೀಲಗಳು ಕಾಣುವುದು ಅಪರೂಪ... ಇಪ್ಪತ್ತೈದು ಕೆಜಿ ಅಕ್ಕಿ ಚೀಲಗಳು ಬಹಳ ಜನಪ್ರಿಯ... ಕೂಲಿಯವರೂ ಸಪೂರ

ಮೂಟೆಯನ್ನು ಬಯಸುತ್ತಾರೆ. ನೂರು ಕೇಜಿ ಚೀಲಗಳ ಬಗ್ಗೆ ಕಲ್ಪನೆ ಮಾಡಲು ಸಹ ಸಾಧ್ಯವಿಲ್ಲ...''

''ರೀ ನೀವು ತುಂಬಾ ಸಿನಿಮಾಗಳು ನೋಡಿದ್ದೀರ... ಪ್ರೇಮ ದೃಶ್ಯದಲ್ಲಿ ಹಾಡು ಬಂದಾಗ ಹೀರೋ ಹೀರೋಯಿನ್‌ನ ಎತ್ಕೊಂಡು ಕುಣೀತಾನೆ, ಹೌದಾ?''

''ಇರಬಹುದು... ಆದರೆ ಅದು ಸಿನಿಮಾ ಜಗತ್ತಿಗೆ ಸಂಬಂಧಪಟ್ಟಿದ್ದು... ಏನೋ ಟ್ರಿಕ್ಸ್ ಮಾಡ್ತಾರೆ, ಎತ್ಕೊಳ್ತಾರೆ... ಹೇಗೆ ಗೊತ್ತಾ? ಎತ್ಕೊಳ್ಳೋ ಥರ ಹೀರೋ ಕೈ ಹಾಕ್ತಾನೆ.. ಕ್ಲೋಸಪ್‌ನಲ್ಲಿ ಹೀರೋಯಿನ್ ಮುಖ ತೋರಿಸ್ತಾರೆ... ಅವಳು ಟೇಬಲ್ ಮೇಲೆ ಭಾರ ಬಿಟ್ಟಿರ್ತಾಳೆ. ಹೀರೋ ನಿಜವಾಗ್ಲೂ ಎತ್ಕೊಂಡಿರೊಲ್ಲ... ಅವೆಲ್ಲಾ ಕ್ಯಾಮರಾ ಟ್ರಿಕ್ಸು.''

**ಕೃಷ್ಣ**

ಭಾರತ ದೇಶ ರುಕ್ಮಿಣಿಯಂತೆ

ಪಾಕಿಸ್ಥಾನ ಸತ್ಯಭಾಮ

ಇಬ್ಬರನ್ನೂ ನಿಭಾಯಿಸುವ

ಕೃಷ್ಣನ ಹಾಗೆ

ಅಮೆರಿಕದ ಒಬಾಮ!

*- ಎಚ್. ಡುಂಡಿರಾಜ್*

ವಿಶ್ವ ವಿವರಿಸಲು ಹೋದ. ಆದರೆ ವಿಶಾಲು ಒಪ್ಪಲಿಲ್ಲ...

''ಯಾಕೆ, ಮೊನ್ನೆ ಒಂದು ಟೀವಿ ಸ್ಟೇಜ್ ಷೋ ಹೋಗಿದ್ವಲ್ಲಾ? ಅಲ್ಲಿ ಡ್ಯಾನ್ಸ್ ಇತ್ತು. ಹೀರೋಯಿನ್‌ನ ಹೀರೋ ಸಲೀಸಾಗಿ ಎತ್ಕೊಂಡ... ಗಿರ್ ಅಂತ ತಿರುಗಿಸಿದ?'' ಎಂದು ದಬಾಯಿಸಿದಳು.

''ಇರಬಹುದು ವಿಶಾಲೂ... ಅವಳು 40 ಕೇಜಿ ಇದ್ದಳಷ್ಟೆ. ಆದರೆ ನಿನ್ನ ಎತ್ಕೊಂಡ್ರೆ ನನ್ನ ಸೊಂಟದ ಗತಿಯೇನು? ಬೆನ್ನು ಮೂಳೆ ಮುರಿದರೆ ಅದಕ್ಕೆ ಔಷಧಿ ಇದೆಯಾ? ಸ್ಲಿಪ್ ಡಿಸ್ಕ್ ಆದರೆ ಯಾರು ದಬ್ಬೆ ಕಟ್ತಾರೆ...?''

ವಿಶಾಲು ಯೋಚಿಸುತ್ತಾ ಕೂತಳು.

''ರೀ ದಪ್ಪ ಇದ್ರೆ ತುಂಬಾ ಪ್ರಾಬ್ಲಮ್ಸ್ ಆಗುತ್ತೆ ಅಂತ ಹೇಳ್ತಾರೆ...''

ಮೈಮಾಟದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಮೋಹನ್ ಮನೆಗೆ ಬಂದ...

''ವಿಶ್ವ, ಒಂದು ಖುಷಿಯ ವಿಷಯ... ಅದರಲ್ಲೂ ನಿನ್ನ ಧರ್ಮಪತ್ನಿ ವಿಶಾಲೂಗೆ ತುಂಬಾ ಆನಂದ ಕೊಡುವ ಸುದ್ದಿ.''

ತಾನು ತಂದಿದ್ದ ಸುದ್ದಿ ಪತ್ರಿಕೆ ಮುಂದಿಟ್ಟ.

''ಏನು ಬಂದಿದೆ, ಮೋಹನ್?''

''ಜನಪ್ರಿಯವಾದ ಪತ್ರಿಕೆ ಇದು... ಇವರು ಸುಳ್ಳು ಸುದ್ದಿ ಯಾವತ್ತೂ ಕೊಡೊಲ್ಲ...'' ಎಂದು ಓದಲಾರಂಭಿಸಿದ. ''ಸೊಂಟ, ತೊಡೆಯಲ್ಲಿ ಬೊಜ್ಜು ಇದ್ರೆ ಬುದ್ಧಿವಂತ ಮಕ್ಕಳು ಹುಟ್ಟುತ್ತವೆ... ತಾಯಿ ಬೊಜ್ಜಿಗೂ ಮಗುವಿನ ಮೆದುಳಿಗೂ ನೇರವಾದ ನಂಟಿದೆ''

ವಿಶ್ವನಿಗೆ ಆಶ್ಚರ್ಯ. ವಿಶಾಲೂಗೆ ಗಾಬರಿ.

''ಓಹ್! ಅಲ್ಲಿಗೆ ಕರ್ವಿ ಗರ್ಲ್ಸ್, ಚರ್ಬಿ ಇರೋ ಆಂಟಿಗಳಿಗೆ ಡಿಮ್ಯಾಂಡ್ ಇದೆ ಅಂತಾಯ್ತು. ಅವರ ಮಕ್ಕಳು ಬುದ್ಧಿವಂತರಾಗ್ತಾರೆ! ಅದ್ಸರಿ, ಬುದ್ಧಿವಂತಿಕೆಗೂ ಬೊಜ್ಜಿಗೂ ಏನು ಸಂಬಂಧ?''

ಮೋಹನ ವೈಜ್ಞಾನಿಕ ಕಾರಣಗಳನ್ನು ಕೊಟ್ಟ.

''ತಾಯಿ ತೀರಾ ತೆಳ್ಳಗಿದ್ದಾಗ ಮಕ್ಕಳ ಬ್ರೈನು ಅಷ್ಟು ಬೆಳೆಯೊಲ್ಲವಂತೆ... ತಮ್ಮ ಮಕ್ಕಳು ಸಖತ್ ಸ್ಮಾರ್ಟ್ ಆಗಿ ಇರಬೇಕು ಅಂತ ಬಯಸ್ತಾರೆ... ಸಂಶೋಧನೆ ಮಾಡಿದ ವಿಜ್ಞಾನಿಗಳಿಗೆ ಹ್ಯಾಟ್ಸಾಫ್''

''ಚೆನ್ನಾಗಿದೆ. ಮುಂದೆ ಹೇಳಿ''

''ಮಕ್ಕಳ ಬುದ್ಧಿವಂತಿಕೆಗೆ ಸಂಬಂಧಪಟ್ಟ ಹಾಗೆ ವಿಜ್ಞಾನಿಗಳು ಎಷ್ಟೆಲ್ಲಾ ಸಂಶೋಧನೆ ಮಾಡಿದ್ದಾರೆ ಗೊತ್ತಾ?'' ಎಂದು ಮತ್ತಷ್ಟು ವಿವರಣೆಯನ್ನು ಮೋಹನ್ ನೀಡಿದ. ಯಾವ ತಾಯಿಗೆ ಸೊಂಟ, ತೊಡೆ ಪೃಷ್ಠಭಾಗದಲ್ಲಿ ಹೆಚ್ಚು ಫ್ಯಾಟ್ ಇರುತ್ತೋ, ಕೊಲೆಸ್ಟ್ರಾಲ್ ಇರುತ್ತೋ ಅಂಥವರಿಗೆ ಹುಟ್ಟೋ ಮಗು ತುಂಬಾ ಬ್ರಿಲಿಯೆಂಟಾಗಿರುತ್ತೆ''

ವಿಶಾಲೂಗೆ ಖುಷಿಯಾಯಿತು.

''ರೀ, ಅವರು ಹೇಳೋ ಎಲ್ಲಾ ಭಾಗದಲ್ಲೂನೂ ನನಗೆ ಸಾಕಷ್ಟು ಫ್ಯಾಟ್ ಇದೆ...''

ಮೋಹನ ಉತ್ಸಾಹದಿಂದ ಮುಂದುವರೆಸಿದ

''ತೂಕ ಜಾಸ್ತಿ ಇರುವಂತಹ ಆಂಟಿಗಳ ಎದೆಹಾಲಿನಿಂದ ಬರೋ ಫ್ಯಾಟು ಮಗುವಿನ ಮೆದುಳು ಭಾಗಕ್ಕೆ ನೇರವಾಗಿ ರವಾನೆ ಆಗುತ್ತೆ... ನರಮಂಡಲ ರಚನೆಗೆ ಫ್ಯಾಟು ತುಂಬಾ ಅಗತ್ಯವಿದೆ...''

ವಿಶ್ವ ಸಮಾಧಾನ ಪಟ್ಟ.

''ಅಲ್ಲಿಗೆ ನೀನು ಹೇಳ್ತಾ ಇರೋದು... ಹೆಣ್ಣು ಮಕ್ಕಳು ದಪ್ಪ ಇರಬೇಕು ಅಂತ...''

''ಅದಕ್ಕೆ ತಾನೇ ಭಟ್ಟರು ಹೇಳಿದ್ದು.. ಹೆಣ್ ಮಕ್ಕಳೇ ಸ್ಟ್ರಾಂಗು ಗುರು ಅಂತ...''

''ಹಾಗಿದ್ರೆ ನಾನು ಸಣ್ಣ ಆಗೋಕೆ ಅಂತ ತಗೋತಿದ್ದ ಔಷಧಿಗಳ್ನ ಇವತ್ತಿಂದ ಬಿಟ್ಟು ಬಿಡ್ತೀನಿ..''

''ವಿಶಾಲು ಔಷಧಿಗಳಿಂದ ಮನುಷ್ಯ ಸಣ್ಣ ದಪ್ಪ ಆಗೊಲ್ಲ... ಅವೆಲ್ಲಾ ನಮ್ಮ ಕಲ್ಪನೆ ಅಷ್ಟೇ... ಸಣ್ಣಗೆ ಇರೋವರು ಸಣ್ಣಗೇ ಇರ್ತಾರೆ... ದಪ್ಪಗೆ ಇರೋವರು ದಪ್ಪ ಗೇ ಇರ್ತಾರೆ... ಅವೆಲ್ಲಾ ದೇಹಪ್ರಕೃತಿ... ಏನೇ ಆಗಲಿ, ನೀನು ದಪ್ಪ ಇರೋದರಿಂದ ನಮಗೆ ಹುಟ್ಟುವ ಮಕ್ಕಳು ತುಂಬಾ ಬುದ್ಧಿವಂತರಾಗಿರ್ತಾರೆ... ಅಂತ ವಿಜ್ಞಾನಿಗಳು ವಿವರಿಸಿದ್ದಾರೆ. ಇದಕ್ಕಿಂತ ಏನು ಬೇಕು?''

ವಿಶಾಲು ಕಣ್ಣಲ್ಲೇ ನಕ್ಕಳು.

''ಆ ಕೋಮಲಾ ಇದ್ದಾಳಲ್ಲಾ ಸೊಣಕಲಿ, ಅವಳಿಗೆ ಹುಟ್ಟೋ ಮಗು ನಮ್ಮ ಮಗುವಿನಷ್ಟು ಚೂಟಿ ಇರೊಲ್ಲ ಬಿಡಿ...''

''ಹೌದು... ಆ ಮಗೂಗೆ ಎಲ್.ಕೆ.ಜಿ. ಸೀಟ್ ಸಹ ಸಿಗೊಲ್ಲ''... ಎಂದ ವಿಶ್ವ.

ವಿಶಾಲು ಆನಂದದಿಂದ,

''ರೀ, ಸಂಜೆ ನಾವಿಬ್ರೂ ಹಾಗೇ ಹೋಗಿ...''

''ಹೋಗಿ?''

''ಸುತ್ತಾಡಿಕೊಂಡು ಪಾನಪೂರಿ, ಮಸಾಲ್‌ಪೂರಿ ತಿಂದುಕೊಂಡು ಬರೋಣವಾ?''

''ಮತ್ತೆ ದಪ್ಪ ಆದರೆ?''

''ಹುಟ್ಟೋ ಮಕ್ಕಳು ಇನ್ನಷ್ಟು ಬುದ್ಧಿವಂತರಾಗ್ತಾರೆ !''



# ಅಂಟಿದ ಹವ್ಯಾಸಗಳ ನಂಟು

**- ಅರುಂಧತಿ ಜೋಶಿ**

**ನೊ**ಣ ಜಾಡಿಸ್ತಾ, ಹೊತ್ತು ಹೋಗ್ದೇ ಸೊಳ್ಳೆ ಬ್ಯಾಟನ್ನ ಟೆನ್ನಿಸ್ ರೇಕಟಿನಂತೆ ಬೀಸ್ತಾ ಸೊಳ್ಳೆಗಳನ್ನು ಬೇಟೆಯಾಡೋದು, ಸುಡು ಬಿಸಿಲಿನ ಬೇಸಿಗೆಯಲ್ಲಿ ಅಥವಾ ಸುರಿತಿರೋ ಮಳೆಗಾಲದ ವರ್ಷಾ ಋತುವಿನಲ್ಲಿ, ಬಹುತೇಕ ನಾರೀಮಣಿಯರು, ಕೆಲವೊಮ್ಮೆ ಅವರ ಪತಿ ಪರಮೇಶ್ವರರೂ ಸಹ ಮಾಡೋ ಕಸರತ್ತು. ಇದನ್ನು ಕಸರತ್ತು ಅಂತ ಕರೆದರೆ ತಪ್ಪೇನಿಲ್ಲ ಬಿಡಿ. ಅಥವಾ ಸೊಳ್ಳೆ ಕಾಟದಿಂದ ಬಚಾವ್ ಆಗಬೇಕೆನ್ನೋ ಕಾಳಜಿ ಇರಬಹುದಲ್ವೇ?! ತಾವು ಮಾಡೋಕೆ ಹೊರಟ ಕೆಲಸದಲ್ಲಿ ಸಫಲರಾದ್ರೆ, ಜಯ ಸಿಕ್ಕ ಖುಶಿಯಲ್ಲಿ, ವಿಜಯದ ಕಹಳೆ ಊದೋದಂತೂ ಗ್ಯಾರಂಟಿ. ಆರಾಮವಾಗಿ ವಿಶ್ರಾಂತಿ ತೊಗೊಳ್ಳೋದಿಕ್ಕೂ ಬಿಡದೆ ಹಾರಾಡೋ ಜಾಣತನ ನೊಣಗಳಿಗೆ ಮತ್ತು ಸೊಳ್ಳೆಗಳಿಗೆ ಕರಗತವಾಗಿದೇಂದ್ರೆ ನೀವೂ ಒಪ್ತೀರಾಂತ ನನಗೆ ಗೊತ್ತಿದೆ.

**"ಕಲಿಯುಗ ಮಹಿಮೆ ಕಾಣ ಬಂತೀಗ..." ಎಂಬ ಸಾಲು ನೆನಪಾಗಲು ಕಾರಣ?**

ಮನೆ ಉಸ್ತುವಾರಿ ಮತ್ತು ಅಡುಗೆ ಮಾಡೋ ಹವ್ಯಾಸ ಇದ್ರೆ, ಹೆಗಲೇರಿ ಕುಳಿತ ಜವಾಬ್ದಾರಿಗಳನ್ನೆಲ್ಲಾ ಚಿಟಿಕೆ ಹೊಡೆಯೋಷ್ಟರಲ್ಲಿ ಪೂರೈಸಿ, ಕೆಲ್ಸ ಮುಗಿಸಿ ಹಾಯಾಗಿ ಮೂರ್ಖರ ಪೆಟ್ಟಿಗೇಂತ ಹೇಳೋ ಟಿ.ವಿ. ಮುಂದೆ ಕೂತ್ರೆ, ನಮ್ಮ ಲಕ್ಷ್ಯ ಅದರ ಕಡೆ ಹರಿಸುತ್ತ, ತಿರುಳಿಲ್ಲದ ಧಾರಾವಾಹಿಗಳನ್ನು ನೋಡೋದಿಕ್ಕೆ, ಆರಾಮವಾಗಿ ಸೋಫಾದಲ್ಲಿ ಕುಳಿತಾಗ, ಶಿವಪೂಜೇಲಿ ಕರಡಿ ನುಗ್ಗಿದ್ದಾಗ್ಗೆ, ಕರೆಗಂಟೆ ಪದೆ ಪದೇ ಜೋರಾಗಿ ಬಡಕೊಳ್ತಿತ್ತು. ಎದ್ದು ಬಾಗಿಲು ತೆಗಿಬೇಕಲ್ಲಂತ, ಬೇಜಾರಿನಿಂದಲೇ ಎದ್ದು ಬಾಗಿಲ ಕಡೆ ಹೆಜ್ಜೆ ಹಾಕಿದ್ರೂ, ಟಿ.ವಿ. ಕಡೆ ನೋಟ ಹರಿಸ್ತಾ ತರಾತುರೀಲಿ ಬಾಗಿಲನ್ನು ತೆಗೆದೆ. ಮನೆ ಕೆಲಸದ ನಿಂಗಿ ಸೀರೇನ ಸೊಂಟಕ್ಕೆ ಏರಿಸಿ ನಿಂತಿದ್ಲು.

"ಬಾ ನಿಂಗಿ, ಎಲ್ಲ ಕೆಲ್ಸ ಮುಗಿಸಿಬಿಡು. ಕಾಫಿ ತಿಂಡಿ ಅಡುಗೆ ಮನೆ ಕಟ್ಟೆ ಮೇಲೆ ಇಟ್ಟಿದೀನಿ." ಹೀಗೆ ಮಾರ್ಗದರ್ಶನ ನೀಡಿ ಮತ್ತೆ ಟಿ.ವಿ. ಪರದೆಯ ಮುಂದೆ ಕುಳಿತುಬಿಟ್ಟೆ. ತಟ್ಟೇಲಿ ತಿಂಡಿ, ಲೋಟದಲ್ಲಿ ಕಾಫಿ ಹಿಡಕೊಂಡು ನಾನಿದ್ದಲ್ಲಿಗೆ ಬಂದ ನಿಂಗಿ, ಅಲ್ಲೇ ಚಕ್ಕಳಬಕ್ಕಳ ಹಾಕ್ಕೊಂಡು ಕುಳಿತೇ ಬಿಟ್ಲು. "ಅಮ್ಮಾವ್ರೇ, 'ಗೆದ್ದವರು ಸೋತರು' ಧಾರಾವಾಹಿ ಅಲ್ಲೇನ್ರಿ! ಪಾಪ! ಆ ಪುಷ್ಪ ಮೇಡಂರ ಗತಿ ಏನಾಯ್ತೋ ಏನೋ ನೋಡ್ಬೇಕ್ರೀ. ಎಲ್ರ ಮನೆ ಕೆಲಸಾನ ಮುಗಿಸೇ ಬಂದೀನ್ರಿ. ನಿಮ್ಮನೇನೇ ಕಡೇದು. ನಾನು ಯಾರ ಮನೆಯಾಗಿದ್ರೂ, ಈ

ಧಾರಾವಾಹೀನ ಮಾತ್ರ ತಪ್ಸೋಲ್ಲ. ನೋಡೇ ನೋಡ್ತೀನಿ ಅಮ್ಮಾವ್ರೇ. ಧಾರಾವಾಹಿ ಮುಗಿದ ಮೇಲೆ ನಿಮ್ಮನಿ ಕೆಲಸ ಮಾಡಿ ಮುಗಿಸ್ತೀನಿ.''

ಇನ್ನಿವಳು ಧಾರಾವಾಹಿಯ ಬಗ್ಗೆ ಮಾಡೋ ವ್ಯಾಖ್ಯಾನ ಕೇಳೋ ಸೌಭಾಗ್ಯನೋ, ದೌರ್ಭಾಗ್ಯನೋ ನಂದಾಯ್ತು. ನುಂಗೋ ಹಾಗಿಲ್ಲ, ಉಗುಳೋ ಹಾಗಿಲ್ಲ ಅನ್ನೋ ಪರಿಸ್ಥಿತಿಯಲ್ಲಿ ನನ್ನ ಸಹನೆಯ ಪರೀಕ್ಷೆ ಸಹ ನಡೆದಿತ್ತು. ಅವಳಿಗೆ ಬೇಸರ ಮಾಡೋ ಹಾಗೆ ಏನನ್ನಾದ್ರೂ ಹೇಳಿದ್ರೆ, ಮುಂದೇನಾಗ್ಬಹುದೂಂತ ನನಗೆ ಚೆನ್ನಾಗಿ ಗೊತ್ತು. ನಿಂಗಿಯಂತಹ ಒಳ್ಳೆಯ ಕೆಲಸದವಳನ್ನ ಕಳಕೊಳ್ಳೋದಿಕ್ಕೆ ನಾನು ಸಿದ್ಧಳಿರಲಿಲ್ಲ.

ಧಾರಾವಾಹಿಗಳನ್ನು ತಪ್ಪದೇ ನೋಡುವ ಗೀಳು ಒಂದು ರೀತೀಲಿ ನೋಡಿದಾಗ ಬಿಡಿಸಲಾಗದ ಚಟಾಂದ್ರೆ, ಮತ್ತೊಂದು ಸುದ್ದಿವಾಹಿನಿಗಳ ಮುಂದೆ ಕುಳಿತು, ಕೇಳಿದ ಸುದ್ದೀನೇ ಮತ್ತೆ ಮತ್ತೆ ಕೇಳ್ತಿರೋದು; ತೋರಿಸಿದ ದೃಶ್ಯ ಮತ್ತೆ ಮತ್ತೆ ಪುನರಾವರ್ತನೆ ಆಗ್ತಿದ್ರೂ, ನೋಡ್ತಾ ಕುಳಿತಿರೋದಂತೂ ಮಾಮೂಲಿಯಾಗಿ ನಮಗೆ ನೋಡಲು ಸಿಗುವ ದೃಶ್ಯ. ಹಿಂಗ್ಯಾಕೆ, ತೋರಿಸದ್ದನ್ನೇ ನಾಲ್ಕೈದು ಸಲ ತೋರಿಸಿ ತಲೆ ತಿಂತಾರಲ್ಲಪ್ಪ ಅನಿಸಿದ್ರೂ, ಮನೆ ಯಜಮಾನರು ಆರಾಮಾಗಿ ಕುಳಿತು ಅದನ್ನೇ ನೋಡ್ತಿರ್ತಾರೆ.

ಸುಪುತ್ರರು, ಪುತ್ರಿಯರು ಮನೆಯಲ್ಲಿದ್ದಾಗ ದೂರದರ್ಶನದ ಕಾರ್ಯಕ್ರಮಗಳನ್ನು ನೋಡೋದಿಕ್ಕೆ ಮನೆಯಲ್ಲಿರೋ ಹಿರಿಯರಿಗೆ ಅವಕಾಶ ದೊರಕೋದಿಲ್ಲ. ''ಅಜ್ಜಿ ಪ್ಲೀಸ್! ಮಮ್ಮಿ ಪ್ಲೀಸ್. ನಾವು ಕ್ರಿಕೆಟ್ ಮೇಚ್ ನೋಡ್ಬೇಕು.'' ಹೇಳ್ತಿದ್ದಾಗೆ ನಮ್ಮ ಉತ್ತರಕ್ಕೂ ಕಾಯದೇ ರಿಮೋಟನ್ನು ಕಿತ್ಕೊಂಡು ಭದ್ರವಾಗಿ ಹಿಡಕೊಂಡು ಕುಳಿತುಬಿಡ್ತಿದ್ರು. ಟಿ.ವಿ.ಯ ಆವಿಷ್ಕಾರವಾದ ಮೇಲೆ ಎಲ್ರ ಮನೆಯಲ್ಲಿ ನಡೀತಿರೋ ನಿತ್ಯದ ರಾಮಾಯಣ ಮಹಾಭಾರತ ಎಂದು ನಿಮಗೂ ಅನಿಸ್ತಿರಬೇಕಲ್ವೇ. ಧಾರಾವಾಹಿಗಳನ್ನು ತಪ್ಪದೇ ನೋಡೋ ಗೀಳು ಮನಸ್ಸನ್ನು ಆವರಿಸಿಕೊಂಡು ನಮ್ಮ ಬೆನ್ನತ್ತಿದ ಬೇತಾಳದಂತಾಗಿ ಬಿಡ್ತದೆ. ಭದ್ರ ಬುನಾದಿ ಹಾಕ್ಕೊಂಡು ಕುಳಿತಿರೋ ಮತ್ತೊಂದು ಹವ್ಯಾಸ, ನಮ್ಮ ಬುದ್ಧಿ ಶಕ್ತೀನ ಪರೀಕ್ಷೆಗೆ ಒಡ್ಡುವ ಪದಬಂಧ ಮತ್ತು ಸಂಖ್ಯಾಬಂಧ ಎಂದೇ ಜನಪ್ರಿಯವಾಗ್ತಿರೋ ಹವ್ಯಾಸದ ನಂಟು.

ಪದಬಂಧದ ಸೆಳೆತ, ಸಂಖ್ಯಾಬಂಧದ ನಂಟು ಹೇಗಿರಬಹುದೆಂದು ನೀವು ಅನುಭವಿಸಿರುತ್ತೀರೋ ಇಲ್ವೋ ಗೊತ್ತಿಲ್ಲ. ಸುಖ ನಿದ್ರೆಯಿಂದ ಬೆಳಕು ಹರೀತ್ತಿದ್ದ ಹಾಗೆ ಕಣ್ಣುಜ್ಜುತ್ತ ಎದ್ದು ಬಾಗಿಲ ಹೊರಗೆ ದಿನಪತ್ರಿಕೆ ಬಂದಿದೆಯೋ ಇಲ್ವೋಂತ ಒಂದು ಪಕ್ಷಿನೋಟ ಹರಿಸೋದು ನಿತ್ಯ ನಡಿತಿರೋ ಮಾಮೂಲಿ ಕಸರತ್ತು. ದೇಹದ ಆರೋಗ್ಯಕ್ಕೆ ಕಸರತ್ತು ಮಾಡೋ ಹಾಗೆ ಮೆದುಳಿಗೂ ಕಸರತ್ತು ಬೇಕೆಂದುಕೊಂಡಾಗ, ಚಹದ ಕಪ್ಪನ್ನು ಕೈಯಲ್ಲಿ ಹಿಡಿದು, ಕಾಲ್ಚಾಚ್ಕೊಂಡು ಸೋಫಾದಲ್ಲಿ ಕುಳಿತರೆ, ಮೊದಲು ದಿನಪತ್ರಿಕೆಯಲ್ಲಿ ಪದಬಂಧದ ಪುಟವನ್ನು ತಿರುಗಿಸಿ, ಪದಬಂಧ ಬಿಡಿಸ್ತಾ ಕುಳಿತರೆ, ಹೊತ್ತು ಯಾವ ಮಾಯದಲ್ಲಿ ಜಾರಿ ಹೋಗುತ್ತೋ ಏನೋ, ಗೊತ್ತಾಗೋದೇ ಇಲ್ಲ. ತಲೆ ಒಳಗೆ ಶಬ್ದಕೋಶವಿದ್ದರೆ ಚಿಂತೆ ಮಾಡ್ಬೇಕಿಲ್ಲ. ಚಹ ಸಹ ತಣ್ಣಗಾಗಿ ಬಿಟ್ಟಿರುತ್ತೆ.

ಇವೆಲ್ಲ ಕಾಲಹರಣ ಮಾಡೋ ಹವ್ಯಾಸಗಳೆಂದು ನನ್ನ ಗೆಳತಿ ಅಪೇಕ್ಷಾ ಆಕ್ಷೇಪಣೆ ಮಾಡ್ತಿದ್ಲು. ಒಂದು ಹಂತದಲ್ಲಿ ಈ ಚಟ ಯಾವ ಹಂತಕ್ಕೆ ತಲುಪಿತ್ತೆಂದರೆ ಅಡುಗೆ ಮಾಡ್ತಿರುವಾಗಲೂ, ಒಂದು ಕೈಯಲ್ಲಿ ಸೌಟಿದ್ದರೆ, ಮತ್ತೊಂದು ಕೈಯಲ್ಲಿ ಪದಬಂಧದ ಪುಟ ಇರ್ತಿತ್ತು. ಮಧ್ಯದಲ್ಲಿ ಸೌಟನ್ನು ಕಟ್ಟೆ ಮೇಲಿಟ್ಟು ಪದಬಂಧವನ್ನು ಬಿಡಿಸ್ತಾ ಕುಳಿತ್ರೆ, ಊಟ ತಿಂಡಿ ಗತಿ ಏನಾಗಿರಬಹುದೆಂದು ಊಹಿಸಿ ನೋಡಿ. ಊಟದ ಮೇಜಿನ ಮುಂದೆ ಕುಳಿತ ಮನೆಯ ಸದಸ್ಯರಿಗೆ ಏನನ್ನೂ ತಿನ್ನೋದಿಕ್ಕಾಗದೇ, ಆಕ್ಷೇಪಣೆಗಳು ಹೊರಹೊಮ್ಮಿದಾಗ ಸ್ವಲ್ಪ ಜ್ಞಾನೋದಯವಾಯ್ತು.

★ ★ ★ ★

ಇನ್ನೂ ಮುಂದೆ ಸಾಗಿದರೆ ದೂರವಾಣಿಯ ಸ್ಥಾನವನ್ನು ಸಂಚಾರಿ ದೂರವಾಣಿ (ಮೊಬೈಲ್) ಆಕ್ರಮಿಸಿಕೊಂಡ ಮೇಲೆ, ಅದರ ಹಿಡಿತದಲ್ಲಿ, ಈಗಿನ ಶತಮಾನದಲ್ಲಿ ಎಲ್ಲರೂ ಅದರ ದಾಸಾನುದಾಸರೇ! ಹವ್ಯಾಸ ಅತಿರೇಕಕ್ಕೆ ಹೋದಾಗ ಚಟವಾಗುತ್ತದೆ. ಈ ಚಟ ಚಿಣ್ಣರನ್ನು ಮತ್ತು ಅಜ್ಜಿ ಅಜ್ಜಂದಿರನ್ನು ಸಹ ಮೋಡಿ ಮಾಡುತ್ತಿರೋದಂತೂ ಗ್ಯಾರಂಟಿ. ಇದರ ಚಟ ಅಂಟಿತಂದ್ರೆ ಕೈಯಲ್ಲಿ ಒಂದು ಮೊಬೈಲನ್ನು ಹಿಡಕೊಂಡೇ ಓಡಾಡ್ತಿರ್ತಾರೆ.

ಬೈಕು, ಕಾರನ್ನು ಚಲಾಯಿಸುತ್ತಿರವಾಗಲೂ, ಇದರ ಹಿಡಿತದಲ್ಲಿ ಸಿಕ್ಹಾಕ್ಕೊಂಡ್ರೆ ದೇವ್ರೇ ಗತಿ. ಕಾಪಾಡಪ್ಪಾ ದೇವ್ರೇ ಎಂದು ಬೇಡ್ಕೋಬೇಕು.

ನಮ್ಮ ಮನೆ ಕೆಲಸದ ನಿಂಗಿ, ಕೈಯಲ್ಲಿ ಮೊಬೈಲನ್ನು ಹಿಡಕೊಂಡೇ ಓಡಾಡ್ತಿರ್ತಾಳೆ. ಕೆಲಸ ಮಾಡ್ತಿರ್ಬೇಕಾದ್ರೂ ಮೊಬೈಲ್ ಬಡಕೊಂಡ್ರೆ ಕೆಲಸಕ್ಕೆ ಅಲ್ಪವಿರಾಮ ಕೊಟ್ಟು, ಹರಟೆ ಕೊಚ್ಚುತ್ತ, ಮಾತು ಮುಗಿದ ಮೇಲೇನೆ ಕೆಲಸ ಶುರುವಾಗಬೇಕು. ಅದರ ಕಂಠವನ್ನು ಒತ್ತಿ ಮೂಕವಾಗಿಸಿದ್ರೆ ಸಾಕೆಂದು ನನಗನಿಸಿದ್ರೂ, ಕಾರ್ಯರೂಪಕ್ಕೆ ತರೋದಂತೂ ದೂರದ ಕನಸು.

ತೋಟದ ತಿಮ್ಮಪ್ಪ, ತಳ್ಳು ಗಾಡಿಯಲ್ಲಿ ತರಕಾರಿ ಮಾರೋ ಮರಿಯಪ್ಪನ ಕೈಯಲ್ಲೂ ಮೊಬೈಲಿನದೇ ಆಧಿಪತ್ಯ. ಒಟ್ಟಾರೆ ಎಲ್ಲೆಲ್ಲೂ ಮೊಬೈಲ್ ಪಾಣಿಗಳೇ! 21ನೇ ಶತಮಾನದಲ್ಲಿ ಮೊಬೈಲಿನಲ್ಲೇ ಟಿ.ವಿ., ಗಣಕಯಂತ್ರ, ಕ್ಯಾಮೆರಾ, ದೂರವಾಣಿ ಸವಲತ್ತು, ಸಂದೇಶ ಸೇವೇಂತ ಸಿಗ್ತಿರಬೇಕಾದ್ರೆ ದಿನದ ಇಪ್ಪತ್ತನಾಲ್ಕು ಗಂಟೆಯಲ್ಲಿ ಹದಿನೆಂಟು ಗಂಟೆಗಳಾದ್ರೂ ಇದರದೇ ಆಧಿಪತ್ಯ. ಇದಕ್ಕೆ ಅಗ್ರಸ್ಥಾನವನ್ನು ಕೊಡ್ಲೇಬೇಕಲ್ಲ.

ಈ ಶತಮಾನದಲ್ಲಿ ಇವೆಲ್ಲ ನಮ್ಮನ್ನು ಚಟಗಳಂತೆ ಆವರಿಸಿಕೊಂಡ ಮೇಲೆ, ಅದರ ಹಿಡಿತದಲ್ಲಿ ಜನಮನ ಸಿಕ್ಹಾಕ್ಕೊಂಡು ಜೀವನದ ದಿಕ್ಕನ್ನೇ ಬದಲಾಯಿಸಿರೋದಂತೂ ಸತ್ಯ. ಒಟ್ಟಿನಲ್ಲಿ ನೋಡೋದಾದ್ರೆ ದಾಸರ ಪದದ, ''ಕಲಿಯುಗದ ಮಹಿಮೆ ಕಾಣ ಬಂತೀಗ'', ಸಾಲುಗಳು ನೆನಪಾಗುತ್ತಲ್ಲವೇ!


OMKAR
Offset Printers
Specialists in :
Multi-colour Brochures
Magazines
Annual Reports
News Letters
Variable Data Printing
All Graphic Arts under one roof
No. 3/3, 1st Main Road
New Tharagupet
Bangalore - 560 002.
Telefax : 2670 9026, 2670 8186/7
E-mail : omkaroffset@gmail.com
Website : www.omkaroffset.com
CTP - Trendsetter 800 Quantum Platesetter
IBM RICOH 2190
Variable Data Printer
Komori Lithrone S40




# ಬೊಜ್ಜ Vs ಸೈಕಲಿಂಗ್ Vs ಬೊಜ್ಜ

– ಪ್ರಶಾಂತ ಅಡೂರ

**ನಾ** ದಿವಸಾ ಎಷ್ಟ ಬಡಕೋತೇನಿ ನನ್ನ ಹೆಂಡತಿಗೆ ಒಬ್ಬನ ಮಗಾ, ಒಬ್ಬನ ಮಗಾ ಅಂತ ಅಂವಾ ಕೇಳಿದಾಗೇಲ್ಲಾ ತಿನ್ನಲಿಕ್ಕೆ ಕೊಡಬ್ಯಾಡ ಅಂತ, ನನ್ನ ಮಾತ ಎಲ್ಲೆ ಕೇಳಬೇಕ ಅಕಿ... ಅಂವಾ ಅವ್ವಾಽಽಽಽ ಅಂತ ಬಾಯಿ ತಗದರ ಸಾಕ ಪಾಪ ಕೂಸಿಗೆ ಹೊಟ್ಟಿ ಹಸ್ತದ ಅಂತ ಮನ್ಯಾಗ ಏನು ಇರ್ತದ ಅದನ್ನ ತುರಕಿ ಬಿಡೋಕಿ. ಅಂವಾ ಅವರವ್ವ ಕೊಟ್ಟದ್ದ ತಿಂದ ತಿಂದ ಬರ ಬರತ ನನ್ನ ಅಂಡರವೇರಗೆ ಕಾಲ ಹಾಕೊ ಅಷ್ಟ ಬೆಳದ ಬಿಟ್ಟಾನ.

ಈಗ ಒಂದ ಮೂರ ತಿಂಗಳ ಹಿಂದ ಅವಂಗ ಆರಾಮ ಇರಲಾರದಾಗ ಚೈಲ್ಡ್ ಸ್ಪೆಷಲಿಸ್ಟ ಕಡೆ ಕರಕೊಂಡ ಹೋದರ ಆ ಡಾಕ್ಟರ ಒಂದು ಸರತೆ ನನ್ನ ಮಗನ್ನ ನೋಡಿ 'ನಾ ಸಣ್ಣ

ಹುಡಗರ ಡಾಕ್ಟರ ಇಷ್ಟ ದೊಡ್ಡವನ ಯಾಕ ಕರಕೊಂಡ ಬಂದಿರಿ' ಅಂತ ಕೇಳಿದ್ರು.

'ಏ.. ಅಂವಾ ಸಣ್ಣಂವನ ಇದ್ದಾನರಿ.. ಈಗ ಏಳನೇತಾ' ಅಂತ ನಾ ಅಂದರ ಡಾಕ್ಟರ 'ಈ ಹುಡುಗ ನಿಮಗೇನ ಆಗಬೇಕ' ಅಂತ ಕೇಳಿದರು.

ನಾ 'ನನ್ನ ಮಗಾ' ಅಂದೆ.

'ಖರೆ ಹೇಳ್ರಿ... ನಿಮ್ಮನ್ನ ನೋಡಿದರ ನಿಮ್ಮ ತಮ್ಮ ಕಂಡಂಗ ಕಾಣತಾನ' ಅಂದ್ರು. ನಂಗ ಸಿಟ್ಟ ಬಂತ, ತಲಿ ಕೆಟ್ಟ ನನ್ನ ಹೆಂಡತಿನ ಒಳಗ ಕರದ ಡಾಕ್ಟರಗೆ ತೋರಿಸದ ಮ್ಯಾಲೆ ಅವರಿಗೆ ಕನಫರ್ಮ್ ಆತ ಇಂವಾ ಅಕಿ ಮಗಾನ ಅಂತ. ಕಡಿಕೆ ಡಾಕ್ಟರ ನಮ್ಮಿಬ್ಬರನು ಕೂಡಿಸಿ. 'ನಿಮ್ಮ ಹುಡುಗಗೆ ಸಿಕ್ಕಾ ಪಟ್ಟೆ ಬೊಜ್ಜ ಅದ, ಈ ಪರಿ ಎಕ್ಸೆಸ್ ವೈಟ್ ಇತ್ತಂದರ ಮುಂದ ತ್ರಾಸ ಆಗ್ತದ, ಅವಂಗ ಜಂಕ್ ಫುಡ್ ಕೊಡಬ್ಯಾಡರಿ. ಅವಂಗ ಮುಂಜಾನೆ ಎದ್ದ ಜಾಗಿಂಗ, ಸೈಕ್ಲಿಂಗ ಮಾಡಸರಿ' ಅಂತ ಹೆದರಿಸಿಸಿ ಕಳಸಿದರು.

ಆ ಡಾಕ್ಟರ ಸೈಕ್ಲಿಂಗ ಅಂದದ್ದ ತಪ್ಪಾತ ನನ್ನ ಹೆಂಡತಿ ಒಂದು ಸೈಕಲ ತೊಗೊಂಡ ಬಂದ ಬಿಟ್ಟಳು. ನನ್ನ ಮಗಾ ಅವತ್ತಿನಿಂದ ನಸಿಕಲೇ ಐದ ಕಿ.ಮೀ. ಹೊಲದಾಗ ಸೈಕಲಿಂಗ ಶುರು ಮಾಡೆ ಬಿಟ್ಟಾ, ಮುಂದ ಒಂದ ತಿಂಗಳಾದರು ಅವಂದೇನ ಮೈ ಕರಗಲಿಲ್ಲರಿ, ವಾರದಾಗ ದೂರ ಸರತೆ ಸೈಕಲ ಪಂಚರ್ ಆತ ಹೊರತು ಅವನ ಹವಾ ಏನ ಇಳಿಲಿಲ್ಲಾ. ಪಾಪ ಅಂವಾ ಸೈಕಲಿಂಗ ಮಾಡಲಿಕತ್ತಾಗಿಂದ ಅವಂಗಿ ಹೊಟ್ಟಿ ಜಾಸ್ತಿ ಹಸಿಲಿಕ್ಕತ್ತ. ಹಿಂಗಾಗಿ ಅವರವ್ವಾ ಅವಂಗ ಸಾಲಿಗೂ ಪಿಕನಿಕಗೆ ಹೊಂಟಂಗ ಕಟ್ಟಿ ಕಳಸಲಿಕತ್ತು. ಮ್ಯಾಲೆ ಈ ಮಗಾ ತಡ್ಕೊಳಿಕ್ಕೆ ಆಗವಲ್ತ ಮುಂಜವಿ ಆಗಿದ್ದನ್ನ ಮರೆತ ದಿವಸಕ್ಕ ದೂರ ದೂರ ಹೊತ್ತ ಚಿತ್ರಾವತಿ ಇಟ್ಟ ಜಂಕ್ ಫುಡ್ ಕಟಿಲಿಕತ್ತಾ.

ನಾ ತಲಿಕೆಟ್ಟ ಮೊನ್ನೆ ಮುಂಜಾನೆ ಇಂವಾ ಸೈಕಲಿಂಗ ಹೆಂಗ ಮಾಡ್ತಾನ ಅಂತ ನೋಡಲಿಕ್ಕೆ ಅವನ ಹಿಂದ ಎದ್ದ ಹೋಗಿ ನೋಡಿದ್ರ ಈ ಮಗಾ ಹೊಲದಾಗ ಸೈಕಲ ತುಳಿಲಿಕ್ಕೆ ಆಗಂಗಿಲ್ಲಾ ಅಂತ ಒಂದು ಅರ್ಧ ತಾಸ ಸೈಕಲ ದುಗಿಸಿಕೊಂಡ ವಾಕಿಂಗ ಮಾಡಿ ಬರಲಿಕತ್ತಾನ... ಏನ್ಮಾಡ್ತೀರಿ ಹಿಂತಾ ಮುಗ್ಗಲಗೇಡಿ ಮಕ್ಕಳಿಗೆ?

ಖರೇ ಹೇಳ್ತೇನಿ, ಹಿಂತಾ ಮಗನ್ನ ಎಲ್ಲಿನೂ ನೋಡಿಲ್ಲ ಬಿಡ್ರಿ... ಅವರವ್ವನ್ನೂ ಮೀರಿಸಿ ಬಿಟ್ಟಾನ ಬಿಡ್ರಿ.

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಅಂತರ 3. ಕೆಸರು 5. ಸೇವಕ 7. ದಾರಿ 8. ಕುಚೇಲ 9. ಗೆಳೆಯ 10. ಸುದಿನ 11. ಟಗರು 13. ಕಾಶಿ 14. ಕಳಂಕ 15. ಪಾತಕಿ 16. ಸಮಿತಿ

**ಮೇಲಿಂದ ಕೆಳಕ್ಕೆ**

2. ತಪರಾಕು 4. ಸಮುದಾಯ 5. ಜಲಜನಕ 6. ನಗೆನಾಟಕ 10. ಸುಶಿಕ್ಷಿತ 12. ರುದ್ರಭೂಮಿ